(ಅನುಬಂಧ - 1 ಮತ್ತು 2)

2. ವಿಧಾನ ಪರಿಷತ್ತಿನಿಂದ ಅಂಗೀಕೃತವಾಗಿ ಬಂದಿರುವ ಮಸೂದೆ ಬಗ್ಗೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 27ನೇ ಮಾರ್ಚಿ 2003ರಂದು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ, 2003ನ್ನು ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತು ಅಂಗೀಕರಿಸಿದೆ".

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್)ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷರು:- ಮಾನ್ಯ ಚನ್ನಿಗಪ್ಪನವರೇ, ತಾವು ಮಾತನಾಡುತ್ತೀರಾ? ಹತ್ತು ನಿಮಿಷ ಅವಧಿ ಮಾತ್ರ ಮಾತನಾಡಬೇಕು. ನಮ್ಮ ಬಳಿ ಈಗ ಜಾಸ್ತಿ ಸಮಯ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಸಹಕಾರಿ ತಿದ್ದುಪಡಿ ಬಗ್ಗೆ ನಮ್ಮದ್ದೊಂದು ಖಾಸಗಿ ವಿಧೇಯಕ ಇತ್ತು. ಅದು ಚರ್ಚೆ ಬರಲೇ ಇಲ್ಲವಲ್ಲ.

ಉಪಾಧ್ಯಕ್ಷರು:- ಅದನ್ನು ಇದಾದ ಮೇಲೆ ತೆಗೆದುಕೊಳ್ಳುತ್ತೇವೆ. ಈಗ ಮಾನ್ಯ ಚನ್ನಿಗಪ್ಪನವರು ಮಾತನಾಡಬಹುದು.

5. ವಿತ್ತೀಯ ಕಾರ್ಯಕಲಾಪ

2003-04ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಮುಂದುವರೆದ ಚರ್ಚೆ

+ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಉಪಾಧ್ಯಕ್ಷರೇ, ಈ ವರ್ಷದ ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸರ್ಕಾರದ ಯೋಜನೆ ಮತ್ತು ಅಭಿವೃದ್ಧಿಯ ಬಗ್ಗೆ ತಮ್ಮದೇ ಆದಂತಹ ಒಂದು ತತ್ವವನ್ನಿಟ್ಟುಕೊಂಡು ರಾಜ್ಯದ ಜನತೆಯ ಗಮನಕ್ಕೆ ಇವತ್ತು ಪ್ರಕಟಣೆ ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಅವರು ರಾಜ್ಯದಲ್ಲಿ ಬರಗಾಲ ಬಂದಿದೆ, ದುರಾದೃಷ್ಟವಶಾತ್ ಬಾಕಿಯೆಲ್ಲಾ ಸಾರ್ವಜನಿಕ ಕೆಲಸಗಳು ಕುಂಠಿತವಾಗಿದೆ ರಾಜ್ಯದ ಆಯವ್ಯಯದಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದ 60 ಪರ್ಸೆಂಟ್ ಹಣ ಮತ್ತು ರಾಜ್ಯ ಸರ್ಕಾರದ 40 ಪರ್ಸೆಂಟ್ ಹಣದಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಸಂಪೂರ್ಣವಾಗಿ ರಾಜ್ಯ ಸರ್ಕಾರದ ವತಿಯಿಂದ ಬರಗಾಲ ಪರಿಹಾರ ಕಾಮಗಾರಿಗಳ ಯಾವುದೇ ಕೆಲಸಗಳನ್ನು ಸಮರ್ಪಕವಾಗಿ ಮಾಡುವುದಕ್ಕಾಗಿಲ್ಲ. ಉದಾಹರಣೆಗೆ ಹೇಳುವುದಾದರೆ, ಕುಡಿಯುವ ನೀರು ಒದಗಿಸುವ ಬಗ್ಗೆ ಮತ್ತು ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಬಗ್ಗೆ ಈ ಸರ್ಕಾರದವರು ಏನೊಂದು ಧ್ಯೇಯವನ್ನಿಟ್ಟುಕೊಂಡಿದ್ದರೋ, ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕಾಗಿಲ್ಲ. ಶಾಸಕರ ನಿಧಿಯಿಂದ 29.10 ಕೋಟಿ ರೂಪಾಯಿಗಳನ್ನು ಪಡೆದುಕೊಂಡು, ಕೇಂದ್ರದಿಂದ ಸುಮಾರು 60 ಪರ್ಸೆಂಟ್ ಹಣ ಪಡೆದುಕೊಂಡು, ರಾಜ್ಯದ ಪಾಲಿನ ಸುಮಾರು 10 ಪರ್ಸೆಂಟ್ ಹಾಕಿಕೊಂಡು ಇವತ್ತು ಬರ ಪರಿಹಾರ ಕಾಮಗಾರಿಗಳನ್ನು ಮಾಡಿದ್ದಾರೆ. ಇವತ್ತು ರಾಜ್ಯದ

ಯಾವುದೇ ಜಿಲ್ಲೆಯಲ್ಲಿ ನೋಡಿದರೂ ಸಮರ್ಪಕವಾಗಿ ಬರ ಪರಿಹಾರದ ಕಾಮಗಾರಿಗಳು ನಡೆದಿಲ್ಲ. ಉದಾಹರಣೆಗೆ ಇವತ್ತು ನಾನು ನಮ್ಮ ತುಮಕೂರು ಮತ್ತು ಬೆಂಗಳೂರು (ಗ್ರಾಮಾಂತರ) ಜಿಲ್ಲೆ ಈ ಎರಡು ಜಿಲ್ಲೆಗಳಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರು ಒದಗಿಸುವ ಬಗ್ಗೆ ನಾವು ಜಿಲ್ಲೆಯ ಡಿ.ಸಿ.ಯವರನ್ನು ಕೇಳಿದರೆ, ಅವರು ಒಬ್ಬ ಎಂ.ಎಲ್.ಎ.ಗೆ 8 ಬೋರ್‌ವೆಲ್‌ಗಳನ್ನು ಮಾತ್ರ ನಾವು ಕೊಡುತ್ತೇವೆ ಎಂದು ಹೇಳಿದರು. 400-500 ಹಳ್ಳಿಗಳಲ್ಲಿರುವಂತಹ ಒಂದು constituency ನಲ್ಲಿ ಕೇವಲ 8 ಬೋರ್‌ವೆಲ್‌ಗಳನ್ನು ಮಾತ್ರ ಕೊರೆಸಬೇಕೆಂದರೆ, ಅದರಿಂದ ಏನಾದರೂ ಜನಗಳಿಗೆ ನೀರು ಕೊಡುವಂತಹ ಸಾಧ್ಯತೆ ಇದೆಯೇ ಎನ್ನುವುದನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಇವತ್ತು ಬರ ಪರಿಹಾರಕ್ಕೆ ಕೊಡುತ್ತಿರುವಂತಹ ರಾಜ್ಯ ಸರ್ಕಾರದ ಪಾಲು ಏನಿದೆ, ಅದನ್ನು ಹೆಚ್ಚಿಗೆ ಮಾಡಬೇಕು. ಇವತ್ತು ಬರ ಪರಿಹಾರ ಕಾಮಗಾರಿಗಳಡಿ ಸಣ್ಣ ಕೆರೆಗಳು ಮತ್ತು ಎಂ.ಐ. ಕರೆಗಳ ಹೂಳೆತ್ತುವ ಕಾರ್ಯಕ್ರಮವನ್ನೇನು ಮಾಡಿದ್ದಾರೆ, ಅದು ಸ್ವಾಗತ ಮಾಡುವಂತಹ ವಿಚಾರ. ಅನಾದಿ ಕಾಲದಿಂದ ಇಲ್ಲಿಯವರೆಗೂ ಕೆರೆಗಳಿಂದ ಹೂಳೆತ್ತುವಂತಹ ಕಾರ್ಯಕ್ರಮ ಆಗಿರಲಿಲ್ಲ. ಈ ವರ್ಷ ನಾನು ಕಂಡಂತೆ ನಮ್ಮಲ್ಲಿ ಸುಮಾರು 60-65 ಕೆರೆಗಳಿಂದ ಹೂಳು ಎತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸುಮಾರು 50-55 ಕರೆಗಳಿಂದ ಹೂಳೆತ್ತುವ ಕಾರ್ಯಕ್ರಮ ಈಗಾಗಲೇ ಕಂಪ್ಲೀಟ್ ಮಾಡುವಂತಹ ಮಟ್ಟದಲ್ಲಿ ಕೆಲಸವನ್ನು ಮಾಡಿದ್ದಾರೆ. ನಾನು ಕಂಡ ಹಾಗೆ ಬೆಂಗಳೂರು (ಗ್ರಾಮಾಂತರ) ಜಿಲ್ಲೆ ಮತ್ತು ತುಮಕೂರು ಜಿಲ್ಲೆಯ ಡಿ.ಸಿ.ಯವರು ಶಾಸಕರ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಶಿಫಾರಸ್ಸು ಮಾಡಿದಂತಹ ಲಿಸ್ಟ್ ಅನ್ನು ಪರಿಶೀಲನೆ ಮಾಡಿ, ಅವಶ್ಯಕತೆ ಇರುವ ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಇವರು ಕೊಟ್ಟಂತಹ 60-70 ಕೆರೆಗಳು, 300-350 ಸಣ್ಣ ಕರೆಗಳು ಬರುತ್ತವೆ, 15-20 ಎಮ್‌ಐ ಕರೆಗಳು ಬರುತ್ತವೆ, ನೀವು ಕೊಟ್ಟ ಹಣ ಸಾಲದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಿರಿಯ ಸಚಿವರಾದ ಖರ್ಗೆಯವರು ಎಮ್‌ಐಯಲ್ಲಿ 5,000 ಕೆರೆಗಳನ್ನು ತೋಡಿಸುತ್ತೇವೆಂದೂ, ಸಾವಿರಾರು ಕೋಟಿ ರೂಪಾಯಿಗಳು ದುಡ್ಡು ಇಡುತ್ತೇವೆಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಹೇಳಿದ್ದೀರಿ, ಆ ಪ್ರಕಾರ ಇವತ್ತು ಆ ಕೆಲಸ ಮುಗಿಸಿದರೆ ರಾಜ್ಯದ ರೈತರಿಗೆ ನಿಜವಾಗಿ ಕೊಟ್ಟ ಒತ್ತು ಆಗುತ್ತದೆಯೇ ಹೊರತು, ಸುಮ್ಮನೆ ನೀವು ಬಜೆಟ್‌ನಲ್ಲಿ ಹೇಳಿ ಮುಂದಿನ ವರ್ಷ ಯಾವ ಕೆಲಸವೂ ಮಾಡಲಿಲ್ಲ ಎಂದರೆ ನಿಷ್ಪ್ರಯೋಜಕ ಬಜೆಟ್ ಆಗುತ್ತದೆ. ದಯವಿಟ್ಟು ಆ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತದಾ ಎಂದು ಹೇಳುತ್ತಾ, ಆಯವ್ಯಯದಲ್ಲಿ ನಾಗರೀಕ ಸಿಟಿಜನ್ ಫ್ರೆಂಡ್ಲಿ ವ್ಯವಸ್ಥೆ ಅಳವಡಿಸಿಕೊಂಡು ನಾವು ತೆರಿಗೆ ಪರಿಹಾರ ನೀಡಲು ಉದ್ದೇಶಿಸಿದ್ದೇವೆಂದು ಹೇಳುತ್ತಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇವತ್ತು ರಾಜ್ಯದಲ್ಲಿ 70 ಪರ್ಸೆಂಟ್ ಮುಚ್ಚಿವೆ. ಕೆಲವು ವಿಚಾರಗಳು ಎಕ್ಸೈಸ್ ಡಿಪಾರ್ಟ್‌ಮೆಂಟ್ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಆಗಬಹುದು, ಅಥವಾ ಬೇರೆ ವಿನ್ಯಾಸಗಳಿಗೆ ಕೊಡತಕ್ಕಂತಹ ವಸ್ತುಗಳು ಏನಿವೆ ವಿಲಾಸಿ ತೆರಿಗೆ ಏನಿವೆ ಇವುಗಳನ್ನು ಜಾಸ್ತಿ ಮಾಡುವ ವಿಚಾರದಲ್ಲಿ ಸರ್ಕಾರ ಹೆಚ್ಚಿಗೆ ಹಣವನ್ನೂ ಇವುಗಳ ಮುಖಾಂತರ ಕಲೆಕ್ಟ್ ಮಾಡುವ ಬಗ್ಗೆ ಯಾವುದೂ ತೋರಿಸಿಲ್ಲ. ಫ್ರೆಂಡ್ಲಿ ಸಿಟಿಸನ್ ತೆರಿಗೆ ವ್ಯವಸ್ಥೆ ಅಳವಡಿಸಿಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಏನು ಮಾಡುತ್ತಾರೆ ಎಷ್ಟು ಹಣ ಬರುತ್ತದೆ ಎಂಬುದನ್ನು ನಿಗದಿತವಾಗಿ ಹೇಳಲಿಲ್ಲ. ಆದ್ದರಿಂದ ಇದು ಅಸ್ಪಷ್ಟತೆಯಿಂದ ಕೂಡಿದೆ. ಕೃಷಿಯಲ್ಲಿ ವ್ಯವಸಾಯವನ್ನು 100ಕ್ಕೆ 70ರಷ್ಟು ಜನ ಇವತ್ತು

ನಮ್ಮ ರಾಜ್ಯದಲ್ಲಿ ಕೃಷಿ ಅಳವಡಿಸಿಕೊಂಡು ಜೀವನ ಮಾಡುತ್ತಿದ್ದಾರೆ. ನಮ್ಮದು ಕೃಷಿ ಪ್ರಧಾನವಾದ ದೇಶ ಮತ್ತು ರಾಜ್ಯ. ಇವತ್ತು ಕೃಷಿಗೆ ಬಜೆಟ್‌ನಲ್ಲಿ ಕೊಟ್ಟಿರುವ ಹಣ ಎಷ್ಟು ಎಂದರೆ, ಕೇವಲ 487.71 ಕೋಟಿ ರೂಪಾಯಿಗಳು. ಐದು ಪರ್ಸೆಂಟ್ ಮಾತ್ರ ಬಜೆಟ್‌ನಲ್ಲಿ ಕೃಷಿಗಾಗಿ ಇಟ್ಟಿದ್ದಾರೆ. 100ಕ್ಕೆ 70 ಜನ ಆ ಒಂದು ಕೆಲಸವನ್ನು ಅವಲಂಬಿಸಿರುವವರಿಗೆ ಕೊಟ್ಟಿರುವ ರಾಜ್ಯದ ಬಜೆಟ್. ಹಿಂದೆ ಹನಿ ನೀರಾವರಿ ಆಗಬಹುದು, ಬಿತ್ತನೆ ಬೀಜ ಇರಬಹುದು, ಗೊಬ್ಬರ ಆಗಬಹುದು, ಟ್ರ್ಯಾಕ್ಟರ್ ಉಪಕರಣಗಳು ಆಗಬಹುದು, ಎಲ್ಲದರ ಮೇಲೆ ಸಬ್ಸಿಡಿ ಕೊಟ್ಟಿದ್ದರು. ಆಗ ಟ್ಯಾಕ್ಸ್ ಇರಲಿಲ್ಲ. ಈ ವರ್ಷ ಕೂಡ ನಾವು ಟ್ಯಾಕ್ಸ್ ಹಾಕಿಲ್ಲ ಎಂದು ಹೇಳುವ ನೆಪದಲ್ಲಿ ಇವತ್ತು ಕೇವಲ ಬಿಜಾಪುರ ಜಿಲ್ಲೆಗೆ ಒಳಪಟ್ಟಂತೆ ಹನಿ ನೀರಾವರಿ ಯೋಜನೆಗಳಿಗೆ 100ಕ್ಕೆ 100ರಷ್ಟು ಸಬ್ಸಿಡಿ ಕೊಡುತ್ತೇವೆ, ಮಿಕ್ಕ ಜಿಲ್ಲೆಗಳಲ್ಲಿ ಆಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಲಿಲ್ಲ. ಹನಿ ನೀರಾವರಿಗೆ ಕೊಡುವ ಸಬ್ಸಿಡಿ ಆಬಹುದು, ಎಸ್‌ಸಿಎಸ್‌ಟಿ ಜನಗಳಿಗೆ ಕೊಡುವ ನಮ್ಮ ಬಂಧುಗಳಿಗೆ ಕೊಡತಕ್ಕಂತಹ ಪರಿಕರಗಳು ಆಗಬಹುದು, ಅಗ್ರಿಕಲ್ಚರ್ ಆಗಬಹುದು, ರೇಷ್ಮೆ ಇಲಾಖೆಯಲ್ಲಿಯೂ ಕೂಡ ಉತ್ತಮವಾದ ಪರಿಕರಗಳು ಇಲ್ಲ. ಐಆರ್‌ಡಿಪಿಯ ಸಾಲದಲ್ಲಿ ಅನೇಕ ಉತ್ತಮವಾದ ಕೆಲಸಗಳು ಸಿಗುತ್ತಿದ್ದವು. ಐಆರ್‌ಡಿಪಿ ಬಗ್ಗೆ ಕೂಡ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ. ಕೃಷಿ ಮಾರುಕಟ್ಟೆ ವಿಚಾರದಲ್ಲಿ ಕಳೆದ ವರ್ಷ ರೈತರ ವಸ್ತುಗಳನ್ನು ಖರೀದಿ ಮಾಡುವುದಕ್ಕೆ ಖರೀದಿ ಕೇಂದ್ರಗಳನ್ನು ಮಾಡಿ ಕೊಬ್ಬರಿ ಖರೀದಿ ಕೇಂದ್ರದಲ್ಲಿ ರೈತರ ಬೆಳೆಯನ್ನು ಒಂದು ಕ್ವಿಂಟಾಲ್‌ಗೆ ಮೂರೂವರೆ ಸಾವಿರ ರೂಪಾಯಿಗಳನ್ನು ಕೊಟ್ಟು ಕೊಂಡು ಕೊಳ್ಳುತ್ತೇವೆಂದು ಆದೇಶ ಮಾಡಿತ್ತು. ಆ ಪ್ರಕಾರ ರೈತರಿಗೆ ಸಿಗಲಿಲ್ಲ. ದಲ್ಲಾಳಿಗಳಿಗೆ ಕೊಟ್ಟು ಡೂಪ್ಲಿಕೇಟ್ ಪಹಣಿ ಸೃಷ್ಟಿ ಮಾಡಿಕೊಂಡು ರೈತರಿಂದ ಕಡಿಮೆ ದರಕ್ಕೆ ಕೊಂಡು ಮಾರಿ ಎಂಟು ತಿಂಗಳಲ್ಲಿ ಕೋಟ್ಯಾಂತರ ರೂಪಾಯಿ ವಂಚನೆಯಾಗಿದೆ. ಅದನ್ನು ಅಧಿಕಾರಿಗಳ ಮುಖಾಂತರ ತನಿಖೆ ಮಾಡಿಸಿ, ಮಾರುಕಟ್ಟೆ ನಿಯಂತ್ರಣದ ಬಗ್ಗೆ ಸರ್ಕಾರ ಏನೂ ಹೇಳಲಿಲ್ಲ. ಈ ಬಜೆಟ್‌ನಲ್ಲಿ ರೈತರಿಗೆ ಬೆಳೆ ಮೇಲೆ ಸಾಲ ಇರಬಹುದು, ಅವರು ಬೆಳೆದ ಬೆಳೆಗೆ ಬೆಂಬಲ ಬೆಲೆ ಕೊಡುತ್ತೇವೆಂದು ನಿಗದಿತವಾಗಿ ಹೇಳಲಿಲ್ಲ. 448 ಕೋಟಿ ರೂಪಾಯಿ ಏನು ಕೇಳಿದ್ದಾರೆ ಇದು ರೈತರಿಗೆ ಯಾವ ವಿಚಾರದಲ್ಲಿಯೂ ಸಫಿಷಿಯಂಟಾಗಿ ಅವರ ಕೆಲಸ ಕಾರ್ಯಗಳಿಗೆ ಅವರ ಅಭಿವೃದ್ಧಿಗೆ ಬಾರದಂತಹ ಬಜೆಟ್ ಆಗಿದೆ. ರೈತರ ಇನ್‌ಶೂರೆನ್ಸ್ ಅಮೌಂಟ್‌ನಲ್ಲಿ ಬೆಳೆ ವಿಮೆ ಮಾಡಿ ಬಹು ಪಾಲು ಹಣವನ್ನು ಆಯಾ ವರ್ಷಗಳಲ್ಲಿ ಕೊಡುತ್ತೇವೆಂದು ಹೇಳಿದರು. ಕಳೆದ ವರ್ಷ ರೈತರು ಕೋಟ್ಯಾಂತರ ರೂಪಾಯಿ ಕಟ್ಟಿದರು. ಯಾವ ಬೆಳೆಯೂ ಸರಿಯಾಗಿ ಆಗಲಿಲ್ಲ. ಬೆಳೆ ವಿಮೆ ಕೊಡಬೇಕಾದರೆ 60 ಪರ್ಸೆಂಟ್ ಕೊಟ್ಟರು. 40 ಪರ್ಸೆಂಟ್ ಸರ್ಕಾರ ವಿತರಣೆ ಮಾಡಲಿಲ್ಲ. ಆ ವಿಷಯವನ್ನು ಇವರು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ. ಅದೇ ರೀತಿ ನುಸಿ ರೋಗಕ್ಕೋಸ್ಕರ ಸರ್ಕಾರ 50 ಕೋಟಿ ರೂಪಾಯಿಗಳು ಖರ್ಚು ಮಾಡಿ, ಯಾವುದೋ ಡೂಪ್ಲಿಕೇಟ್ ಕಂಪನಿಯಿಂದ ಔಷಧಿ ತಂದು ಸಿಂಪಡಣೆ ಮಾಡಿದ್ದರಿಂದ ಲಕ್ಷಾಂತರ ತೆಂಗಿನ ಮರಗಳು ಒಣಗಿ ಹೋಗಿವೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಕೃಷಿ ಮಂತ್ರಿಗಳಿಗೆ ಹೇಳುತ್ತೇನೆ, ಅಂದಿನ ವ್ಯವಸಾಯ ಮಂತ್ರಿಗಳು ಏನಿದ್ದರು ಅವರು ಅವರ ತೋಟಕ್ಕೆ ಆ ಔಷಧಿಯನ್ನು ಸಿಂಪಡಣೆ ಮಾಡಲಿಲ್ಲ. ಔಷಧಿಯನ್ನು ಅಪ್ಲೇ ಮಾಡಲಿಲ್ಲ. ರೈತರ ತೋಟಕ್ಕೆ ಸಿಂಪಡಣೆ ಮಾಡಿ ಎಂದು ಹೇಳಿದರು. ನಮ್ಮಂತಹವರು ರೋಗ ಹೋಗುತ್ತದೆ, ಅನುಕೂಲವಾಗುತ್ತದೆ ಎಂದು ನಾವು ನಮ್ಮ ತೋಟಗಳಲ್ಲಿ ಸಿಂಪಡಣೆ ಮಾಡಿದೆವು. ಮೂರರಿಂದ ನಾಲ್ಕು ತಿಂಗಳಾದರೂ ಒಂದು ಮರದಲ್ಲಿಯೂ ಕಾಯಿ

ಇಲ್ಲ. ಈ ತರಹ ಲಕ್ಷಾಂತರ ಮರಗಳಲ್ಲಿ ಆಗಿದೆ. ಕೆಲವು ಮರಗಳು ಒಣಗಿ ಹೋಗಿವೆ, ಕೆಲವು ಮರಗಳಿಗೆ ಇನ್ನು ರೋಗ ಪರಿಹಾರವಾಗಿಲ್ಲ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿಲ್ಲ. ಬಜೆಟ್‌ನಲ್ಲಿ ಕೂಡ ರೈತರ ಬಗ್ಗೆ ಕಾಳಜಿ ಇಲ್ಲದಂತಹ ಬಜೆಟ್ ಮಾಂಡಿಸಿದ್ದಾರೆ. ಬಜೆಟ್ ಮಂಡಿಸುವಾಗ ರೈತರಿಗೆ ಆದ ಲಾಸ್ ಕೊಡುತ್ತೇವೆ ಇಲ್ಲವೆಂದೂ ಕೂಡ ಸ್ಪಷ್ಟನೆ ಮಾಡಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 100ಕ್ಕೆ 100 ಸಹಾಯಧನ ಕೊಡುತ್ತೇವೆಂದು ಹೇಳಿದ್ದೀರಿ. 100ಕ್ಕೆ 100ರಷ್ಟು ಹಣ ಪ.ಜಾ. ಪ.ಪ.ಗಳ ಬಂಧುಗಳಿಗೆ ಮತ್ತು ರೈತರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಕೊರೆಯಬೇಕಾದರೆ ನೀವು 65,000ರೂ ಮಾತ್ರ ಕೊಡುತ್ತೀರಿ, ಮಿಕ್ಕ ಹಣವನ್ನು ಕಟ್ಟಿ ಎಂದು ಹೇಳುತ್ತೀರಿ. 10,000 ರೂ ಎಲೆಕ್ಟ್ರಿಕಲ್ ಬಿಲ್ ಕಟ್ಟಿ ಎಂದು ಹೇಳುತ್ತಾರೆ. 65,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಕಟ್ಟಿ ಎಂದು ಕೇಳಿದಾಗ ಅವರಿಗೆ 10 ರೂಪಾಯಿ ಕೊಡುವುದಕ್ಕೆ ಶಕ್ತಿ ಇರುವುದಿಲ್ಲ, ಆ ಸಮಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಈ ಸರ್ಕಾರದಿಂದ ಯಾವ ಅನುಕೂಲವಾಗುತ್ತದೆ? ಅದನ್ನೂ ಸಹ ಇವರು 100ಕ್ಕೆ 100 ಸಹಾಯ ಮಾಡುವುದಕ್ಕೆ ಎಷ್ಟು ಹಣವನ್ನು ತೊಡಗಿಸಿದ್ದಾರೆಂದು ಅವರ ಬಜೆಟ್‌ನಲ್ಲಿ ವಿಶ್ಲೇಷಣೆ ಮಾಡಲಿಲ್ಲ. ನೀರಾವರಿ ವಿಚಾರದಲ್ಲಿ ಮತ್ತು ಡಿಎಲ್‌ಡಿಬಿಯಲ್ಲಿ ವ್ಯವಸಾಯಕ್ಕೆ ಪೂರಕವಾದ ಒಣ ಭೂಮಿಯನ್ನು ಅಭಿವೃದ್ಧಿಪಡಿಸಬೇಕಾದರೆ ಡಿಎಲ್‌ಡಿಬಿ ಎಂಬ ಒಂದು ಇಲಾಖೆ ತೆರೆದು ಅದರ ಮುಖೇನ ಒಣ ಭೂಮಿ ಅಭಿವೃದ್ಧಿ ಮಾಡುವ ಕೆಲಸವನ್ನು ಸರ್ಕಾರ ಮಾಡಿದೆ. ಇಲ್ಲಿ ಇಟ್ಟಿರುವ ಹಣ ಕೇವಲ 100 ಕೋಟಿ ರೂಪಾಯಿ. 2003-04ರಲ್ಲಿ ಯಾವುದೇ ಹಣವನ್ನು ಇಟ್ಟಿದ್ದೇವೆ ಎಂದು ಸ್ಪಷ್ಟವಾಗಿ ಹೇಳಲಿಲ್ಲ. ಆಯವ್ಯಯದಲ್ಲಿ ಸಮುದಾಯ ಸಹಭಾಗಿತ್ವದಲ್ಲಿ 5000 ಗ್ರಾಮೀಣ ಕೆರೆಗಳ ಹೂಳು ತೆಗೆಯುವುದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳು ವೆಚ್ಚ ಮಾಡಿ ಅಭಿವೃದ್ಧಿ ಪಡಿಸುವುದಾಗಿ ಹೇಳಿದ್ದರು. 2003-04ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ನಿಗದಿಗೊಳಿಸಿಲ್ಲ. ಒಣ ಭೂಮಿ ಇರುವ ಪ್ರದೇಶ ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ಮತ್ತು ಮೈಸೂರು ಇಲ್ಲಿ ಈ ಒಣಭೂಮಿ ಇರುವ ಪ್ರದೇಶಗಳಲ್ಲಿ ರೈತರು ಹೆಚ್ಚಿಗೆ ಬೋರ್‌ವೆಲ್‌ಗಳನ್ನು ಅಳವಡಿಸಿಕೊಳ್ಳಬೇಕು. ಬೋರ್‌ವೆಲ್ ಇದ್ದರೆ ಮಾತ್ರ ಸಾಧ್ಯ. ಮಳೆಗಾಲದಲ್ಲಿ ಇವತ್ತು ಎರಡು ತಿಂಗಳು ಮೂರು ತಿಂಗಳು ಮಳೆ ಬರಬಹುದು, ಮಳೆ ಬಾರದೆ ಇದ್ದರೆ ಬರಗಾಲ ಬರುತ್ತದೆ. ಈ ರೀತಿ ಸರ್ಕಾರ ಐದು ಸಾವಿರ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ, ಬರಗಾಲ ಹೊರತುಪಡಿಸಿ ಇವರ ಸ್ಕೀಮ್‌ಗಳಲ್ಲಿ 5,000 ಕೆರೆಗಳ ಹೂಳೆತ್ತುವ ಕಾರ್ಯಕ್ರಮಕ್ಕೆ ಯಾವುದೇ ಹಣವನ್ನು ತೊಡಗಿಸಿಲ್ಲ. ಎಕ್ಸ್‌ಪ್ಟ್ 100 ಕೋಟಿ ರೂಪಾಯಿ ಬಿಟ್ಟರೆ ಮಿಕ್ಕ ಹಣ ಆಯವ್ಯಯದಲ್ಲಿ ರೈತರಿಗೋಸ್ಕರ ಕೊಟ್ಟಿಲ್ಲ. ದಯಮಾಡಿ ಈ ವಿಚಾರದಲ್ಲಿ ಸರ್ಕಾರ ಯೋಚನೆ ಮಾಡಬೇಕು. ರೈತರು ಅಭಿವೃದ್ಧಿ ಆಗಬೇಕಾದರೆ ಅವರಿಗೆ ಮುಖ್ಯವಾಗಿ ನೀರಾವರಿ ಬೇಕು. ವಿದ್ಯುಚ್ಛಕ್ತಿ ಬೇಕು. ಅವರು ಬೆಳೆದ ಬೆಳೆಗಳಿಗೆ ಬೆಲೆ ಬೇಕು, ಈ ಮೂರು ವಿಚಾರಗಳಲ್ಲಿ ಕೂಡ ತಾವು ಯಾವುದೇ ವಿಚಾರದಲ್ಲಿ ಚಕಾರ ಎತ್ತಲಿಲ್ಲ. ರೈತರಿಗೆ ವಿರುದ್ಧವಾಗಿ ಬಜೆಟ್ ಮಂಡನೆ ಮಾಡಿದ್ದಾರೆ. ರೈತರಿಗೆ ನಾವು ಎಲ್ಲಾ ರೀತಿಯಲ್ಲಿ ವಿದ್ಯುಚ್ಛಕ್ತಿ ಕೊಡುತ್ತೇವೆ, ಆರು ಗಂಟೆ ವಿದ್ಯುಚ್ಛಕ್ತಿ ಸಪ್ಲೇ ಮಾಡುತ್ತೇವೆಂದು ಹೇಳುತ್ತಾರೆ, ಹಳ್ಳಿಗಾಡಿನ ಪ್ರದೇಶಗಳಿಗೆ ಹೋದಾಗ ಎರಡು ಗಂಟೆಯಾದರೂ ವಿದ್ಯುಚ್ಛಕ್ತಿ ಇರುವುದಿಲ್ಲ. ರಾತ್ರಿ ಎರಡು ಗಂಟೆಗೆ ಕೊಡುತ್ತಾರೆ. ಮಧ್ಯರಾತ್ರಿ ನಾಲ್ಕು ಗಂಟೆಗೆ

ಮತ್ತೆ ತೆಗೆಯುತ್ತಾರೆ. ಈ ತರಹ ಆಗಿ ರೈತರು ಬೆಳೆ ಬೆಳೆಯುವುದಕ್ಕೆ ಮನಸ್ಸು ಇಲ್ಲ. ಬೆಳೆದ ಬೆಳೆಗೆ ಬೆಲೆಯೂ ಸಿಗುವುದಿಲ್ಲ. ಆದ್ದರಿಂದ ಕಂಗಾಲಾದ ರೈತರಿಗೆ ಅವರು ಆಯವ್ಯಯದಲ್ಲಿ ಕೊಟ್ಟ ಹಣ ಯಾವುದಕ್ಕೂ ಸಾಲುವುದಿಲ್ಲ. ಬಜೆಟ್‌ನಲ್ಲಿ ನಾವು ರೈತರಿಗೆ ಹೆಚ್ಚು ಒತ್ತು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಚಾರ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿಗಳನ್ನು ಬಲಪಡಿಸುವ ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ, ಅವುಗಳಿಗೆ ಐದು ಲಕ್ಷ ರೂಪಾಯಿಗಳನ್ನು ವರ್ಷಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಒಂದು ಊರಿನ ಒಂದು ಪಂಚಾಯಿತಿಯಲ್ಲಿ ಅಲ್ಲಿಯ ಸ್ಟ್ರೀಟ್ ಲೈಟ್ ಎಲಕ್ಟ್ರಿಸಿಟಿ ಬಿಲ್ ಒಂದು ತಿಂಗಳಿಗೆ 20ರಿಂದ 25,000 ರೂಪಾಯಿ ಬರುತ್ತದೆ. ಒಂದು ಪಂಚಾಯಿತಿಗೆ ಸುಮಾರು 8 ರಿಂದ 10 ಹಳ್ಳಿಗಳು ಬರುತ್ತವೆ. ಅವರು ಕೊಟ್ಟಂಥ 5 ಲಕ್ಷ ರೂಪಾಯಿಗಳಲ್ಲಿ, ಚರಂಡಿ ತೆಗೆಯತಕ್ಕ ಕೆಲಸವಾಗಬಹುದು, ಕುಡಿಯುವ ನೀರನ್ನು ಒದಗಿಸುವುದಕ್ಕಾಗಬಹುದು, ಯಾವುದೇ ದುರಸ್ತಿಗಾಗಿ ಇರಬಹುದು. ಬೀದಿ ದೀಪಗಳನ್ನು ತೆಗೆದುಕೊಳ್ಳುವುದಕ್ಕಾಗಬಹುದು. ಆ ಹಣವು ಏನೇನೂ ಸಾಕಾಗುವುದಿಲ್ಲ. ಆದರೆ ಇವರು ಮಾತ್ರ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಿದ್ದೇವೆ, ಅಧಿಕಾರ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇವರು ಒಂದು ಗ್ರಾಮಪಂಚಾಯಿತಿಗೆ ಇಟ್ಟಿರುವ 5 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. ಇವರೇನು ಬಜೆಟ್‌ನಲ್ಲಿ ಒಂದು ಪಂಚಾಯಿತಿಗೆ 5 ಲಕ್ಷ ರೂ. ಕೊಡುವುದಾಗಿ ಹೇಳಿದ್ದಾರೆ. ಅದರಲ್ಲಿ ಯಾವುದೇ ವಿಧವಾದಂಥ ಉತ್ತಮವಾದ ಸಾರ್ವಜನಿಕ ಕೆಲಸಗಳನ್ನು ಮಾಡಲು ಆಗುವುದಿಲ್ಲ. ಇವರು ಸ್ವಚ್ಛ ಗ್ರಾಮ ಮಾಡುವುದಾಗಿ ಹೇಳುತ್ತಾರೆ. ಒಂದು ತಾಲ್ಲೂಕಿನಲ್ಲಿ ಐದರಿಂದ ಆರು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲೂ ಮಾಡಿದ್ದೇವೆ. ಆದರೆ ಅದಕ್ಕೆ ಇದುವರೆಗೆ ಹಣ ಬಿಡುಗಡೆಯಾಗಿಲ್ಲ. ಮಾರ್ಚ್ 31 ರಂದು ಏನಾಗುತ್ತದೋ ಗೊತ್ತಿಲ್ಲ. ಅದರಲ್ಲಿ ಇವತ್ತು 60 ಪರ್‌ಸೆಂಟ್ ಹಣ ಬಿಡುಗಡೆಯಾಗಿಲ್ಲ. ಸ್ವಚ್ಛ ಗ್ರಾಮ ಕಾರ್ಯಕ್ರಮವನ್ನೇನು ಮಾಡುತ್ತಿದ್ದಾರೆ ಅದಕ್ಕೆ ಸಂಬಂಧಪಟ್ಟ ಇಲಾಖೆಯಿಂದ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ವಸತಿ ಬಗ್ಗೆ ಹೇಳುವುದಾದರೆ, 11 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಹೋದ ವರ್ಷ ಒಂದೊಂದು ಕ್ಷೇತ್ರಕ್ಕೆ 600 ರಿಂದ 700 ಮನೆಗಳನ್ನು ಕೊಟ್ಟಿದ್ದಾರೆ. ಆದರೆ ನವಗ್ರಾಮ ಎಂದು ಮಾಡಿ ಗುಂಪು ಮನೆಗಳನ್ನೇನು ಮಾಡಿದ್ದಾರೆ ಅದಕ್ಕೆ ಆರು ತಿಂಗಳುಗಳಾದರೂ ಹಣ ಬಿಡುಗಡೆಯಾಗಿಲ್ಲ. ಆ ಮನೆಗಳಿಗೆ ಕೊಡತಕ್ಕಂಥ 20 ಸಾವಿರ ರೂಪಾಯಿ ಸಾಕಾಗುವುದಿಲ್ಲ. ಈ ಕಾಲದಲ್ಲಿ 20 ಸಾವಿರಕ್ಕೆ ಮನೆಯ ಪಾಯ ಹಾಕಲು ಆಗುವುದಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು, ವಸತಿ ಸಚಿವರು ಇದರ ಬಗ್ಗೆ ಚಿಂತನೆ ಮಾಡಿ ಒಂದು ಮನೆಗೆ ಕೊನೆಯ ಪಕ್ಷ 30 ಸಾವಿರ ಕೊಟ್ಟರೆ ಬಡವರು, ಸಾಮಾನ್ಯ ಜನರೇನು ಮನೆ ಕಟ್ಟುತ್ತಾರೆ ಅವರಿಗೆ ಅನುಕೂಲವಾಗುತ್ತದೆ. ಕೇವಲ 20 ಸಾವಿರ ರೂ ಸಾಕಾಗುವುದಿಲ್ಲ. ಬಜೆಟ್‌ನಲ್ಲೂ ಇದಕ್ಕಾಗಿ ಇಟ್ಟಿರುವ ಹಣ ಸಾಕಾಗುವುದಿಲ್ಲ, ಅದನ್ನೂ ಜಾಸ್ತಿ ಮಾಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಮಹಿಳೆಯರ ಆರ್ಥಿಕ ಶಕ್ತಿಯನ್ನು ಸ್ವಾವಲಂಬನೆ ಮಾಡಬೇಕೆಂದು ಸರ್ಕಾರ ಇವತ್ತೇನು ಸ್ತ್ರೀ ಶಕ್ತಿ ಯೋಜನೆಯನ್ನು ಜಾರಿಗೆ ತಂದಿದೆ ಅದನ್ನು ಸ್ವಾಗತಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಐದು ಸಾವಿರ ಮಹಿಳೆಯರು, ಸಾವಿರದ ಎಂಟುನೂರ ಅರವತ್ತು ಜನ ಪುರುಷರು ಸ್ವಸಹಾಯ ಯೋಜನೆಯ ಅಡಿಯಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿ ಆದಾಯವನ್ನು ಮಾಡಿದ್ದಾರೆ. ಆದರೆ ಸರ್ಕಾರ

ಆದೇಶ ಮಾಡಿದರೂ ಸಹ ಬ್ಯಾಂಕ್ ಸಬ್ಸಿಡಿಯ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಆ ಒಂದು ಕ್ಲಿಷ್ಟ ಪರಿಸ್ಥಿತಿ ಬ್ಯಾಂಕುಗಳಿಂದ ಉದ್ಭವವಾಗಿದೆ. ಆದ್ದರಿಂದ ಸಬ್ಸಿಡಿ ಹಣವನ್ನೇನು ನಿಗದಿ ಮಾಡಿದ್ದಾರೆ ಅದನ್ನು ಕೂಡಲೇ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಅನಂತರ ರೇಷನ್ ಕಾರ್ಡ್‌ನ ಬಗ್ಗೆ ಹೇಳುವುದಾದರೆ, ಸರ್ಕಾರ ಅಧಿಕಾರಕ್ಕೆ ಬಂದು ಮೂರೂವರೆ ವರ್ಷಗಳಾಯಿತು. 46 ಸಾವಿರ ಹಸಿರು ಕಾರ್ಡುಗಳನ್ನು ವಾಪಸ್ ಪಡೆದು ಹಳದಿ ಕಾರ್ಡುಗಳನ್ನು ಕೊಡುತ್ತೇವೆಂದು ಆಸೆ ತೋರಿಸಿದರು. ಹಳದಿ ಕಾರ್ಡುಗಳನ್ನು ಕೊಡುತ್ತಾರೆಂದು ರಾಜ್ಯದ ಜನರು, ಬಡವರು ಕಾಯುತ್ತಿದ್ದಾರೆ. ಇದರ ಬಗ್ಗೆ ಸರ್ವೆ ಮಾಡಿ ಎಂದು ಪಂಚಾಯಿತಿ ಕಾರ್ಯದರ್ಶಿಯವರನ್ನು ಕಳುಹಿಸಿಕೊಟ್ಟರು. ಅವರು ಸರ್ವೆ ಮಾಡಲು ಎರಡು ವರ್ಷ ಮಾಡಿದರು. ಆಮೇಲೆ ನೀವು ಬೇಡ ಕಂದಾಯ ಇಲಾಖೆಯವರು ಮಾಡಿ ಎಂದರು. ಕಂದಾಯ ಇಲಾಖೆಯವರು ಸರ್ವೆ ಮಾಡಿಕೊಟ್ಟರು. ಆದರು ಇದುವರೆಗೆ ರೇಷನ್ ಕಾರ್ಡುಗಳನ್ನು ಕೊಟ್ಟಿಲ್ಲ. ಬಡವರಪರವಾಗಿ ಕೆಲಸ ಮಾಡುತ್ತೇವೆ, ಸಾವಿರಾರು ಕೋಟಿ ರೂಪಾಯಿಗಳನ್ನು ಇದರಲ್ಲಿ ವಿನಿಯೋಗಿಸುತ್ತೇವೆಂದು ಹೇಳುತತ್ತಾರೆ. ಬಡವರಿಗೇನು ಹಳದಿ ಕಾರ್ಡನ್ನು ಕೊಡುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಇಟ್ಟಿದ್ದಾರೆಂಬ ಬಗ್ಗೆ ಎಲ್ಲೂ ಹೇಳಿಲ್ಲ. ಮೇ ಒಂದನೆ ತಾರೀಖು ಹಳದಿ ಕಾರ್ಡುಗಳನ್ನು ಹಂಚಲಾಗುವುದೆಂದು ಹೇಳಿಬಿಟ್ಟಿದ್ದಾರೆ. ಇಂಥ ಮೇ ಒಂದನೆ ತಾರೀಖು ಕಳೆದ ನಾಲ್ಕು ವರ್ಷಗಳಿಂದ ಬರುತ್ತಿದೆ. ಆ ಕೆಲಸ ಇವತ್ತಿನವರೆಗೂ ಆಗಿಲ್ಲ. ಇದು ಜನರ ಬಾಯಿಗೆ ಮೇಲುಗಡೆ ಮಾತ್ರ ತುಪ್ಪ ಹಾಕುತ್ತೇವೆಂದು ಹೇಳಿದಂತಾಗುತ್ತದೆ, ಅವರು ಬಾಯಿ ಬಿಟ್ಟುಕೊಂಡೇ ಇರಬೇಕು, ಆದರೆ ತುಪ್ಪವನ್ನಂತೂ ಹಾಕುವಂತಿಲ್ಲ. ಕೊನೆಗೆ ಅವರು ಹೊಟ್ಟೆಯ ಮೇಲೆ ತಣ್ಣೀರಿನ ಬಟ್ಟೆಯನ್ನು ಹಾಕಿಕೊಂಡು ಸಾಯುವಂಥ ಪ್ರಸಂಗಕ್ಕೆ ಇವರು ತಂದಿದ್ದಾರೆ. ಮೇ ಒಂದನೇ ತಾರೀಖು ಏನು ಹಳದಿ ಕಾರ್ಡುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ ಆ ಕಟ್ ಆಫ್ ಡೇಟ್‌ನಲ್ಲಿ ಕೂಡಲೇ ವಿತರಣೆ ಮಾಡಿ ಬಡವರಿಗೆ ಅನುಕೂಲ ಮಾಡಿಕೊಡಬೇಕು. ಇದಕ್ಕಾಗಿ ಬಜೆಟ್‌ನಲ್ಲಿ ಏನನ್ನೂ ಪ್ರಸ್ತಾಪ ಮಾಡದೆಯೇ, ಹಣವನ್ನು ಇಡದೆಯೇ ಸುಮ್ಮನೆ ಮೇ ಒಂದನೇ ತಾರೀಖು ಕೊಡುವುದಾಗಿ ಹೇಳಿದ್ದಾರೆ. ಇದು ಸಮಂಜಸವಾದ ಮಾತಲ್ಲ. ರಸ್ತೆಗಳ ಬಗ್ಗೆ ತಾವು ಕೇಳಬೇಕು. ನೆಲಮಂಗಲದ ನ್ಯಾಷನಲ್ ಹೈವೇ ನಂಬರ್ 4 ಲಕ್ನೋದವರೆಗೆ ಹೋಗುತ್ತದೆ. ಆ ರಸ್ತೆಯ ಕೆಲಸವನ್ನು ಬಿ.ಎಸ್.ಬಿ. ಕಂಪನಿಯವರು ಮಾಡುತ್ತಿದ್ದಾರೆ. ಆ ಕಂಪನಿಯವರು ಮಾಡುತ್ತಿರುವ ರಸ್ತೆ ಪ್ರಪಂಚದಲ್ಲೇ ಅತ್ಯುತ್ತಮವಾದ ರಸ್ತೆಯಾಗಿದೆ. ಅದೇ ರೀತಿ ನಮ್ಮ ರಾಜ್ಯ ಹೆದ್ದಾರಿಗಳಿಗೆ ಪ್ಯಾಕೇಜ್ ಪದ್ಧತಿಯಲ್ಲಿ ತಮಿಳುನಾಡು, ಆಂಧ್ರದಿಂದ ಬಂದಿರುವ ಗುತ್ತಿಗೆದಾರರಿಗೆ ಗುತ್ತಿಗೆ ಕೊಟ್ಟು ಮೂರು ವರ್ಷಗಳಾಯಿತು. ಮೂರು ವರ್ಷ ಮೈನ್‌ಟೆನೆನ್ಸ್ ಎಂದು ಕಿಲೋ ಮೀಟರ್‌ಗೆ ಇಷ್ಟು ಹಣವೆಂದು ನಿಗದಿ ಮಾಡಿ ಕೊಟ್ಟಿದ್ದಾರೆ. ಅವರುಗಳು ಟೆಂಡರ್‌ನಲ್ಲಿ ತೆಗೆದುಕೊಂಡು ಅದನ್ನು ಮೂರನೇ ಪಾರ್ಟಿಗಳಿಗೆ ಕೆಲಸವನ್ನು ಕೊಟ್ಟಿರುವುದರಿಂದ ಕಳಪೆ ಕಾಮಗಾರಿಯಾಗಿದೆ. ಉದಾಹರಣೆಗೆ ಮದ್ದೂರಿನಿಂದ ಪ್ರಾರಂಭವಾಗಿ ಆಂಧ್ರಪ್ರದೇಶದವರೆಗಿನ ರಸ್ತೆಯನ್ನು ನೋಡಿದಾಗ ಹತ್ತು ಕಿಲೋಮೀಟರ್ ರಸ್ತೆ ಮಾಡಿಲ್ಲ. ಇನ್ನು 194 ಕಿಲೋಮೀಟರ್ ರಸ್ತೆ ಮಾಡಬೇಕಾಗಿದೆ. ಇನ್ನು ಒಂದು ವರ್ಷ ಮಾತ್ರ ಸಮಯ ಇದೆ. ಅಷ್ಟರಲ್ಲಿ ಅವರ ಗುತ್ತಿಗೆ ಮುಗಿಯುತ್ತದೆ. 300-400 ಕೋಟಿ ರೂಪಾಯಿಗಳನ್ನು ಅವರು ಪಾಕೇಟ್ ಹಣವೆಂದು ಜೋಬಿಗೆ ಹಾಕಿಕೊಂಡು ಮನೆಗೆ ಹೋಗುತ್ತಾರೆ. ಇಂಥದ್ದಕ್ಕೆ ಸರ್ಕಾರ

ಅವಕಾಶ ಕೊಡಬಾರದು. ಏನು ಪ್ಯಾಕೇಜ್ ಪದ್ಧತಿಯೆಂದು ಮಾಡಿ ರಸ್ತೆಯ ಕೆಲಸ ಮಾಡಲು ಹೊರಟಿದ್ದಾರೆ ಅದಕ್ಕೆ ಗಣನೀಯವಾದಂಥ ಪದ್ಧತಿಯನ್ನು ಅಳವಡಿಸಿ ಅದರ ಮೂಲಕ ಟೆಂಡರ್‌ನ್ನು ಕರೆದು ರಾಜ್ಯದಲ್ಲಿರುವವರಿಗೆ ಗುತ್ತಿಗೆಯನ್ನು ಕೊಡುವುದು ಬಹಳ ಉತ್ತಮ. ಆ ಕೆಲಸವನ್ನು ಸರ್ಕಾರ ಮಾಡಿಲ್ಲ. ಇದು ರಾಜ್ಯದ ಜನತೆಗೆ ಮಾಡಿದಂಥ ಮೋಸವಾಗಿದೆ. ಹಳ್ಳಿಗಾಡಿನ ರಸ್ತೆಗಳು, ಎಂ.ಡಿ.ಆರ್. ರಸ್ತೆಗಳ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರದ ರಸ್ತೆಗಳನ್ನು ಸಿಂಗಪುರವನ್ನಾಗಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ಈ ಹಿಂದೆ ಯಾವುದೇ ಸರ್ಕಾರಗಳು ಮಾಡದಿರುವಂಥ ಉತ್ತಮವಾದ ರಸ್ತೆಗಳನ್ನು ಈ ಸರ್ಕಾರದವರು ಮಾಡಿದ್ದಾರೆ. ಆದರೆ ಹಳ್ಳಿಯ ಎಂ.ಡಿ.ಆರ್. ರಸ್ತೆಗಳಲ್ಲಿ ಹೋಗಲು ಸಾಧ್ಯವಿಲ್ಲ. ಹಳ್ಳಿಯ ರೈತರು, ಎತ್ತಿನಗಾಡಿ ಇರಬಹುದು, ಟ್ರಾಕ್ಟರ್ ಆಗಿರಬಹುದು ಆ ರಸ್ತೆಯಲ್ಲಿ ಹೋಗಿ ಬರುವ ಪರಿಸ್ಥಿತಿಯಲ್ಲಿಲ್ಲ. ಅಷ್ಟು ರಸ್ತೆಗಳು ಹಾಳಾಗಿದೆ. ಆದ್ದರಿಂದ ಈ ಹಿಂದೆ ಏನಿತ್ತೋ ಅದರಂತೆ ಹಳ್ಳಿಗಳ ರಸ್ತೆಯನ್ನು ಕೂಡಲೇ ರಿಪೇರಿ ಮಾಡಲು ಹಣವನ್ನು ಬಿಡುಗಡೆ ಮಾಡಬೇಕು. ಅದಕ್ಕೂ ಇವರು ಹೆಚ್ಚು ಹಣವನ್ನು ನಿಗದಿ ಮಾಡಿಲ್ಲ. ಈ ಹಿಂದೆ ರಸ್ತೆಯ ರಿಪೇರಿ ಎಂದು ಏನಿತ್ತೋ ಅದರ ಪ್ರಸ್ತಾಪವನ್ನೇ ಇದರಲ್ಲಿ ಮಾಡಿಲ್ಲ. ಆದ್ದರಿಂದ ಸರ್ಕಾರ ರೈತರಿಗೆ, ನಾಗರೀಕರಿಗೆ, ಸಾಮಾನ್ಯ ಜನರಿಗೆ ಸಾರಿಗೆ ಮತ್ತು ಕಮ್ಯೂನಿಕೇಷನ್‌ಗೆ ಏನು ಹಣವನ್ನು ಕೊಡಬೇಕೋ ಅದನ್ನು ಕೊಡಿ. ಇವತ್ತು ಗ್ರಾಮೀಣ ಅಭಿವೃದ್ಧಿಗೆ ಈ ವರ್ಷ ಕೇವಲ 338.4 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನೀರಾವರಿಗೆ 3002.16 ಕೋಟಿ ರೂ. ಇಂಧನಕ್ಕೆ 199 ಕೋಟಿ ರೂ.ಗಳು, ಕೈಗಾರಿಕೆ ಮತ್ತು ಖನಿಜಗಳಿಗೆ 165.77 ಕೋಟಿ ರೂ. ಶಿಕ್ಷಣ, ಕಲೆ ಮತ್ತು ಸಂಸ್ಕೃತಿಗೆ 565.27 ಕೋಟಿ ರೂ.ಗಳು, ಹೋದ ವರ್ಷಕ್ಕಿಂತ ಹೆಚ್ಚಿಗೆ ಹಣವನ್ನು ಈ ಸಲ ತೋರಿಸಿದ್ದಾರೆ. ಆದರೆ ಏನು ಮಾಡುತ್ತೇವೆಂದು ನಿಖರವಾಗಿ ಹೇಳಿಲ್ಲ. ಇವತ್ತು ಅನೇಕ ಶಾಲೆಗಳಲ್ಲಿ ಶಿಕ್ಷಕರು ಇಲ್ಲ. ನನ್ನ ಕ್ಷೇತ್ರದಲ್ಲಿನ ಹೈಸ್ಕೂಲ್‌ನಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಶಿಕ್ಷಕರು ಇಲ್ಲ. ಪರೀಕ್ಷೆ ನಡೆಯುತ್ತಿದೆ, ಹಳ್ಳಿಯ ಮಕ್ಕಳು ಈ ವ್ಯವಸ್ಥೆಯಲ್ಲಿ ಎಷ್ಟರಮಟ್ಟಿಗೆ ಪರೀಕ್ಷೆಯನ್ನು ಬರೆಯಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕು. ಸರ್ಕಾರ ಶಿಕ್ಷಣಕ್ಕೇನು ಹೆಚ್ಚು ಒತ್ತನ್ನು ಕೊಟ್ಟಿದೆ ಅದನ್ನು ಸ್ವಾಗತಿಸುತ್ತೇನೆ. ಆದರೆ ಜನಸಂಖ್ಯೆಗೆ ಸರಿಸಮಾನವಾಗಿ ಆದ್ಯತೆ ಕೊಡುವ ನಿಟ್ಟಿನಲ್ಲಿ ಹಣವನ್ನು ತೊಡಗಿಸಿಲ್ಲ. ಈ ಬಜೆಟ್‌ನಲ್ಲಿ ಅನುಕೂಲತೆಯನ್ನು ಮಾಡುತ್ತೇವೆಂದು ಮೈಲಿಗಲ್ಲನ್ನು ಇಟ್ಟುಕೊಂಡಿಲ್ಲ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 139.74 ಕೋಟಿ ರೂ. ಇಟ್ಟಿದ್ದಾರೆ. ನಿನ್ನೆ ಔಷಧಿಯ ಅವ್ಯವಹಾರದಲ್ಲಿ 300 ಕೋಟಿ ರೂ. ಹಗರಣದ ಬಗ್ಗೆ ಇಲ್ಲಿ ಚರ್ಚೆಯಾಯಿತು. ಸರ್ಕಾರಿ ಆಸ್ಪತ್ರೆಗಳಿಗೆ ಹೋಗಿ ಔಷಧಿ ಕೇಳಿದರೆ ಇಲ್ಲ ಎಂದು ಹೇಳುತ್ತಾರೆ. ಚುಚ್ಚುಮದ್ದು ಇಲ್ಲವೆಂದು ಹೇಳುತ್ತಾರೆ, ಡ್ರಿಫ್ಸ್ ಇಲ್ಲ ಕೊಂಡುಕೊಂಡು ಬನ್ನಿ ಎಂದು ಹೇಳುತ್ತಾರೆ. ಬಡವರಿಗೆ, ಸಾಮಾನ್ಯ ಜನರಿಗೆ ಕೊಡುವಂಥ ಸೌಲಭ್ಯಗಳೇನಿದೆ ಇದನ್ನು ಹೆಚ್ಚು ಮಾಡಲು ಬಜೆಟ್‌ನಲ್ಲಿ ಹಣವಿಲ್ಲ. ಆದರೂ ಮೇಲು ನೋಟಕ್ಕೆ ಬಜೆಟ್‌ನಲ್ಲಿ ಉತ್ತಮವಾಗಿ ಜನರಿಗೆ ಅನುಕೂಲತೆ ಇದೆ, ಸೌಲಭ್ಯಗಳು ಇದೆ ಎಂಬುದನ್ನು ತಿಳಿಸಿರುವುದನ್ನು ಬಿಟ್ಟರೆ ಆಂತರಿಕವಾಗಿ ನೋಡಿದಾಗ ಇದರಲ್ಲಿ ಏನೇನೂ ಪ್ರಯೋಜನವಾಗಿಲ್ಲ. ಆ ರೀತಿ ಬಜೆಟ್‌ನ್ನು ನಮೂದನೆ ಮಾಡಿಲ್ಲ. ದಿಕ್ಕುತಪ್ಪಿದಂಥ ರೀತಿಯಲ್ಲಿ ಬಜೆಟ್‌ನ್ನು ಓದಿ ರಾಜ್ಯದ ಜನರಿಗೆ ನಿಜವಾಗಿಯೂ ಕನ್‌ಫ್ಯೂಷನ್ ಮಾಡಿದ್ದಾರೆ ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3.30 ಪಿಎಂ

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ನಾವು ಫ್ರೆಂಟ್ ಬೆಂಚ್‌ನಲ್ಲಿ ಸೀಟು ಬೇಡ. ನಮಗೆ ಎಲ್ಲಾದರೂ ಬೇರೆ ಕಡೆ ಅಲಾಟ್ ಮಾಡಿ. Please allot me a seat in the back side. ಅಲ್ಲಿ ಎಲ್ಲಾದರೂ ಕೊನೆಯಲ್ಲಿ ಅಲಾಟ್ ಮಾಡಿ. ಇಲ್ಲಿ ಕುಳಿತುಕೊಳ್ಳುವುದೇ ಒಂದು ಶಾಪ ಎನಿಸುತ್ತಿದೆ.

ಉಪಾಧ್ಯಕ್ಷರು:- ಇವರು ಮಾತನಾಡಿದ ಮೇಲೆ ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಕೊಡದೆ ಹೋದರೂ ಪರವಾಗಿಲ್ಲ. ನಮ್ಮ ಸ್ಥಿತಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು7:- ನಿಮ್ಮನ್ನು ಕರೆಯಬೇಕು ಎಂದಾಗ ನೀವು ಇರಲಿಲ್ಲ. ಅದಕ್ಕೋಸ್ಕರ ಅವರಿಗೆ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಎಲ್ಲಿ ಸ್ವಾಮಿ ಇಲ್ಲೇ ಇದ್ದೇನೆ.

+ಶ್ರೀ ಕೆ.ಎಂ. ಇಬ್ರಾಹಿಂ(ವಿಟ್ಲ):- ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಾಲ್ಕನೆ ಬಾರಿ ಆಯವ್ಯಯವನ್ನು ಮಂಡಿಸಿದ್ದಾರೆ. ಈ ಒಂದು ಆಯವ್ಯಯ ಈ ರಾಜ್ಯದ ಎಲ್ಲಾ ವರ್ಗದ ಜನರಿಗೂ ಕೂಡ ಪ್ರಯೋಜನವಾಗತಕ್ಕಂಥ ಒಂದು ಬಜೆಟ್ ಎಂದು ಹೇಳಿದರೆ ತಪ್ಪಾಗಲಾರದು. ವಿರೋಧ ಪಕ್ಷದವರೂ ಕೂಡ ಅದನ್ನು ಚಾಕಲೇಟ್ ಎಂದು ವಿವರಿಸಿದ್ದಾರೆ. ಚಾಕಲೇಟ್ ಅನ್ನು ಬಾಯಿಗೆ ಹಾಕಿದರೆ ಯಾರೂ ಕೂಡ ಉಗಿಯುವುದಿಲ್ಲ. ಎಲ್ಲರೂ ಕೂಡ ಸಣ್ಣ ಮಕ್ಕಳಿಂದ ವಯಸ್ಸಾದವರೂ ಕೂಡ ನುಂಗುತ್ತಾರೆ. ಇವತ್ತು ಈ ಬಜೆಟ್‌ನಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನು ಘೋಷಣೆ ಮಾಡಿದ್ದಾರೆ, ಅದೆಲ್ಲಾವನ್ನೂ ಕೂಡ ಈ ಭಾಗದಲ್ಲಿ ಇರತಕ್ಕಂಥ ಜನ ಒಪ್ಪತಕ್ಕಂಥ ವಿಚಾರ. ಅದರಲ್ಲಿ ಎರಡು ಮಾತಿಲ್ಲ. ಆ ಭಾಗದಲ್ಲಿ ಕೆಲವರು ಒಪ್ಪಿದ್ದಾರೆ, ಕೆಲವರು ವಿರೋಧವನ್ನು ಸೂಚಿಸಿದ್ದಾರೆ. ಅದು ಅವರ ಧರ್ಮ. ಇದರ ಬಗ್ಗೆ ಮಾತನಾಡುತ್ತಿಲ್ಲ. ನಾವೆಲ್ಲಾ ಈ ಒಂದು ಬಜೆಟ್‌ನಲ್ಲಿ ಯಾವ್ಯಾವ ಇಲಾಖೆ ಬಗ್ಗೆ ನಮ್ಮ ಮಾನ್ಯಮುಖ್ಯಮಂತ್ರಿಗಳು ತಿಳಿಸಿದ್ದಾರೆ ಅದನ್ನು ಒಪ್ಪಿದ್ದೇವೆ. ಆದರೆ ಕೆಲವು ಇಲಾಖೆಗಳಿಗೆ ಇನ್ನು ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದು, ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟಿದ್ದಾದರೆ ಇನ್ನು ಹೆಚ್ಚಿನದು ಈ ಸಮಾಜಕ್ಕೆ ಆಗುವುದಿದೆ ಎನ್ನುವ ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಇವತ್ತು ಇರಿಗೇಷನ್ ಬ್ಯಾರೇಜ್ ಕಟ್ಟುವುದಕ್ಕೆ ಮೂರು ಕೋಟಿ ರೂಪಾಯಿ ನಮ್ಮ ಸರ್ಕಾರ ಇಟ್ಟಿದೆ. ಅದು ಬಹಳ ಕಡಿಮೆ, ಅದಕ್ಕೆ ಇನ್ನು ಹೆಚ್ಚಿನ ಹಣವನ್ನು ಕೊಡಬೇಕು. ಇವತ್ತು ಅಂತರ್ಜಲ ಕೂಡ ಬಹಳ ಕಡಿಮೆಯಾಗಿದೆ. ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಅಲ್ಲಲ್ಲಿ ಬ್ಯಾರೇಜ್‌ಗಳನ್ನು ವೆಂಟೆಡ್ ಡ್ಯಾಮ್‌ಗಳನ್ನು ಹಾಗೂ ಚೆಕ್ ಡ್ಯಾಮ್‌ಗಳನ್ನು ಕಟ್ಟುವುದರ ಮೂಲಕ ಈ ಒಂದು ಅಂತರ್ಜಲವನ್ನು ಹೆಚ್ಚಿಸಬೇಕಾಗುತ್ತದೆ. ಇವತ್ತು ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿಯಾದಂತಹ ನೇತ್ರಾವತಿ, ಇಲ್ಲಿ ಹನ್ನೆರಡು ತಿಂಗಳೂ ಕೂಡ ನೀರು ಇರತಕ್ಕಂಥ ನದಿ. ಆ ನೀರು ಸಮುದ್ರಕ್ಕೆ ಹರಿದು ಹೋಗಿ ಸೇರುತ್ತದೆ. ಇವತ್ತು ತುಂಬೆ ಎಂಬಲ್ಲಿ ಮಾತ್ರ ಒಂದು ಬ್ಯಾರೇಜ್ ಅನ್ನು ಹಾಕುವುದರ ಮೂಲಕ ಮಂಗಳೂರು ಕಾರ್ಪೊರೇಷನ್‌ಗೆ ಕುಡಿಯುವ ನೀರನ್ನು ಹಂಚುತ್ತಿದ್ದಾರೆ. ಆದರೆ ಅದೇ ನದಿಗೆ ಇನ್ನು ನಾಲ್ಕೈದು ಕಡೆಗಳಲ್ಲಿ ಬ್ಯಾರೇಜ್ ಅನ್ನು ಅಥವಾ ವೆಂಟೆಡ್, ಚೆಕ್ ಡ್ಯಾಂ ಹಾಕಿದಿದ್ದರೆ ಈ ದಕ್ಷಿಣ ಕನ್ನಡ

ಜಿಲ್ಲೆಯ ಕೃಷಿಗೂ ಹಾಗೂ ಕುಡಿಯುವ ನೀರಿಗೂ ಬಹಳಷ್ಟು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ನೀರಾವರಿ ಮಂತ್ರಿಗಳು ಹೆಚ್ಚು ಹಣವನ್ನು ಇಟ್ಟು ಅಂತರ್ಜಲವನ್ನು ಹೆಚ್ಚಿಸತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಮಕ್ಕಳಿಗೆ ಬಿಸಿ ಊಟವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಘೋಷಿಸಿದ್ದಾರೆ. ಬಹಳ ಸಂತೋಷ, ಇದನ್ನು ಎಲ್ಲರೂ ಕೂಡ ಮೆಚ್ಚತಕ್ಕಂಥಾದ್ದು. ಇದನ್ನು 5ನೇ ತರಗತಿಯವರಿಗೆ ಎಂದರೆ ಕಿರಿಯ ಪ್ರಾಥಮಿಕ ಶಾಲೆ, ಇವತ್ತು ಕಿರಿಯ ಪ್ರಾಥಮಿಕ ಶಾಲೆ ಬಹಳ ಕಡಿಮೆಯಾಗಿದೆ. ಆದರೆ 7ನೇ ತರಗತಿಯವರೆಗೆ ಎಂದರೆ ಹಿರಿಯ ಪ್ರಾಥಮಿಕ ಶಾಲೆ ಹೆಚ್ಚಾಗಿರುವಂತಾದ್ದಾಗಿದೆ. ಈಗ ಅಲ್ಲಿ ಇರತಕ್ಕಂಥ 5ನೇ ತರಗತಿ ಮಕ್ಕಳಿಗೆ ಊಟ ಕೊಡುವಾಗ 6 ಮತ್ತು 7ನೇ ತರಗತಿ ಮಕ್ಕಳು ಬಹಳ ಸಣ್ಣ ಮಕ್ಕಳು ಅದನ್ನು ನೋಡಿಕೊಂಡು ಇರುತ್ತಾರೆ. ಆದುದರಿಂದ ಕೊನೇಪಕ್ಷ 7ನೇ ತರಗತಿಯವರೆಗೆ ಓದತಕ್ಕಂಥ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೂ ಕೂಡ ಊಟ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಕಂದಾಯ ಇಲಾಖೆ ಬಗ್ಗೆ ಹೇಳುವುದಾದರೆ ಮಾನ್ಯ ಸಚಿವರು ಇಲ್ಲಿ ಗಮನ ಕೊಡಬೇಕು. ನಮ್ಮ ಮಂಗಳೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿ ಅಧಿಕಾರಿಗಳ ಸಂಖ್ಯೆ ಇಲ್ಲ. ಅಲ್ಲಿ ನೌಕರರು ಇಲ್ಲವೇ ಇಲ್ಲ. ಬಂಟ್ವಾಳ ತಾಲ್ಲೂಕಿನಲ್ಲಿ ಸುಮಾರು 40 ಜನ ಇರಬೇಕಾದಂತಹ ಕಡೆ ಏಳು ಜನ ನೌಕರರಿದ್ದಾರೆ. ಹೇಗೆ ಕೆಲಸವನ್ನು ಮಾಡಬೇಕು? ಆದುದರಿಂದ ಅಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಇವತ್ತು ಬಡವರಿಗೆ ಅನುಕೂಲವಾಗುವುದಕ್ಕೆ ಅಕ್ರಮ ಸಕ್ರಮ ವ್ಯವಸ್ಥೆಯನ್ನು ಸರ್ಕಾರ ಹಮ್ಮಿಕ್ಕೊಂಡಿದೆ. ಇವತ್ತು ಅನೇಕ ಜನ ಬಡವರಿಗೆ ಅವರು ಇರುವ ಸ್ಥಳ ಯಾವುದು, ಯಾವರೀತಿ ಅರ್ಜಿ ಕೊಡಬೇಕು ಎನ್ನುವುದು ಗೊತ್ತಿಲ್ಲ. ಆದುದರಿಂದ ಸರ್ಕಾರಿ ಜಮೀನಿನಲ್ಲಿ ಇರತಕ್ಕಂಥವರಿಗೆ ಇನ್ನು ಕೂಡ ಅರ್ಜಿಯನ್ನು ಕೊಡುವುದಕ್ಕೆ ಅವಕಾಶವನ್ನು ಹೆಚ್ಚಿಗೆ ಸಮಯ ಕೊಡುವುದರ ಮೂಲಕ ಸಮಯ ಏನು ಎಕ್ಸ್‌ಪೈರ್ಡ್ ಆಗಿದೆ, ಅದನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆಶ್ರಯ ಮನೆ ವಿಚಾರದಲ್ಲಿ ನಾವೆಲ್ಲರೂ ಕೂಡ ಮೆಚ್ಚತಕ್ಕಂಥಾದ್ದು. ಹೆಚ್ಚು ಆಶ್ರಯ ಮನೆಗಳು ಬಂದಿದೆ. ಆದರೆ ಪ್ರತಿಯೊಂದು ಕ್ಷೇತ್ರದಲ್ಲಿ ಕೂಡ ಶೇಕಡ 50 ರಷ್ಟು ಮನೆಯನ್ನು ಎಸ್‌ಸಿ:ಎಸ್‌ಟಿಯವರಿಗೆ ಕೊಡಬೇಕೆಂದು ಹೇಳಿದ್ದೀರಿ, ಬಹಳ ಸಂತೋಷ. ಆದರೆ ಕೆಲವು ಕ್ಷೇತ್ರಗಳಲ್ಲಿ ಎಸ್‌ಸಿ:ಎಸ್‌ಟಿ ಫಲಾನುಭವಿಗಳು ಇಲ್ಲದೆ ಹೋದರೆ ಅಂತಹ ಜಾಗದಲ್ಲಿ ಕಡು ಬಡವರಾದಂತಹ ಇತರೇ ಜಾತಿಯವರಿಗೆ ಕೊಡುವುದಕ್ಕೆ ಒಂದು ಅಮೆಂಡ್‌ಮೆಂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮತ್ತು ಈ ರೆವಿನ್ಯೂ ಇಲಾಖೆಯ ಸಿ ಅಂಡ್ ಡಿ ಕ್ಲಾಸ್ ಜಾಗ ಏನಿದೆ ಅದನ್ನು ಫಾರೆಸ್ಟ್ ಇಲಾಖೆಗೆ ವರ್ಗಾಯಿಸಿದ್ದೀರಿ. ನಾನು ಕಳೆದ ವರ್ಷ ಕೂಡ ಹೇಳಿದ್ದೆ. ಈ ಸಿ ಅಂಡ್ ಡಿ ಕ್ಲಾಸ್ ಜಾಗ ಏನಿದೆ ಅದು ಹಾಗೆ ಬಿದ್ದಿದೆ. ಅದನ್ನು ಅನೇಕ ಜನ ಎನ್‌ಕ್ರೋಚ್‌ಮೆಂಟ್ ಮಾಡುತ್ತಿದ್ದಾರೆ. ಆದರೆ ಈ ಒಂದು ಜಾಗವನ್ನು ತಾವು ಪ್ರಕಟಣೆಗೊಳಿಸಿ ಯಾವುದಾದರೂ ಪ್ಲೈವುಡ್ ಫ್ಯಾಕ್ಟರಿಗೆ ಕೊಡಿ ಇವತ್ತು ಕರ್ನಾಟಕದ ವುಡ್ ಇಂಡಸ್ಟ್ರೀ ಏನಿದೆ ಅವುಗಳು ಬಹಳ ಕಷ್ಟದಲ್ಲಿವೆ. ಹಿಂದೆ

ಸರ್ಕಾರ ವುಡ್ ಇಂಡಸ್ಟ್ರಿ ಇಂಪ್ರೂವ್ ಮಾಡುವುದಕ್ಕೋಸ್ಕರ ಸರ್ಕಾರದವರು ಅವರಿಗೆ ಕನಿಷ್ಠ ಕ್ರಯದಲ್ಲಿ ಮರಗಳನ್ನು ಕೊಡುತ್ತಿದ್ದರು. ಹಾಗಾಗಿ ಬಹಳಷ್ಟು ಫ್ಯಾಕ್ಟರಿಗಳು ನಮ್ಮ ರಾಜ್ಯದಲ್ಲಿ ಇವೆ. ಇವತ್ತು ಆ ಪರಿಸ್ಥಿತಿಯಲ್ಲಿ ಇಲ್ಲ. ಆದುದರಿಂದ ಅವರ ಕಷ್ಟವನ್ನು ನೀಗಿಸುವುದಕ್ಕೆ ನಮ್ಮ ಸರ್ಕಾರದ ವತಿಯಿಂದ ಇವತ್ತು ಏನು ಸಿ ಅಂಡ್ ಡಿ ಜಾಗ ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಯವರಿಗೆ ಕೊಟ್ಟಿದ್ದಾರೆ, ಆ ಜಾಗವನ್ನು ಪ್ಲೈವುಡ್ ಫ್ಯಾಕ್ಟರಿಯವರು ಯಾರು ಮುಂದೆ ಬಂದರೂ ಅವರಿಗೆ ಮರಗಳನ್ನು ಬೆಳೆಸುವುದಕ್ಕೆ ತಾವು ಆಸ್ಪದ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇರೀತಿ ನಮ್ಮ ಅರಣ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವೇನು ಮರದ ವ್ಯಾಲ್ಯೂಯೇಷನ್ ಅನ್ನು ಬಹಳ ವರ್ಷದ ಹಿಂದೆ ನಿಗದಿ ಮಾಡಿದ್ದೀರಿ, ಇವತ್ತು ಮರಕ್ಕೆ ಬೆಲೆ ಇಲ್ಲ. ಈ ಮರದ ವ್ಯಾಲ್ಯೂಯೇಷನ್‌ನಲ್ಲಿ ಎಲ್ಲಾ ಜಿಲ್ಲೆಯಲ್ಲಿ ಕೂಡ ರೆಡಿಮ್ಡ್ ಅನ್‌ರೆಡಿಮ್ಡ್ ಎನ್ನುವಂತಹ ಎರಡು ಟೆನ್ಯೂರ್ ಇದೆ. ಸರ್ಕಾರ ಆ ಮರಕ್ಕೆ ವ್ಯಾಲ್ಯೂಯೇಷನ್ ಏನು ಫಿಕ್ಸ್ ಮಾಡಿದೆ ಬಹಳ ಹಿಂದೇನೇ ಮಾಡಿದೆ. ಇವತ್ತು ಮರದ ರೇಟು ಬಹಳ ಕಡಿಮೆಯಾಗಿದೆ. ಅಲ್ಲದೆ ನಮ್ಮ ತೋಟಗಾರಿಕೆ ಬೆಳೆಗಳಿಗೆ ಬೆಲೆ ಬಹಳ ಕಡಿಮೆ ಇರುವುದರಿಂದ ಇವತ್ತು ರೈತ ಬದುಕಬೇಕಾದರೆ, ಕಾಫಿ ತೋಟವನ್ನು ಅವನು ಸ್ಪ್ರೇ ಮಾಡಬೇಕಾದರೆ, ಕಾಫಿ ಮಾರಿ ಸ್ಪ್ರೇ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ದಯವಿಟ್ಟು ಬೆಳೆದಿರತಕ್ಕಂಥ ಏನು ಮೆಚ್ಯೂರ್ಡ್ ಟ್ರೀಸ್ ಇದೆ ಆ ಮರಗಳನ್ನು ಕಡಿಯತಕ್ಕಂಥಾದ್ದು ಮತ್ತು ಅದಕ್ಕೆ ವಾಲ್ಯೂಯೇಷನ್ ಫಿಕ್ಸ್ ಮಾಡತಕ್ಕಂಥ ವ್ಯವಸ್ಥೆಯನ್ನು ಹೊಸದಾಗಿ ತಾವು ಮಾಡಬೇಕು. ಇವತ್ತು ಮರದ ಬೆಳೆ ಬಹಳ ಕಡಿಮೆ ಇದೆ. ಅದರಲ್ಲೂ ಕೂಡ ಒಂದು ನ್ಯೂನ್ಯತೆ ಏನಿದೆ ಎಂದರೆ ತಾವೆಲ್ಲರೂ ಕೂಡ ಅನೇಕ ಜನ ಡಿಪೋದಲ್ಲಿ ಆ್ಯಕ್ಷನ್‌ನಲ್ಲಿ ಮರ ತೆಗೆದುಕೊಂಡಿರಬಹುದು. ನೀವು ಯಾವುದಕ್ಕೆ ಬೆಲೆ ಕೊಡುತ್ತೀರಿ? ಮರಕ್ಕೆ ಮಾತ್ರ ಅಲ್ಲ. ಅದರ ಮೇಲೆ ತೊಗಟೆ ಏನಿದೆ ಅದಕ್ಕೂ ಕೂಡ ಸೇರಿಸಿ ತಾವು ಹಣವನ್ನು ಕೊಡುತ್ತಿದ್ದೀರಿ. ಇದು ಸರಿಯಲ್ಲ. ಯಾವ ಮರವನ್ನು ತೆಗೆದುಕೊಂಡರೂ ಕೂಡ ಸಿಪ್ಪೆಯನ್ನು ತೆಗೆದೇ ಮರವನ್ನು ಕೊಯ್ಯುವುದು. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು. ಮರದ ದಿಮ್ಮಿಗಳನ್ನು ತರುವಾಗ ಚೆಕ್‌ಪೋಸ್ಟ್‌ಗಳಲ್ಲಿ ನಿಲ್ಲಿಸಿದಾಗ ತೊಗಟೆಗಾಗಿ ಜನರು ಕತ್ತಿ ಹಿಡಿದುಕೊಂಡು ಓಡಾಡುವುದನ್ನು ನೋಡುತ್ತೇವೆ. ಅದನ್ನು ತೆಗೆದುಕೊಂಡು ಹೋಗಿ ಉರುವಲಾಗಿ ಜನ ಉಪಯೋಗಿಸುತ್ತಾರೆ. ಅದನ್ನು ಕಟ್ಟಡಕ್ಕೆ ಉಪಯೋಗಿಸುವುದಿಲ್ಲ. ಆದುದರಿಂದ ತಾವು ಒಂದು ಮರದ ಮೇಲೆ ಇರುವಂತಹ ತೊಗಟೆ ಮೇಲೆ ಹಾಕಿರುವಂತಹ ವ್ಯಾಲ್ಯೂಯೇಷನ್ ಅನ್ನು ತಾವು ತೆಗೆಯಬೇಕು. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ಬಹಳ ಇದ್ದಾರೆ. ಇವತ್ತು ಅವರು ಬಹಳ ಕಂಗಾಲಾಗಿದ್ದಾರೆ. ನಾಲ್ಕು ಲಕ್ಷ ಬೀಡಿ ಕಾರ್ಮಿಕರು ನಮ್ಮ ಕ್ಷೇತ್ರದಲ್ಲಿ ಇದ್ದಾರೆ. ಇವತ್ತು ಅವರು ವಾರಕ್ಕೆ ಎರಡು ದಿವಸ ಬೀಡಿ ಕಟ್ಟುತ್ತಾರೆ. ವಾರದಲ್ಲಿ ಆರು ದಿವಸ ಅವರಿಗೆ ಕೆಲಸ ಇಲ್ಲ. ಅದರಲ್ಲೂ ಕೂಡ ಇವತ್ತು ನಮ್ಮ ಬೀಡಿ ಉದ್ಯಮದವರು ಮದ್ರಾಸ್‌ಗೆ ತಮಿಳುನಾಡಿಗೆ ಹೋಗುತ್ತಿದ್ದಾರೆ. ಅಲ್ಲಿ ಕೂಲಿ ಬಹಳ ಕಡಿಮೆ. ಆದುದರಿಂದ ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಹಾಕಿ ಒಂದು ಯೂನಿಫಾರಂ ವೇಜಸ್ ಅನ್ನು ಇಡೀ ದೇಶಕ್ಕೆ ಅನ್ವಯವಾಗುವಂತಹ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುವಂತಹ ಕೆಲಸಕ್ಕೆ ಸರ್ಕಾರ ಮುಂದಾಗಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಶಾಲೆಗಳ ವಿಚಾರದಲ್ಲೂ ಕೂಡ ಸರ್ಕಾರ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಸಹಕಾರವನ್ನು ಕೊಟ್ಟಿದೆ, ನಾವು ದಕ್ಷಿಣದವರು ಅದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ ನಾವು ಸ್ವತಃ ಅಭಿವೃದ್ಧಿ ಹೊಂದಿದ್ದು, ಸರ್ಕಾರ ಮಾಡಿದ್ದು ಅಲ್ಲ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲಿ, ಕೊಡಗು ಜಿಲ್ಲೆಯಲ್ಲಾಗಲಿ, ಉಡುಪಿ, ಕಾರವಾರದಲ್ಲಿಯಾಗಲಿ, ಹಳೆಯ ಮೈಸೂರು ಪ್ರಾಂತ್ಯದಲ್ಲಿ ಆಗಲಿ, ಇಂದಿನ ಶ್ರೀಮಂತ ಜನರು ಮುಂದೆ ಬಂದು, ಶಾಲೆಗಳನ್ನು ಕಟ್ಟಿಸಿ, ಇವತ್ತು ಆ ಭಾಗಗಳ ಜನರು ವಿದ್ಯೆಯನ್ನು ಕಲಿಯುವಂಥಾದ್ದಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಇವತ್ತು ಸರ್ಕಾರ ಅನುದಾನವನ್ನು ಕೊಟ್ಟಿರಬಹುದು, ನಾವು ಮುಂದುವರೆದಿದ್ದೇವೆಂದು ಆದರೆ ನಮಗೆ ನ್ಯಾಯವಾಗಿ ಸಿಗಬೇಕಾದಂತಹ ಸವಲತ್ತುಗಳನ್ನು ಕಡಿತಗೊಳಿಸುವಂಥಾದ್ದು ಸರಿಯಲ್ಲ. ಆದರೆ ಹೈಸ್ಕೂಲ್‌ಗಳ ಅವಶ್ಯಕತೆ ಇದೆಯೋ, ಜನರು ಇದನ್ನು ಆಟವಾಡುವುದಕ್ಕೊ ಅಥವಾ ಸುಮ್ಮನೆ ತೆಗೆದುಕೊಳ್ಳುತ್ತಿಲ್ಲ, ಹೆಸರಿಗೆ ಬೇಕೆಂದು ಕೇಳುತ್ತಿಲ್ಲ, ಎಲ್ಲೆಲ್ಲಿ ಹೈಸ್ಕೂಲ್ ಬೇಕೋ, ಅಲ್ಲಿಗೆ ಆ ಭಾಗದ ಜನರು ಕೇಳಿದಾಗ, ಆ ಭಾಗ ದಕ್ಷಿಣ ಕರ್ನಾಟಕ ಆಗಲಿ, ಉತ್ತರ ಕರ್ನಾಟಕವಾಗಲಿ, ಇಡೀ ಕರ್ನಾಟಕದಲ್ಲಿ ಜನರ ಒತ್ತಾಯವಿದ್ದರೆ, ಯಾವುದೇ ಭಾಗದಲ್ಲಿ ಈ ಹೈಸ್ಕೂಲ್‌ಗಳು ಬೇಕೆಂದು ಜನರ ಒತ್ತಾಯವಿದ್ದರೆ, ಬೇಡಿಕೆ ಇದ್ದರೆ ಅಲ್ಲಿಗೆ ಕೊಡಬೇಕು; ಇದಲ್ಲದೆ ನಮ್ಮ ಸರ್ಕಾರ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಎಲ್ಲರೂ ವಿದ್ಯಾವಂತರು ಆಗಬೇಕೆಂದು ಹೇಳುತ್ತಿದೆ, ಆ ರೀತಿಯಾಗಿ ಶಾಲೆಯನ್ನು ಬಿಟ್ಟಿರುವಂತಹ ಮಕ್ಕಳನ್ನು ಕರೆದುಕೊಂಡು ಬಂದು, ಊಟ, ಬಟ್ಟೆ, ಕೊಡುವಂತಹ ಕಾರ್ಯಕ್ರಮವನ್ನು ಜಾರಿಗೆ ತಂದು, ಆ ಎಲ್ಲಾ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರುತ್ತೇವೆ, ಇವರು ಶಾಲೆಯಲ್ಲಿ 7ನೇ ತರಗತಿ ಪಾಸಾದ ಮೇಲೆ, ಅವರಿಗೆ ಪ್ರೌಢಶಾಲೆಗೆ ಸೌಕರ್ಯ ಕೊಡದೇ ಹೋದರೆ ಹೇಗೆ? ಮಾನ್ಯ ವಿದ್ಯಾ ಸಚಿವರು ದಯವಿಟ್ಟು ಇದರ ಬಗ್ಗೆ ಗಮನ ಕೊಡಬೇಕು, ನೀವು ಒಂದು ಕಡೆ ಕಡ್ಡಾಯ ಶಿಕ್ಷಣ, ಎಂದು ಹೇಳುತ್ತೀರಿ, ಇಲ್ಲಿ ಶಾಲೆ ಬಿಟ್ಟು ಹೋದಂತಹ ಮಕ್ಕಳನ್ನು ಕರೆತಂದು, ಅವರಿಗೆ ಕಲಿಸುವಂಥಾದ್ದು, ಮತ್ತು ಅವರಿಗೆ ಬಿಸಿ ಊಟ ಕೊಡುವಂಥಾದ್ದು, ಫ್ರೀಯಾಗಿ ಯೂನಿಫಾರಂ ಕೊಡುವಂಥಾದ್ದು, ಈ ರೀತಿಯಲ್ಲಿ ಕಡ್ಡಾಯವಾಗಿ ಒಂದು ಕಡೆ ತರುತ್ತಿದ್ದೀರಿ, ಇನ್ನೊಂದು ಕಡೆ ಈ ಮಕ್ಕಳೆಲ್ಲಾ ಪಾಸಾಗಿ 8ನೇ ತರಗತಿಗೆ ಹೋಗಲು ಪ್ರೌಢಶಾಲೆಗಳನ್ನು ಕೊಡುವುದಕ್ಕಾಗುವುದಿಲ್ಲವೆಂದರೆ ಇದು ಯಾವ ನ್ಯಾಯ? ಆದುದರಿಂದ ಎಲ್ಲೆಲ್ಲಿ ಬೇಡಿಕೆ, ಅವಶ್ಯಕತೆ ಇದೆಯೋ, ಅಲ್ಲಿಗೆ ತಾವು ಕೊಡಬೇಕು. ಅದು ಕರ್ನಾಟಕ ರಾಜ್ಯದಲ್ಲಿ ದಕ್ಷಿಣದಲ್ಲಿಯಾಗಲಿ, ಉತ್ತರದಲ್ಲಿಯಾಗಲಿ, ಯಾವುದೇ ಭಾಗದವರಾಗಲಿ, ಇದರಲ್ಲಿ ಭೇದಭಾವ ಮಾಡಬಾರದು, ಇದು ಯಾವುದೇ ಧರ್ಮಾತದ ಕೆಲಸವಲ್ಲ. ಮಂಗಳೂರು ಆಗಲಿ, ಮೈಸೂರು ಆಗಲಿ, ಉಡುಪಿಯಾಗಲೀ, ನಮ್ಮ ಹಳೆಯ ಮೈಸೂರು ಆಗಲಿ, ಸಮಾಜ ಸೇವೆ ಮಾಡಬೇಕೆಂದು, ಆ ಜನಗಳ ಒತ್ತಾಸೆಯಿಂದ ಇವತ್ತು ಈ ವಿದ್ಯೆಗೆ ಆ ಭಾಗದ ಜನರು ಬಹಳಷ್ಟು ಗೌರವವನ್ನು ಕೊಟ್ಟು ವಿದ್ಯಾವಂತರಾಗುತ್ತಿದ್ದಾರೆ, ಆದುದರಿಂದ ಇದರಲ್ಲಿ ತಾರತಮ್ಯ ಮಾಡದೆ, ನೀವು ಎಲ್ಲಿ ಹೈಸ್ಕೂಲ್ ಬೇಕೋ ಅಲ್ಲಿಗೆ ಕೂಡಲೇ ಬೇಕು, ಇದನ್ನು ಮಾನ್ಯ ಶಿಕ್ಷಣ ಸಚಿವರು ಗಮನಕೊಟ್ಟು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ತಾರಾಬರಿಯಲ್ಲಿ ಒಂದು ಸೇತುವೆಯಾಗಬೇಕು, ನನ್ನ ಕ್ಷೇತ್ರ ಹೊಳೆಯಿಂದ ಆ ಕಡೆಗೆ ಇದೆ, ಇದನ್ನು ಸುತ್ತಿಕೊಂಡು ಬರಲು 30 ಕಿ.ಮೀ. ಆಗುತ್ತದೆ. ನಾನು ಇದರ ಬಗ್ಗೆ ಅನೇಕ ಸಾರಿ

ಮಾತನಾಡಿದ್ದೇನೆ, ಇದಕ್ಕೆ ಒಂದು ಸೇತುವೆಯನ್ನು ಮಾಡಿಸಿಕೊಡಬೇಕೆಂದು ಕೇಳಿಕೋಳುತ್ತೇನೆ, ಮತ್ತೆ ರೈಲ್ವೆ ಕ್ರಾಸಿಂಗ್ ಬಗ್ಗೆ ಪರಂಗಿಪೇಟೆ ಎಂಬಲ್ಲಿ ಒಂದು ರೈಲ್ವೆ ಕ್ರಾಸಿಂಗ್ ಆಗಬೇಕು, ಇಲ್ಲಿ ಸುಮಾರು 7-8 ಸಾವಿರ ಜನರು ಇದ್ದಾರೆ, ಆದುದರಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ತಾಲ್ಲೂಕು ಮಟ್ಟದಲ್ಲಿ ಸಣ್ಣ ಸಣ್ಣ ಕಮಿಟಿಯನ್ನು ಸರ್ಕಾರ ನೇಮಕ ಮಾಡಿದೆ, ಇದರಲ್ಲಿ ಬೀಡಿ ಕಾರ್ಮಿಕರು, ಫ್ಯಾಕ್ಟರಿಕಾರ್ಮಿಕರು ಇವರುಗಳನ್ನು ನಾಮಿನೇಟ್ ಮಾಡಿರುತ್ತೇವೆ, ಈ ಬೀಡಿ ಕಾರ್ಮಿಕರು ಒಂದು ದಿವಸಕ್ಕೆ 80 ರೂಪಾಯಿಗಳನ್ನು ದುಡಿಯುತ್ತಾರೆ. ಇವರು ಕೆಲಸವನ್ನು ಬಿಟ್ಟು ಬರಬೇಕೆಂದರೆ 100 ರೂಪಾಯಿಗಳು ಬೇಕಾಗುತ್ತದೆ. ಇವರು ಊರಿಂದ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಬರಬೇಕೆಂದರೆ 20 ರೂಪಾಯಿಗಳು ಖರ್ಚಾಗುತ್ತದೆ, ಆಶ್ರಯ, ಆರಾಧನಾ, ಇನ್ನು ಅನೇಕ ವಿಷಯಗಳಿಗೆ ಸರ್ಕಾರ ಕಮಿಟಿಯನ್ನು ನೇಮಕ ಮಾಡಿದೆ, ಅವರಿಗೆ ಟಿಎ, ಡಿಎ ಕೊಡುತ್ತಿಲ್ಲ, ಇವರಿಗೆ ಕನಿಷ್ಟ 100 ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಅಡಿಕೆ ಬೆಳೆಯ ಬಗ್ಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿ ಈ ಅಡಿಕೆ ಬೆಳೆಯನ್ನು ಬೆಳೆಯುವಂತಹ ಜನರು ಹೆಚ್ಚಿಗೆ ಇದ್ದಾರೆ, ಈ ಅಡಿಕೆ ಬೆಳೆಯ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ, ಇವತ್ತು ಇವರ ಸ್ಥಿತಿ ಶೋಚನೀಯವಾಗಿದೆ, ಆದುದರಿಂದ ಈ ಬೆಳೆಗೆ ಬೆಂಬಲ ಬೆಲೆಯನ್ನು ಕೊಡುವಂತಹ ನಿಟ್ಟಿನಲ್ಲಿ ಯೋಚನೆ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಂಡು, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆ ಮಾತನಾಡುವಂತಹ ಸಂದರ್ಭದಲ್ಲಿ ತಮಗೆ ಒಂದು ವಿನಂತಿಯನ್ನು ಮಾಡಿಕೊಂಡಿದ್ದೆ, ತಾವೇ ಆ ಸಮಯದಲ್ಲಿ ಅಧ್ಯಕ್ಷ ಪೀಠದಲ್ಲಿ ಇದ್ದಿರಿ, ನಾವು ಮಾತನಾಡುವಾಗ ಸದನದಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಆಫೀಸರ್ಸ್ ಯಾರಾದರೂ ಬಂದು ಕುಳಿತುಕೊಂಡು, ನಾವು ಮಾತನಾಡಿದ್ದನ್ನು ಕೇಳಿ ನಾವು ವಿರೋಧ ಪಕ್ಷದವರು ವಿರೋಧ ಮಾಡುತ್ತೇವೆ, ಬಿಡಿ, ಆದರೆ ಆಡಳಿತ ಪಕ್ಷದವರು, ಮಾತನಾಡಿದಂತಹ ಅಮೂಲ್ಯವಾದಂತಹ ಸಲಹೆಗಳನ್ನು, ಕಾರ್ಯಗತ ಮಾಡುವಂಥಾದ್ದಕ್ಕೆ ಪ್ರಯತ್ನ ಮಾಡಿದರೆ, ಈ ಸರ್ಕಾರಕ್ಕೆ ಸ್ವಲ್ಪ ಉಪಯೋಗವಾಗುತ್ತದೋ ಏನೋ ಎಂದು ಅಂದುಕೊಂಡಿದ್ದೇನೆ. ನೀವು ನಿನ್ನೆ ಆದೇಶವನ್ನು ಕೊಟ್ಟಿದ್ದಿರಿ, ಮತ್ತೆ ಒಂದೆರಡು ಪತ್ರಿಕೆಗಳಲ್ಲೂ ವರದಿಯಾಗಿರುವುದನ್ನು ನೋಡಿದ್ದೇನೆ. ಅದು ಎಷ್ಟರಮಟ್ಟಿಗೆ ಪಾಲನೆಯಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು, ಇನ್ನು ಎರಡನೆಯದಾಗಿ ಏನೆಂದರೆ ಅಧ್ಯಕ್ಷರ ಪೀಠ ಸ್ಥಾನ ಏನು ಇದೆ, ಇದು ಬಹಳ ಪ್ರಮುಖವಾದದ್ದು, ಇಲ್ಲಿ ಜನರು ಬರುತ್ತಾರೆ, ಹೋಗುತ್ತಾರೆ ಅದು ಮುಖ್ಯವಲ್ಲ. ಆದರೆ ತಾವು ಆ ಸ್ಥಾನದಲ್ಲಿ ಕುಳಿತಿರುವಾಗ, ಆ ಸ್ಥಾನಕ್ಕೆ ಬಹಳ ದೊಡ್ಡ ಗೌರವ ಬರುತ್ತದೆ. ತಾವು ನಿನ್ನೆ ಒಂದು ಐತಿಹಾಸಿಕವಾಗಿರುವಂತಹ ತೀರ್ಪನ್ನು ಕೊಟ್ಟು ಛೀಮಾರಿಯನ್ನು ಹಾಕಿದರೂ, ಅವರು ಇಲ್ಲಿಗೆ ಬರಲಿಲ್ಲವೆಂದರೆ, ನಾವು ಇಲ್ಲಿ ಏಕೆ ಚರ್ಚೆ ಮಾಡಬೇಕು? ಈ ಫೈನಾನ್ಸ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿ ಸೀನಿಯರ್ ಆಫೀಸರ್ಸ್ ಕಮರ್ಶಿಯಲ್ ಟ್ಯಾಕ್ಸ್ ಕಮೀಶನರ್ಸ್, ಇವರಿಗೆ ಏನಾಗಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ, ಇವರಿಗೆ ಏನಾದರೂ ಖಾಯಿಲೆಗಳು ಬಂದಿದೆಯಾ ಕಿವಿ ಕೇಳಿಸುವುದಿಲ್ಲವಾ? ಇವರ ಪಂಚೇಂದ್ರಿಯಗಳು ಕೆಲಸ ಮಾಡುವುದಿಲ್ಲವಾ? ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ, ನಿಮ್ಮ ಆದೇಶಕ್ಕೂ ಬೆಲೆ

ಇಲ್ಲವೆಂದರೆ, ಪರವಾಗಿಲ್ಲ, ಆದರೆ ಇದನ್ನು ಮಾನ್ಯ ರಂಗನಾಥ್‌ರವಂಥವರು, ಮಾನ್ಯ ಘೋರ್ಪಡೆಯವರು ಸಹಿಸಿಕೊಂಡು ಸರ್ಕಾರವನ್ನು ನಡೆಸಿಕೊಂಡು ಹೋಗುತ್ತೇವೆಂದರೆ, ನಡೆಸಿಕೊಂಡು ಹೋಗಲಿ, ಅದರಲ್ಲಿ ನಮ್ಮದು ಏನೂ ತಕರಾರು ಇಲ್ಲ, ಆದರೆ ಇದರ ಬಗ್ಗೆ ನನ್ನ ಆಕ್ರೋಶವನ್ನು ವ್ಯಕ್ತ ಮಾಡಬಯಸುತ್ತೇನೆ. ಇನ್ನು ಎರಡನೆಯದಾಗಿ ನಾನು ಈ ಸದನಕ್ಕೆ ಬಂದು 22 ವರ್ಷಗಳಾಯಿತು, ನಾನು ನಾಲ್ಕೈದು ಬಜೆಟ್ ಕಾಪಿಗಳನ್ನು ಬೇಕೆಂದು ತಂದಿದ್ದೇನೆ, ನಾನು ಬೇಕಾದರೆ ಇಲ್ಲಿ ಓದುತ್ತೇನೆ. ಇಲ್ಲಿ vote on account ಬೇಕೋ, ಅಥವಾ ಇಡೀ ವರ್ಷದ್ದು ಬೇಕೋ, ಎನ್ನತಕ್ಕಂಥಾದ್ದು he was so confused. ಅವರಿಗೆ ನಾನು ಎದ್ದು ನಿಂತುಕೊಂಡು ಲೈವ್ ರಿಲೇ ಬೇರೆ ಇದೆಯಲ್ಲಾ, ಇಲ್ಲಿ ನಮಗೆ, ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ, ಮಾನ್ಯ ಸುರೇಶ್‌ಕುಮಾರ್‌ರವರಿಗೆ, ಹಿಂದುಗಡೆಯಿಂದ ರಿಲೇ ಮಾಡುತ್ತಾರೆ, ಅವರಿಗೆ ಮುಂದುಗಡೆಯಿಂದ ರಿಲೇ ಮಾಡುತ್ತಾರೆ, ಆ ರಿಲೇಯಲ್ಲಿ ಜನರು ನಮ್ಮನ್ನು ಹಿಂದುಗಡೆಯೇ ನಾವು ಇರುವುದು ಎಂದು ಕೊಂಡಿದ್ದಾರೆ, ಈ ಸದನದಲ್ಲೂ ನಮಗೆ ಈ ಪರಿಸ್ಥಿತಿ ಬಂದಿದೆ. ಅದು ಇರಲಿ, ಅದರ ಬಗ್ಗೆ ನನಗೆ ಏನೂ ಚಿಂತೆ ಇಲ್ಲ, ಅದನ್ನು ಜನರು ತೀರ್ಮಾನ ಮಾಡಲಿ, ತಾವು ಒಂದು ಸಾರಿ ಮಾನ್ಯ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ತಾವು ಆಡಳಿತ ಪಕ್ಷದ ಸದಸ್ಯರಾಗಿದ್ದೀರಿ, ತಮಗೆ ಜ್ಞಾಪಕವಿರಬಹುದು, ಬಜೆಟ್ ಕಾಪಿ ಹತ್ತು ನಿಮಿಷಗಳಿಗಿಂತ ಮುಂಚೆ ಲೀಕ್ ಆಯಿತೆಂದು, ತಾವು ಪ್ರಸ್ತಾಪಮಾಡಲು ಪ್ರಯತ್ನ ಮಾಡಿದಿರಿ? ಆಗಲಿಲ್ಲ ಆ ಸಂದರ್ಭದಲ್ಲಿ, ಇದು ತಮಗೆ ಜ್ಞಾಪಕವಿದೆಯೋ, ಇಲ್ಲವೋ, ನನಗೆ ಗೊತ್ತಿಲ್ಲ. ಆಗ ಬಹಳ ತೀವ್ರವಾಗಿ ಪ್ರತಿಭಟನೆಯನ್ನು ಮಾನ್ಯ ಕೆ.ಹೆಚ್.ರಂಗನಾಥ್‌ರವರು ಮಾಡಿದರು. ಈಗ ನಾವು ಯಾವುದರ ಬಗ್ಗೆ ಪ್ರತಿಭಟನೆಯನ್ನು ಮಾಡುವುದು? ಇದು ನಮಗೆ ಅರ್ಥವಾಗುತ್ತಿಲ್ಲ, ಇದು ಆದ ಮೇಲೂ ಸಹಿತ ಮಾನ್ಯ ಅಧ್ಯಕ್ಷರಿಗೆ ಪತ್ರವನ್ನು ಬರೆದಿದ್ದಾರೆಯೇ ಹೊರತು, ನಮಗೆ ಇದುವರೆಗೂ ಸಹಿತ ಈ ಸಭೆಯಲ್ಲಿ ಲಿಖಿತವಾಗಿ, I am asking you (Sri Ghorpade) ಫೈನಾನ್ಸ್ ಮಿನಿಸ್ಟರ್ ಆಗಿದ್ದಂತವರು ನೀವು ನಾಲ್ಕು ತಿಂಗಳುಗಳ ವೋಟ್ ಆನ್ ಅಕೌಂಟ್ ಕೇಳುತ್ತಿದ್ದೇನೆಂದು, ಒಂದು ತಿದ್ದುಪಡಿ ಇದುವರೆಗೂ ಮಂಡನೆಯಾಗಿಲ್ಲ. ಎಷ್ಟು ಪರ್‌ಫಾರ್ಮೆನ್ಸ್ ಆಗಿದೆ, ಎನ್ನುವಂಥಾದ್ದು ನೀವು ಕೊಡಬೇಕೆಂದು ಆದೇಶವನ್ನು ನಿನ್ನೆ ಮಾಡಿದ್ದಿರಿ, ಆ ಆದೇಶ ಪಾಲನೆಯಾಗಿಲ್ಲವೆಂದು ಹೇಳುತ್ತೇನೆ, ನಾನು ನಾಲ್ಕು ಬಜೆಟ್ ಕಾಪಿಗಳನ್ನು ನೋಡಿದೆ, ಮುಂದಿನ ಬಜೆಟ್ ಅನ್ನು ಮುಖ್ಯಮಂತ್ರಿಯವರು ಏನು ಮಂಡಿಸಬೇಕೆಂದು ಇದ್ದಾರೆ, ಆ ಬಜೆಟ್‌ಗೆ ಏನೂ ಅರ್ಥವಿರುವುದಿಲ್ಲ. This is the final budget according to me. This is the fourth budget. 2000ನೇ ಇಸವಿಯಲ್ಲಿ ಇವರು, 22,000 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಬರುತ್ತೇನೆಂದು ಹೇಳಿದ್ದರು, 25,000 ಕೆರೆಗಳ ಹೂಳನ್ನು ತೆಗೆಯುತ್ತೇವೆಂದು ಹೇಳಿದ್ದರು. 2004ನೇ ಇಸವಿಗೆ 3000 ಮೆಗಾ ವ್ಯಾಟ್ ವಿದ್ಯುತ್‌ಚ್ಛಕ್ತಿಯನ್ನು ತಯಾರು ಮಾಡುತ್ತೇವೆಂದು ಹೇಳಿದರು. ಇದನ್ನು ಮಾನ್ಯ ಶ್ರೀಕಂಠಯ್ಯನವರ ಗಮನಕ್ಕೆ ತರುತ್ತಿದ್ದೇನೆ, ಇದನ್ನು ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಂಥ ಭರವಸೆಯಲ್ಲ. ಇದನ್ನು ನಿಮ್ಮ ಎಐಸಿಸಿಯವರು ಸರ್ಕಾರದ ಫರ್‌ಫಾರ್ಮೆನ್ಸ್ ಅನ್ನು ರಿವ್ಯೂ ಮಾಡುವುದಕ್ಕೆ ಬರುತ್ತಾರಲ್ಲಾ, ಆ ಸಂದರ್ಭದಲ್ಲಿ ನಿಮ್ಮ ಆಯವ್ಯಯದಲ್ಲಿ ಹೇಳಿರುವ ಮಾತು. 22,000 ಕೋಟಿ ರೂ. ಸಾಲ, 25,000 ಕೆರೆಗಳ ಹೂಳು ಎತ್ತುವುದು, 2004ಕ್ಕೆ 3000 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ಕರ್ನಾಟಕಕ್ಕೆ ಕೊಡತಕ್ಕಂಥ

ಕೊಡುಗೆಯನ್ನು ನಾನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಪ್ರತಿನಿತ್ಯವೂ ಕೂಡ 55 ಲೀಟರ್ ನೀರನ್ನು ಕರ್ನಾಟಕದ ಪ್ರತಿಯೊಬ್ಬ ಪ್ರಜೆಯ ಬಾಯಿಗೆ ಕುಡಿಸುತ್ತೇನೆ. ಎಂದು ಹೇಳಿದ್ದರು, ಎಷ್ಟು ಲೀಟರ್ ಕುಡಿಸುತ್ತಿದ್ದಾರೆಂಬುದನ್ನು ನಾನು ಕೇಳಬಯಸುತ್ತೇನೆ. 2001ನೇ ಸಾಲಿನ ಆಯವ್ಯಯದಲ್ಲಿ ಇವರು ಕೆಲವು ಮಾತುಗಳನ್ನು ಹೇಳಿದ್ದಾರೆ; ಆಡಳಿತ ಸುಧಾರಣೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಒಂದನ್ನಾದರೂ ಮಾಡಿದ್ದಾರಾ? ನಮ್ಮ ಆಡಳಿತಕ್ಕೆ ಹೊಸ ಸ್ವರೂಪವನ್ನು ನೀಡಲು ನಾನು ಜೂನ್ 30, 2001ರಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದ್ದೇನೆ - ಮೊದಲನೆಯದು, ಎಲ್ಲಾ ವಿಭಾಗಾಧಿಕಾರಿಯ ಹುದ್ದೆಯನ್ನು ರದ್ದು ಮಾಡಿ ಮನೆಗೆ ಕಳುಹಿಸುವುದು, ಹೊಸ ವಾಹನಗಳ ಖರೀದಿಯನ್ನು ಒಂದು ವರ್ಷದವರೆಗೆ ಸ್ಥಗಿತಗೊಳಿಸುವುದು, ಆ ಕಾರ್ಪೊರೇಷನ್ ಛೇರ್ಮನ್ಸ್, ಬೋರ್ಡ್ಸ್, ಆ ನೀರಾವರಿ ಸೊಸೈಟಿಯವರೂ ಹೊಸ ಹೊಸ ಸ್ಕಾರ್ಪಿಯೋ ವೆಹಿಕಲ್‌ಗಳನ್ನು ತೆಗೆದುಕೊಂಡಿದ್ದಾರೆ. ನನಗೆ ಆಶ್ಚರ್ಯವಾಗುತ್ತದೆ, ಮುಳುಗಿ ಹೋಗುತ್ತಿರುವ ಮೈಸೂರು ಲ್ಯಾಂಪ್ಸ್‌ಗೆ ನಾಲ್ಕು ಜನ ಡೈರೆಕ್ಟರ್‌ಗಳನ್ನು ನೇಮಕ ಮಾಡಿ ಅವರು ಹೊಸ ಕಾರನ್ನು ತೆಗೆದುಕೊಂಡಿದ್ದಾರೆ, ಏಕೆ ಈ ರೀತಿಯಾಗಿ ಸುಳ್ಳು ಭರವಸೆಗಳನ್ನು ಕೊಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ; ಇವರು ಆಡಳಿತ ಸುಧಾರಣೆ ಮಾಡಿರುವುದು ಇದು. ಕಳೆದ ಎರಡು ವರ್ಷಗಳಲ್ಲಿ ವಿವಿಧ ಇಲಾಖೆಗಳಿಗೆ ಎಂಟು ನೂರು ಹೊಸ ವಹಿಕಲ್‌ಗಳನ್ನು ಇವರು ತೆಗೆದುಕೊಂಡಿದ್ದಾರೆ, ಹೇಳುವವರು ಕೇಳುವವರು ಯಾರೂ ಇಲ್ಲ. ಕೆಸಿಎಸ್‌ಆರ್ ನಿಯಮ 285ಕ್ಕೆ ತಿದ್ದುಪಡಿ ತರುತ್ತೇನೆಂದು ಹೇಳುತ್ತಾರೆ, ಏನು ತಿದ್ದುಪಡಿಯನ್ನು ತಂದಿದ್ದಾರೆ ಸ್ವಾಮಿ? ಎಷ್ಟು ಜನರನ್ನು ಜೈಲಿಗೆ ಹಾಕಿದ್ದಾರೆ, ಎಷ್ಟು ಜನರನ್ನು ಮನೆಗಳಿಗೆ ಕಳುಹಿಸಿದ್ದಾರೆ? ಜಿಲ್ಲಾಧಿಕಾರಿಗಳ ಕಛೇರಿಗಳನ್ನು ಮತ್ತಷ್ಟು ಶಕ್ತಗೊಳಿಸಿ, ಜಿಲ್ಲಾಮಟ್ಟದ ಎಲ್ಲಾ ನಿಯಂತ್ರಿತ ಇಲಾಖೆಗಳನ್ನು ಜಿಲ್ಲಾಧಿಕಾರಿಗಳು ನೇರ ಆಡಳಿತಕ್ಕೆ ತರುತ್ತೇನೆ, ಇದು ಭರವಸೆಯಾಯಿತು. ಇವರು ಭರವಸೆಗಳನ್ನು ಕೊಡಲು ದೊಡ್ಡ ದೊಡ್ಡ ಹೆಸರುಗಳನ್ನೇ ತೆಗೆದುಕೊಳ್ಳುತ್ತಾರೆ. ನಮ್ಮಂಥ ಸಣ್ಣಪುಟ್ಟವರ ಹೆಸರನ್ನು ತೆಗೆದುಕೊಳ್ಳುವುದೇ ಇಲ್ಲ. ವಾಲ್ಮೀಕಿ ಪೀಠ, ಇದು ಈಗ ಪ್ರಾರಂಭವಾಗಿದೆ ವಾಲ್ಮೀಕಿ ಬಗ್ಗೆ ರಿಸರ್ಚ್ ನಡೆಯುತ್ತಿದೆ, ಮೂರೂವರೆ ಪರ್ಸೆಂಟ್ ಜನರಿರುವ ಈ ಕೋಮಿನವರೆಲ್ಲಾ ಖುಷಿ ಪಡಬೇಕು, ಹಿಂದುಳಿದ ವರ್ಗದವರ ಓಟು ಕಾಂಗ್ರೆಸಿಗೆ ಕಟ್ಟುಇಟ್ಟ ಬುತ್ತಿ, ಪಾಪ ಅವರು ಓಟು ಹಾಕಿ ಓಟ್ ಹಾಕಿ ಸುಸ್ತಾಗಿಬಿಟ್ಟರು. ಆಮೇಲೆ ಕೆ.ಹೆಚ್.ಪಟೇಲ್‌ರ ಪ್ರತಿಷ್ಠಾನ, ಅದೊಂದು ಈಗ ಪ್ರಾರಂಭವಾಗಿದೆ, ಗಂಗುಬಾಯಿ ಹಾನಗಲ್ ಪೀಠ ಪ್ರಾರಂಭವಾಗಿದೆಯೋ ಇಲ್ಲವೋ ಆ ವಿಚಾರ ತಮಗೆ ಗೊತ್ತಿದೆ; ಹುಬ್ಬಳ್ಳಿ ಹೈಕೋರ್ಟ್ ಪೀಠಕ್ಕೆ 10 ಕೋಟಿ ರೂಪಾಯಿ, ಮಾನ್ಯ ಮಂತ್ರಿಗಳಾದ ಕೋಳಿವಾಡ್‌ರವರು ಹೈಕೋರ್ಟ್ ಪೀಠವಾಯಿತೆಂದು ಬಹಳ ತೃಪ್ತಿಪಟ್ಟುಕೊಂಡಿದ್ದರು. ಇಂತಹ ಭರವಸೆಗಳನ್ನು ನೀವು ಎತಕ್ಕೆ ಕೊಡುತ್ತೀರಿ? ಬರೀ ಸುಳ್ಳು ಭರವಸೆಗಳು, ಕಳೆದ ಮೂರು ವರ್ಷಗಳಲ್ಲಿ ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರುಗಳು ಜನರಿಗೆ ಏನು ಭರವಸೆಗಳನ್ನು ಕೊಟ್ಟಿದ್ದೀರೆನ್ನುವುದನ್ನು ಯೋಚನೆ ಮಾಡಬೇಕು. ಜೊತೆಗೆ ನಾನು ಮಾತನಾಡುವಾಗ ನೀವು ಮಾಡುವ ಮೋಸದ ಬಗ್ಗೆಯು ಹೇಳಬೇಕಾಗುತ್ತದೆ, ನೀವು ಮಾಡುವ ಒಳ್ಳೆಯ ಕೆಲಸದ ಬಗ್ಗೆಯೂ ಹೇಳಬೇಕಾಗುತ್ತದೆ. ಮೋಸ ಏನು, ಶಾಸಕರಿಗೆ 25 ಲಕ್ಷ ರೂ. ಕೊಟ್ಟಿದ್ದೇವೆ ಎನ್ನುವುದು, ಈಗ ನಮ್ಮ ಪಕ್ಷದಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯವಿದೆ, ನಮ್ಮ ಸಂಯುಕ್ತ ಜನತಾದಳದ ಪಕ್ಷದ ಅಧ್ಯಕ್ಷರಾದ ಮಾನ್ಯ ಭೈರೇಗೌಡರು,

25 ಲಕ್ಷ ರೂಪಾಯಿಗಳನ್ನು ಕೊಡಬಾರದೆನ್ನುವುದು ಅವರ ಅಭಿಪ್ರಾಯ. ಶಾಸಕರ ನಿಧಿಯನ್ನು ಬಿಡುಗಡೆ ಮಾಡಿ ಎಂದು ನಮ್ಮ ಜಿಲ್ಲಾಧಿಕಾರಿಗಳಿಗೆ ಕೇಳಿದರೆ ಅವರೇನು ಹೇಳುತ್ತಿದ್ದಾರೆಂದರೆ, ಅರ್ಧ ಅಕ್ಕಿ ತೆಗೆದುಕೊಳ್ಳಿ ಸಾರ್, ಎನ್ನುತ್ತಾರೆ, ಏತಕ್ಕೆ ಅಕ್ಕಿ ತೆಗೆದುಕೊಳ್ಳಬೇಕೆಂದು ಕೇಳಿದರೆ, ಕೇಂದ್ರ ಸರ್ಕಾರದಿಂದ ಪುಕ್ಕಟೆ ಅಕ್ಕಿಯನ್ನು ಕಳುಹಿಸಿದ್ದಾರೆಂದು ಹೇಳುತ್ತಾರೆ. ಈ ವರ್ಷದ ಶಾಸಕರ 40 ಲಕ್ಷ ರೂಪಾಯಿಗಳಲ್ಲಿ 10 ಲಕ್ಷ ರೂ. ಬರಪರಿಹಾರಕ್ಕೆ, 30 ಲಕ್ಷ ರೂ. ರೈತರ ಸಾಲಮನ್ನಾ ಮಾಡುವುದಕ್ಕೆ, ಒಂದು ಕಡೆ ಕೊಟ್ಟಂತೆ ಮಾಡಿ ಇನ್ನೊಂದು ಕಡೆ ಕಸಿದುಕೊಂಡಂತೆ ಮಾಡುವುದು, ಈ ರೀತಿ ಮೋಸ ಮಾಡುವಂತಹ ವಿಚಾರಗಳನ್ನು ನೀವು ಹೇಳಿದ್ದೀರಿ. ಆದರು ಕೆಲವು ಸಮಾಧಾನಕರವಾದ ವಿಚಾರಗಳು ಈ ಆಯವ್ಯಯದಲ್ಲಿದೆ. ನಾನು ಎಲ್ಲಾ ಹೇಳಿದರೆ ನನ್ನ ಮಾತಿಗೆ ಗೌರವ, ತೂಕ ಸ್ವಲ್ಪ ಕಡಿಮೆಯಾಗುತ್ತದೆ ಎನ್ನುವ ಅರಿವು ನನಗಿದೆ. ಈ ಹನಿ ನೀರಾವರಿ, ಟ್ರಾಕ್ಟರ್, ಪವರ್‌ಟಿಲ್ಲರ್, ಸೌರಶಕ್ತಿ ಐಪಿ ಸೆಟ್ಟು ಇವಕ್ಕೆಲ್ಲಾ ಶೇ. 25-50 ಸಬ್ಸಿಡಿ ಕೊಡುವ ಹಣವನ್ನು ಹೆಚ್ಚು ಮಾಡಿದ್ದೇವೆಂದು ಹೇಳಿದ್ದಾರೆ, ಆವರ್ತನಿಧಿಯನ್ನು 400 ಕೋಟಿ ಮಾಡಿದ್ದೇವೆಂದು ಹೇಳಿದ್ದಾರೆ, ಬೀದರ್‌ನಲ್ಲಿ ಪಶು ವಿಶ್ವವಿದ್ಯಾಲಯ ಪ್ರಾರಂಭ ಮಾಡಲಾಗುವುದೆಂದು ಹೇಳಿದ್ದಾರೆ. ನಿಜವಾಗಿಯೂ ಆ ಬೀದರ್ ಜಿಲ್ಲೆಯ ಸರ್ವಾಂಗೀಣ ಪ್ರಗತಿಯಾಗಬೇಕು, ಆ ಬೀದರ್ ಬಿಜಾಪುರ ಜಿಲ್ಲೆಗಳು ಕರ್ನಾಟಕದ ಭೂಪಟದಲ್ಲಿ ತುಟ್ಟತುದಿಯಲ್ಲಿರುವ ಜಿಲ್ಲೆಗಳು. ನನಗೆ ಜ್ಞಾಪಕವಿರುವಂತೆ 1983ರಲ್ಲಿ ನಾನು ಹುಟ್ಟಿದ ತಾಲ್ಲೂಕು ಭಾಲ್ಕಿಗೆ ಹೋದಾಗ ಒಂಟೆಗಳ ಮೇಲೆ ನೀರನ್ನು ಜನರು ಕುಡಿಯುವ ಪರಿಸ್ಥಿತಿ ಇತ್ತು, ಅಲ್ಲಿ ನನ್ನನ್ನು ಏತಕ್ಕೆ ಮೆಚ್ಚುತ್ತಾರೆಂದರೆ, ನಾನು ಒಂದು ಜನಾಂಗಕ್ಕೆ ಸೇರಿದವನೆನ್ನುವ ದೃಷ್ಟಿಯಿಂದಲ್ಲ. 1983ರಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ಇದ್ದಾಗ, ಸರ್ಕಾರಿ ಒಂದೇ ಆಜ್ಞೆಯ ಮೂಲಕ ಅಳವಾಯಿಪಟ್ಟಿಯಿಂದ ಹಿಡಿದು ಬಾತಂಬ್ರಾವರೆವಿಗೂ ಕೂಡ ಎಲ್ಲೂ ಕರೆಂಟ್ ಇರಲಿಲ್ಲ, ಒಂಟೆಗಳ ಮೇಲೆ ತೆಗೆದುಕೊಂಡು ಹೋಗಿ ನೀರನ್ನು ಕುಡಿಯುತ್ತಿದ್ದರು, ಆ ಒಂದು ಪ್ರದೇಶದಲ್ಲಿ ಇವತ್ತು ಅಭಿವೃದ್ಧಿಯಾಗಿದೆ, ಎಲ್ಲಾ ಸರ್ಕಾರಗಳು ಸ್ವಲ್ಪಮಟ್ಟಿಗೆ ಮಾಡಿವೆ, ಅವರಿಗೆ ಕರ್ನಾಟಕದವರು ಎನ್ನುವ ಮನೋಭಾವನೆ ಬರಬೇಕು. ಅಲ್ಲಿ ಪಶುವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದೀರಿ, ಅಲ್ಲಿ ಒಳ್ಳೆಯ ವಾತಾವರಣವಿದೆ. ಈ ಸ್ವಚ್ಛಗ್ರಾಮಕ್ಕೆ ಗ್ರಹಬಡಿದುಬಿಟ್ಟಿತ್ತು. ಅದೊಂದು ಒಳ್ಳೆಯ ಕಾರ್ಯಕ್ರಮ ಮಾನ್ಯ ಘೋರ್ಪಡೆಯವರನ್ನು ನಾನು ಅಭಿನಂದಿಸುತ್ತೇನೆ. ನೀವು ಈ ಸಾರಿ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿದ್ದಾಗ, this was one of the best programmes; you took the initiative. ಮತ್ತೆ ಅದಕ್ಕೆ ಏಕೋ ಗ್ರಹಬಡಿದಂತಾಗಿತ್ತು, ಮತ್ತೆ ಒಂದು ಸಾವಿರ ಗ್ರಾಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ, ಇನ್ನು ಅಧ್ಯಕ್ಷರು, ಉಪಾಧ್ಯಕ್ಷರ ಸಂಭಾವನೆಯನ್ನು ಹೆಚ್ಚು ಮಾಡಿದ್ದಾರೆ, ಅದನ್ನು ನಾನು ಮೆಚ್ಚುತ್ತೇನೆ. ಅದೇ ಸಮಯದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ತಾ: ಬೋರ್ಡ್ ಸದಸ್ಯರು ಅವರ ರಕ್ತ ಸಂಬಂಧಿಗಳು ಕಂಟ್ರಾಕ್ಟ್‌ರ್ ಆಗದಿರುವಂತೆ ನೋಡಿಕೊಳ್ಳಲು ಏನಾದರೂ ಮಾಡಲಾಗುತ್ತದೆಯೇ ನೋಡಿ. ಈ ಬಿಸಿ ಊಟ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು, ಅದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತಾರ ಮಾಡುವುದಕ್ಕೆ ಯೋಚನೆ ಮಾಡಿರುವುದು, ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯನ್ನು ಪ್ರಾರಂಭ ಮಾಡಿರುವುದು, ತಾಲ್ಲೂಕುಗಳಲ್ಲಿ ಅಂಬೇಡ್ಕರ್ ಭವನ, ಷಾದಿ ಮಹಲ್, ಜಿಲ್ಲೆಗಳಲ್ಲಿ ದೇವರಾಜ ಅರಸ್ ಭವನ, ಕಾವೇರಿ ನೀರಾವರಿ

ನಿಗಮ ಇಂತಹ ಕೆಲವು ವಿಚಾರಗಳು ಸಮಾಧಾನಕರವಾಗಿರತಕ್ಕಂಥದ್ದು. ಇದರ ಬಗ್ಗೆ ನಾವು ಶಹಭಾಸ್‌ಗಿರಿಯನ್ನು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಆಗಲೇ ಪತ್ರಿಕೆಗಳಲ್ಲಿ ನನ್ನ ಬಗ್ಗೆ ಸಿಂಧ್ಯಾರವರು ಕೃಷ್ಣರವರ ಪರವಾಗಿ ಮಾತನಾಡುತ್ತಾರೆ, ಆಡಳಿತ ಪಕ್ಷದ ಪರವಾಗಿ ಮಾತನಾಡುತ್ತಾರೆಂದು ವಿಶ್ಲೇಷಣೆ ಮಾಡುತ್ತಾರೆ. ನಾವು 20-30 ವರ್ಷ ಕಾಂಗ್ರೆಸ್ ಅನ್ನು ವಿರೋಧ ಮಾಡಿಕೊಂಡು ಬಂದು ಎರಡೆರಡು ವರ್ಷ ಜೈಲುವಾಸ ಅನುಭವಿಸಿ, ಕೃಷ್ಣರವರನ್ನು ಹೊಗಳಿ ಗಳಿಸತಕ್ಕಂಥದ್ದು ಏನೂ ಇಲ್ಲವೆಂಬುದನ್ನು ಯಾರು ಬರೆದಿದ್ದಾರೆ, ಬರೆಸಿದ್ದಾರೆ, ನನ್ನ ಟೀಕಾಕಾರರಿಗೆ ಈ ಸಂದರ್ಭದಲ್ಲಿ ಈ ಮುಖೇನವಾಗಿ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. ಅಂಗನವಾಡಿಯವರಿಗೆ ಸಂಭಾವನೆಯನ್ನು ಹೆಚ್ಚು ಮಾಡಿರುವುದು, ಸ್ತ್ರೀಶಕ್ತಿ ಕಾರ್ಯಕ್ರಮ ಇವೆಲ್ಲಾ ಸಮಾಧಾನಕರವಾದ ವಿಚಾರಗಳು. ಬಹಳ ಮುಖ್ಯವಾಗಿ, what is the financial position of this Government is very very important. ಈಗ ಶಾದಿಮಹಲ್‌ಗೆ 5 ಲಕ್ಷ ರೂ. ಅಂಬೇಡ್ಕರ್ ಭವನಕ್ಕೆ 5 ಲಕ್ಷ ರೂ, ದೇವರಾಜರಸು ಭವನಕ್ಕೆ 10 ಲಕ್ಷ ರೂ. ದೇವರಾಜ ಅರಸು ಕಾರ್ಯಕ್ರಮಗಳಿಗೆ ಸಂಪೂರ್ಣ ತಿಲಾಂಜಲಿಯನ್ನು ಇಟ್ಟಿರತಕ್ಕಂಥವರು ಮಾನ್ಯ ಎಸ್.ಎಂ. ಕೃಷ್ಣರವರು ಈ ಸರ್ಕಾರ ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ಬಡವರ ವಿರೋಧಿ ಸರ್ಕಾರ; ನಾನು ಈ ಅಂಕಿಅಂಶಗಳನ್ನು ಮೊದಲನೆ ವರ್ಷದ ಆಯವ್ಯಯದ ಸಮಯದಲ್ಲಿ ಹೇಳಿದಿದ್ದರೆ ನಿಮಗೆ ನೋವಾಗುತ್ತಿತ್ತು;

4.00 ಪಿಎಂ

ಎರಡನೇ ವರ್ಷದಲ್ಲಿ ಹೇಳಿದ್ದರೆ ನಿಮಗೆ ನೋವು ಆಗಿರುವುದು. ಮುಂದಿನ ವರ್ಷ ಜನಗಳ ಮುಂದೆ ಚುನಾವಣೆ ಸಲುವಾಗಿ ನಾವು ಹೋಗಬೇಕಾಗುತ್ತದೆ. ನಾವು ಯಾರ ಪರವಾಗಿ ಇದ್ದೇವೆ ಎನ್ನುವುದನ್ನು, ಬಾಯಲ್ಲಿ ಏನು ಮಾಡಿದ್ದೀರಿ ನೀವು, ಯಾವ ರೀತಿ ಖಾಸಗೀಕರಣ ಮಾಡಿದ್ದೀರಿ, ಏನೇನು ಮಾಡಲಿಕ್ಕೆ ನೀವು, ಸರ್ಕಾರದವರು ಹೊರಟಿದ್ದೀರಿ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಈ ವೇದಿಕೆಯ ಮೂಲಕ ರಾಜ್ಯದ ಜನಗಳಿಗೆ ನಮ್ಮ ಪಕ್ಷದ ಪರವಾಗಿ ಹೇಳಬೇಕಾಗುತ್ತದೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು ಏನೆಂದರೆ, 2002-03ರ ಆಕ್ಚುಯಲ್ ಟೋಟಲ್ ಡಿಫಿಸಿಟ್ 2600 ಕೋಟಿ ರೂಪಾಯಿಗಳು ಎಂದು ನೀವು ಹೇಳಿದ್ದೀರಿ. ಅದಾದ ಮೇಲೆ ಇವರು ಪರಿಷ್ಕೃತ ಮಾಡಿಕೊಂಡು 3405 ಕೋಟಿ ರೂಪಾಯಿಗಳು ಎಂದು ಹೇಳಿದರು. ಆಕ್ಚುಯಲ್ ಆಗಿ ಲೆಕ್ಕ ಪತ್ರಗಳನ್ನು ಕೊಟ್ಟ ಮೇಲೆ 2002-03ರಲ್ಲಿ ಇವರ ಟೋಟಲ್ ರೆವಿನ್ಯೂ ಡಿಫಿಸಿಟ್ 3800 ಕೋಟಿ ರೂಪಾಯಿಗಳು. 2001-02ರಲ್ಲಿ ಇವರ ಫರ್‌ಫಾರ್ಮೆನ್ಸ್ ಏನಿತ್ತು ಎಂದರೆ 3284 ಕೋಟಿ ರೂಪಾಯಿಗಳು ರೆವಿನ್ಯೂ ಡಿಫಿಸಿಟ್ ಆಗಿತ್ತು. ಇದಾದ ಮೇಲೆ ಈ ವರ್ಷ 2634 ಕೋಟಿ ರೂಪಾಯಿಗಳು ರೆವಿನ್ಯೂ ಡಿಫಿಸಿಟ್ ಆಗುತ್ತದೆಂದು ಹೇಳುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ಈ ವರ್ಷ ರೆವಿನ್ಯೂ ಡಿಫಿಸಿಟ್ ಕನಿಷ್ಟ ಪಕ್ಷ 4500 ಕೋಟಿ ರೂಪಾಯಿಗಳಿಗೆ ತಲುಪುತ್ತದೆಂದು ನಾನು ಅಂದುಕೊಂಡಿದ್ದೇನೆ. It will be all time record of the Government of Karnataka. Rs. 4,500 crores is the revenue deficit. ಆಮೇಲೆ ನಿಮ್ಮ ಸರ್ಕಾರದ ಪ್ಲಾನ್ ಸೈಜ್ 2002-03ರಲ್ಲಿ 8600 ಕೋಟಿ ರೂಪಾಯಿಗಳೆಂದು ತೋರಿಸಿದರು. ನಮ್ಮ ಪಕ್ಷದ ಹಿರಿಯ ನಾಯಕರಾದಂಥ ಶ್ರೀ ಸೋಮಶೇಖರ್ ಅವರು ಇದನ್ನು ದೀರ್ಘವಾಗಿ ವಿಶ್ಲೇಷಣೆ ಮಾಡಿದರು. 2003-04ರಲ್ಲಿ 9779 ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ.

78 ಪರ್ಸೆಂಟ್ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಇರುವಾಗ ನೀವು ಹೇಗೆ ಇದನ್ನು ರೀಚ್ ಆಗುವುದಕ್ಕಾಗುತ್ತದೆ? ರೀಚ್ ಆಗುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಕಾರಣವೇನೆಂದರೆ, ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ಸ್, ರಿಜಿಸ್ಟ್ರೇಷನ್‌ನಿಂದ ಬರತಕ್ಕಂಥ ಹಣ, ಸ್ಟೇಟ್ ಎಕ್ಸೈಜ್‌ನಿಂದ ಬರತಕ್ಕಂಥ ಹಣ ಇವೆಲ್ಲಾ ಒಟ್ಟು ಸೇರಿಸಿದರೆ 2634 ಕೋಟಿ ರೂಪಾಯಿಗಳನ್ನು ಈ ಸರ್ಕಾರದಿಂದ ವಸೂಲಾತಿ ಮಾಡಲಿಕ್ಕೆ ಆಗಿಲ್ಲ. The Finance minister the Chief Minister, and the finance Ministry have all totally failed Rs 2,634 Crores is the revenue deficit. ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಕಲೆಕ್ಷನ್ ಮಾಡಬೇಕಾಗಿರುವಂಥದ್ದು 40 ವರ್ಷದಿಂದ ಬಾಕಿ ಇದೆ. ಸಿಂಧ್ಯಾರವರ ಸರ್ಕಾರ ಬೈರೇಗೌಡರ ಸರ್ಕಾರ ಇದ್ದಾಗಲೂ ಬಾಕಿ ಇತ್ತು ಎಂದು ಹೇಳಬಹುದು. ಈ ವರ್ಷ 2630 ಕೋಟಿ ರೂಪಾಯಿಗಳಲ್ಲಿ 2010 ಕೋಟಿ ರೂಪಾಯಿಗಳು ಬರೀ ಸೇಲ್ಸ್ ಟ್ಯಾಕ್ಸ್‌ನಲ್ಲಿ ಬಾಕಿ ಬರಬೇಕಾಗಿದೆ. ಹಾಗಾದರೆ ನೀವು ಅಂದರೆ ಸರ್ಕಾರ ಯಾರ ಮುಲಾಜಿಗೆ ಒಳಗಾಗಿದ್ದೀರಿ? ನೀವು ಹೇಗೆ ಸರ್ಕಾರ ನಡೆಸುತ್ತೀರಿ? 1997-98ರಲ್ಲಿ ನಮ್ಮ ಸರ್ಕಾರ ಆಡಳಿತ ಬಿಟ್ಟಾಗ 1000 ಕೋಟಿ ರೂಪಾಯಿಗಳ ಡಿಫಿಸಿಟ್ ಇತ್ತು. ನಿಮ್ಮ ಸರ್ಕಾರ ಬಂದ ಮೇಲೆ ನೀವು ಕರ ಸಮಾಧಾನ ಯೋಜನೆಯಲ್ಲಿ ಕಲೆಕ್ಟ್ ಮಾಡುತ್ತೇವೆಂದು ಹೇಳಿದಿರಿ. ಅದೂ ಕೂಡ ಆಗಲಿಲ್ಲ. ಈಗ ಹಣಕಾಸು ಇಲಾಖೆಯ ವಿಷಯವಾಗಿ ಮಾತನಾಡುತ್ತೇನೆ. ನನಗೆ ಅರ್ಥವಾಗದೇ ಇರತಕ್ಕಂಥದ್ದು ಏನೆಂದರೆ, ಈ ವರ್ಷ ಇವರು ಯಾರ ಮೇಲೆ ಟ್ಯಾಕ್ಸ್‌ಗಳನ್ನು ಹಾಕಿದ್ದಾರೆಂದರೆ, ಅಲ್ಯೂಮಿನಿಯಂ ಪಾತ್ರೆ ಮೇಲೆ ಇವರು ಟ್ಯಾಕ್ಸ್ ಹಾಕಿದ್ದಾರೆ. ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿ, ಬೆಳಗಾವಿ, ನಿಪ್ಪಾಣಿ, ಹರಿಹರ, ಮೈಸೂರು ಇಲ್ಲಿ ಅಲ್ಯೂಮಿನಿಯಂ ಪಾತ್ರೆಗಳನ್ನು ಮ್ಯಾನ್ಯುಫಾಕ್ಚರಿಂಗ್ ಮಾಡತಕ್ಕಂಥ ಫ್ಯಾಕ್ಟರಿಗಳು ಇದ್ದು ಸುಮಾರು 10 ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ಪಾತ್ರೆಗಳನ್ನು ಮಾರುವವರು ಸುಮಾರು 20 ಸಾವಿರ ಜನ ಇದ್ದಾರೆ. ಈ ಪಾತ್ರೆಗಳನ್ನು ಮಾರುವವರೆಲ್ಲಾ ಸಾಮಾನ್ಯವಾಗಿ ತೀರಾ ಬಡವರು, ಕೂಲಿ ಮಾಡತಕ್ಕಂಥ ಜನ, ಒಂದು ಸಾವಿರ, 500 ರೂಪಾಯಿ ಬಂಡವಾಳ ಹಾಕಿಕೊಂಡು ಮಾರುತ್ತಾರೆ. ಅವರ ಮೇಲೆ ಈ ಟ್ಯಾಕ್ಸ್ ಬಿದ್ದಿದೆ. ಕಳೆದ 25 ವರ್ಷಗಳಲ್ಲಿ ಇವನ್ ಗವರ್ನ್‌ಮೆಂಟ್ ಆಫ್ ಇಂಡಿಯಾದಲ್ಲಿ ಯಾರೂ ಇದರ ಮೇಲೆ ಟ್ಯಾಕ್ಸ್ ಹಾಕಿರಲಿಲ್ಲ. ಫೈನಾನ್ಸ್ ಸೆಕ್ರೆಟರಿ ಅದೇನು ಯೋಚನೆ ಮಾಡುತ್ತಾರೋ, ಯಾರ ಪರವಾಗಿ ಅವರು ಯೋಚನೆ ಮಾಡುತ್ತಾರೋ, ಏನಾದರೂ ನಾರಾಯಣ ಮೂರ್ತಿ ಅವರು ಇನ್‌ಫ್ಲೂಯೆನ್ಸ್ ಅವರಿಗೆ ಇದೆಯೇ, ಅಥವಾ ಬಡವರ ಬಗ್ಗೆ ಇವರಿಗೇನಾದರೂ ಕರುಣೆ ಇದೆಯೇ, ನಿಷ್ಕರುಣೆಯಿಂದ ಅವರ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಈ ಗೊಂದೊಳಿಗಳು, ಮುಸ್ಲಿಂ್ಸ ಈ ತರಹದ ಹಿಂದುಳಿದ ಜನಗಳೇ ಈ ತರಹ ವ್ಯಾಪಾರ ಮಾಡುವಂಥವರು. ಇನ್ನು ಪವರ್ ಮೇಲೆ 5 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಕೆ.ಇ.ಆರ್.ಸಿ.ಯವರು ಸರ್ಕಾರದ ಮುಖದ ಮೇಲೆ ಬಾರಿಸುವ ಹಾಗೆ ಹೇಳಿದರು. ಸರ್ಕಾರಕ್ಕೆ ಅವರು ಏನು ಹೇಳಿದರೆಂದರೆ-'ಈ ಕಾಲದಲ್ಲಿ ನೀವೇನಾದರೂ ಪವರ್ ಟಾರೀಫ್‌ನ್ನು ರಿವೈಸ್ ಮಾಡಿದರೆ ಬ್ರೇಕ್‌ಡೌನ್ ಆಗುತ್ತದೆ' ಎನ್ನುವ ಮಾತನ್ನು ಹೇಳಿದ್ದಕ್ಕೆ ಈಗ ಇದನ್ನು 5 ಪರ್ಸೆಂಟ್ ಹೆಚ್ಚು ಮಾಡಿದ್ದಾರೆ. I am not understanding the rationale behind the taxation. ಇನ್ನು 100 ಕೋಟಿ ರೂಪಾಯಿಗಳನ್ನು ರೈತರ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಚೀಫ್ ಮಿನಿಸ್ಟರ್ ರೋಡ್ ಡೆವಲಪ್‌ಮೆಂಟ್ ಫಂಡ್

ಮಾಡಿಕೊಂಡಿದ್ದಾರೆ. ಅದಕ್ಕೆ ಎಲ್ಲಿಂದ ಹಣ ಬರುತ್ತದೆ ಎಂದರೆ, ರೈತರು ಮಾರುಕಟ್ಟೆ ಫೀ ಎಂದು ಒಂದು ಪರ್ಸೆಂಟ್ ಕೊಡುತ್ತಿದ್ದರು. ಅದನ್ನು ಒಂದೂವರೆ ಪರ್ಸೆಂಟ್‌ಗೆ ಸರ್ಕಾರ ಹೆಚ್ಚಿಸಿದೆ. ಅಲ್ಲಿ ರೈತರಿಂದ ತೆಗೆದುಕೊಳ್ಳುವುದು ಇಲ್ಲಿ ಕೊಟ್ಟ ಹಾಗೆ ಮಾಡುವುದು, ಈ ರೀತಿ ಯಾವ ಪುರುಷಾರ್ಥಕ್ಕಾಗಿ ಮಾಡುತ್ತಿದ್ದಾರೆನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಇವರು ಯಾರಿಗೆ ತೆರಿಗೆ ವಿನಾಯಿತಿ ಕೊಟ್ಟಿದ್ದಾರೆಂದರೆ, ಬಾರ್ ಲೈಸೆನ್ಸ್ ಫೀ ಅನ್ನು ಒಂದು ಲಕ್ಷ ರೂಪಾಯಿಯಷ್ಟು ಒಂದು ಬಾರ್‌ಗೆ ಕಡಿಮೆ ಮಾಡಿದ್ದಾರೆ. ಏಕೆ ಸ್ವಾಮಿ ಹೀಗೆ ಮಾಡಿದ್ದೀರಿ? ಐ.ಎಂ.ಎಫ್.ಎಲ್. ಅನ್ನು ಕುಡಿಯುವವರೆಲ್ಲಾ ಪ್ಲೇವಿನ್ ಕಡೆ ಎಲ್ಲಾ ಹೊರಟುಹೋಗಿಬಿಟ್ಟರು ಎಂದು ಕಡಿಮೆ ಮಾಡಿದ್ದೀರಾ? ಯಾರ ಲಾಬಿಗೋಳಗಾಗಿ ಈ ಬಾರ್‌ಗಳ ಲೈಸೆನ್ಸ್ ಫೀ ಅನ್ನು ಕಡಿಮೆ ಮಾಡಿದ್ದೀರಿ? ಅದಾದ ಮೇಲೆ ಕ್ಲಬ್‌ಗಳ ಲೈಸೆನ್ಸ್ ಫೀ ಅನ್ನು ಕಡಿಮೆ ಮಾಡಿದ್ದಾರೆ. ನೀವು ಇನ್‌ಫಾರ್ಮೇಷನ್ ಟೆಕ್ನಾಲಜಿ, ಬಯೋಟೆಕ್ನಾಲಜಿ, ಹೀಗೆ ಎಲ್ಲೆಲ್ಲಿ ಹಣ ಬರುತ್ತದೆ ಅದರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಯೋಚನೆ ಮಾಡುವುದಿಲ್ಲ. ಇಂಥ ಬಡವರ ಮೇಲೆ ಇವರು ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದಾರೆ. ಈ ಪಾತ್ರೆಗಳ ಮೇಲೆ ಹಾಕಿರುವ ಟ್ಯಾಕ್ಸನ್ನು ರದ್ದು ಮಾಡಿ ವಾಪಸ್ಸು ತೆಗೆದುಕೊಳ್ಳಬೇಕು. ರೈತರ ಮಾರುಕಟ್ಟೆ ಶುಲ್ಕ ಎನಿದೆ ಅದನ್ನು ಈ ವರ್ಷ ಬರಗಾಲವಿರುವುದರಿಂದ ಒಂದು ಪರ್ಸೆಂಟ್‌ನಿಂದ ಜೀರೋ ಪರ್ಸೆಂಟ್‌ಗೆ ತೆಗೆದುಕೊಂಡು ಬರಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ಒತ್ತಾಯ ಮಾಡುತ್ತೇನೆ. ಹಾಗೆಯೇ ಪವರ್ ಮೇಲೆ ಏನು 5 ಪರ್ಸೆಂಟ್ ಟ್ಯಾಕ್ಸೇಷನ್ ಹಾಕಿದ್ದಾರೆ ಅದನ್ನೂ ಕೂಡ ರದ್ದು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ವ್ಯಾಟ್ ಸಿಸ್ಟಮ್ ಬಗ್ಗೆ ನಾವೆಲ್ಲಾ ಸರಿಯಾಗಿ ತಿಳಿದುಕೊಳ್ಳದೆ ಇಲ್ಲಿ ಮಾತನಾಡುತ್ತಿದ್ದೇವೆ. ವ್ಯಾಟ್ ಸಿಸ್ಟಮ್‌ನ್ನು ತರುವುದು ಬೇಡ ಎಂದು ಯಾರು ಹೇಳಿದರು? We too have welcomed. But, ಆದರೆ ಈಗ ಕರ್ನಾಟಕ ಸರ್ಕಾರಕ್ಕೆ ನಿಜವಾದ ಒಂದು ಇಕ್ಕಟ್ಟು ಇದೆ. ಆ ಇಕ್ಕಟ್ಟು ಏನೆಂದರೆ, ನಿನ್ನೆ ಕೇರಳದವರು - ನಾವು ಏಪ್ರಿಲ್ 1ನೇ ತಾರೀಖಿನಿಂದ ವ್ಯಾಟ್ ಸಿಸ್ಟಮ್‌ನ್ನು ಜಾರಿಗೊಳಿಸುವುದಿಲ್ಲ ಎಂದು ಹೇಳಿದ್ದಾರೆ. ತಮಿಳುನಾಡು ಸರ್ಕಾರದವರು ನಾವು ವ್ಯಾಟ್ ಸಿಸ್ಟಮ್ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಮೊರೆಹೋಗಿದ್ದಾರೆ. ಹೀಗೆ ಅಕ್ಕಪಕ್ಕ ತಮಿಳುನಾಡು ರಾಜ್ಯ ಮತ್ತು ಕೇರಳ ರಾಜ್ಯ ವ್ಯಾಟ್ ಸಿಸ್ಟಮ್‌ನ್ನು ಅಳವಡಿಸದೆ, ಇಲ್ಲಿ ಹರಿಬಿರಿನಲ್ಲಿ ಶ್ರೀ ಚಂದ್ರೇಗೌಡರು ಬಂದು ನಮ್ಮ ಕಡೆಯಿಂದ ಪಾಸ್ ಮಾಡಿಸಿಕೊಂಡು ಹೋದ್ರಲ್ಲಾ, ಆ ವ್ಯಾಟ್ ಸಿಸ್ಟಮ್‌ನ್ನು ಇಂಟ್ರಡ್ಯೂಸ್ ಮಾಡಿದರೆ ಮತ್ತೆ 7500 ಕೋಟಿ ರೂಪಾಯಿಗಳು ಅಲ್ಲ, deficit of revenue collection will beyond cross Rs. 1200 crores. ಇನ್ನೂ 500 ಕೋಟಿ ರೂ ಲಾಸಸ್ ಜಾಸ್ತಿ ಆಗುತ್ತದೆ. ನಿಪ್ಪಾಣಿ ಪಕ್ಕದಲ್ಲಿರತಕ್ಕಂಥ ಊರುಗಳಲ್ಲಿ ಹೋಗಿ ಪರ್‌ಚೇಸ್ ಮಾಡುತ್ತಾರೆ, ಈ ಕಡೆ ಹೊಸೂರಲ್ಲಿ ಹೋಗುತ್ತಾರೆ, ಈ ಕಡೆ ಅನಂತಪುರ ಕುಪ್ಪಂಗೆ ಜನ ಹೋಗುತ್ತಾರೆ. ಇದರಿಂದ ಕರ್ನಾಟಕ ರಾಜ್ಯದ ಜನರಿಗೆ ತೊಂದರೆ ಆಗುತ್ತದೆ. ಆದರಿಂದಾಗಿ ನಾಳೆ ಕಾಂಗ್ರೆಸ್ಸಿನ ಕಾರ್ಯಕರ್ತರ ಸಭೆಗೆ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಿದ್ದಾರಂತೆ. ಆ ಸನ್ನಿವೇಶದಲ್ಲಿ ಮಾನ್ಯ ಪ್ರಧಾನಿಗಳನ್ನು ಭೇಟಿ ಮಾಡಿ ಈ ಹಣಕಾಸಿನ ಇಲಾಖೆಯವರನ್ನೆಲ್ಲಾ ಕೂರಿಸಿಕೊಂಡು ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕು. VAT SYSTEM is right ಆದರೆ ಇದನ್ನು ಬೇರೆ ರಾಜ್ಯದವರು ಮಾಡದೆ ನಾವು ಮಾಡುವುದಕ್ಕೆ ಹೋಗಿ ಇವತ್ತು ತೊಂದರೆ ಆಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕೆನ್ನತಕ್ಕಂಥ ಮಾತನ್ನು

ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸಿ, ಇನ್ನು ಈ ವಿದ್ಯುತ್ ವಲಯದ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಈ ಸರ್ಕಾರ ಬಂದ ಮೇಲೆ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಅದನ್ನು ಹೇಳುವುದರ ಬದಲಾಗಿ ಕೋಲಾರದ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮುನಿಯಪ್ಪ ಅವರು ಎಷ್ಟು ಗಂಟೆ ವಿದ್ಯುತ್ ಕೊಡುತ್ತಿದ್ದೇವೆ ಎನ್ನುವುದನ್ನು ಹೇಳಿದರು. I appreciate, Atleast, ಅವರು ಒಪ್ಪಿಕೊಂಡರು. ಅವರ ಬಾಯಿ ಬಿಡಿಸಬೇಕೆಂದು 18 ಗಂಟೆ ಕಾಲ ಕೋಲಾರ ಜಿಲ್ಲೆಯಲ್ಲಿ ಕರೆಂಟ್ ಕೊಡುತ್ತಾರಂತಲ್ಲಪ್ಪಾ ಎಂದು ನಾನು ಹೇಳಿದಾಗ, ಇಲ್ಲ, ಇಲ್ಲ, ಆರೂವರೆ ಗಂಟೆ ಮಾತ್ರ ವಿದ್ಯುತ್ ಕೊಡುತ್ತಾರೆ ಎಂದು ಹೇಳಿದರು. ಕಳೆದ ಸಾರಿಯ 2002ನೇ ಇಸವಿಯ ಬಜೆಟ್‌ನಲ್ಲಿ - ಪ್ರೈವಟೈಜೇಷನ್, ಟ್ರಾನ್ಸ್‌ಮಿಷನ್ ಅನ್ನು ಮಾಡತಕ್ಕಂಥದ್ದು ನಮ್ಮ ಸರ್ಕಾರದ ಕೆಲಸ ಎಂದು ಇವರು ಹೇಳಿದ್ದರು. ಇವರು ಯಾವುದನ್ನು ಪ್ರೈವೇಟೈಜ್ ಮಾಡುವುದಕ್ಕೆ ಹೋಗಿದ್ದಾರೆಂದರೆ, ಬೆಂಗಳೂರನ್ನು ಪ್ರೈವೇಟೈಜ್ ಮಾಡುವುದಕ್ಕೆ ಹೋಗಿದ್ದಾರೆ. ಇನ್ನೂ ಒಂದು ಅಂಡರ್‌ಗ್ರೌಂಡ್ ಪೇಪರ್ ಬಂದಿದೆ. ಅದೇನೆಂದರೆ, ಖಾಸಗಿಯವರು ಡಿಸ್ಟ್ರಿಬ್ಯೂಷನ್ಸ್ ಸಲುವಾಗಿ ರೂರಲ್ ಏರಿಯಾಸ್‌ನ್ನು ತೆಗೆದುಕೊಳ್ಳುವುದಿಲ್ಲವಂತೆ. ಬರೀ ಬೆಂಗಳೂರು, ಮೈಸೂರು, ಮಂಗಳೂರು ಹೀಗೆ ಇವು ಮೂರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರಂತೆ. ಯಾರ ಜೇಬನ್ನು ತುಂಬಿಸಿಕೊಳ್ಳುವುದಕ್ಕೆ ಈ ಪಿತೂರಿ ನಡೆಯುತ್ತಿದೆ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಆಡಳಿತದ ದಕ್ಷತೆಯನ್ನು ಇವರು, ಈ ಸರ್ಕಾರದವರು ಹೆಚ್ಚು ಮಾಡುತ್ತಾರಂತೆ. ಕೆ.ಪಿ.ಟಿ.ಸಿ.ಎಲ್. ನಲ್ಲಿ ಅಧ್ಯಕ್ಷರಾಗಿದ್ದಂಥ ರುದ್ರಪ್ಪನವರಂಥ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಯಾವುದೋ ಒಂದು ಕಂಪನಿಗೆ ಎಂ.ಡಿ. ಮಾಡಿದರು. ಅವರನ್ನೆಲ್ಲಾ ಒಳ್ಳೆಯ ಜಾಗದಲ್ಲಿ ಇದ್ದ ಕಡೆಯಿಂದ ತೆಗೆದುಬಿಟ್ಟರು. ನನಗೆ ಬಂದಿರುವ ಸುದ್ದಿ ಪ್ರಕಾರ ಆ BEMCO ಗೆ ಒಬ್ಬ ಎಂ.ಡಿ. ಇದ್ದರು. ಈಗ ಹೋಗಿದ್ದರಲ್ಲಾ ಕೆ.ಪಿ.ಟಿ.ಸಿ.ಎಲ್. ಎಂ.ಡಿ. ಅವರಿಗೆ ಇವರು ಹೇಳಿದರಂತೆ, ಈ ಗುಲ್ಬರ್ಗಾ, ಮಂಗಳೂರು, ಬೆಂಗಳೂರು, ಮೈಸೂರು ಹೀಗೆ ಕೆ.ಇ.ಬಿ. ಎಲ್ಲಾ ಕಾರ್ಪೊರೇಷನ್‌ಗಳದ್ದು ಸೆಂಟ್ರಲೈಸ್ಡ್ ಪರ್‌ಚೇಸ್ ಮಾಡಬೇಕೆಂದು ಹೇಳಿದರಂತೆ. There is a note which these people have sent. ಪರ್‌ಚೇಸಸ್ ಎಲ್ಲಾ ತಂದು ಸೆಂಟ್ರಲೈಸ್ ಆಗಬೇಕಂತೆ. ಮತ್ತು ಏನೇ ತೆಗೆದುಕೊಳ್ಳಬೇಕಾದರೂ ಸಹಿತ ಇವರದ್ದು ಅಪ್ರೂವಲ್ ತೆಗೆದುಕೊಳ್ಳಬೇಕಂತೆ. ಯಾವಾಗಾದರೂ ಕೆ.ಪಿ.ಟಿ.ಸಿ.ಎಲ್. ಪರ್‌ಚೇಸ್‌ಗೆ 2 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಪರ್‌ಚೇಸ್ ಮಾಡಬೇಕಾದರೆ ಸರ್ಕಾರದ ಅಪ್ರೂವಲ್ ಬೇಕಂತೆ. ಹೀಗಾದರೆ ಕೆ.ಪಿ.ಟಿ.ಸಿ.ಎಲ್ ಹೇಗೆ ಉದ್ಧಾರವಾಗುವುದಕ್ಕೆ ಸಾಧ್ಯವಾಗುತ್ತದೆ? ಕೆ.ಪಿ.ಟಿ.ಸಿ.ಎಲ್. ಸರ್ವನಾಶವಾಗುತ್ತದೆ, ಈ ರೀತಿ ಲೂಟಿ ನಡೆಯುತ್ತಿದೆ. ಅದರಲ್ಲೇನೂ ಸಂಶಯವಿಲ್ಲ. ಕೆ.ಇ.ಆರ್.ಸಿ. ಯವರು ಹೇಳಿದಂಥ ಎಚ್ಚರಿಕೆಯ ಮಾತನ್ನು ಇವರು ಗಮನದಲ್ಲಿ ಇಟ್ಟುಕೊಳ್ಳಬೇಕು. ಕೆ.ಇ.ಆರ್.ಸಿ.ನವರು At least they have done a good order. ಅವರು ಏನು ಹೇಳಿದ್ದಾರೆಂದರೆ, ನೀವು ಆರು ಗಂಟೆ ಕಾಲ ಪವರ್ ಇಲ್ಲದೇ ಇರತಕ್ಕಂಥ, ಐ.ಪಿ.ಸೆಟ್ಟುಗಳು ನಡೆಯದಿರುವ ಹಾಗೆ ಲೋ ವೋಲ್ಟೇಜ್ ಕೊಟ್ಟರೆ ಒಂದೊಂದು ಯೂನಿಟ್‌ಗೂ ಸಹಿತ 20 ಪೈಸೆಯಂತೆ ಬಾಕಿಯನ್ನು ವಸೂಲಿ ಮಾಡಿ ರೈತರಿಗೆ ಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. I appreciate KERC here. ಸರ್ಕಾರದವರು ಕೆ.ಪಿ.ಟಿ.ಸಿ.ಎಲ್. ಅನ್ನು ಹಾಳುಮಾಡುವುದಕ್ಕೆ ಹೊರಟಿದ್ದಾರೆ. ಇನ್ನು ಈ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್

ಬಗ್ಗೆ ಈ ಸರ್ಕಾರದ ಅಪ್ರೋಚ್ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. Where there is Kharge Saab as the Home Minister, a powerful Minister, when Ranganath is there as a powerful Minister, You are in this cabinet, ಇಂಥ ಸಂದರ್ಭದಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆಯನ್ನು ಮುಚ್ಚುವುದಕ್ಕೆ ಹೊರಟಿದ್ದಾರೆ. ಸರ್ಕಾರಿ ಸಾಬೂನು ಕಾರ್ಖಾನೆಗೆ ಪುಕ್ಕಟೆಯಾಗಿ ನಾವು ಗಂಧದ ಮರಗಳನ್ನು ಕೊಡುವಂಥ ಕಾಲ ಇತ್ತು. ಅದನ್ನು ಬೇರೆ ರಾಜ್ಯಗಳಿಂದ ಅವರು ತೆಗೆದುಕೊಂಡು ಬರುತ್ತಿದ್ದರು. ಈ ಸರ್ಕಾರಿ ಸಾಬೂನು ಕಾರ್ಖಾನೆಗೆ ಸರ್ಕಾರದಿಂದ ನಾವು ಒಂದು ರೂಪಾಯಿಯನ್ನೂ ಸಹ ಕೊಡುತ್ತಿಲ್ಲ. ಆ ಕಾರ್ಮಿಕ ಸಂಖ್ಯೆಯು ಸಹ ಕಡಿಮೆ ಆಗುತ್ತಿದೆ. ಒಂದು ವಯಾಬಲ್ ಯೂನಿಟ್‌ಗೆ ಎಷ್ಟು ಬೇಕೋ ಅಷ್ಟು ಮಾತ್ರ ಕಾರ್ಮಿಕರು ಅಲ್ಲಿ ಇರುತ್ತಾರೆ. For the last seven years, Government Soap Factory has made profit. ಅದನ್ನು ಖಾಸಗೀಕರಣ ಮಾಡಲಿಕ್ಕೆ ಹೊರಟಿದ್ದಾರೆ. ಇದನ್ನು ನೋಡಿಕೊಂಡು ನೀವೆಲ್ಲಾ ಏಕೆ ಸುಮ್ಮನೆ ಕುಳಿತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಎನ್.ಜಿ.ಇ.ಎಫ್. ಅನ್ನು ಪ್ರೈವಟೈಜ್ ಮಾಡಿ ಆಯಿತು. ನಮ್ಮ ಸರ್ಕಾರದ ಕಾಲದಲ್ಲಿಯೇ ಅದನ್ನು ಖಾಸಗಿಯವರಿಗೆ ಕೊಟ್ಟುಬಿಡಬೇಕೆಂದು ತೀರ್ಮಾನ ಆಗಿತ್ತು. ಅದು ಮುಳುಗಿ ಹೋಯಿತು. ಇನ್ನು ಎನ್.ಜಿ.ಇ.ಎಫ್. ಇತ್ತು ಎಂದು ಬರೆದುಕೊಳ್ಳಬೇಕಷ್ಟೆ. ಜರ್ಮನಿಯ ಬರ್ಲಿನ್‌ಗೆ ಹೋಗಿ ನಾವು ಹುಡುಕಿಕೊಳ್ಳಬೇಕಷ್ಟೆ. ಎನ್.ಜಿ.ಇ.ಎಫ್. ನಲ್ಲಿ ಕೆಲಸ ಮಾಡತಕ್ಕಂಥವರು ಯಾರು ಇದ್ದರು, ಅವರನ್ನು ಒಳ್ಳೆಯ ಕೆಲಸಗಾರರೆಂದು ಹೇಳಿ ಜರ್ಮನಿಯ ಬರ್ಲಿನ್‌ನಲ್ಲಿ Emblerbenze Factory ನಲ್ಲಿ ಕೆಲಸ ಕೊಟ್ಟಿದ್ದರೆ. ನಮ್ಮ ಅಧಿಕಾರಿಗಳು ಹೋಗಿ ಇವೆಲ್ಲವನ್ನೂ ತಿಳಿದುಕೊಳ್ಳಬೇಕು. ಸುಮ್ಮನೆ ಹೋಗಿ ಶೋಕಿ ಮಾಡಿಕೊಂಡು ಬಂದರೆ ಸಾಲದು. ಎನ್.ಜಿ.ಇ.ಎಫ್. ಮುಚ್ಚಿ ಆಯಿತು. ಮೈಸೂರು ಅಸಿಟೇಟ್ ಫ್ಯಾಕ್ಟರಿಯನ್ನು ಖಾಸಗಿಯವರಿಗೆ ಮಾರಾಟ ಮಾಡಿಯಾಯಿತು. ಎಂ.ಇ.ಐ. ಇದನ್ನು ಮಾರಾಟ ಮಾಡಿ ಆಯಿತು. ಇಡೀ ರಾಜ್ಯದಲ್ಲಿರತಕ್ಕಂಥ ಸಿಮೆಂಟ್ ಫ್ಯಾಕ್ಟರಿಗಳನ್ನು ಮುಚ್ಚತಕ್ಕಂಥ ಪರಿಸ್ಥಿತಿಗೆ ಬಂದಿದೆ. ಇವರು ಇಂಡಸ್ಟ್ರೀ ಮಿನಿಸ್ಟರ್ ಈ ಕಡೆಯಿಂದ ಆ ಕಡೆಗೆ defect ಆಗಿ more ಎಲ್ಲರಿಗೂ ನೀವು ಸಾಟಿಸ್‌ಫೈ ಮಾಡಬೇಕಲ್ಲಾ. 30 ವರ್ಷ 40 ವರ್ಷಗಳಿಂದ 5 ಟರ್ಮ್ 6 ಟರ್ಮ್ ಗೆದ್ದು ಬಂದು ಮಂತ್ರಿಗಳಾಗದೆ ಶಾಪ ಹಾಕಿಕೊಂಡು ಶಾಸಕರುಗಳು ಕುಳಿತುಕೊಂಡಿದ್ದಾರಲ್ಲಾ. ಅವರಿಗೆ ಇವರು ಹೋಗಿ ವಕ್ರ ಮಾಡಿದ್ದಾರಲ್ಲಾ, ಈ ಪುಣ್ಯಾತ್ಮ he is a minister for liquidation of alll factories. ಇನ್ನು ಹೇಗೆ ಕೈಗಾರಿಕೆಗಳನ್ನು ಶುರುಮಾಡುತ್ತಾರೆ? ನಾನು ಇವರನ್ನು ಕೇಳಲಿಕ್ಕೆ ಬಯಸುವುದೇನೆಂದರೆ, 50 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ತೆಗೆದುಕೊಂಡು ಬರುತ್ತಾರಂತೆ. ಎಷ್ಟು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿದ್ದಾರೆ? Let him say in this House. ಎಷ್ಟು ಕೋಟಿ ರೂ ಹಣವನ್ನು ತೆಗೆದುಕೊಂಡು ಬಂದಿದ್ದಾರೆ? ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ? ಯಾರಿಗೆ ಉದ್ಯೋಗ ಸಿಕ್ಕಿರುವಂಥದ್ದು? ಯಾರಿಗೆ ಉದ್ಯೋಗ ಸಿಕ್ಕಿದೆ ಎಂದರೆ 30 ಸಾವಿರ, 40 ಸಾವಿರ, 50 ಸಾವಿರ ಡ್ರಾ ಮಾಡತಕ್ಕಂಥ ಆಂಧ್ರಪ್ರದೇಶದಲ್ಲಿ ಇರತಕ್ಕಂಥ, ತಮಿಳುನಾಡಿನಲ್ಲಿ ಇರತಕ್ಕಂಥ ಕೇರಳದಲ್ಲಿ ಇರತಕ್ಕಂಥ 90 ಪರ್ಸೆಂಟ್ ಮೇಲಿರತಕ್ಕಂಥ ಸಾಫ್ಟ್‌ವೇರ್ ಇಂಜಿನಿಯರ್ಸ್‌ಗೆ ಬೆಂಗಳೂರು ವೆದರ್ ಚೆನ್ನಾಗಿದೆ ಎಂದು ಸಾಫ್ಟ್‌ವೇರ್ ಇಂಡಸ್ಟ್ರಿ ಶುರುವಾಗಿದೆ ಎಂದು ಪ್ರಾರಂಭಮಾಡಿ

ನಮ್ಮ ಕಾರ್ಮಿಕರನ್ನೆಲ್ಲಾ ಸಮಾಧಿ ಮಾಡಿಬಿಡುತ್ತಿದ್ದಾರೆ. ಬೆಂಗಳೂರು ನಗರದಿಂದ ಗೆದ್ದು ಹೋಗಿರತಕ್ಕಂಥ ಶಾಸಕರು ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. I am warning this government. This is going to be a very major serious Law and Order problem. ಎಲ್ಲಾ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ನ್ನು ಮುಚ್ಚಿ ಹಾಕುವುದೇ ಮಾನ್ಯ ಕೃಷ್ಣ ಅವರ ಕೆಲಸವಾಗಿದೆ. ಅಟ್‌ಲೀಸ್ಟ್ ಒಂದು ಕ್ಯಾಟಗರೈಸ್ ಮಾಡಿ ಈ ಫ್ಯಾಕ್ಟರಿಗೆ ಜೀವ ಇಲ್ಲ, ಇದನ್ನು ಮುಗಿಸಿಬಿಡೋಣ, ಇದಕ್ಕೆ ಸ್ವಲ್ಪ ಜೀವ ಇದೆ ಜೀವ ಕೊಡೋಣ ಎಂದು ನೀವಾದರೂ ಇದರ ಬಗ್ಗೆ ಯೋಚನೆ ಮಾಡಬಾರದೇ? ಇದಲ್ಲಾ ಆದಮೇಲೆ ಆ ಶವದ ಪೆಟ್ಟಿಗೆಗೆ ಪಬ್ಲಿಕ್ ಸೆಕ್ಟಾರ್...

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಶ್ರೀ ದೇಶಪಾಂಡೆ ಅವರು ಹೇಳುವುದೇನೆಂದರೆ ಇದೆಲ್ಲಾ ಮಾಡುತ್ತಿರತಕ್ಕಂಥದ್ದು ಮಾನ್ಯ ಸಿಂಧ್ಯಾ ಅವರ ಕನ್ಸೆಂಟ್‌ನಿಂದಲೇ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಸುಮ್ಮನಾದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ನಗೆಚಾಟಿಕೆಯನ್ನು ಬಾರಿಸುವುದರಲ್ಲಿ ಶ್ರೀ ಖರ್ಗೆಯವರು ನಮ್ಮ ದಿವಂಗತ ಪಟೇಲ್‌ರಿಂದ ಸ್ವಲ್ಪ ಇನ್‌ಫ್ಲೂಯೆನ್ಸ್ ಮಾಡಿಕೊಂಡಿದ್ದಾರೆ, ಇದರ ಬಗ್ಗೆ ನನಗೆ ಬಹಳ ಸಂತೋಷ. ಆದರೆ ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. You know, my life was under threat. My children were to be kidnapped and murdered. You can see the Home Minister's report. ಆಸಿಡ್ ಎರಚುತ್ತೇನೆಂದು ಹೇಳಿದ್ದರು. I remember always Mr. Gokul Ram, Latha Krishnarao, Mr. Srikumar. ಅದು ಎಂಥ ಆಫೀಸರ್ಸ್ ಟೀಂ! ಹಾಗೆಯೇ ಟಿ.ಪಿ. ಪ್ರಭು, ನಾವೆಲ್ಲಾ ಸೇರಿಕೊಂಡು ಕೆ.ಎಸ್.ಆರ್.ಟಿ.ಸಿ.ಗೆ ಅನುಕೂಲ ಮಾಡಬೇಕು, ಇದೊಂದು ಒಳ್ಳೆಯ ಪಬ್ಲಿಕ್ ಸೆಕ್ಟಾರ್ ಕಂಪನಿ ಎಂದು ನಾಲ್ಕು ಡಿವಿಜನ್ ಮಾಡಿದೆವು. I appreciate Mr. Kharge Saab ಗುಲ್ಬರ್ಗಾ ಕಾರ್ಪೊರೇಷನ್‌ನ್ನು ನೀವು ಕ್ಯಾಬಿನೆಟ್‌ನಲ್ಲಿ ಹೊಡೆದಾಟ ಮಾಡಿ ಮಂಡಿಸಿದಿರಿ. ಇದು ನನಗೆ ಗೊತ್ತಿದೆ. ಅದಕ್ಕೆ 20 ಕೋಟಿ ರೂಪಾಯಿಗಳನ್ನು ಗ್ರಾಂಟ್ಸ್ ರೂಪದಲ್ಲಿ ಕೊಡಿಸಿದ್ದೀರಿ. 70 ಸಾವಿರ ಕಾರ್ಮಿಕರು ಇದ್ದಾರೆ, 80 ಲಕ್ಷ ಪ್ರಯಾಣಿಕರು ಪ್ರತಿನಿತ್ಯ ಅದರಲ್ಲಿ ಪ್ರಯಾಣ ಮಾಡುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯ ನಮ್ಮ ಶ್ರೀ ದೇವರಾಜು ಅವರು ಜಾಹಿರಾತು ಕೊಟ್ಟುಕೊಂಡಿದ್ದೇ ಕೊಟ್ಟುಕೊಂಡಿದ್ದು. ರಿಂಗ್ ರೋಡ್‌ನ ಬಸ್ ಸರ್ವೀಸ್ ಅನ್ನು ನಿನ್ನೆಯ ದಿವಸ ನಮ್ಮ ಶ್ರೀ ದಿನೇಶ್ ಗುಂಡೂರಾವ್ ಅವರು ಹೋಗಿ ಉದ್ಘಾಟನೆ ಮಾಡಿದರಂತೆ. ನೀವು ಮಾಡುತ್ತಿರತಕ್ಕಂಥ ಕೆಲಸದಿಂದಾಗಿ ಇನ್ನೆಲ್ಲಾ ಶರ್ಮ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನೇ ಉದ್ಘಾಟನೆ ಮಾಡಬೇಕಾಗುತ್ತದೆ. In type mileage, fuel consumption, efficiency, our Corporation is the best in the Country. ಇಂಡಿಯಾ ದೇಶದಲ್ಲಿಯೇ ಈ ನಮ್ಮ ಕಾರ್ಪೊರೇಷನ್ ನಂಬರ್ ಒನ್ ಆಗಿದೆ. ಎಲ್ಲಾ ಬಹುಮಾನಗಳನ್ನು ಹೋಗಿ ತೆಗೆದುಕೊಂಡು ಬರುತ್ತಿದ್ದಾರೆ. ನಾವು ಪಬ್ಲಿಕ್ ಸೆಕ್ಟಾರ್‌ನ್ನು ಉಳಿಸಬೇಕೆಂದು ಸ್ಟಗಲ್ ಮಾಡಿದೆವು. I appreciate my coleague Mr. Bachchegowda. ಕಂಟಿನ್ಯೂ ಮಾಡುವುದಕ್ಕೆ ನಾವು ಏನು ರಿಫಾರ್ಮ್ಸ್ ತೆಗೆದುಕೊಂಡು ಬಂದೆವು I appreciate Mr. Sagir Ahmed. With all pressures, he withstood, I appreciate the present officers who are

working in KSRTC. ಗೋಕುಲರಾಂ ಅವರು ಮಾಡಿದ ಕೆಲಸವನ್ನು ಮುಂದುವರಿಸಿಕೊಂಡು ಹೋಗಿದ್ದಾರೆ. ಆದರೆ ಇವತ್ತು ನೀವು ಯಾರ ಒತ್ತಡಕ್ಕೆ ಯೀಲ್ಡ್ ಆಗಿ ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟ್ ಅನ್ನು ತರುತ್ತಿದ್ದೀರಿ? 1976ರಲ್ಲಿ We always remember Devaraj Urs. ಆದಕ್ಕಾಗಿಯೇ ನಾನು ಹೇಳಿದ್ದು ಏನೆಂದರೆ, ದೇವರಾಜ್ ಅರಸ್‌ರವರ ಭವನ ಕಟ್ಟಿ ಅವರು ಹೇಳಿದ ವಿಚಾರಗಳಿಗೆ ತಿಲಾಂಜಲಿ, ಎಳ್ಳುನೀರು ಬಿಡುತ್ತಿದ್ದೀರಿ, ಎಂದು ಇಲ್ಲಿಯೇ ನಾನು ಹೇಳಿರುವಂಥದ್ದು. ನೀವು ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟ್‌ನ್ನು ರಿಪೀಲ್ ಮಾಡಿ ಯಾವ ಪುರುಷಾರ್ಥಕ್ಕೋಸ್ಕರ ಇದನ್ನು ಮಾಡಲಿಕ್ಕೆ ಹೊರಟಿದ್ದೀರಿ? ನೀವು ಬಜೆಟ್‌ನಲ್ಲಿ ಏನು ಹೇಳಿದ್ದೀರೆಂದರೆ, 'ಜಿಲ್ಲಾಕೇಂದ್ರಗಳಲ್ಲಿರತಕ್ಕಂಥ ಓವರ್‌ಲೋಡನ್ನು ಕಡಿಮೆ ಮಾಡಲಿಕ್ಕೆ 20-20 ಕಿ.ಮೀ. ಗೆ ಬಸ್ಸು ಅನ್ನು ಬಿಡುತ್ತಾರಂತೆ. ಹಾಗಾದರೆ ಕೆ.ಎಸ್.ಆರ್.ಟಿ.ಸಿ. ಎಲ್ಲಿಗೆ ಹೋಗಬೇಕು? I appreciate Mr. Devegowda ಶ್ರೀ ದೇವೇಗೌಡರ ಬಗ್ಗೆ ಬಹಳ ತೆಳುವಾಗಿ ಮಾತನಾಡತಕ್ಕಂಥ ಜನ ಇದ್ದಾರೆ, ಅದು ನನಗೆ ಗೊತ್ತಿದೆ. ರಾಜಕೀಯವಾಗಿ ಸ್ನೇಹಿತರೂ ಅಷ್ಟೇ, ವಿರೋಧಿಗಳೂ ಅಷ್ಟೇ ಜನರು ಅವರಿಗೆ ಇದ್ದಾರೆ. ಆದರೆ When he was the Chief Minister, ಕೆ.ಎಸ್.ಆರ್.ಟಿ.ಸಿ.ಯನ್ನು ಕೆಪಾಸಿಟಿ ಇಲ್ಲವೆಂದು ಹೇಳಿ, ಹಣ ಇಲ್ಲವೆಂದು ಹೇಳಿ, ಪ್ರೈವೇಟ್ ಬಸ್ಸುಗಳನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ರನ್ ಮಾಡುವುದಕ್ಕೆ ಇಂಡೈರೆಕ್ಟ್ ಆಗಿ ತೆಗೆದುಕೊಂಡು ಬಂದರು. Entire union lead by one particular union. they were all against me. ಏಕೆ ಅದನ್ನು ನಾವು ಮಾಡಿದೆವು ಎಂದರೆ, ನಮ್ಮ ರಾಜ್ಯದಲ್ಲಿ ಒಂದು ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಇದೆ, 80 ಲಕ್ಷ ಜನ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆಂದು ಹೇಳಿದೆವಲ್ಲಾ, ಅದರಲ್ಲಿ 60 ಲಕ್ಷ ಜನ ಕೂಲಿಕಾರ್ಮಿಕರು, ರೈತರು ಪ್ರಯಾಣ ಮಾಡುತ್ತಿದ್ದಾರೆ. ಅದನ್ನು ನಮ್ಮ ಅಧಿಕಾರಿಗಳು ತಿಳಿದುಕೊಳ್ಳಬೇಕು. ದಿನಕ್ಕೆ 10 ರೂಪಾಯಿ 15 ರೂಪಾಯಿ ಸಂಪಾದನೆ ಮಾಡತಕ್ಕಂಥ ಕೂಲಿ ಕಾರ್ಮಿಕರು, 5 ಕಿ.ಮೀ, 6 ಕಿ.ಮೀ ತಾಲ್ಲೂಕು ಕೇಂದ್ರಕ್ಕೆ ಪ್ರಯಾಣ ಮಾಡುತ್ತಾರೆ. ಇಲ್ಲಿಗೆ ಬಸ್ಸು ಅರೇಂಜ್ ಮಾಡುವುದಕ್ಕೆ ಯಾವ; ಪ್ರೈವೇಟ್‌ನವನು ಬರುತ್ತಾನೆ? ಇವತ್ತು ನೀವು ಈ ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟನ್ನು ರಿಪೀಲ್ ಮಾಡಿ ಖಾಸಗಿಯವರ ಕೈಗೆ ಸಂಪೂರ್ಣವಾಗಿ ತೆಗೆದುಕೊಂಡು ಹೋಗಿ ಕೊಟ್ಟರೆ ಕಳೆದ ಎಲೆಕ್ಷನ್‌ನಲ್ಲಿ ಆಡಳಿತಕ್ಕೆ ಬಂದಾಗ ಕಾಂಗ್ರೆಸ್‌ನ ಅಧ್ಯಕ್ಷರು ಯಾರು ಸ್ವಾಮಿ?... ಇವರ ಜೊತೆಯಲ್ಲಿ ಆ ಯೂನಿಯನ್ ಪ್ರೆಸಿಡೆಂಟರು ಕಾಂಗ್ರೆಸ್ ಪಾರ್ಟಿಯ ಪರವಾಗಿ ಭಾಷಣ ಮಾಡಲು ಬಂದಿದ್ದರು. ಎಲ್ಲಾ ಕಡೆಗಳಲ್ಲೂ ಸಿಂಧ್ಯಾನ ದರ್ಬಾರು, ಸಿಂಧ್ಯಾನ ಅಟ್ಟಹಾಸ, ಜನತಾ ಸರ್ಕಾರದವರು ಕೆ.ಎಸ್.ಆರ್.ಟಿ.ಸಿ. ಯನ್ನು ಮುಳುಗಿಸಿಬಿಟ್ಟರು ಎಂದು ಭಾಷಣ ಮಾಡಿದಾಗ, ಅದಕ್ಕೆ ನಿಮಗೆ ಓಟು ಕೊಟ್ಟು ಅಧಿಕಾರದಲ್ಲಿ ಕೂರಿಸಿದ್ದಕ್ಕೆ ಅವರಿಗೆ ಕೊಟ್ಟಂಥ ಬಹುಮಾನವಿದು. ಅದಕ್ಕೆ ನೀವು ಮಾಡುವುದು ಮೋಸ ಎಂದು ನಾನು ಹೇಳಿದ್ದು. ಮೋಸ ಎಂದು ಹೇಳದೆ ಅದಕ್ಕೆ ಇನ್ನು ಬೇರೆ ಅರ್ಥ ಏನು ಇದೆ? ನಮ್ಮ ಸರ್ಕಾರ ಆಡಳಿತದಲ್ಲಿ ಇದ್ದಾಗ ನಾವು ಏನು ಮಾಡಿದ್ದೆವು ಎಂದರೆ, ಟ್ಯಾಕ್ಸ್‌ಗಳನ್ನು ಕಡಿಮೆ ಮಾಡಿದ್ದೆವು. ಏಕೆಂದರೆ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಇದು ಬದುಕಲಿ ಎಂದು. This is the only Corporation, ಪ್ರತಿ ವರ್ಷ 3 ಸಾವಿರ ಜನರಿಗೆ, 4 ಸಾವಿರ ಜನರಿಗೆ ಕೆಲಸ ಕೊಡುತ್ತೀದ್ದೀರಾ. ಇದನ್ನು ಮುಚ್ಚಿಹಾಕಿ ನೀವು ಪ್ರೈವೇಟ್ ಲಾಬಿಗೆ ಮಣಿದಿದ್ದೀರಿ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಬಹಳ ಪ್ರಮುಖವಾಗಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ತಿಳಿದುಕೊಳ್ಳಬೇಕು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತಂದು ಈ ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟ್‌ನ್ನು ರಿಪೀಲ್ ಮಾಡತಕ್ಕಂಥದ್ದನ್ನು ನಿಲ್ಲಿಸಿ. ನಾನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. This is a sincere appeal. I am not making politics out of it. Other wise. 144 ಡಿಪೋಗಳು ಇವೆ. 104 ಡಿಪೋಗಳಲ್ಲಿರತಕ್ಕಂಥ ಕಂಡಕ್ಟರ್ಸ್, ಡ್ರೈವರ್ಸ್ ಎಲ್ಲರೂ ಸಹಿತ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನಿಮಗೆ ಘೆರಾವೋ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ನಿಮಗೆ ಈಗಲೇ ನಾನು ಹೇಳಿರುತ್ತೇನೆ. ನಿಮ್ಮ ಸರ್ಕಾರಕ್ಕೆ ಬಹಳ ಕೆಟ್ಟ ಹೆಸರು ಬರುತ್ತದೆ. ಕೆ.ಎಸ್.ಆರ್.ಟಿ.ಸಿ. ಗೆ ದಿವಂಗತ ವೀರೇಂದ್ರ ಪಾಟೀಲರು ಅಧ್ಯಕ್ಷರಾಗಿದ್ದರು. ಬಿ.ಡಿ. ಜತ್ತಿಯವರು ಆಗಿದ್ದರು, ಗುಂಡೂರಾಯರು ಆಗಿದ್ದರು, ದೇವರಾಜ ಅರಸ್‌ರವರು ಆಗಿದ್ದರು; ಎಂ.ಪಿ.ಪ್ರಕಾಶ್ ಆಗಿದ್ದರು, ದೇಶಕ್ಕೇ ಮಾದರಿಯಾಗಿರತಕ್ಕಂಥ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ಅನ್ನು ಮುಳುಗಿಸಿಬಿಟ್ಟು ನೀವು ಏನು ಮಾಡಬೇಕೆಂತಿದ್ದೀರಿ? ನಿಮ್ಮ ಅಧಿಕಾರಿಗಳ ಮಕ್ಕಳಿಗೆ ಪ್ರೈವೇಟ್ ಫ್ಯಾಕ್ಟರಿಗಳಲ್ಲಿ ಕೆಲಸ ಕೊಟ್ಟುಬಿಟ್ಟರೆ ಆಗಿಹೋಯಿತಾ? ನಮ್ಮ ಕೂಲಿ ಮಾಡುವಂಥವರ ಮಕ್ಕಳು ಏನು ಮಾಡಬೇಕು? ಬೋರೇಗೌಡನ ಮಕ್ಕಳು, ಮಾದಯ್ಯನ ಮಕ್ಕಳು ನಾವು ಏನು ಮಾಡಬೇಕು? Why are you closing down these Public sector undertakings? ಇದರ ಬಗ್ಗೆ ನಾನು ಸರ್ಕಾರಕ್ಕೆ ಅಪೀಲ್ ಮಾಡುತ್ತಿದ್ದೇನೆ, Urge ಮಾಡುತ್ತಿದ್ದೇನೆ. ದಯವಿಟ್ಟು ತಾವು ಸೀನಿಯರ್ ಮಿನಿಸ್ಟರ್ಸ್ ಯಾರಿದ್ದೀರಿ, ಇದರ ಬಗ್ಗೆ ಯೋಚನೆ ಮಾಡಬೇಕು. ನಾವ್ಯಾರೂ ಶಾಶ್ವತ ಅಲ್ಲ. ನಾನು ಮತ್ತೆ ಈ ವಿಧಾನಸಭೆಗೆ ಗೆದ್ದು ಬರುತ್ತೇನೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಗೆದ್ದುಬರಬೇಕೆನ್ನುವ ಮನಸ್ಸೂ ನನಗೇನಿಲ್ಲ. ಆದರೆ ನಮ್ಮನ್ನು ಜನರು ನೆನೆಸಿಕೊಳ್ಳುತ್ತಾರೆ. ಇಂಥ ಪಾಪದ ಕೆಲಸವನ್ನು ನೀವು ಸರ್ಕಾರದ ಕಡೆಯಿಂದ ಮಾಡುವುದಕ್ಕೆ ಹೋಗಬೇಡಿ. ಒಳ್ಳೆಯದನ್ನು ಮಾಡಿದರೆ ಜನ ನೆನೆಸಿಕೊಳ್ಳುತ್ತಾರೆ. ಇನ್ನು ಈ ಹಿಂದುಳಿದ ವರ್ಗದವರು ಮತ್ತು ದಲಿತರು ಎಂದು ಹೇಳಿದರೆ ಒಂದು ತರಹ ನಿರಾಶ್ರಿತರನ್ನು ಟ್ರೀಟ್ ಮಾಡಿದ ಹಾಗೆ ಈ ಸರ್ಕಾರ ಮಾಡುತ್ತಿದೆ. ನಮ್ಮ ಕೃಷ್ಣಪ್ಪನವರು ಈ ಸಂದರ್ಭದಲ್ಲಿ ಇರಬೇಕಾಗಿತ್ತು, ಪಾಪ ಇರೋದರಲ್ಲಿಯೇ ಎಸ್‌ಸಿಗಳನ್ನು ಬ್ಯಾಕ್‌ವರ್ಡ್‌ಕ್ಲಾಸ್‌ಗಳವರನ್ನು ಎಸ್‌ಟಿಗಳನ್ನು ಅವರು ಪ್ರೊಟೆಕ್ಟ್ ಮಾಡಬೇಕೆಂದು ಒಂದು ಅಟೆಂಪ್ಟ್ ಮಾಡುತ್ತಿದ್ದಾರೆ. ಗೌರ್ನಮೆಂಟ್ ಆಫ್ ಇಂಡಿಯಾದವರು ಡೈರೆಕ್ಷನ್ ಕೊಟ್ಟ ಮೇಲೆ ಅಟ್ರಾಸಿಟಿ ಆ್ಯಕ್ಟ್‌ನ್ನು ಟ್ರಯಲ್ ಮಾಡಬೇಕೆಂದು 5 ಕೋರ್ಟ್‌ಗಳನ್ನು ಮಾಡಿದರು. Chief Justice has written a letter to this Government and to the Chief Minister ಅಟ್ರಾಸಿಟಿ ಕೇಸ್‌ಗಳನ್ನು ಟ್ರಯಲ್‌ಗೆ ಕಳುಹಿಸುತ್ತಾ ಇಲ್ಲ, ಎಫ್‌ಐಆರ್‌ಗಳನ್ನು ಹಾಕುತ್ತಿಲ್ಲ, ಡೆಪ್ಯೂಟಿ ಕಮೀಷನರ್‌ಗಳವರು ಆ ಫೈಲ್‌ಗಳನ್ನು ಹಾಸಿಕೊಂಡು ನಿದ್ರಿಸುತ್ತಿದ್ದಾರೆ. ಈ ಸರ್ಕಾರ ಬಂದ ಮೇಲೆ ಹಿಂದಿಂದು ಬಾಕಿ ಎಲ್ಲಾ ಸೇರಿಸಿಕೊಂಡು ಒಟ್ಟಾರೆಯಾಗಿ 7800 ಕೇಸ್‌ಗಳು ಪೆಂಡಿಗ್‌ನಲ್ಲಿವೆ. What is the use of having a Court? ಏಕೆ ಕೋರ್ಟುಗಳನ್ನು ಮಾಡುತ್ತಿದ್ದೀರಿ? ಆ ಜಡ್ಜ್‌ಸ್‌ಗೆ ಕೆಲಸ ಇಲ್ಲದೇ ಅವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಇದು ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಉಪಾಧ್ಯಕ್ಷರೇ ತಾವು ಹಿಂದುಳಿದವರ್ಗಕ್ಕೆ ಸೇರಿದಂತವರು, ತಾವು ಅರಸುರವರ ಕಾಲದಲ್ಲಿ ಸದಸ್ಯರಾಗಿದ್ದ ಹಾಸ್ಟೆಲ್‌ಗಳ ಪ್ರಾರಂಭವಾಯಿತು. ಈ ಸರ್ಕಾರ ಬಂದ ಮೇಲೆ

ದಯಮಾಡಿ ಅಂಕಿ ಅಂಶಗಳನ್ನು ಕೊಡಬೇಕು, ಎಷ್ಟು ಹೊಸ ಒಬಿಸಿ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದ್ದೀರಿ? ಕೇವಲ 5 ಒಬಿಸಿ ಹಾಸ್ಟೆಲ್‌ಗಳನ್ನು ನೀವು ಪ್ರಾರಂಭ ಮಾಡಿರುವುದು. ಒಂದು ವೆರ್ಟನರಿ ಹಾಸ್ಪಟಲ್ ಆ ಮೂಕ ಪ್ರಾಣಿಗಳಿಗೆ ಪ್ರಾರಂಭಿಸಿಲ್ಲ, 62 ಹೊಸ ಹೈ-ಸ್ಕೂಲ್‌ಗಳನ್ನು ಬಿಟ್ಟರೆ, 8-9 ಜೂನಿಯರ್ ಕಾಲೇಜ್‌ಗಳನ್ನು ಬಿಟ್ಟರೆ, ಹೊಸದಾಗಿ ಒಂದು ಇನ್‌ಸ್ಟಿಟ್ಯೂಷನ್ ಪ್ರಾರಂಭ ಮಾಡಿಲ್ಲ. ಯಾರ ಮಕ್ಕಳು ಬರುತ್ತಾರೆ? ಸೆಂಟ್ ಜೋಸೆಫ್ ಕಾಲೇಜು, ಬಿಷಪ್ ಕಾಟನ್, ಬಾಲ್ಡ್ವಿನ್, ಇದಕ್ಕೆಲ್ಲಾ ಹೋಗುವವರು ಮಕ್ಕಳು ಬೇರೆ, ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್, ಇದಕ್ಕೆಲ್ಲಾ ಹೋಗುವವರು ಬೇರೆ, ಇಲ್ಲಿ ಬಡವರ ಹಾಗೂ ಕೂಲಿಕಾರರ ಮಕ್ಕಳು, ರೈತರ ಮಕ್ಕಳು ಸರ್ಕಾರಿ ಸ್ಕೂಲ್‌ಗಳಿಗೆ ಬರುತ್ತಾರೆ, ಎಷ್ಟು ಹೈ-ಸ್ಕೂಲ್‌ಗಳನ್ನು ನೀವು ಪ್ರಾರಂಭಿಸಿದ್ದೀರಿ? ಎಷ್ಟು ಜೂನಿಯರ್ ಕಾಲೇಜುಗಳನ್ನು ನೀವು ಪ್ರಾರಂಭಿಸಿದ್ದೀರಿ? ಎಷ್ಟು ವೆರ್ಟನರಿ ಹಾಸ್ಪಟಲ್‌ಗಳನ್ನು ನೀವು ಪ್ರಾರಂಭಿಸಿದ್ದೀರಿ? ಎಷ್ಟು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೇಲ್‌ಗಳನ್ನು ಮಾಡಿದ್ದಿರಾ? ಎಷ್ಟು ಎಸ್‌ಸಿ:ಎಸ್‌ಟಿ ಹಾಸ್ಟೇಲ್‌ಗಳನ್ನು ಮಾಡಿದ್ದೀರಿ? ಆ ಬಿಸಿಎಂ ಕಾರ್ಪೊರೇಷನ್‌ಗೆ ಕೊಡುತ್ತಿರುವ ಸಾಲದಲ್ಲಿ ಇವರು 25 ಪರ್ಸೆಂಟ್ ಕಡಿಮೆ ಮಾಡಿದ್ದಾರೆ, ಇವರು ಹಿಂದುಳಿದ ವರ್ಗದವರ ಪರವಾಗಿ ಇದ್ದಾರೆಂದು ನಾನು ಇವರನ್ನು ಹೊಗಳಬೇಕೆ? ಎಸ್‌ಸಿಎಸ್‌ಟಿ ಕಾರ್ಪೊರೇಷನ್‌ಗೆ ಕೊಡುತ್ತಿರುವ ಹಣದಲ್ಲಿ ಪ್ಲಾನ್ ಕಟ್ ಕಡಿಮೆಯಾಗಿದೆ ಎಂದು 10 ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ನಿಮಗೆ ಆ ಪ್ಲಾನ್ ಸೈಜ್ ಕಟ್ ಮಾಡುವಾಗ ಆ ಎಸ್‌ಸಿ:ಎಸ್‌ಟಿ ಮಕ್ಕಳ ಬಗ್ಗೆ ಕರುಣೆ ಬರಲಿಲ್ಲವೆ? ನಿಮ್ಮ ಸರ್ಕಾರಕ್ಕೆ ಕರುಣೆ ಬರಲಿಲ್ಲವೆ? ಸ್ಕಾಲರ್‌ಷಿಪ್ ದುಡ್ಡಿನ ಬಗ್ಗೆ ಹೇಳುವುದಾದರೆ, ಕಳೆದ ಮೂರೂವರೆ ವರ್ಷಗಳಿಂದ ಈ ರಾಜ್ಯದ ಹಿಂದುಳಿದ ವರ್ಗದವರ ಮಕ್ಕಳು, ಹೈ-ಸ್ಕೂಲ್ ಹಾಗೂ ಕಾಲೇಜುಗಳಲ್ಲಿ ಏನು ಓದುತ್ತಿದ್ದಾರೆ, ಅವರ ಸ್ಕಾಲರ್‌ಷಿಫ್‌ನ ದುಡ್ಡು ಬಿಡುಗಡೆ ಮಾಡಿಲ್ಲ. ನೀವು ಹಿಂದುಳಿದವರ್ಗಗಳ ಜನಗಳ ಪರವಾಗಿ ಇರತಕ್ಕಂಥವರು. ಕಳೆದ ಮೂರೂವರೆ ವರ್ಷಗಳಿಂದ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ಎಸ್‌ಸಿ-ಎಸ್‌ಟಿಗಳ ಸ್ಕಾಲರ್‌ಷಿಫ್‌ನ ದುಡ್ಡು ಇವರು ಏಕೆ ಕೊಟ್ಟಿದ್ದಾರೆಂದರೆ, ಗೌರ್ನಮೆಂಟ್ ಆಫ್ ಇಂಡಿಯಾದವರು ಕೊಟ್ಟಿರುವುದರಿಂದ ಕೊಟ್ಟಿದ್ದಾರೆ. ಗಂಗಾ ಕಲ್ಯಾಣದ ಸಮಿತಿಗಳಿಗೆ, ಬೈರೇಗೌಡರು ಅವರ ಕ್ಷೇತ್ರದಲ್ಲಿ ಅಧ್ಯಕ್ಷರು, ಅದೇ ರೀತಿಯಾಗಿ ಮಾನ್ಯ ಶಿವಪ್ಪನವರು ಅಧ್ಯಕ್ಷರು ಸಾಸನೂರುರವರು ಅಧ್ಯಕ್ಷರು, ಏನು ಒಂದು ಸಾವಿರ ಗಂಗಾಕಲ್ಯಾಣ ಕೊಟ್ಟುಬಿಟ್ಟಿದ್ದೀರಾ? ಕೇವಲ ಒಂದೊಂದು ಕೊಟ್ಟಿದ್ದೀರಿ, ಆ ಒಬ್ಬನನ್ನು ಸೆಲೆಕ್ಟ್ ಮಾಡುವುದಕ್ಕೆ ಎಂಎಲ್‌ಎ ಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಅಧ್ಯಕ್ಷನಾಗಿ ಕೂರಿಸಿದ್ದೀರಿ. ನಾವು ಅಲ್ಲಿ ಎಷ್ಟು ಅರ್ಜಿಗಳನ್ನು ತೆಗೆದುಕೊಳ್ಳುವುದು? ಯೂನಿಟ್ ಕಾಸ್ಟ್‌ನ್ನು ಒಂದು ಲಕ್ಷ ಮಾಡಿ ಎಂದು ಮಾನ್ಯ ಕೃಷ್ಣಪ್ಪನವರು ಎಫ್‌ಡಿಗೆ ಪ್ರಪೋಸಲ್ ಕಳುಹಿಸಿದ್ದರಂತೆ ಅವರು ನನಗೆ ಹೇಳಿದರು. 70,000ರೂ.ಇರುವುದನ್ನು 1,00,000 ರೂ ಮಾಡಿ ಎಂದು ಹೇಳಿದರೆ, there is no money for that ಬಿಸಾಕಿರಿ ಈ ಫೈಲ್‌ನ್ನು ಎಂದು ಎತ್ತಿ ಬಿಸಾಕಿದ್ದಾರೆ. ನೀವು ಹೇಗೆ ಬಡವರ ಹಾಗೂ ಹಿಂದುಳಿದವರ ವರ್ಗದವರ ಪರವಾಗಿ ಇದ್ದಿರೋ ನನಗಂತೂ ಅರ್ಥವಾಗುತ್ತಿಲ್ಲ. ಅಟ್‌ಲಿಸ್ಟ್ ಈಗಲಾದರೂ ನೀವು ತಿದ್ದಿಕೊಳ್ಳಿ, ಸರಕಾರ ಇಲ್ಲದೇ ಇರತಕ್ಕಂಥ ಜನಗಳ ಪರವಾಗಿ ಇರಬೇಕು, ಯಾರಿಗೆ ತಿನ್ನುವುದಕ್ಕೆ ಇರುವುದಿಲ್ಲ, ಯಾರ ತಲೆಗೆ ಬಟ್ಟೆ ಇಲ್ಲ, ಯಾರ ಕಾಲಿಗೆ ಚಪ್ಪಲಿ ಇಲ್ಲ, ಅಂಥ ಜನಗಳ ಪರವಾಗಿ ನೀವು ಇರಬೇಕು. ಅವರ ಪರವಾಗಿ ಈ ಸರ್ಕಾರ ಕೆಲಸ ಮಾಡಬೇಕಾಗುತ್ತದೆ, ಇರುವವರ ಪರವಾಗಿ

ಅಲ್ಲ. ನನ್ನ ದುರಾದೃಷ್ಟ ಮಾನ್ಯ ವಿಶ್ವನಾಥ್‌ರವರು ಇಲ್ಲ, ಕೃಷ್ಣಪ್ಪನವರು, ಕಾಗೋಡುತಿಮ್ಮಪ್ಪನವರು ಇಲ್ಲ, ನಮ್ಮ ಎಸ್ ಎಸ್ ಪಾಟೀಲ್‌ರವರು ಟೈಮ್ ಇದ್ದಿದ್ದರೆ ಈ ರೈತರ ಸಾಲದ ಬಡ್ಡಿಯ ಬಗ್ಗೆ ಮಾತನಾಡುತ್ತಿದ್ದರು. ಮಾನ್ಯ ಕೃಷ್ಣಪ್ಪನವರು ಈಗ ತಾನೇ ಬಂದರು. ಮಾನ್ಯ ಕೃಷ್ಣಪ್ಪನವರ ಇಲಾಖೆಗೆ ಸ್ವಲ್ಪವಾದರೂ ಹಣ ಕೊಟ್ಟಿದ್ದರೆ ಆ ಪುಣ್ಯಾತ್ಮ ಸ್ವಲ್ಪವಾದರೂ ಕೆಲಸ ಮಾಡುವುದಕ್ಕೆ ಅನುಕೂಲವಾಗಿರುವುದು. ಇವತ್ತು ಯಾವ ಸ್ಥಿತಿಗೆ ಬಂದಿದೆ ಎಂದರೆ, ಮಾನ್ಯ ಕೃಷ್ಣಪ್ಪನವರಿಗೆ ರಾಜೀನಾಮೆ ಕೊಟ್ಟು ಬರಲಿಕ್ಕೆ ಆಗುವುದಿಲ್ಲ, ಅಲ್ಲಿ ಇದ್ದು ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಬೇಕಾದರೆ ಅವರೇ ಹೇಳಲಿ, ಕಳೆದ ಮೂರೂವರೆ ವರ್ಷಗಳಿಂದ ಹಿಂದುಳಿದವರ್ಗದ ಮಕ್ಕಳಿಗೆ ಬರತಕ್ಕಂಥ ಸ್ಕಾಲರ್‌ಷಿಫ್‌ನ ಹಣವನ್ನು ಬಿಡುಗಡೆ ಮಾಡಿದ್ದಾರಾ? ನಿಮ್ಮ ಫೈನಾನ್ಸ್ ಸೆಕ್ರೆಟರಿ ಏನಾಗಿತ್ತು? ಪೆನ್ನಿನಲ್ಲಿ ಇಂಕ್ ಮುಗಿದಿತ್ತೆ ಸಹಿ ಮಾಡುವುದಕ್ಕೆ ಅವರದ್ದು ಬಂದಾಗ? ಸ್ಟ್ಯಾಂಪು ಡ್ಯೂಟಿ ರಿಜಿಸ್ಟ್ರೇಷನ್‌ಗಳನ್ನೆಲ್ಲಾ ಎಗ್ಜ್‌ಂಪ್ಷನ್ ಮಾಡುವಾಗ ಇನ್‌ಫೋಸಿಸ್ ಕಂಪನಿಗಳಿಗೆ ಮಾತ್ರ, ನಿಮ್ಮ ಪೆನ್ನಿಗೆ ಹಸಿರು ಶಾಹಿ ಬಂದು ಬಿಡುತ್ತದೆ. ಹಿಂದುಳಿದವರ್ಗದವರ ಮಕ್ಕಳಿಗೆ ಕೊಡುವಾಗ ನಿಮ್ಮ ಫೈನಾನ್ಸ್ ಸೆಕ್ರೆಟರಿಗೆ, ಫೈನಾನ್ಸ್ ಮಿನಿಸ್ಟರ್‌ಗೆ, ಚೀಫ್ ಮಿನಿಸ್ಟರ್‌ಗೆ ಏಕೆ ಅವರ ಪೆನ್ನಿಗೆ ಹಸಿರು ಶಾಹಿ ಬರುವುದಿಲ್ಲ? ಇದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಕರಡಿ ಸಂಗಣ್ಣನವರು ಮಾತನಾಡುತ್ತಾ ಈ ಬಗ್ಗೆ ಇದೊಂದು ಚಾಕಲೇಟ್ ಬಜೆಟ್ ಎಂದು ಬಹಳ ಚೆನ್ನಾಗಿ ಹೇಳಿದರು. ಶಾದಿಮಹಲು, ದೇವರಾಜ್ ಅರಸ್ ಭವನ, ಅಂಬೇಡ್ಕರ್ ಭವನ, ಐದೈದು ಲಕ್ಷ! ಇವರೇನು ಗಂಗೂಬಾಯಿ ಹಾನಗಲ್ ಅವರಿಂದ ಏನು ಶುರು ಮಾಡಿದರಲ್ಲಾ ಅಲ್ಲಿಂದ ಹಿಡಿದು ಈಗ ಶಿವರಾಂ ಕಾರಂತ್‌ರವರ ಹೆಸರು ತೆಗೆದುಕೊಂಡಿದ್ದಾರೆ. ಇನ್ನೂ 3-4 ಜನ ಪುಣ್ಯಾತ್ಮರ ಹೆಸರುಗಳನ್ನು ಇವರು ತೆಗೆದುಕೊಂಡಿದ್ದಾರೆ. ಎಲ್ಲಾ ಸೇರಿಸಿಕೊಂಡರೂ ಇವರು ಹಿಂದುಳಿದವರ್ಗದವರಿಗೆ ಕೊಟ್ಟಿರತಕ್ಕಂಥದ್ದು 22 ಕೋಟಿ ರೂಪಾಯಿ ಎಂದು ಈ ಬಜೆಟ್‌ನಲ್ಲಿ ಹೇಳಿದ್ದಾರೆ. 24 ಸಾವಿರ ಕೋಟಿ ರೂಪಾಯಿ ಬಜೆಟ್‌ನಲ್ಲಿ 78 ಪರ್ಸೆಂಟ್ ನೀವು ನಾನ್-ಪ್ಲಾನ್ ಎಕ್ಸಪಂಡಿಚರ್ ಮಾಡುತ್ತೇವೆಂದರೂ, ಹಿಂದುಳಿದವರ್ಗದವರಿಗೆ ನೀವು ಕೊಟ್ಟಿರತಕ್ಕಂಥದ್ದು 22 ಕೋಟಿ ರೂಪಾಯಿ ಕೊಟ್ಟಿದ್ದೀರಿ. 22 ಕೋಟಿ ರೂಪಾಯಿಗೆ ಇನ್ನೂ ಮೇಲೆ ಶಾಸಕರು ಹೋಗಿ ಚುನಾವಣೆ ಬರುತ್ತಿದೆ ನಿಮ್ಮ ವರ್ಗದವರೆಲ್ಲಾ ವೋಟು ಕೊಡಿ, ವೋಟುಬ್ಯಾಂಕ್, ಜನತಾದಳದವರು ನಮ್ಮ ವಿರೋಧಿಗಳು, ನಮಗೆ ವೋಟು ಕೊಡಿ ಎಂದು ತಮಟೆ ಹೊಡೆದುಕೊಂಡು ಬರಬೇಕು. ಇದು ಎಲ್ಲಿ ಆಗುತ್ತದೆ? ರೈತರ ಸಾಲದ ವಿಚಾರಕ್ಕೆ ನಾನು ಬರುತ್ತಿದ್ದೇನೆ, ಇವರು ಡಂಗೂರ ಹೊಡೆದರು, ಏನು ಹೊಡೆದರು ಎಂದರೆ, 2002ರಲ್ಲಿ ಬರಗಾಲ ಬಂದಿದೆ, ಖರೀಫ್ ಸೀಜನ್‌ನಲ್ಲಿ ಅಂದರೆ 1-4-2002 ನಿಂದ 30-9-2002ವರೆವಿಗೂ ನಾವು as declared by RBI and NABARD 177 ಕೋಟಿ ರೂಪಾಯಿಗಳನ್ನು ಸಾಲದ ಮೇಲೆ ಇರತಕ್ಕಂಥ ಬಡ್ಡಿಯನ್ನು ನಾವು ರದ್ದು ಮಾಡಿದ್ದೇವೆಂದು ಹೇಳಿದರು. ಆಗ ಕೇಂದ್ರದ ಕೃಷಿ ಮಂತ್ರಿಗಳಾದ ಮಾನ್ಯ ಅಜಿತ್‌ಸಿಂಗ್‌ರವರು ಬಂದಿದ್ದರು, ಅವರು ಏನು ಹೇಳಿದರು ಎಂದರೆ ನಾವು ಅರ್ಧ ಕೊಡುತ್ತೇವೆ ಎಂದು ಹೇಳಿದರು, ಇವರು 63 ಕೋಟಿ ರೂಪಾಯಿ, ಅವರು 63 ಕೋಟಿ ರೂಪಾಯಿ; ಈಗ ಏನಾಗಿದೆ ಎಂದರೆ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಪ್ರೋಗ್ರಾಂ ಅನ್ನು ಅನೌನ್ಸ್ ಮಾಡಿದ್ದಾರೆ, ಅದರ ಪ್ರಕಾರ ನಮ್ಮ ರಾಜ್ಯದಲ್ಲಿ 91 ತಾಲ್ಲೂಕುಗಳಿಗೆ 20 ಪರ್ಸೆಂಟ್ ಬಡ್ಡಿ ಮನ್ನಾ ಆಗುತ್ತದೆ. 63 ಕೋಟಿ

ರೂಪಾಯಿಗಳಲ್ಲಿ ಈ ಘಳಿಗೆಯವರೆಗೆ, ಮೊನ್ನೆ ವಿಶ್ವನಾಥ್‌ರವರು ಏನು ಭರವಸೆ ಕೊಟ್ಟರು ಎಂದರೆ, ನಾನು 30 ಕೋಟಿ ರೂ. ಬಿಡುಗಡೆ ಮಾಡಿಬಿಡುತ್ತೇನೆಂದು ಹೇಳಿದರು. 3 ಕೋಟಿರೂ.ನೂ ಬಿಡುಗಡೆ ಆಗಿಲ್ಲ. ನನಗೆ ಬಹಳ ಆಶೆ ಆಯಿತು, ಮಾನ್ಯ ಚಂದ್ರೇಗೌಡರವರಿಗೆ ಒಂದು ಜಾಸ್ತಿ ಖಾತೆ ಕೊಟ್ಟರು ಹಾಗೆಯೇ ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಅದೇನು ಕೆಟ್ಟ ಹೆಸರು ಬರಲಿ ಎಂದೋ ಆ ಇಲಾಖೆಯನ್ನು ಕೊಟ್ಟರೋ ಅಥವಾ ಯಾವ ಉದ್ದೇಶದಿಂದ ಆ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಅವರಿಗೆ ಕೊಟ್ಟರೋ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ಎಸ್‌ಎಲ್‌ಡಿಬಿ ಬ್ಯಾಂಕ್ ಅದೇ ಕೆಲಸ ಮಾಡುತ್ತಿದೆ. ದೀರ್ಘಾವಧಿ ಸಾಲಗಳೆಂದು ಏನು ಕೊಟ್ಟಿದ್ದಾರೆ, ರೈತರಿಗೆ ಕೊಟ್ಟಿರುವುದನ್ನು ಮುಂದುವರಿಸದೇ ಅವರ ಟ್ರ್ಯಾಕ್ಟರ್ಸ್ ಸೀಜ್ ಮಾಡುವುದು ಬೇರೆ ಬೇರೆ ಪದಾರ್ಥಗಳನ್ನು ಸೀಜ್ ಮಾಡಿಕೊಂಡು ಬರುತ್ತಿದ್ದಾರೆ. ಅದರ ಅಧ್ಯಕ್ಷರೂ ಇದೇ ಸದನದ ಸದಸ್ಯರಾದ ಮಾನ್ಯ ಷಡಾಕ್ಷರಿಯವರು. ಅದಕ್ಕೆ ಸುಮಾರು 25-30 ಕೋಟಿ ಸರ್ಕಾರ ಕೊಟ್ಟರೆ, ಜೂನ್‌ವರೆವಿಗೂ ಮುಂದುವರಿಸಿಕೊಂಡು ಹೋಗಿ ಆ ದೀರ್ಘಾವಧಿ ಸಾಲವನ್ನು ಮುಂದುವರಿಸಿಕೊಂಡು ಹೋಗಬಹುದು. ಈಗ ಮಾರ್ಚ್ ಎಂದು ಬಹಳಷ್ಟು ವಸೂಲಾತಿಯಾಗುವುದಿಲ್ಲ, ನಬಾರ್ಡ್‌ನಲ್ಲಿ ರಿಪೇಮೆಂಟ್‌ಗೆ ತೊಂದರೆಯಾಗುತ್ತದೆಂದು ಸಾಕಷ್ಟು ತೊಂದರೆ ಕೊಡುತ್ತಿದ್ದರೆ, ಮಾನ್ಯ ಸಿಂಧ್ಯಾರವರು ಆ ವಿಷಯ ಪ್ರಸ್ತಾಪಿಸಿದರು. ಈ ಕಾರೀಫ್ ಕ್ರಾಫ್ ಹಾಗೂ ಕೋ-ಆಪರೇಟಿವ್ ಸಾಲಗಳು, ಇವತ್ತು ಎಸ್‌ಎಲ್‌ಡಿಬಿ ಬ್ಯಾಂಕ್‌ಗಳಿಗೂ ಅದೇ ಪರಿಸ್ಥಿತಿ ಬಂದಿದೆ. ಆದ್ದರಿಂದ ವಸೂಲಾತಿ ಬಂದ್ ಮಾಡಿ, ಅದನ್ನು ಮುಂದಕ್ಕೆ ಹಾಕಬೇಕು.

ಶ್ರೀ ಎಸ್.ಎಸ್. ಪಾಟೀಲ್:- ವಸೂಲಿಗೆಂದು ಆ ನೌಕರನನ್ನು ಮನೆಗೆ ಕಳುಹಿಸಿ ಅವರೇನಾದರೂ ಮಾಡಿದರೆ ಅವರ ಮೇಲೆ ಇವರು ಅಟ್ರಾಸಿಟಿ ಕೇಸ್ ಹಾಕಲಿಕ್ಕೆ ಪ್ರಾರಂಭಿಸಿದ್ದಾರೆ. ಒಬ್ಬ ಹರಿಜನ ಸಿಪಾಯಿ ಕರೆದುಕೊಂಡು ಹೋಗಿ, ಈ ರೀತಿ ನಡೆಯುತ್ತಿದೆ. ಒಬ್ಬ ಹರಿಜನ ಸಿಪಾಯಿಯನ್ನು ಕರೆದುಕೊಂಡು ಹೋಗಿ ಆ ರೈತನ ಮೇಲೆ ನನಗೆ ಹೊಲೆಯ ಎಂದ ಎಂದು ಹೇಳಿ ಅವನ ಮೇಲೆ ಫಿರ್ಯಾದಿ ಕೊಟ್ಟು ಆ ರೈತನ ಮೇಲೆ ಅಟ್ರಾಸಿಟಿ ಕೇಸ್ ಹಾಕುವುದು ಪ್ರಾರಂಭವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಹಿಂದುಳಿದವರ್ಗದವರಿಗೆ ಕಂಡರೆ ನಿಮಗೆ ಅಲರ್ಜಿ, ಅಲ್ಪಸಂಖ್ಯಾತರ ವಿಚಾರ ಎಂದರೆ ನಿಮಗೆ ಅಲರ್ಜಿ, ದಲಿತರು ಅಂದರೆ ನಿಮಗೆ ಅಲರ್ಜಿ, ರೈತರು ಎಂದರೆ ನಿಮಗೆ ಅಲರ್ಜಿ, ಇನ್ನು ಯಾರ ಪರವಾಗಿ ನೀವು ಇದ್ದೀರಿ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಸಣ್ಣ ನೀರಾವರಿ ಇಲಾಖೆಯಲ್ಲಿ 200 ಕೋಟಿ ರೂಪಾಯಿ ಬಾಕಿ ಬಿಲ್ ಪೆಂಡಿಂಗ್ ಇದೆ ಎಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಬರವಣಿಗೆಯಲ್ಲಿ ಉತ್ತರ ಕೊಟ್ಟರು. ಆನ್ ಗೋಯಿಂಗ್ ವರ್ಕ್ಸ್ ಕಂಪ್ಲೀಟ್ ಆಗಬೇಕಾದರೆ 400 ರಿಂದ 500 ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರೆ. ಈ ವರ್ಷ ಏನು ಮಾಡಿದ್ದಾರೆಂದರೆ ಎಲ್ಲಾ ವರ್ಕ್ಸ್‌ಗೂ ಸಹಿತ 50 ಸಾವಿರದಿಂದ ಒಂದು ಲಕ್ಷ ರೂವರೆಗೆ ಅಲಾಟ್‌ಮೆಂಟ್ ಮಾಡಿದ್ದಾರೆ. ಇವರಿಗೆ ನಾವು ಏನು ಹೇಳುವುದು? ಈ ಸರ್ಕಾರ ಯಾರ ಪರವಾಗಿದೆ ಎಂದು ನಾವು ಹೇಳಬೇಕಾಗುತ್ತದೆ, ಆದ್ದರಿಂದ, ಈ ಆಯವ್ಯಯ ಬಡವರ ಪರವಾಗಿ ಇರತಕ್ಕಂಥ ಆಯವ್ಯಯ ಖಂಡಿತವಾಗಿಯೂ ಅಲ್ಲ. ಇದು ಚುನಾವಣೆಗೋಸ್ಕರ

ಬರೀ ಶಬ್ದಾಲಂಕಾರಗಳು, ಆ ಶಬ್ದಗಳು ಹಾಗೂ ಕೆಲವು ಘೋಷಣೆಗಳನ್ನು ಮಾಡಿಕೊಂಡು ಹೋಗಿದ್ದಾರೆಯೇ ಹೊರತು ಇದರಲ್ಲಿ ನಿಜವಾದ ಕಸರತ್ತೇನು ಮಾಡಬೇಕು, ದಕ್ಷತೆಯಿಂದ ಆಡಳಿತವನ್ನು ನಡೆಸಬೇಕು, ತಹಬಂದಿನಲ್ಲಿಟ್ಟುಕೊಳ್ಳಬೇಕು, ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಏನು ಇದೆ ಅದಕ್ಕೆ ಸಂಪೂರ್ಣವಾಗಿ ತಿಲಾಂಜಲಿ ಇಟ್ಟಿದ್ದೀರಿ.

4.30 ಪಿಎಂ

ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ ಕಂಪನಿಗಳನ್ನು ದಯವಿಟ್ಟು ಸೇವ್ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ ಬೇರೆ ಏನಾದರೂ ಪಾಪದ ಕೆಲಸಮಾಡಿದರೂ ಕೂಡ ಪರವಾಗಿಲ್ಲ. ಆದರೆ, ಕಾಂಟ್ರ್ಯಾಕ್ಟ್ ಕ್ಯಾರೇಜ್ ಆ್ಯಕ್ಟ್‌ನ್ನು ರದ್ದು ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ, ನಾವೇನೂ ಇಲ್ಲಿ ಶಾಶ್ವತವಾಗಿ ಇರುವುದಿಲ್ಲ. ಇದೇನಾದರೂ ಒಂದು ಸಾರಿ ಬಂದರೆ ಇನ್ನು ಆರು ತಿಂಗಳೊಳಗಾಗಿ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯಲ್ಲಿರತಕ್ಕಂಥ ಸುಮಾರು 40 ಸಾವಿರ ಜನ ನೌಕರರಿಗೆ ವಿ.ಆರ್.ಎಸ್. ಕೊಡಬೇಕಾಗಿರತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಎನ್ನತಕ್ಕಂಥ ಒಂದು ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಣೇಬರಹ ಚೆನ್ನಾಗಿಲ್ಲವೆಂದು ಕಾಣುತ್ತದೆ. ಏಕೆಂದರೆ, ಅವರು ಗೃಹ ಸಚಿವರಾದ ಮೇಲೆ ದಿನಕ್ಕೊಂದು ವಿಚಿತ್ರವಾದ ಘಟನಾವಳಿಗಳು ನಡೆಯುತ್ತಿವೆ. I don't know what has happened. ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ನನಗೆ ಅರ್ಥ ಆಗುತ್ತಿಲ್ಲ. ಮಕ್ಕಳನ್ನು ಅಪಹರಣ ಮಾಡಿರತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ಓದಿದರೆ ನಿಮಗೂ ಕೂಡ ಕರುಣೆ ಬರಬಹುದೆಂದು ನಾನು ಊಹೆ ಮಾಡಿಕೊಳ್ಳಬಲ್ಲೆ. ಇದಕ್ಕೆ ತಾವು ಏನಾದರೊಂದು ಕ್ರಮ ತೆಗೆದುಕೊಳ್ಳಬೇಕು. ಇವತ್ತಿನದಿವಸ ಆನ್‌ಲೈನ್ ಲಾಟರಿ, ಮಟ್ಕಾ, ಗ್ಯಾಂಬ್ಲಿಂಗ್ ಮತ್ತು ಕ್ಲಬ್‌ಗಳಿಗೆ ಮಾನ್ಯ ಮುಖ್ಯಮಂತ್ರಿಯವರೇ ಇನ್ ಡೈರೆಕ್ಟ್ ಆಗಿ ಎನ್ಕರೇಜ್ ಮಾಡುತ್ತಿದ್ದಾರೆ. ಆನ್ ಲೈನ್ ಲಾಟರಿ ನಿಲ್ಲಿಸಬೇಕಾದರೆ, ಹೆಣ್ಣುಮಕ್ಕಳು ಅವರ ಗಂಡಂದಿರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತಿಯವರು ಹೇಳಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಯೊಬ್ಬರು ಹೇಳತಕ್ಕಂಥ ಮಾತೇ? ಯಾರಾದರೂ ಸನ್ಯಾಸಿಗಳು ಅಥವಾ ಇತರರು ಹೇಳತಕ್ಕಂಥ ಮಾತು ಇದಾಗಿದೆ. ಆದರೆ, ಇದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ ಎಂದರೆ ಇದು ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಕೊನೆಯದಾಗಿ ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ವೀರಾವೇಷದಿಂದ ಒಂದು ಮಾತನ್ನು ಹೇಳಿದ್ದಾರೆ. ಇಲ್ಲಿ ಮಾನ್ಯ ಆತ್ಮಾನಂದರವರು ಕಾಣುತ್ತಿಲ್ಲ. ಮಾನ್ಯ ಜಿ.ಮಾದೇಗೌಡರ ನಾಯಕತ್ವದಲ್ಲಿ ನಾವೆಲ್ಲಾ ಒಂದು ಸಭೆ ಸೇರಿದ್ದವು. ಇದರಲ್ಲಿ ಮಾನ್ಯ ನಂಜುಂಡಸ್ವಾಮಿಯವರು ಮತ್ತು ಕಾವೇರಿ ಜಲಾಯನ ಪ್ರದೇಶಗಳಾದ ಹಾಸನ, ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ, ಚಾಮರಾಜನಗರ ಹಾಗು ಮೈಸೂರು ಜಿಲ್ಲೆಗಳ ಜನ ಪ್ರತಿನಿಧಿಗಳೆಲ್ಲರೂ ಸೇರಿದ್ದರು. ಇವತ್ತಿನದಿವಸ ಅಲ್ಲಿರತಕ್ಕಂಥ ಸ್ಟ್ಯಾಂಡಿಂಗ್ ಕ್ರಾಪ್‌ಗೆ 16 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಹೋರಾಟ ಏಪ್ರಿಲ್ ತಿಂಗಳ 7ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ನಮಗೆ ನೀರು ಕೊಡಿ ಎಂದು ರೈತರು ಮಂಡ್ಯದಿಂದ ವಿಧಾನಸೌಧದವರೆಗೆ ಚಳುವಳಿಯನ್ನು ಪ್ರಾರಂಭ ಮಾಡುತ್ತಾರೆ. ದಯಮಾಡಿ ಇದಕ್ಕೆ ಪರಿಹಾರವನ್ನು ಕೊಡತಕ್ಕಂಥ

ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇವತ್ತಿನದಿವಸ ನೀರು ಇಲ್ಲದೆ ಸುಮಾರು 85 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದು ನಿಂತಿರತಕ್ಕಂಥ ಕೂಳೆ ಕಬ್ಬು ಸತ್ತು ಹೋಗತಕ್ಕಂಥ ಪರಿಸ್ಥಿತಿ ಇದೆ. ಮುಂದಿನ ಚುನಾವಣೆ ಹೊತ್ತಿಗೆ ಕಾಲಿಡದೇ ಇರತಕ್ಕಂಥ ಮದ್ದೂರಿನಲ್ಲಿ ಬರುತ್ತದೆ. ಈ ಒಂದು ಪರಿಸ್ಥಿತಿ ಖಂಡಿತ ಆಗುತ್ತದೆ, ಇದರಲ್ಲಿ ಡೌಟ್ ಇಟ್ಟುಕೊಳ್ಳಬೇಡಿ. ಈಗಾಗಲೇ ಅಲ್ಲಿ ಬೆಳೆದಿರತಕ್ಕಂಥ ಬೆಳೆಗೆ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಕಳೆದ ಸಾರಿ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾನ್ಯ ನಾಗಪ್ಪನವರ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಸಂಜೆವಾಣಿ ಪತ್ರಿಕೆಯಲ್ಲಿ ಪ್ರತಿದಿವಸ ಒಂದು ವಿಚಾರ ಬರುತ್ತಿದೆ. ಅದೇನೆಂದರೆ, ವೀರಪ್ಪನ್‌ನ ಅಂತಿಮ ಭೇಟಿ 108, 109, 110ನೇ ದಿನ ಎಂದು ಬರುತ್ತಿದೆ. ನೀವು ತೆಗೆದುಕೊಳ್ಳತಕ್ಕಂಥ ಕ್ರಮದ ಬಗ್ಗೆ ಅವರು ಬರೆಯುತ್ತಿದ್ದಾರೆಂದು ತಾವು ತಿಳಿದುಕೊಳ್ಳಬೇಡಿ. ನಿಮ್ಮನ್ನು ಟೀಸ್ ಮಾಡುವುದಕ್ಕೆ ಅವರು ಬರೆಯುತ್ತಿದ್ದಾರೆ. ವೀರಾವೇಷದ ಮಾತುಗಳನ್ನು ನೀವು ಹೇಳಿ, ಈಗ ನಿಮ್ಮ ಕೈಯಲ್ಲಿ ಆಗಲಿಲ್ಲ ಎಂದು ಅವರು ಪತ್ರಿಕೆಯಲ್ಲಿ ಬರೆಯುತ್ತಿದ್ದಾರೆ. It is ok. I have a different view about the whole thing. I am not cajoling the Police Department or the Home Minister. ಈ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಹೇಳುವುದೇನೆಂದರೆ, ಮಾನ್ಯ ನಾಗಪ್ಪನವರನ್ನು ಕೊಂದಿರತಕ್ಕಂಥವರು ಯಾರು ಎನ್ನತಕ್ಕಂಥ ಪ್ರಶ್ನೆ ನಮ್ಮ ಮುಂದೆ ಇದೆ. ಇದಕ್ಕೆ ಇನ್ನು ಉತ್ತರ ಸಿಕ್ಕಿಲ್ಲ. ಜುಡಿಷಿಯಲ್ ಕಮೀಷನ್ ಕೂಡ ಇದರ ಬಗ್ಗೆ ಎನ್‌ಕ್ವಯರಿ ಮಾಡಿದ್ದಾರೆ. ಮತ್ತೆ ಯಾರಾದರೂ ಹೇಳಿಕೆ ಕೊಡುವವರು ಇದ್ದರೆ ಬರಬಹುದೆಂದು ಜುಡಿಷಿಯಲ್ ಕಮೀಷನ್‌ರವರು ಮತ್ತೆ ಒಂದೆರಡು ಸಾರಿ ಟೈಂ ಎಕ್ಸ್‌ಟೆನ್‌ಷನ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಹೋರಾಟ ಇನ್ನೂ ಮುಗಿದಿಲ್ಲ. ವಿಧಾನಸಭೆಯ ಅಧಿವೇಶನ ಇತ್ತು ಎಂಬ ಕಾರಣದಿಂದ ನಮ್ಮ ಹೋರಾಟವನ್ನು ನಿಲ್ಲಿಸಿದ್ದೇವೆ. ನಮ್ಮ ಹೋರಾಟ ಮತ್ತೆ ಮುಂದುವರಿಯುತ್ತದೆ. ಆ ವಿಷಯದ ಬಗ್ಗೆ ಸತ್ಯಾನ್ವೇಷಣೆ ಆಗಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯದ ಪೊಲೀಸರಿಬ್ಬರೂ ಸೇರಿಕೊಂಡು ಮಾನ್ಯ ನಾಗಪ್ಪನವರನ್ನು ಹತ್ಯೆ ಮಾಡಿದ್ದಾರೆ. ಇದರಲ್ಲಿ ನನಗೆ ಯಾವುದೇ ರೀತಿಯ ಸಂಶಯವಿಲ್ಲ. ಇದು ನನ್ನ ಆಪಾದನೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಅನೇಕ ಮಾಹಿತಿಗಳನ್ನು ಸಂಗ್ರಹ ಮಾಡಿದ್ದೇನೆ. ಆದ್ದರಿಂದ ನಾನು ಈ ವಿಷಯವನ್ನು ನೇರವಾಗಿ ಹೇಳುತ್ತಿದ್ದೇನೆ. ಇದರಲ್ಲಿ ತಪ್ಪಿತಸ್ಥರು ಯಾರು ಎನ್ನತಕ್ಕಂಥದ್ದನ್ನು ಇವತ್ತಿನದಿವಸ ಸಿ.ಬಿ.ಐ. ನವರು ಮಾತ್ರ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನೀವು ಹೆದರತಕ್ಕಂಥ ಅವಶ್ಯಕತೆ ಇಲ್ಲ. ನನಗೆ ಗೊತ್ತಿರುವ ಹಾಗೆ ಸಿ.ಬಿ.ಐ. ಅಧಿಕಾರಿಗಳು They are above Board. ಸದರಿ ಘಟನೆ ಈ ರೀತಿ ಆಯಿತೆಂದು ನಮ್ಮ ಹತ್ತಿರ ಇರತಕ್ಕಂಥ ಅನೇಕ ಜನರು ನನ್ನ ಹತ್ತಿರ ಬಂದು ಹೇಳಿದ್ದಾರೆ. ಹಾಗೆಯೇ ಇವರು ನಿಮ್ಮ ಹತ್ತಿರ ಕೂಡ ಬಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಮಾನ್ಯ ನಾಗಪ್ಪನವರ ಹತ್ಯೆ ಪ್ರಕರಣವನ್ನು ಪತ್ತೆಯಾಗಬೇಕಾದರೆ ಸಿ.ಬಿ.ಐ.ರವರಿಂದ ತನಿಖೆ ಮಾಡಿಸತಕ್ಕಂಥದ್ದು ಅನಿವಾರ್ಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆಯವ್ಯಯದ ಬಗ್ಗೆ ಹೇಳುವುದಾದರೆ, ನಿಜವಾಗಿಯೂ ಸಹ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯವರು ಮಂಡಿಸತಕ್ಕಂಥ ಆಯವ್ಯಯ ಇದಲ್ಲ. ಇದೊಂದು ಬಡವರ ವಿರುದ್ಧ

ಮತ್ತು ಹಿಂದುಳಿದ ವರ್ಗದ ಜನರಿಗೆ ಇದರಲ್ಲಿ ಸಂಪೂರ್ಣವಾಗಿ ತಿಲಾಂಜಲಿ ಹೇಳಿದ್ದಾರೆ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ 28 ಪರ್ಸೆಂಟ್ ಒ.ಬಿ.ಸಿ. ಜನಸಂಖ್ಯೆ ಇದೆ ಹಾಗೆಯೇ 12 ಪರ್ಸೆಂಟ್ ಅಲ್ಪಸಂಖ್ಯಾತರು ಮತ್ತು 24 ಪರ್ಸೆಂಟ್ ಎಸ್‌ಸಿ/ಎಸ್‌ಟಿ ಜನರಿದ್ದಾರೆ. ಅಂದರೆ, 64 ಪರ್ಸೆಂಟ್ ಇರತಕ್ಕಂಥ ಜನರ ಪರವಾಗಿ 24 ಸಾವಿರ ಕೋಟಿ ರೂಪಾಯಿ ಬಜೆಟ್‌ನಲ್ಲಿ ಈ ಒಂದು ವರ್ಗಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ತಿಳಿಸಬೇಕು. What is the programme you have before them? ಇವತ್ತಿನದಿವಸ ಆಸ್ಪತ್ರೆಗಳನ್ನು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಿ. ಹಾಗೆಯೇ, ಸಿ.ಇ.ಟಿ. ಮುಗಿಸಿಬಿಡುತ್ತಿದ್ದೀರಿ. ಇವತ್ತಿನದಿವಸ ಎಲ್ಲಾ ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರ್ ಕಾಲೇಜುಗಳ ಲಾಬಿಗೆ ತಾವು ಒಳಗಾಗಿದ್ದೀರಿ. ಇನ್ನು ದೇವರಾಜಅರಸುರವರ ಹೆಸರು ಹೇಳುತ್ತಾ, ದೇವರಾಜ್ ಅರಸ್‌ರವರ ವಿಚಾರಗಳ ಶವ ಪೆಟ್ಟಿಗೆಗೆ ಕೊನೆಯ ಮೊಳೆಯನ್ನು ಹೊಡೆಯತಕ್ಕಂಥ ಪಾಪದ ಕೆಲಸವನ್ನು ನೀವು ಮಾಡಿದ್ದೀರಿ. ಸನ್ಮಾನ್ಯ ಉಪಾಧ್ಯಕ್ಷರೆ, ತಾವು ಬೆಲ್ ಹೊಡೆಯದೆ ನನಗೆ ಸಹಕಾರ ಕೊಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):- ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಿಂಧ್ಯಾರವರು ಮಾತನಾಡಿದ ನಂತರ ನಾನು ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಏಕೆಂದರೆ ಒಬ್ಬ ಸೀನಿಯರ್ ಲಾಯರ್ ಆರ್ಗ್ಯು ಮಾಡಿದ ನಂತರ ಒಬ್ಬ ಜ್ಯೂನಿಯರ್ ಲಾಯರ್ ಆರ್ಗ್ಯು ಮಾಡತಕ್ಕಂಥದ್ದು ಸರಿಯಲ್ಲ. ಒಂದು ವೇಳೆ ಆರ್ಗ್ಯು ಮಾಡಿದರೂ ಕೂಡ ಅದು ಲೆಕ್ಕಕ್ಕೆ ಬರುವುದಿಲ್ಲ. ಆದರೂ ಕೂಡ ಕೆಲವು ಸಲಹೆಗಳನ್ನು ಕೊಡಲಿಕ್ಕೆ ನಾನು ಸಿದ್ದನಾಗಿದ್ದೇನೆ. ಈಗಾಗಲೇ ಮಾನ್ಯ ಸಿಂಧ್ಯರವರು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಜ್ಯುಡಿಷಿಯರಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಡಿಮಾಂಡ್ ಅದರಲ್ಲಿ ಇಲ್ಲ. ಏಕೆಂದರೆ ಜ್ಯುಡಿಷಿಯರಿಯನ್ನು ಪ್ರತ್ಯೇಕವಾದ ಇಲಾಖೆ ಎಂದು ಮಾನ್ಯ ಚಂದ್ರೇಗೌಡರು ಮಾಡಬೇಕಾಗಿತ್ತು. ಆದರೆ, ಇದನ್ನು ಮಾಡಿಲ್ಲ. ಕಾರಣ ಏನೆಂದರೆ, ಜ್ಯುಡಿಷಿಯರಿಯ ಯಾವುದೇ ಒಂದು ಡಿಮಾಂಡ್ ಇದ್ದರೂ ಕೂಡ ಅದು ಡಿಪಿಎಆರ್ ಇಲಾಖೆಗೆ ಬರಬೇಕು. ಅನಂತರ, ಇದು ಆರ್ಥಿಕ ಇಲಾಖೆಗೆ ಹೋಗಬೇಕು. ಮತ್ತೆ ಕಾನೂನು ಇಲಾಖೆಗೆ ಬರುತ್ತದೆ. ಇದರಿಂದ ಬಹಳ ದೊಡ್ಡ ತೊಂದರೆಯಾಗುತ್ತದೆ. ಅನಂತರ ತಮಗೆಲ್ಲಾ ಗೊತ್ತಿರುವ ಹಾಗೆ Appointment of Administrative Judges for the Administrative Tribunal, ಅಡ್ಮಿನಿಸ್ಟ್ರೇಷನ್ ಟ್ರಿಬ್ಯುನಲ್‌ನಲ್ಲಿದ್ದಂಥ ನ್ಯಾಯಮೂರ್ತಿಗಳು ನಿವೃತ್ತಿಯಾಗಿ ಆರು ತಿಂಗಳಾಗಿದೆ. ಆದರೆ, ಇದುವರೆಗೂ ಅಲ್ಲಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಿಲ್ಲ. ಅಲ್ಲಿ ಇಬ್ಬರು ನ್ಯಾಯಮೂರ್ತಿಗಳು ಮಾತ್ರ ಇದ್ದಾರೆ. ಆದ್ದರಿಂದ, ಅಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಇವತ್ತಿನದಿವಸ ಡಿವಿಜನಲ್ ಕಮೀಷನರ್ ಮುಂದೆ ಸುಮಾರು 3 ಸಾವಿರ ಅಪೀಲ್‌ಗಳು ಬೆಂಗಳೂರಿನಲ್ಲಿ ಪೆಂಡಿಗ್ ಇವೆ. ಈಗ ಈ ಎಲ್ಲಾ ಅಪೀಲ್ಸ್ ಕೆ.ಎ.ಟಿ. ಮುಂದೆ ಬಂದಿದೆ. ಅವರು, ಇದುವರೆಗೂ ಸದರಿ ಕೇಸ್‌ಗಳನ್ನು ಓಪನ್ ಮಾಡಿಲ್ಲ. ಏಕೆಂದರೆ, ಅಡಿಷನಲ್ ಜಡ್ಜಸ್ ಕೋರ್ಟ್ ಸ್ಯಾಂಕ್ಷನ್ ಆದರೆ ಮಾತ್ರ ಕೆಲಸ ಮಾಡುವುದಕ್ಕೆ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಇವತ್ತಿನದಿವಸ ಈ ಒಂದು ಕಾರಣದಿಂದ ಸುಮಾರು 3 ಸಾವಿರ ಕೇಸಸ್ ಡಿವಿಜನಲ್ ಕಮೀಷನರ್‌ನಿಂದ ಕೆ.ಎ.ಟಿ.ಗೆ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ಮಸೂದೆಯನ್ನು ತಯಾರು ಮಾಡಲಾಗಿದೆ. After the abolition of the Division Commissioners, now the bill is brought before the House for your approval. Why don't you look into it?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಅಡ್ಮಿನಿಸ್ಟ್ರೇಶನ್ ಟ್ರಿಬ್ಯುನಲ್‌ಗೆ ನಾಲ್ಕು ಜನ ಜಡ್ಜ್‌ಗಳನ್ನು ನೇಮಕ ಮಾಡಬೇಕಾಗುತ್ತದೆ. All cases were referred to Tribunal. ಆದರೆ ಇದುವರೆಗೂ ಮಾಡಿಲ್ಲ. You have not made any arrangements.

Sri D.B. Chandre Gowda:- The Bill is slated for discussion, I don't know why...

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಬೇರೆ ಏನದರೂ ಆಲ್ಟನೇಟಿವ್ ವ್ಯವಸ್ಥೆಯನ್ನು ಮಾಡಬೇಕಲ್ಲವೇ? ಆದರೆ, ನೀವು ಯಾವುದೇ ಆಲ್ಟನೇಟಿವ್ ವ್ಯವಸ್ಥೆಯನ್ನು ಮಾಡಿಲ್ಲ. Many cases are pending, appeals were pending, Revision petitions were pending and so many cases were pending. ಈಗಾಗಲೇ ಅಲ್ಲಿ 3 ಸಾವಿರ ಕೇಸ್‌ಗಳು ಪೆಂಡಿಂಗ್ ಇದೆ. ಇದಕ್ಕೆ ಫರ್ದರ್ ಏನು ಮಾಡಿದ್ದೀರಿ? ಏಕೆಂದರೆ, ಅವರು ಏನು ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ 36 ತಾಲ್ಲೂಕುಗಳಲ್ಲಿ ಕೋರ್ಟ್ ಕಟ್ಟಡಗಳು ಸರಿಯಾಗಿ ಇಲ್ಲದೇ ಇರುವುದರಿಂದ ಕೋರ್ಟಿನ ಕೆಲಸ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ. ಈ ವಿಚಾರವನ್ನು ನಾವು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇವೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ತಾವು ಇದುವರೆಗೂ ಏನು ಅರೇಂಜ್‌ಮೆಂಟ್ ಮಾಡಿಲ್ಲ. ಇನ್ನು ಕೋರ್ಟ್ ಅವರ್ ಬಗ್ಗೆ ಈಗಾಗಲೇ ತಮಗೆ ಮೆಮೊರ್‍ಯಾಂಡಮ್ ಕೊಟ್ಟಿದ್ದೇವೆ. ಮತ್ತೆ ತಾವು ಕೂಡ ವಕೀಲರ ಸಂಘದ ಜೊತೆ ಮಾತನಾಡಿದ್ದೀರಿ. ಆದರೆ, ಇದರ ಬಗ್ಗೆ ಇದುವರೆಗೂ ಏನೂ ಆಗಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಸುಬ್ಬಾರೆಡ್ಡಿಯವರೇ, ಒಂದು ನಿಮಿಷ, ಈಗ ತಾವು ವಕೀಲರಾಗಿದ್ದು, ಎರಡು ವಿಷಯಗಳನ್ನು ಪ್ರಮುಖವಾಗಿ ಮಾತನಾಡುತ್ತಿದ್ದೀರಿ. ನ್ಯಾಯಾಲಯಗಳಲ್ಲಿ ಕೇಸುಗಳು ಹೆಚ್ಚು ಪೆಂಡಿಂಗ್ ಇದೆ ಎಂದೂ ಸಹ ತಾವು ಹೇಳುತ್ತಿದ್ದೀರಿ. ಮತ್ತೆ ಅದೇ ರೀತಿಯಾಗಿ ಈ ಕೋರ್ಟ್ ಟೈಮಿಂಗ್ಸ್ ಬಗ್ಗೆಯೂ ಸಹ ಪ್ರಸ್ತಾಪ ಮಾಡುತ್ತಿದ್ದೀರಿ, ಕೋರ್ಟ್ ಟೈಮಿಂಗ್ಸ್‌ನ್ನು ತೀರ್ಮಾನ ಮಾಡುವುದಕ್ಕೆ ಸರ್ಕಾರಕ್ಕೆ ಜವಾಬ್ದಾರಿಯಿಲ್ಲ. Judiciary is independent. That is the concern of the judiciary. I think, there is no point in arguing that matter here before the House. ಈಗ ತಾವು ಕೋರ್ಟುಗಳಲ್ಲಿ ಕೇಸುಗಳು ಜಾಸ್ತಿ ಪೆಂಡಿಂಗ್ ಇದೆ ಎಂದು ಹೇಳುತ್ತಿದ್ದೀರಿ, ಲಾಯರ್‌ಗಳು ಅರ್ಧಗಂಟೆ ಜಾಸ್ತಿ ಕೆಲಸ ಮಾಡಿ ಎಂದು ಹೇಳಿದರೆ ಅದಕ್ಕೆ ತಾವು ವಿರೋಧ ಮಾಡುತ್ತೀರಿ. ಏಕೆ ಈ ತರಹದ ದ್ವಂದ್ವ ನೀತಿಯನ್ನು ಅನುಸರಿಸುತ್ತಿದ್ದೀರಿ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ತಾವು ಹಿಂದೆ ಲಾಯರ್ ಆಗಿದ್ದೀರಿ; ನ್ಯಾಯಾಧೀಶರಾಗಿದ್ದಿರಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಅರ್ಧ ಗಂಟೆ ಜಾಸ್ತಿ ಕೆಲಸ ಮಾಡಿ ಎಂದು ಹೇಳಿದರೆ ಅದಕ್ಕೆ ಇಡೀ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಿಕ್ಕೆ ತಾವು ನೇತೃತ್ವ ವಹಿಸುತ್ತೀರಿ.

ಕೇಸುಗಳು ಪೆಂಡಿಂಗ್ ಇದೆ ಎಂದೂ ಸಹ ತಾವು ವಾದ ಮಾಡುತ್ತೀರಿ. ಯಾವುದಾದರೂ ಒಂದಕ್ಕೆ ಸ್ಟಿಕನ್ ಆಗಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಬಹುಶಃ ಅವರಿಗೆ ವಕೀಲ ವೃತ್ತಿಯನ್ನು ಮರೆತು ಹೋಗಿದ್ದಾರೆ. ಆಮೇಲೆ ನ್ಯಾಯಮೂರ್ತಿಗಳ ಕೆಲಸವೂ ಸಹ ಮರೆತುಹೋಯಿತು. ಏಕೆಂದರೆ ಶಾಸಕರು ಆದ ಮೇಲೆ ತಮಗೆ ಕೋರ್ಟುಗಳ ಬಗ್ಗೆ ಅನುಭವವಿಲ್ಲ. ಮೊದಲನೆಯದು ಏನೆಂದರೆ, 36 ತಾಲ್ಲೂಕುಗಳಲ್ಲಿ ಕೋರ್ಟು ಬಿಲ್ಡಿಂಗ್‌ಗಳು ಇಲ್ಲವೆಂದು ಹೇಳುತ್ತಿದ್ದೇನೆ. ಎರಡನೆಯದು, ಸಮಯವನ್ನು 10-30 ಗಂಟೆಗೆ ಮಾಡಿರುವುದು ವಕೀಲರುಗಳಿಗೆ ಬಹಳ ತೊಂದರೆಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಏಕೆಂದರೆ, ಇವತ್ತಿನದಿವಸ ಸಿವಿಲ್ ಕೋರ್ಟ್ಸ್‌ಗೆ ರಜಾವನ್ನು ಡಿಕ್ಲೇರ್ಡ್ ಮಾಡಬೇಕಾದರೆ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆ್ಯಕ್ಟ್‌ನಲ್ಲಿ ಗೌರ್ನಮೆಂಟ್‌ನವರು ಮಾಡಬೇಕು, ಆಮೇಲೆ ಟೈಮಿಂಗ್ಸ್ ಫಿಕ್ಸ್ ಆಗಿರುವುದು ಕೂಡ ಬಹಳ ಹಿಂದೆಯೇ ಆಗಿರುವುದು ಹೈಕೋರ್ಟಿಗೂ ಅದಕ್ಕೂ ಜ್ಯೂರಿಸ್‌ಡಿಕ್ಷನ್ ಇಲ್ಲ. ಹೈಕೋರ್ಟಿನವರು 10-30 ರಿಂದ 5-30ರ ಸಮಯದವರೆವಿಗೆ ಮಾಡಿರುವುದು ಅದು ತಪ್ಪೆಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ನಾವು ಲಾಯರ್ ಮತ್ತು ನ್ಯಾಯಮೂರ್ತಿಗಳ ಮಧ್ಯೆ ನಿಲ್ಲಬೇಕೆಂದು ಎದ್ದಿಲ್ಲ. ನ್ಯಾಯಮೂರ್ತಿಗಳು ವಾಸ್ತವಿಕವಾದ ಸಂಗತಿಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ನೀವು ಅದನ್ನು ಮಾಡಿರುವುದು ತಪ್ಪೆಂದು ಹೇಳುತ್ತಿದ್ದೀರಿ, ನಾವು ಅದರ ಬಗ್ಗೆ ಚರ್ಚೆ ಮಾಡಿದಾಗ ಸರ್ವೋಚ್ಚ ನ್ಯಾಯಾಲಯ ಈ ರೀತಿಯಾಗಿ ಆದೇಶವನ್ನು ಕೊಟ್ಟಿದೆ, ಆ ಆದೇಶವನ್ನು ನಾವು ಪಾಲನೆ ಮಾಡುತ್ತೇವೆ ಎಂದು ಹೈಕೋರ್ಟ್‌ನವರು ಹೇಳುತ್ತಾರೆ. ಸರ್ಕಾರ ಏನು ಮಾಡುವುದಕ್ಕೆ ಸಾಧ್ಯವೆಂದು ಹೇಳಿದರೆ ಆ ರೀತಿಯಾಗಿ ನಾವು ಮಾಡಬಹುದು, ಈ ವಿಚಾರದಲ್ಲಿ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಅವರು ತಪ್ಪು ಮಾಡಿದ್ದಾರೆ ಎಂದರೆ ಏನು ಮಾಡುವುದಕ್ಕಾಗುತ್ತದೆ? ಇದರ ಬಗ್ಗೆ ಸಂವಿಧಾನ ಬೆಂಚ್ ತೀರ್ಮಾನವನ್ನು ಕೊಟ್ಟಿದೆ. ಅದು ತಪ್ಪೆಂದು ಹೇಳುವುದಕ್ಕೆ ನಮಗೆ ಅಧಿಕಾರವಿದೆಯೇನು?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಹೈಕೋರ್ಟ್ ರಜೆಯನ್ನು ಕೊಡಬೇಕಾದರೆ ಚೀಫ್ ಜಸ್ಟೀಸ್ ಕೊಡುತ್ತಾರೆ. ಸಿವಿಲ್ ಕೋರ್ಟುಗಳಿಗೆ ರಜೆಯನ್ನು ಕೊಡಬೇಕಾದರೆ ಸರ್ಕಾರದವರು ಕೊಡುತ್ತಾರೆ. It is a practice also under the Negotiable Instruments Act, they cannot declare holiday. On the decision of the timings, neither the Bar Association nor the Law Minister was consulted. This is a very serious matter. ನಂತರ ತಮಗೆ ಗೊತ್ತಿದೆ, ಈ ಒಂದು ವಿಷಯದ ಬಗ್ಗೆ ನಮ್ಮ ವಕೀಲ ವೃತ್ತಿಯಲ್ಲಿ ಎಸ್‌ಸಿ:ಎಸ್‌ಟಿಗಳಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಈಗಾಗಲೇ ಕಳೆದ ಎರಡು ತಿಂಗಳುಗಳಿಂದ ನಿಂತು ಹೋಗಿದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಒಂದು ಸಾವಿರ ರೂಪಾಯಿಗಳನ್ನು ಎಸ್‌ಸಿ ಎಸ್‌ಟಿ ಲಾಯರ್‌ಗಳಿಗೆ ಕೊಡುತ್ತಿದ್ದರು, ಅದು ಈಗ ಎರಡು ತಿಂಗಳುಗಳಿಂದ ಕೊಡುತ್ತಿಲ್ಲ. ಇದಕ್ಕೆ ಏನು ಕಾರಣವೆಂಬುದು ಮಾನ್ಯ ಸಚಿವರಾದ ಶ್ರೀ ಕೃಷ್ಣಪ್ಪನವರಿಗೆ

ಗೊತ್ತು, ಇದುವರೆವಿಗೂ ಯಾವ ವಕೀಲರುಗಳಿಗೂ ಬಂದಿಲ್ಲ. ನಂತರ ಇದರ ಜೊತೆಗೆ ಶ್ರೀ ದೇವರಾಜ ಅರಸ್ ಮತ್ತು ಶ್ರೀ ಆರ್.ಗುಂಡುರಾವ್‌ರವರ ಕಾಲದಲ್ಲಿ ಎಲ್ಲಾ ವಕೀಲರು, Who are not affordable to take up legal practice and those who are facing difficulties ಅಂದರೆ ಕಷ್ಟದಿಂದ ಇರತಕ್ಕಂತಹವರಿಗೆ ಯಾವ ರೀತಿಯಲ್ಲಾದರೂ ಅನುಕೂಲಮಾಡುವುದಕ್ಕಾಗಿ ಒಂದು ಸ್ಟೈಫೆಂಡ್ ಕೊಡಬೇಕು ಎನ್ನುವುದು ಇದೆ. ಅದನ್ನು ತಾವು ದಯವಿಟ್ಟು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹಿಂದೆ ವಕೀಲರಾಗಿದ್ದರು, ತಾವೂ ಕೂಡ ವಕೀಲರಾಗಿದ್ದವರು. To attract talented advocates into the profession you have to give some help not only to SC/ST, ಎಸ್‌ಸಿ:ಎಸ್‌ಟಿಗಳಿಗೆ ಕೊಡಲೇಬೇಕು. ಅದರ ಜೊತೆಗೆ ಕಷ್ಟದಲ್ಲಿರುವಂತಹ ವಕೀಲರಿಗೂ ಕೂಡ ಕೊಡಬೇಕು, ಇದರ ಬಗ್ಗೆ ತಮಗೆ ಗೊತ್ತಿದೆ ಈ ಲಿಕ್ಕರ್‌ನಲ್ಲಿರುವಂತಹ ಎಂಪ್ಲಾಯಿಸ್‌ಗಳಿಗೆ ಮೂರು ತಿಂಗಳುಗಳಿಂದ ಸ್ಯಾಲರಿಯನ್ನು ಕೊಟ್ಟಿರುವುದಿಲ್ಲ. ಲಿಕ್ಕರ್‌ನಲ್ಲಿ ಉದ್ಯೋಗಿಗಳಿದ್ದರೆ, ಏನು ನಿಮ್ಮ ಸರ್ಕಾರ ಬಜೆಟ್‌ನಲ್ಲಿ ಬೇಕಾದಷ್ಟು ವಿಷಯಗಳನ್ನು ಸೇರಿಸಿದ್ದೀರಿ, ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ: ಈ ಅನೆಕ್ಸರ್-(4)ರಲ್ಲಿ ತಾವು ನೋಡಬೇಕು ಪ್ರೊಫೆಷನಲ್ ಟ್ಯಾಕ್ಸ್ 600-00 ರೂಪಾಯಿಗಳು ಇದ್ದುದ್ದನ್ನು 1500 ರೂಪಾಯಿಗಳು ಮಾಡಿದ್ದೀರಿ, ಏಕೆಂದರೆ ಲಾಯರ್‌ಗಳಿಗೆ 10 ವರ್ಷಗಳವರೆವಿಗೂ ಪ್ರಾಕ್ಟೀಸ್ ಹೆಚ್ಚಿಗೆ ಇರುವುದಿಲ್ಲ. ಈಗ ಅವರಿಗೆ 600-00 ರೂಪಾಯಿಗಳನ್ನು ಪಿ.ಟಿ. ಹಾಕಿದ್ದು ಅದನ್ನು ಈಗ 1500 ರೂಪಾಯಿಗಳಿಗೆ ಏರಿಸಿದ್ದೀರಿ. 10 ವರ್ಷದ ಮೇಲೆ 2500-00 ರೂ. ಪಿ.ಟಿ. ಎಂದು ಮಾಡಿದ್ದೀರಿ. ಅದರ ಜೊತೆಗೆ ಅನೆಕ್ಸರ್-6ರಲ್ಲಿ ನೋಡಿ ಕೆಲವು ಪ್ರೊಫೆಷನ್ಸ್ ಮೇಲೆ ಹಾಕಿದ್ದೀರಿ ಏನು, ಬಹಳ ಸ್ವಾರಸ್ಯಕರವಾದ ಸಂಗತಿಯನ್ನು ನಿಮಗೆ ಹೇಳುತ್ತಿದ್ದೇನೆ. ನಿಮ್ಮ ಪಾರ್ಟಿಯವರು ಒಬ್ಬರು ಏನಾಗಿದ್ದಾರೆ ಅವರು ಯಾವಾಗಲೂ ಅಸ್ಟ್ರಾಲಜರ್ ಹತ್ತಿರ ಹೋಗುತ್ತಿದ್ದರು ಅವರ ಹತ್ತಿರ ಹೋಗಿ ಅವರು ಯಾವಾಗ ನಾನು ಛೇರ್ಮನ್ ಆಗುವುದು ಎಂದು ಕೇಳುತ್ತಿದ್ದರಂತೆ ಇದು ನಡೆದಿರತಕ್ಕಂತಹ ವಿಷಯ, ಈ ಬಜೆಟ್ ಮಂಡಿಸಿದ ನಂತರ ಆತ ಅವರ ಹತ್ತಿರ ಹೋಗಿದ್ದಾನೆ. ಮೊದಲು ಆತ ಎರಡೂ-ಮೂರು ಸಲ ಅವರ ಹತ್ತಿರ ಹೋಗಿದ್ದ, ಅವರು ನೀನು ಮಂತ್ರಿ ಅಥವಾ ಛೇರ್ಮನ್ ಆಗುತ್ತೀಯಾ ಎಂದು ಆಶ್ವಾಸನೆಯನ್ನು ಕೊಟ್ಟರು. ಅವರು ಪಾಪ ಮಾನ್ಯ ಮುಖ್ಯಮಂತ್ರಿಗಳನ್ನು ಅನೇಕ ಸಾರಿ ಹೋಗಿ ನೋಡಿದ್ದಾರೆ. ಅವರು ನಿಮ್ಮನ್ನೂ ಕೂಡ ನೋಡಿದ್ದಾರೆ, ಅವರ ಹೆಸರು ಹೇಳಬೇಕೆಂದರೆ ನಾನು ಇಲ್ಲಿ ಹೇಳುತ್ತೇನೆ. ಬಜೆಟ್ ಆದ ನಂತರ ಅದು ಪೇಪರ್‌ಗಳಲ್ಲಿ ಈ ಅಸ್ಟ್ರಾಲಜರ್ಸ್‌ಗೆ, ಪಾಮಿಸ್ಟ್ಸ್‌ಗೆ, ಪ್ರೊಫೆಷನಲ್ ಟ್ಯಾಕ್ಸ್ ಹಾಕಿರುವ ವಿಚಾರ ಬಂತು. ಅವರು ಅದನ್ನು ನೋಡಿ ಮಾರನೇ ದಿವಸ ಅವರ ಹತ್ತಿರ ಹೋದರು. ಏನು, ಇವರೇ ನೀವು ನಮ್ಮಂತಹ ಅಸ್ಟ್ರಾಲಜರ್ ಮೇಲೂ ಪ್ರೊಫೆಷನಲ್ ಟ್ಯಾಕ್ಸ್ ಹಾಕಿದ್ದೀರಲ್ಲಾ, ನಿಜವಾಗಿಯೂ ಕೂಡ ನೀನು ಛೇರ್ಮನ್ ಆಗುತ್ತಿದ್ದೆ, ಈಗ ಆಗುವುದು ಬಹಳ ಕಷ್ಟವಿದೆ ಎಂದು ಹೇಳಿದರು. ಅವರಿಗೆ ಬಹಳ ದುಃಖವಾಯಿತು, ಏನು ಇದು ನನಗೆ ಗೊತ್ತಿಲ್ಲವಲ್ಲಾ, ಇದನ್ನು ಯಾವಾಗ ಹಾಕಿದರು, ಏನು ಅಂತ ಅಂದರು. ಅವರು ಇಮಿಡಿಯೇಟಾಗಿ ಪೇಪರ್‌ನ್ನು ಅವರಿಗೆ ತೋರಿಸಿದ, ನೋಡ್ರಿ, ನಾವು ಅಸ್ಟ್ರಾಲಜರ್ ಮೇಲೂ ಕೂಡ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಹಾಕಿಬಿಟ್ಟರಲ್ಲಾ, ನಾವು ಎಲ್ಲೋ ಒಂದು ಕಡೆ ಕಷ್ಟದಲ್ಲಿ ಜೀವನ ಮಾಡುತ್ತಿದ್ದೇವೆ, ಯಾರು ಬರುತ್ತಾರೋ ಅಥವಾ ಇಲ್ಲವೋ, ಯಾರೋ ಒಬ್ಬ ಬಂದಾಗ ನಮಗೆ ಅವರು

ಹಣವನ್ನು ಕೊಟ್ಟರೆ ಕೊಡುತ್ತಾರೆ, ಇಲ್ಲದಿದ್ದರೆ ಇಲ್ಲ. ಅದರಲ್ಲೂ ಕಾಂಗ್ರೆಸ್ ಪಾರ್ಟಿಯವರು ಬಂದರಂತೂ ನಾವು ಏನೂ ಕೇಳುವುದೇ ಇಲ್ಲ ಅಂತ ಹೇಳಿದರು. ಆದರೂ ಕೂಡ ಏನಾಗಿದೆ ಎಂದರೆ, ಅವರುಗಳ ಮೇಲೆ ಈ ಪ್ರೊಫೆಷನಲ್ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಕೆಲವರಿಗೆ ಎಂಥೆಂಥಹವರಿಗೆ ಪಿ.ಟಿ.ಯನ್ನು ಹಾಕಿದ್ದಾರೆಂದರೆ ಇಲ್ಲಿ ನೋಡಿ Astrologers, Astropalmists, Numberologists and Faith healers - (1) in the Bangalore Urban Agglomeration - Rs. 1500 per annum. (ii) in any other area in the State - Rs. 1000 per annum. ತಾಲ್ಲೂಕು ಮತ್ತು ಹಳ್ಳಿಗಳಲ್ಲಿರತಕ್ಕಂಥಹವರಿಗೆ 1000-00 ರೂಪಾಯಿಗಳು. ಇದನ್ನು ತಾವು ದಯವಿಟ್ಟು ಬದಲಾಯಿಸಬೇಕು. ಅವರಿಗೆ ಈ ರೀತಿಯಾಗಿ ಹಾಕುವಂತಹ ಅವಶ್ಯಕತೆ ಇಲ್ಲ. ನಂತರ ಸೀನಿಯರ್ ಸಿಟಿಜನ್ಸ್‌ಗೆ ಏನು ಪ್ರಾವಿಜನ್ ಮಾಡಿದ್ದೀರೆಂದರೆ, - for instance in West Bengal they have given 50% concession in transport. ಈಗ ಬಸ್‌ಗಳಲ್ಲಿ 50 ಪರ್ಸೆಂಟ್, ಟ್ರೈನ್‌ನಲ್ಲಿಯೂ ಕೂಡ 50 ಪರ್ಸೆಂಟ್ ಇದೆ. ಮತ್ತು ವೆಸ್ಟ್‌ಬೆಂಗಾಲ್‌ನಲ್ಲಿ 50% concession ಇದೆ. Why not you do it here?

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಸಗೀರ್‌ಅಹಮದ್‌ರವರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಈ ವಿಷಯವನ್ನು ತಂದರು; ಅದನ್ನು ಏನೂ ಮಾಡಲಿಲ್ಲ. ಮಾನ್ಯ ಅಧ್ಯಕ್ಷರೆ, ಈ ಬಜೆಟ್‌ನ ಬಗ್ಗೆ ಇಂಟರೆಸ್ಟ್‌ನಿಂದ ಮಾತನಾಡುವುದಕ್ಕೂ ಏನೂ ಕೂಡ ಇಂಟರೆಸ್ಟ್ ಇಲ್ಲ. ಏಕೆಂದರೆ, ಮಂತ್ರಿಗಳು ನಿಮ್ಮಷ್ಟಕ್ಕೆ ನೀವು ಮಾತನಾಡಿಕೊಳ್ಳುತ್ತಿರುತ್ತೀರಿ, ನಾವು ಬಜೆಟ್ ಮೇಲೆ ಡಿಸ್‌ಕಷನ್ ಆಗಬೇಕಾದರೆ...

ಶ್ರೀಮತಿ ಮೋಟಮ್ಮ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವರು):- ಇಲ್ಲಿ ನಾವೆಲ್ಲರೂ ಸಹ ಕೇಳಿಸಿಕೊಳ್ಳುತ್ತಿದ್ದೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಅಲ್ಲಾ ನಾವೇನೋ ಮಾತನಾಡುತ್ತಿದ್ದೇವೆ, ಅದು ರೆಕಾರ್ಡ್ ಆಗುತ್ತಿದೆ, ಅದು ಸಾಕು.

ಅಧ್ಯಕ್ಷರು:- ಮಾನ್ಯ ರೆಡ್ಡಿಯವರೆ, ತಾವು ಬೇಗನೆ ಮುಗಿಸಿ. ಮಾನ್ಯ ಮುಖ್ಯಮಂತ್ರಿಯವರು ರಿಪ್ಲೈ ಕೊಡುವುದಕ್ಕೆ ಬರುತ್ತಿದ್ದಾರೆ, ತಾವು ಮಾತನಾಡಿ ಬೇಗನೆ ಮುಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿಯವರು ಕೋರ್ಟಿನಲ್ಲಿ ವಾದ ಮಾಡುವ ತರಹ ಮಾತನಾಡುತ್ತಿದ್ದಾರೆ. ಮೊದಲು ಅವರಿಗೆ ಎರಡು ಕಾನ್‌ಸ್ಟಿಟ್ಯೂಯೆನ್ಸಿ ಇದೆ. ಅವರು ಒಂದು ಇಲ್ಲಿಗೆ ಬರಬೇಕು, ಇನ್ನೊಂದು ವಕೀಲರ ಸಂಘದ ಅಧ್ಯಕ್ಷರಾಗಬೇಕು. ಆ ರೀತಿಯಾಗಿ ಭಾಷಣವನ್ನು ಮಾಡಿದರೆ ನಾವು ಉತ್ತರವನ್ನು ಕೊಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೆ, ನೀವು ಕೋರ್ಟ್ ಟೈಮಿಂಗ್ಸ್ ಬಗ್ಗೆ ಹೇಳಿದಿರಿ. Can we set right all those things? Tell me. Is It even possible for us? You can say your opinion. That is all, ಆದ್ದರಿಂದ ಅದನ್ನೇ ಲಂಭಿಸಿಕೊಂಡು ಹೋಗಬೇಡಿ. ಈ ಹೌಸ್‌ನಲ್ಲಿ ಅದನ್ನು ಸಾಲ್ವ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾಡುವುದಕ್ಕಾಗುವುದಿಲ್ಲವೆಂದರೆ ಅವರ ಗಮನಕ್ಕೆ ತರಬೇಕಲ್ಲವೇ?

ಅಧ್ಯಕ್ಷರು:- ನಿಮ್ಮ ಒಪಿನಿಯನನ್ನು ತಾವು ಹೇಳಿ. ಅಲ್ಲಿಗೇ ನಿಲ್ಲಿಸಿ ಎಂದು ನಾನು ಹೇಳುತ್ತಿರುವುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಏನು ಪ್ರಯೋಜನ?

ಅಧ್ಯಕ್ಷರು:- ಅದು ನಿಮಗೆ ಸಂಬಂಧಪಟ್ಟಿರುವುದು. ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಆರ್ಗುಮೆಂಟ್ ಮಾಡಿ ನ್ಯಾಯಮೂರ್ತಿಗಳು ನಿದ್ದೆ ಮಾಡಿದರೆ ಏನು ಪ್ರಯೋಜನ? ಅವರು ನಿದ್ದೆ ಮಾಡಿದ ಮೇಲೆ ಕೇಳುವುದೇನಿದೆ? ಸುಮ್ಮನೆ ಆಯಿತು, formalities sake we are doing that is all. ನಾನು ಏನೋ ಸ್ವಲ್ಪ ಹೊತ್ತು ಹೇಳುವುದು, ನೀವು ಸ್ವಲ್ಪ ಹೊತ್ತು ಮಾತನಾಡುತ್ತಾ ಡಿಸ್‌ಕಷನ್ ಮಾಡುವುದಾದರೆ ಏನು ಪ್ರಯೋಜನ? ಆದರೆ ಮುಖ್ಯವಾಗಿ ಅನೇಕ ವಿಷಯಗಳನ್ನು ನಮ್ಮ ಸದಸ್ಯರುಗಳು ತಿಳಿಸಿದ್ದಾರೆ ಅದರಲ್ಲೂ ಸಹ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಮತ್ತು ಶ್ರೀ ಸಿಂಧ್ಯಾರವರು, ಶ್ರೀ ಸುರೇಶ್‌ಕುಮಾರ್‌ರವರು ಅನೇಕ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಒಂದು ನಾನು ಬಹಳ ದುರಾದೃಷ್ಟಕರವಾದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಪೊಲೀಸ್ ಸ್ಟೇಷನ್‌ಗಳಲ್ಲಿ ಏನಾಗಿದೆ ಎಂದರೆ, ಅನೇಕ ಪೊಲೀಸ್ ಸ್ಟೇಷನ್‌ಗಳು, ಪೊಲೀಸ್ ಆಫೀಸರ್ಸ್‌ಗಳು they are settling the matters. ಆ ಒಂದು ಪರಿಸ್ಥಿತಿ ಇವತ್ತಿನ ದಿವಸ ಬೆಂಗಳೂರಿನಲ್ಲಿ ಮತ್ತು ತಾಲ್ಲೂಕು ಲೆವೆಲ್‌ನಲ್ಲಿ ಬಂದಿದೆ. ಏಕೆಂದರೆ, ಇವತ್ತು ಮಾಫೀಯಾ ಗ್ಯಾಂಗ್, in big cities like Bangalore, Mumbai, Chennai and Delhi they are very active. ಅದನ್ನು ನೀವು ಕರ್‌ಟೇಲ್ ಮಾಡುವುದಕ್ಕೆ ಪೊಲೀಸ್‌ನವರು ಏನು ಮಾಡಿದ್ದಾರೆಂದರೆ, they are assisting the mafia gangs. ಎಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲಿಯೂ ಕೂಡ ಇವತ್ತಿನದಿವಸ ಬಹಳ ದುರಾದೃಷ್ಟಕರವಾದುದು ಅನೇಕ ಮೊಕದಮ್ಮೆಗಳು ಮತ್ತು ಎವಿಕ್ಷನ್ ಕೇಸಸ್ ಪೆಂಡಿಂಗ್ ಇನ್ ಕೋರ್ಟ್ಸ್‌ಗಳೆಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲಿ ಸಾಲ್ವ್ ಆಗುತ್ತಿವೆ. ಕೇಸುಗಳಿಗೆ ಹೋಗಿ ನೀವು ಏತಕ್ಕಾಗಿ ಒದ್ದಾಡುತ್ತೀರಿ. ಪೊಲೀಸ್ ಸ್ಟೇಷನ್‌ನಲ್ಲಿ ನಾವೇ ಸೆಟಲ್ ಮಾಡಿಕೊಡುತ್ತೇವೆನ್ನುವಂತಹ ಪರಿಸ್ಥಿತಿಯಾಗಿದೆ. ಯಾವ ಆಕ್ಸಿಡೆಂಟ್ ಕೇಸ್‌ಗಳಾಗಲಿ, ಯಾವ ಸಿವಿಲ್ ಕೋರ್ಟ್ ಹಾಗೂ ಕ್ರಿಮಿನಲ್ ಕೋರ್ಟ್‌ಗಳಲ್ಲಿ ನೋಡಿ ಪೊಲೀಸ್‌ನವರು ಈ ತರಹದ ದುರಾದೃಷ್ಟಕರವಾದ ಸಂಗತಿ ಇವತ್ತಿನದಿವಸ ಪೊಲೀಸ್ ಸ್ಟೇಷನ್‌ಗಳಲ್ಲಿ ಇದೆ. ಇಂತಹ ಒಂದು ಪೊಲೀಸ್‌ನವರ ಭ್ರಷ್ಟಾಚಾರ ಯಾವ ರೀತಿಯಾಗಿ ನೀವು ಕಂಟ್ರೋಲ್ ಮಾಡುತ್ತಿದ್ದಿರೆಂದರೆ, ಬಹುಶಃ "ಯಥಾ ರಾಜಾ ತಥಾ ಪ್ರಜಾ" ರಾಜರುಗಳು ಹೇಗಿದ್ದಾರೋ ನಿಮ್ಮವರೆಗೂ, ಈಗ ಸಬ್‌ರಿಜಿಸ್ಟ್ರಾರ್ ಆಫೀಸ್‌ಗೆ ಹೋಗಿ, ರೆವಿನ್ಯೂ ಆಫೀಸ್, ತಹಶೀಲ್ದಾರ್ ಆಫೀಸ್‌ಗೆ, ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ಗೆ ಹಾಗೂ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್, ಯಾವ ಡಿಪಾರ್ಟ್‌ಮೆಂಟ್‌ನಲ್ಲೂ ಭ್ರಷ್ಟಾಚಾರ ಇಲ್ಲ ಅನ್ನುವ ಹಾಗಿಲ್ಲ. ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿಯೂ ಕೂಡ ಭ್ರಷ್ಟಾಚಾರವಿದೆ. ಏಕೆಂದರೆ, ಮೇಲಿನವರೆವಿಗೂ ನಾವು ಕೊಡಬೇಕು; ಆ ತರಹ ಒಂದು ಪರಿಸ್ಥಿತಿ ಬಂದಿದೆ, ಆ ಭ್ರಷ್ಟಾಚಾರ ನಿಮ್ಮಲ್ಲಿ ಯಾವತ್ತೂ ಯಾರು ಸರಿಯಾದ ಮಂತ್ರಿಗಳು...

ಶ್ರೀ ಹೆಚ್.ವಿಶ್ವನಾಥ್(ಸಹಕಾರ ಸಚಿವರು):- ಮಾನ್ಯ ಸುಬ್ಬಾರೆಡ್ಡಿಯವರೆ, ರೆವಿನ್ಯೂ, ಕೋ-ಆಪರೇಷನ್ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗಳೆಂದು ತಾವು ಹೇಳಿದರಲ್ಲಾ ನಿಮ್ಮ ಕೋರ್ಟ್‌ಗಳು ಭ್ರಷ್ಟಾಚಾರ ರಹಿತವಾಗಿದೆಯಾ ಹೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಕೋರ್ಟ್‌ದ್ದು ನಾನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಹೇಳಬೇಡಿ; ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್‌ಶಿಫ್ ಹೊರಟುಹೋಗುತ್ತದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಸಹಕಾರ ಸಚಿವರೆ, ತಾವು ದಯಮಾಡಿ ಇಲ್ಲಿ ಕೇಳಿ. ಅವರು ಇಲ್ಲಿಯೇ ಇದ್ದರೆ ಹೇಳಿಬಿಡುತ್ತಿದ್ದರು, ಅವರು ಪುನಃ ಬೆಳಿಗ್ಗೆ ಎದ್ದು ಕೋರ್ಟಿಗೆ ಹೋಗಬೇಕಲ್ಲಾ? ಅದಕ್ಕೆ he is very careful here.

ಅಧ್ಯಕ್ಷರು:- ಮಿಸ್ಟರ್ ರೆಡ್ಡಿಯವರೆ, ತಾವು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳಿ. ಅವರಲ್ಲ ಇಲ್ಲಿ ಆಡಿಯೆನ್ಸ್.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಯಾವ ಮಂತ್ರಿಗಳಿಗೆ ನಿಜವಾಗಿಯೂ ಕೂಡ ಹಾನೆಸ್ಟಿ, ಸಿನ್ನಿಯಾರಿಟಿ ಇದ್ದರೆ ಎಲ್ಲರೂ ಹಿಂದೆ ಇಂತಹ ಒಬ್ಬ ಮಂತ್ರಿಗಳಿದ್ದರು ಎಂದು ಹೇಳುತ್ತಾರೆ. ಮೊನ್ನೆ ಒಬ್ಬ ಮಿನಿಸ್ಟರ್ ಹತ್ತಿರ ನಾನು ಕೂತಿದ್ದೆ, ಆ ಮಿನಿಸ್ಟರ್ ಮನೆಯಲ್ಲಿ ಆಫೀಸ್‌ನಲ್ಲಿ ಒಬ್ಬರು ಯಾರೋ ಐ.ಎ.ಎಸ್.ನವರು ಬಂದ ತಕ್ಷಣ ಮಿನಿಸ್ಟರ್‌ರವರು ಎದ್ದುನಿಂತುಕೊಂಡರು. ಆಮೇಲೆ ನಾನು ಯೋಚನೆ ಮಾಡಿದೆ, ಇದೇನಪ್ಪಾ ಇದು ಅವರು ನಿಂತರಲ್ಲಾ ಎಂದು ನಾನೂ ಕೂಡ ನಿಲ್ಲಬೇಕಾಯಿತು. ****
ಏನಾದರೂ ಸಬ್ಜೆಕ್ಟ್ ಓದಿದ್ದಾರಾ? ಅವರು ಸಬ್ಜೆಕ್ಟ್‌ಗೆ ಸಂಬಂಧಪಟ್ಟ ಹಾಗೆ ವಿಷಯವನ್ನು ತಿಳಿದುಕೊಂಡಿದ್ದಾರಾ? ****

Sri D.B. Chandre Gowda:-I take very serious objection. Sweeping remarks should be removed.

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ಅದನ್ನು ಕಡತದಿಂದ ತೆಗೆಯಿರಿ.

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರು, ಈಗ ತಾವು ಮಾತನಾಡಲು ಪ್ರಾರಂಭಿಸಿ, 15 ನಿಮಿಷಗಳಾಯಿತು, ತಾವು ಬೇಗ ಮುಗಿಸಿ.

(ಗೊಂದಲ)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಬಹಳ ದುಃಖಕರವಾದ ಸಂಗತಿ ಒಂದು ಅನಾಮಧೇಯ ಲೆಟರ್ ಬರೆದಿದ್ದಾರೆ. ಅದನ್ನು ಖರ್ಗೆಯವರಿಗೆ ತೋರಿಸುತ್ತೇನೆ. ಇದರಲ್ಲಿ ಹೇಳುವುದರಲ್ಲಿ ತಪ್ಪೇನು ಇದೆ? ****

(ಗೊಂದಲ)

ಅಧ್ಯಕ್ಷರು:- ನಮಗೂ ಹಲವಾರು ಅನಾಮಧೇಯ ಪತ್ರಗಳು ಬರುತ್ತವೆ. ಅದನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ?

(****ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

Sri Mallikarjun Kharge:- Let him give notice in writing, I will answer.

(ಗೊಂದಲ)

ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೆ, ತಾವು ಸುಬ್ಬಾರೆಡ್ಡಿಯವರಿಗೆ ಮಾತನಾಡಲು ಅವಕಾಶ ಕೊಟ್ಟಾಗಲೇ ನಮಗೆ ಗೊತ್ತಾಯಿತು ಅವರು ಏನು ಮಾಡುತ್ತಾರೆಂಬುದು.

(ಅತೀವ ಗೊಂದಲ)

ಶ್ರೀ ಎ.ರಾಮದಾಸ್:- ಇದು ಪರ ಮತ್ತು ವಿರೋಧ ಮಾತನಾಡತಕ್ಕಂತಹ ವೇದಿಕೆಯಲ್ಲ.

Mr. Speaker:- Don't take down... ತಾವು ಯಾವುದೇ ಮಂತ್ರಿಗಳ ಮೇಲೆ ಅಲಿಗೇಷನ್ ಮಾಡುವ ಮೊದಲು ನನಗೆ ಬೆಳಿಗ್ಗೆ ತಾವು ಬರೆದು ಕಳುಹಿಸಬೇಕು. Don't make unnecessary allegations without giving it in writing to me earlier.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ತಾವು ಮಾನ್ಯ ಸದಸ್ಯರಾದ ಸುಬ್ಬಾರೆಡ್ಡಿಯವರಿಗೆ ಮಾತನಾಡಲು ಅವಕಾಶ ನೀಡುವ ಮೂಲಕ ಅವರು ಬಾಯಿಗೆ ಬಂದಂತೆ ಮಾತನಾಡಲು ಬಿಟ್ಟಿದ್ದಿರೋ ಹೇಗೆ?

Mr. Speaker:- Mr. K.N. Subba Reddy has made unnecessary allegation against some minister. All those things have been removed from the records.

5.00 ಪಿಎಂ

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಸಭಾಧ್ಯಕ್ಷರೇ, ಸಂಸದೀಯ ನಡವಳಿಕೆಗಳು....

(ಗೊಂದಲ)

ಅಧ್ಯಕ್ಷರು:- ಕಾನೂನು ಗೊತ್ತಿದ್ದರೆ ಮೊದಲೇ ಬರೆದು ಕಳುಹಿಸಬೇಕಾಗಿತ್ತು. ಬೆಳಿಗ್ಗೆಯೇ ಕಳುಹಿಸಬೇಕಾಗಿತ್ತು. ನೀವು ಈಗ ಬೇರೆ ವಿಷಯ ಮಾತನಾಡುತ್ತೀರೋ ಅಥವಾ ಬೇರೆಯವರನ್ನು ಕರೀಲಾ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಸಂಸದೀಯ ನಡವಳಿಕೆಗಳ ಪ್ರಕಾರ ಅದರ ಇತಿಮಿತಿಯಲ್ಲಿ ನಾವು ಕೆಲಸ ಮಾಡಬೇಕು. ಎಷ್ಟು ದೊಡ್ಡವರೇ ಆಗಲಿ, ಎಷ್ಟು ಚಿಕ್ಕವರೇ ಆಗಲಿ, ಈ ಸದನದಲ್ಲಿ ಎಲ್ಲರಿಗೂ ಸಮಾನವಾದಂಥ ಹಕ್ಕುಬಾಧ್ಯತೆ ಇದೆ. ಅವರ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ತಮ್ಮದು ಇದೆ. ಅವರು ಮಂತ್ರಿಗಳ ಮೇಲೆ ಸಾರಾಸಗಟಾಗಿ ಒಂದೇ ರೀತಿಯ ಆಪಾದನೆಯನ್ನು ಮಾಡಿದ್ದಾರೆ. ಇದನ್ನು ಮಾಡುವುದಕ್ಕೆ ಮುನ್ನ ವ್ಯಕ್ತಿಗತವಾಗಲಿ, ಸಾಮೂಹಿಕವಾಗಿ ಆಗಲಿ, ಒಂದು ನೋಟಿಸ್ ಕೊಟ್ಟು ಚರ್ಚೆ ಮಾಡಬೇಕು. ಹಾಗೆ ನೋಟೀಸ್‌ನ್ನೂ ಕೊಡದೆ ಸ್ವೀಪಿಂಗ್ ಆಗಿ ಹೇಳಿಬಿಟ್ಟರೆ ಇದರಿಂದ ಪರಿಣಾಮ ತುಂಬಾ ಆಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳುವುದು ಇಷ್ಟೆ. ಇಲ್ಲ ಅವರು ಅದನ್ನು ವಿತ್‌ಡ್ರಾ ಮಾಡಬೇಕು ಅಥವಾ ಅದನ್ನು ಕಡತದಿಂದ ತಾವು ತೆಗೆದುಹಾಕಬೇಕು.

Mr. Speaker:- I have removed that from the records.

ಶ್ರೀ ಜಗದೀಶ್ ಶೆಟ್ಟರ್:- ತಾವು ಎಕ್ಸಪಂಜ್ ಮಾಡಿದ್ದೀರಾ?

ಅಧ್ಯಕ್ಷರು:- ತೆಗೆದುಹಾಕಿದ್ದೇನೆ ಬಿಡಿ. All those words which have been said without giving notice against any minister or member, have been expunged.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಾವು ಮಾತನಾಡಿದ್ದನ್ನು ತಾವು ತೆಗೆದಿದ್ದರೆ, ತಾವು ನಮಗೆ ಇದನ್ನು ದಯವಿಟ್ಟು ಮಾತನಾಡಬಾರದು ಎಂದು ಹೇಳಿ. ನಮಗೆ ತಮ್ಮ ಡೈರೆಕ್ಷನ್ ಇರುತ್ತದೆ. ಆದರೆ ಸದಸ್ಯರು ಹೀಗೆ ಮೇಲಕ್ಕೆ ಎದ್ದೇಳಿದರೆ....

(ಗೊಂದಲ)

ಅಧ್ಯಕ್ಷರು:- ಸ್ವಾಮಿ ತಾವು ಕನ್‌ಕ್ಲೂಡ್ ಮಾಡುತ್ತೀರೋ, ಅಥವಾ ಬೇರೆಯವರನ್ನು ಕರೆಯಲೋ? ದಯವಿಟ್ಟು ಕನ್‌ಕ್ಲೂಡ್ ಮಾಡಿ. ಮಾನ್ಯ ಅಪ್ಪಚ್ಚು ರಂಜನ್‌ರವರೇ, ನೀವು ಮಾತನಾಡಿ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಅಧ್ಯಕ್ಷರೇ,....

ಅಧ್ಯಕ್ಷರು:- ಅವರು ಏನಾದರೂ ಹೇಳಿಕೊಳ್ಳಲಿ. ನೀವು ಈ ಕಡೆಗೆ ತಿರುಗಿ ಮುಕ್ತಾಯ ಮಾಡಿ.

ಶ್ರೀ ಅರಗ ಜ್ಞಾನೇಂದ್ರ:- ಅವರು ಕನ್‌ಕ್ಲೂಡ್ ಮಾಡುತ್ತಾರೆ. ಅಲ್ಲಿಯವರನ್ನೂ ಕೂಡ ತಾವು ಕೂರಿಸಬೇಕಲ್ಲಾ?

ಅಧ್ಯಕ್ಷರು:- ಅವರನ್ನೂ ಕೂಡ ನಾನು ಕೂರಿಸುತ್ತೇನೆ. ನೀವು ಕಂಕ್ಲೂಡ್ ಮಾಡಿ. ಸ್ವಾಮಿ, ತಾವು ಕನ್‌ಕ್ಲೂಡ್ ಮಾಡುತ್ತೀರೋ ಇಲ್ಲವೋ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, "ಒಂದು ನಾನು ಹೇಳುತ್ತೇನೆ.....

ಅಧ್ಯಕ್ಷರು:- ನೀವು ಹೇಳುವುದು ಬೇಕಾಗಿಲ್ಲ. ನೀವು ಐದು ನಿಮಿಷ ಕೇಳಿ ಈಗ ಇಪ್ಪತ್ತೈದು ನಿಮಿಷ ಆಯಿತು. ಬೆಳಿಗ್ಗೆ ನೀವು ಕೇಳಿದ್ದು ಐದು ನಿಮಿಷ ಮಾತ್ರ. ಹೀಗೆ ಮಾಡಿದರೆ ಹೇಗೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಬೇಡ ಬಿಡಿ ಸ್ವಾಮಿ, ಆಯಿತು.

ಅಧ್ಯಕ್ಷರು:- ಅಪ್ಪಚ್ಚು ರಂಜನ್‌ರವರೇ, ನೀವು ಪ್ರಾರಂಭಮಾಡಿ.

+ಶ್ರೀ ಎಂ.ಪಿ. ಅಪ್ಪಚ್ಚುರಂಜನ್(ಸೋಮವಾರಪೇಟೆ):- ಸನ್ಮಾನ್ಯ ಅಧ್ಯಕ್ಷರೇ, 2003-04ನೇ ಸಾಲಿನ ಬಜೆಟ್ ಮೇಲೆ ನನಗೆ ಮಾತನಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಬಜೆಟ್‌ನಲ್ಲಿ ಕಳೆದ ಸಾರಿ ಗ್ರಾಮೀಣ ಪ್ರದೇಶಗಳಿಗೆ ಸ್ವಚ್ಛಗ್ರಾಮ ಅಂತಹೇಳಿ ಒಂದು ಗ್ರಾಮಕ್ಕೆ 20 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಸರ್ಕಾರ ಹೇಳಿತ್ತು. ಕೆಲವು ಪಂಚಾಯತಿಗಳಿಗೆ ಹಣ ಕೂಡ ಬಿಡುಗಡೆಯಾಗಿದೆ. ಈ ಸಾರಿ 44ನೇ ಪ್ಯಾರಾದಲ್ಲಿ ಹೇಳಿದ್ದಾರೆ. 'ಸ್ವಚ್ಛ ಗ್ರಾಮಕ್ಕೆ 130 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. 1300 ಗ್ರಾಮಗಳಿಗೆ ಈ ಸೌಲಭ್ಯವನ್ನು ಒದಗಿಸಿಕೊಡಲಾಗುವುದು ಎಂದು ಹೇಳಿದ್ದೀರಿ. ಅಂದರೆ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆಯನ್ನು

ಮಾಡಿದ್ದೀರಿ. ನಾನು ತಿಳಿದುಕೊಂಡಿದ್ದೆ ಏನೆಂದರೆ ಸರ್ಕಾರ ವರ್ಷವರ್ಷ ಹೋದಾಗ ಹೆಚ್ಚು ಹಣ ಕೊಡುತ್ತದೆ ಎಂದು. ಹೀಗೆ ಮಾಡಿ ಈ ಗ್ರಾಮಪಂಚಾಯತಿಗಳನ್ನು ಹೆಚ್ಚು ಬಲಪಡಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಸನ್ಮಾನ್ಯ ಅಧ್ಯಕ್ಷರೇ ಮಾನ್ಯಮಂತ್ರಿಗಳಾದ ಘೋರ್ಪಡೆಯವರು ಗ್ರಾಮಪಂಚಾಯತಿಗಳನ್ನು ಬಲಪಡಿಸಬೇಕು, ಗ್ರಾಮ ಪಂಚಾಯತಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಇಲ್ಲಿ ಸ್ವಚ್ಛ ಗ್ರಾಮಗಳಿಗೆ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಕೊಡುವಂತಹ ಹಣವನ್ನೂ ಕೂಡ ಕಡಿಮೆ ಮಾಡಿದ್ದಾರೆ. ಇದರ ಜೊತೆಗೆ ಕಳೆದವರ್ಷ ಬಜೆಟ್‌ನಲ್ಲಿ ಸುಮಾರು ಗ್ರಾಮ ಪಂಚಾಯತಿಗಳಿಗೆ ಏಳು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಈ ವರ್ಷ ಇನ್ನೂ ಎರಡು ಲಕ್ಷ ರೂಪಾಯಿ ಕಡಿಮೆ ಮಾಡಿ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಈ ಬಜೆಟ್‌ನಲ್ಲಿ ಹೇಳಿದ್ದಾರೆ. ಆದ್ದರಿಂದ ಇದು - growth-oriented budget ಅಲ್ಲ. ಪ್ರಗತಿಪರ ಬಜೆಟ್ ಅಲ್ಲ ಎನ್ನುವ ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ನಮ್ಮ ಮುಖ್ಯಮಂತ್ರಿಗಳಿಗೆ ಈ ಸರ್ಕಾರವನ್ನು ಬಹಳಷ್ಟು ಚುರುಕುಗೊಳಿಸಬೇಕು, ಕೆಲಸಗಳನ್ನು ಬಹಳ ವೇಗವಾಗಿ ಮಾಡಬೇಕೆಂದು ಆಸೆ ಇದೆ. ಅವರ ಆಸೆ ಹೇಗಿದೆ ಎಂದರೆ ಅದು ಟೀನ್‌ಏಜ್‌ನವರಿಗೆ ಇದ್ದಂಥ ಆಸೆ ತರಹ ಇದೆ. ಈ ಸರ್ಕಾರವನ್ನು ನಾವು ಚೆನ್ನಾಗಿ ನಡೆಸಬೇಕು ಎಂದು ಅವರ ಆಸೆಯಿದ್ದು, ಈ ಉದ್ದೇಶದಿಂದ ಸುಮಾರು ಆಯೋಗಗಳನ್ನು ಅವರು ಮಾಡಿದ್ದಾರೆ. ಅದರಲ್ಲಿ ಒಂದು ಆಡಳಿತ ಸುಧಾರಣಾ ಆಯೋಗ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಬಹಳ ಚೆನ್ನಾಗಿ ಈ ಸರ್ಕಾರದ ಆಡಳಿತವನ್ನು ಚುರುಕುಗೊಳಿಸುವ ವಿಚಾರದಲ್ಲಿ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಸುಮಾರು ಎರಡು-ಮೂರು ಪುಸ್ತಕಗಳಷ್ಟು ಇರುವ ಈ ವರದಿಯಲ್ಲಿ ಕೊಟ್ಟಿರುವುದರಲ್ಲಿ ಯಾವುದನ್ನೂ ಕೂಡ ಕಾರ್ಯಗತ ಮಾಡಿಲ್ಲ. ಇದರ ಜತೆಗೆ ಪ್ರಾದೇಶಿಕ ಅಸಮತೋಲನ ಬಗ್ಗೆ, ಅದನ್ನು ನಿವಾರಣೆ ಮಾಡಬೇಕೆಂದು ಹೇಳಿ ಡಾ|| ನಂಜುಡಪ್ಪನವರ ಆಯೋಗವನ್ನು ನೇಮಿಸಲಾಗಿದ್ದು ಅವರೂ ಕೂಡ ವರದಿಯನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಈ ತೆರಿಗೆಯನ್ನು ಯಾವ ರೀತಿಯಲ್ಲಿ ವಸೂಲಿ ಮಾಡಬೇಕೆಂದು ಮತ್ತು ಸರ್ಕಾರಕ್ಕೆ ಯಾವರೀತಿ ಹಣ ಭರಿಸಿಕೊಳ್ಳಬೇಕೆಂದು ಹೇಳಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆದರೆ ಇದನ್ನೂ ಕೂಡ ಕಾರ್ಯಗತ ಮಾಡುವಂಥ ಕೆಲಸವನ್ನು ಈ ಸರ್ಕಾರ ಮಾಡಿಲ್ಲ. ಸುಮಾರು 1300 ಕೋಟಿ ರೂ ಅಬ್ಕಾರಿ ಬಾಬಿನಿಂದ ಸೋರಿಹೋಗುತ್ತಿದೆ ಎನ್ನುವಂಥ ಮಾತನ್ನೂ ಕೂಡ ಅವರು ಈ ತೆರಿಗೆ ಆಯೋಗದ ವರದಿಯಲ್ಲಿ ಹೇಳಿದ್ದಾರೆ. ಇದರ ಜೊತೆಗೆ ವಾಟಾಳ್ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಗಡಿನಾಡು ಕನ್ನಡ ಪ್ರದೇಶಗಳ ಅಧ್ಯಯನ ಬಗ್ಗೆ ವರದಿಯನ್ನು ಕೊಡುವಂತೆ ಆಯೋಗವನ್ನು ನೇಮಿಸಲಾಗಿತ್ತು. ಹೀಗೆ ಈ ನಾಲ್ಕು ಆಯೋಗಗಳನ್ನು ನೇಮಕಮಾಡಿ ಸುಮಾರು ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರು. ಈ ಅಧ್ಯಕ್ಷರಿಗೆ ಒಂದು ಕಾರು, ಅವರಿಗೆ ಸಂಬಂಧಪಟ್ಟ ಅಧಿಕಾರಿಗಳು ಅಂತ ಹೇಳಿ ಇಷ್ಟೆಲ್ಲಾ ಖರ್ಚುಮಾಡಿದರೂ ಕೂಡ ಇವತ್ತು ಈ ನಾಲ್ಕು ಆಯೋಗಗಳು ನೀಡಿದ ವರದಿಗಳು ಧೂಳು ಹಿಡಿದುಕೊಂಡು ಬಿದ್ದಿವೆ. ಇವುಗಳಲ್ಲಿ ಯಾವುದನ್ನೂ ಕೂಡ ಕಾರ್ಯಗತ ಮಾಡಿಲ್ಲ. ಉದಾಹರಣೆಗೆ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಆಯೋಗದ ಶಿಫಾರಸ್ಸಿನಲ್ಲಿ ಕರ್ನಾಟಕ ಸರ್ಕಾರದಲ್ಲಿ ಎಸ್ಟಾಬ್ಲಿಶ್‌ಮೆಂಟ್ ಕಾಸ್ಟ್ ಸುಮಾರು ಅರವತ್ತು ಪರ್ಸೆಂಟ್‌ವರೆಗೆ ಹೋಗಿದೆ ಎಂದು ನಮಗೆಲ್ಲಾ

ಗೊತ್ತಿದೆ. ಅದನ್ನು ಕಡಿಮೆ ಮಾಡಬೇಕೆಂದು ಹೇಳಿ ಹಾರ್ನಳ್ಳಿ ರಾಮಸ್ವಾಮಿ ಆಯೋಗದವರು ವರದಿಯನ್ನು ಕೊಟ್ಟಿದ್ದಾರೆ. ಸುಮಾರು 20,142 ಉದ್ಯೋಗಗಳನ್ನು ರದ್ದುಮಾಡಬೇಕೆಂಬ ವಿಚಾರವನ್ನು ಕೂಡ ಈ ವರದಿಯಲ್ಲಿ ಹೇಳಲಾಗಿದೆ. ಆದರೆ ಇದ್ಯಾವುದನ್ನೂ ಕೂಡ ಇದುವರೆಗೂ ಕಾರ್ಯಗತ ಮಾಡಿಲ್ಲ. ಇದರ ಜೊತೆಗೆ ಕಂದಾಯ ಇಲಾಖೆಯಲ್ಲಿ ಸುಮಾರು 3,101 ಗ್ರಾಮ ಲೆಕ್ಕಿಗರ ಹುದ್ದೆಗಳು ಜಾಸ್ತಿ ಇದೆಯೆಂದು ಹೇಳಿದ್ದಾರೆ. ಈ ಸರ್ಕಾರ ಏಕೆ ಈ ಗ್ರಾಮಲೆಕ್ಕಿಗರನ್ನು ಗ್ರಾಮಪಂಚಾಯತಿಗಳಿಗೆ ಕಾರ್ಯದರ್ಶಿಯಾಗಿ ಮಾಡಿ ಕಳುಹಿಸಬಾರದು? ಅದನ್ನೂ ಕೂಡ ಅವರು ಶಿಫಾರಸ್ಸು ಮಾಡಿದ್ದಾರೆ; ಅದನ್ನು ಏಕೆ ಮಾಡುತ್ತಿಲ್ಲ? ಇದರ ಜೊತೆಗೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ; ಅಲ್ಲಿ ಸುಮಾರು ಒಟ್ಟು ಆಗತ್ಯವಿರುವಂಥ ನೌಕರರು ಎಷ್ಟು ಎಂದರೆ 726 ಎನ್ನುವ ವಿಚಾರವನ್ನು ಹೇಳಿದ್ದರೆ. ಒಬ್ಬರು ಪ್ರಧಾನ ಇಂಜಿನಿಯರ್, ಇಬ್ಬರು ಮುಖ್ಯ ಇಂಜಿನಿಯರ್‌ಗಳು, ಅಧೀಕ್ಷಕ ಇಂಜಿನಿಯರ್‌ಗಳು 13 ಜನ, ಕಾರ್ಯಪಾಲಕ ಇಂಜಿನಿಯರ್‌ಗಳು 401, ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳು 150 ಜನ ಮತ್ತು ಸಹಾಯಕ ಇಂಜಿನಿಯರುಗಳು 520ಜನ, ಹೀಗೆ ಒಟ್ಟು 726 ಜನರು ಸಾಕು ಎನ್ನುವ ವಿಚಾರವನ್ನು ಹೇಳಿದ್ದಾರೆ. ಆದರೆ ಇಲ್ಲಿ ಹಾಲಿ ಇರುವಂಥ ಉದ್ಯೋಗಗಳು ಎಷ್ಟು ಎಂದರೆ ಪ್ರಧಾನ ಇಂಜಿನಿಯರ್‌ಗಳು ಇಬ್ಬರು, ಮುಖ್ಯ ಇಂಜಿನಿಯರ್‌ಗಳು ಮೂರು, ಅಧೀಕ್ಷಕ ಇಂಜಿನಿಯರ್‌ಗಳು 39, ಕಾರ್ಯಪಾಲ ಇಂಜಿನಿಯರ್‌ಗಳು 164, ಸಹಾಯಕ ಕಾರ್ಯಪಾಲ ಇಂಜಿನಿಯರ್‌ಗಳು 713, ಸಹಾಯಕ ಇಂಜಿನಿಯರ್‌ಗಳು ಸುಮಾರು 1750 ಜನ ಇದ್ದಾರೆ. ಒಟ್ಟು 2672 ಇಂಜಿನಿಯರ್‌ಗಳು ಇಲ್ಲಿ ಬೇಕಾಗಿವೆಯೆ? ಇದನ್ನು ನಾವು ಚಿಂತನೆ ಮಾಡಬೇಕಾಗಿದೆ. ಬರೀ ಈ ವರದಿಗಳು ಧೂಳು ಹಿಡಿದು ಕುಳಿತರೆ ಸಾಲದು. ಮುಖ್ಯಮಂತ್ರಿಗಳಿಗೆ ಸರ್ಕಾರವನ್ನು ಚುರುಕುಗೊಳಿಸಬೇಕೆಂಬ ಆಸೆ ಇದೆ. ಆ ನಿಟ್ಟಿನಲ್ಲಿ ಈ ನಾಲ್ಕು ಆಯೋಗಗಳನ್ನು ಮಾಡಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಇವತ್ತು ಕಾರ್ಯಗತವಾಗಿಲ್ಲ. ಅದರ ಜೊತೆ ಜೊತೆಗೆ ಈ ಸರ್ಕಾರದಲ್ಲಿ ಏನು ನಾವು ಬಹಳ ವೇಗವಾಗಿ ಹೋಗಬೇಕು ಎಂದು ಚಿಂತನೆ ಮಾಡಿ ಉದಾಹರಣೆಗೆ 200 ಕಿಲೋಮೀಟರ್ ವೇಗದಲ್ಲಿ ಸಾಗುತ್ತಾ ಇರುತ್ತದೆ. ಆದರೆ ಈ ಸರ್ಕಾರದಲ್ಲಿ ಮೂರು ಮೇಜರ್ ಆಕ್ಸಿಡೆಂಟ್‌ಗಳು ಆಗಿವೆ. ಅದು ಯಾವುದು ಎಂದರೆ ಒಂದು ರಾಜಕುಮಾರ್ ಅವರನ್ನು ಕಿಡ್ನಾಪ್ ಮಾಡಿದಂಥಾದ್ದು. ಎರಡನೆಯದು ಕಾವೇರಿ ನೀರಿನ ವಿಚಾರ. ಮೂರನೆಯದು ನಾಗಪ್ಪನವರ ಹತ್ಯೆ. ಈ ಮೇಜರ್ ಮೂರು ಆಕ್ಸಿಡೆಂಟ್‌ನಲ್ಲಿ ಈ ಸರ್ಕಾರ ಕೊಲ್ಯಾಪ್ಸ್ ಆಗುವಂತಹ ಪರಿಸ್ಥಿತಿಗೆ ತಲುಪಿದೆ. ಇದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. ಅದರ ಜೊತೆ ಜೊತೆಗೆ ನನಗೆ ಸಮಯ ಹೆಚ್ಚು ಕೊಡದೇ ಇರುವ ಕಾರಣ ನಾನು ನನ್ನ ಕೊಡಗು ಜಿಲ್ಲೆಯ ವಿಚಾರಕ್ಕೆ ಬರುತ್ತೇನೆ. ಕಳೆದ ಸಲ ನಾನು ಇಲ್ಲಿ ಸೆಂಟ್ರಲ್ ರಸ್ತೆ ವಿಚಾರದಲ್ಲಿ ಮಾನ್ಯ ಸದಸ್ಯರಾದ ಸಿಂಧ್ಯಾರವರು ಪ್ರಶ್ನೆಯನ್ನು ಕೇಳಿದ್ದರು. ಅವರು ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ ನಮ್ಮ ಕೊಡಗು ಜಿಲ್ಲೆಗೆ ಕೇವಲ 1 ಕೋಟಿ 15 ಲಕ್ಷ ರೂಪಾಯಿಗಳು ಮಾತ್ರ ಸೆಂಟ್ರಲ್ ರೋಡ್ ಫಂಡ್‌ನಿಂದ ಕೊಟ್ಟಿದ್ದರು. ಅವರು ಕೊಟ್ಟಂತಹ ಉತ್ತರದಲ್ಲಿ. ಅದರಲ್ಲಿ ಬೆಳಗಾಂಗೆ 14 ಕೋಟಿ 63 ಲಕ್ಷ 55 ಸಾವಿರ ರೂಪಾಯಿ. ಗುಲ್ಬರ್ಗಕ್ಕೆ 12 ಕೋಟಿ 83 ಲಕ್ಷ 16 ಸಾವಿರ ರೂಪಾಯಿ. ಬಿಜಾಪುರಕ್ಕೆ 4 ಕೋಟಿ 4 ಲಕ್ಷ ರೂಪಾಯಿ. ಶಿವಮೊಗ್ಗಕ್ಕೆ 4 ಕೋಟಿ 6ಲಕ್ಷ 80 ಸಾವಿರ ರೂಪಾಯಿ. ಕೋಲಾರ ಜಿಲ್ಲೆಗೆ 2 ಕೋಟಿ 78 ಲಕ್ಷ 91 ಸಾವಿರ ರೂಪಾಯಿ, ಬೀದರ್ ಜಿಲ್ಲೆಗೆ 10 ಕೋಟಿ 92 ಲಕ್ಷ 97 ಸಾವಿರ ರೂಪಾಯಿ. ತುಮಕೂರಿಗೆ

20 ಕೋಟಿ 99 ಲಕ್ಷ 59 ಸಾವಿರ, ದಕ್ಷಿಣ ಕನ್ನಡ ಜಿಲ್ಲೆಗೆ 6 ಕೋಟಿ 89 ಲಕ್ಷ 10 ಸಾವಿರ ರೂಪಾಯಿ. ಹಾಸನಕ್ಕೆ 9 ಕೋಟಿ 27 ಲಕ್ಷ 33 ಸಾವಿರ ರೂಪಾಯಿ. ಅದೇ ರೀತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 8 ಕೋಟಿ 57 ಲಕ್ಷ 50 ಸಾವಿರ ರೂಪಾಯಿ. ಬಾಗಲಕೋಟೆ ಜಿಲ್ಲೆಗೆ 5 ಕೋಟಿ 47 ಲಕ್ಷ 37 ಸಾವಿರ ರೂಪಾಯಿ ಕೊಡಗು ಜಿಲ್ಲೆಗೆ ಕೇವಲ 1 ಕೋಟಿ 15 ಲಕ್ಷ. ಅದರ ಜೊತೆಗೆ ಮಂಡ್ಯ ಜಿಲ್ಲೆಗೆ ಸುಮಾರು 17 ಕೋಟಿ 97 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮಗೇನೂ ಅಭ್ಯಂತರವಿಲ್ಲ. ಮಂಡ್ಯ ಜಿಲ್ಲೆ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರವಿರಬಹುದು. ಆದರೆ ಏನಾದರೂ ನಮ್ಮ ಮಂಡ್ಯ ಜಿಲ್ಲೆಯವರಿಗೆ ಕುಡಿಯಲಿಕ್ಕೆ ನೀರು, ಬೇಸಾಯಕ್ಕೆ ನೀರು, ಬೇಕೆಂದು ಇದ್ದಾಗ ಯಾವತ್ತೂ ಮಂಡ್ಯ ಜಿಲ್ಲೆಯವರು ಮೈಸೂರು ಜಿಲ್ಲೆಯವರು ನಮ್ಮನ್ನು ಬಂದಾಗ ಕೇಳುತ್ತಾರೆ, ಸ್ವಾಮಿ ಮಳೆ ಆಗಿದೆಯೇ ಮಳೆ ಆಗಿದೆಯೇ ಎಂದು. ಮಳೆ ಆದರೆ ಅವರಿಗೆ ಬಹಳ ಖುಷಿಯಾಗುತ್ತದೆ. ಆದರೆ ನಮಗೆ ಮಳೆ ಆದರೆ ದೊಡ್ಡ ಪ್ರಯೋಜನ ಏನೂ ಆಗುವುದಿಲ್ಲ. ಎಲ್ಲಾ ನೀರು ಕೊಚ್ಚಿ ಹೋಗುತ್ತದೆ. ಆ ಕೊಚ್ಚಿ ಹೋದಂತಹ ನೀರು ಮಂಡ್ಯ ಜಿಲ್ಲೆಗೆ ಬಂದು ಉಪಕಾರ ಪಡೆದಂತಹ ಈ ಕರ್ನಾಟಕ ರಾಜ್ಯದಿಂದ ಕೊಡಗು ಜಿಲ್ಲೆಗೆ ಯಾವುದೇ ಉಪಕಾರ ಆಗಲಿಲ್ಲ. ಎಲ್ಲಾ ಸಂದರ್ಭದಲ್ಲೂ ಕೊಡಗಿಗೆ ಅನ್ಯಾಯವಾಗಿದೆ. ಇನ್ನೂ ಇದೆ, ನಾನು ಅದನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅದರ ಜೊತೆಗೆ ಮೊನ್ನೆ ಕುಡಿಯುವ ನೀರಿನ ವಿಚಾರದಲ್ಲಿ ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟರು. ಎಲ್ಲಾ ಜಿಲ್ಲೆಗಳಿಗೂ ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು. ಎಷ್ಟು ಮಾಡಿದ್ದೀರಿ ಎಂದು ನಾನು ಕೇಳಿದೆ ನಮ್ಮ ಉಡುಪಿ ಜಿಲ್ಲೆ ಮತ್ತು ಕೊಡಗು ಜಿಲ್ಲೆಗೆ ಒಂದು ಚಿಕ್ಕಾಸು ಕೂಡ ಕೊಟ್ಟಿರಲಿಲ್ಲ. ಮೊನ್ನೆ ಮೊನ್ನೆ ಮಾನ್ಯ ಸದಸ್ಯರಾದ ರಾಮದಾಸ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ಬರಗಾಲಕ್ಕೆಂದು ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು, ನಮ್ಮ ಕೊಡಗು ಜಿಲ್ಲೆಯಲ್ಲೂ ಕೂಡ ಎರಡು ತಾಲ್ಲೂಕುಗಳನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಆದರೆ ಆ ಪಟ್ಟಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ಎಂದು ನೋಡಿದರೆ ದೊಡ್ಡ ಸೊನ್ನೆ. ಈ ರೀತಿ ಈ ರಾಜ್ಯದಲ್ಲಿ ನಡೆಸುವಂತಹ ಸರ್ಕಾರ ಕೊಡಗನ್ನು ಕಡೆಗಾಣಿಸುತ್ತಾ ಬಂದಿದ್ದಾರೆ. ನಮ್ಮ ಡಾಕ್ಟರ್ ನಂಜುಂಡಪ್ಪನವರ ವರದಿಯಲ್ಲೂ ಕೂಡ ತಮಗೆ ವಿಚಾರ ಗೊತ್ತಿರಬೇಕು. ಅವರ ಆಯೋಗದ ವರದಿಯಲ್ಲಿ ಕೊಟ್ಟಿದ್ದಾರೆ. ಕೊಡಗು ಜಿಲ್ಲೆಗೆ ಸೇತುವೆಗಳು, ರಸ್ತೆಗಳಿಗೆ ಹೆಚ್ಚು ಹಣ ಬಿಡುಗಡೆ ಮಾಡಬೇಕು. ಅದರ ಜೊತೆಗೆ ಕೊಡಗಿನಲ್ಲಿ ಒಂದು ಸೈನಿಕ ಶಾಲೆ ಬೇಕಾಗಿದೆ, ಅದರ ಜೊತೆ ಜೊತೆಗೆ ಬಹಳಷ್ಟು ಬುಡಕಟ್ಟಿನ ಜನಾಂಗದವರು ಇದ್ದಾರೆ. ಎನ್ನುವ ವಿಚಾರವನ್ನು ಡಾಕ್ಟರ್ ನಂಜುಂಡಪ್ಪನವರ ಆಯೋಗದ ವರದಿಯಲ್ಲಿ ಕೊಟ್ಟಿದ್ದಾರೆ. ಈ ರೀತಿ ಇದ್ದರೂ ಕೂಡ ನಮ್ಮ ಕೊಡಗನ್ನು ಕಡೆಗಾಣಿಸಿದ್ದಾರೆಂದೂ ಹೇಳಿದರೂ ಕೂಡ ತಪ್ಪಾಗಲಾರದು ಅದರ ಜೊತೆಗೆ ನಮ್ಮ ಅರಣ್ಯ ಮಂತ್ರಿಗಳು ಇಲ್ಲೇ ಇದ್ದಾರೆ.

ಶ್ರೀ ಎಂ. ಎಂ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಅಪ್ಪಚ್ಚು ರಂಜನ್‌ರವರು ನಮ್ಮ ಮಿತ್ರರು. ಮತ್ತು ನಮ್ಮ ಕೊಡಗು ಜಿಲ್ಲೆಯಿಂದ ಬಂದವರು. ಅವರು ಹೇಳಿದಂತೆ ಹೆಚ್ಚು ಹಣ ಕೊಡಬೇಕೆನ್ನುವುದು ನಿಜ. ಕೊಡಬೇಕಾಗಿದೆ. ಅವರು ಎನು ಹೇಳುತ್ತಿದ್ದಾರೆ ಕೊಡಗು ಜಿಲ್ಲೆಯನ್ನು ಕಡೆಗಣಿಸಿದ್ದಾರೆಂದು ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ನಮಗೆ ಸಿಗುವಂತಹ ಅನುದಾನ ಏನು ಇದೆ ಅದು ನಮಗೆ ಬಂದೇ ಬರುತ್ತದೆ. ಅದರಲ್ಲಿ ನಾವು ಸಾಕಷ್ಟು

ಒಳ್ಳೆಯ ರಸ್ತೆಗಳನ್ನು ಮಾಡಿದ್ದೇವೆ. ಮತ್ತು ನಮಗೆ 5 ಹೊಸ ಸೇತುವೆಗಳನ್ನು ಮಂಜೂರು ಮಾಡಿದೆ. ಎಲ್ಲಾ ರೀತಿಯಿಂದಲೂ ಸರ್ಕಾರ ಕೊಡಗಿನ ಹಿತವನ್ನು ಕಾಪಾಡುವಂತಹ ಒಂದು ನೈಜ ದೃಷ್ಟಿಯನ್ನು ಇಟ್ಟುಕೊಂಡಿದೆ. ಇನ್ನೂ ಹೆಚ್ಚು ಹಣ ಬೇಕೆಂದು ಕೇಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೇ ನಾನು ಮಾಹಿತಿಯನ್ನು ಕೊಟ್ಟು ಹೇಳಿದ್ದೇನೆ. ಕೊಡಗು ಜಿಲ್ಲೆಯನ್ನು ಕಡೆಗಾಣಿಸಿದ್ದಾರೆಂದು ನಾನು ಬರೀ ಬಾಯಿ ಮಾತಿನಲ್ಲಿ ಹೇಳಿಲ್ಲ. ಆದರೆ ಒಂದು ರೀತಿಯಲ್ಲಿ ಮೂರು ಜನ ಮಂತ್ರಿಗಳನ್ನು ಕೊಟ್ಟಿದ್ದೀರಿ. ಅದೊಂದು ನಿಜ. ಅದು ಒಳ್ಳೆಯ ಸಾಧನೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಆದರೆ ಆ 3 ಜನಮಂತ್ರಿಗಳಿಗೂ ಗೂಟದ ಕಾರು ಬೇಕಾಗಿಲ್ಲ. ನಮ್ಮ ಟಿ.ಜಾನ್‌ರವರ ಹತ್ತಿರ ಬೆಂಜ್ ಕಾರು ಇದೆ. ಎಲ್ಲರಿಗೂ ಕಾರು ಇದೆ. ಹೋಗಲಿಕ್ಕೆ ಕಾರು ಏನೂ ಬೇಕಾಗಿಲ್ಲ. ಈಗ ನಮ್ಮ ಕೊಡಗಿನಲ್ಲಿ ಕಾಡಾನೆ ಹಾವಳಿ. ಈ ಕಾಡಾನೆ ಹಾವಳಿಯಿಂದ ಬಹಳಷ್ಟು ಆಸ್ತಿಗಳು ನಷ್ಟವಾಗಿವೆ. ಅದರ ಜೊತೆ ಜೊತೆಗೆ ಕಾಡಾನೆಯನ್ನು ಕೊಂದು ದಂತವನ್ನು ಲೂಟಿ ಮಾಡುವಂತಹ ಕೆಲಸ ಕೂಡ ನಡೆದಿದೆ. ಸುಮಾರು 28-2-2000 ಇಸವಿಯಿಂದ ಸುಮಾರು 162 ಆನೆಗಳನ್ನು ಕೊಂದು ದಂತವನ್ನು ಅಪಹರಿಸುವಂತಹ ಕೆಲಸ ಆಗಿದೆ. ಸ್ವಾಮಿ, ಇದು ಸಣ್ಣದೇನೂ ಅಲ್ಲ. 162 ದಂತ. 28-4-2000ನೇ ಇಸವಿಯಿಂದ 31-10-2000ನೇ ಇಸವಿಯವರೆಗೆ ಕಾಡಾನೆಗಳನ್ನು ಕೊಂದು ಹುಣಸೂರು ನಾಗರಹೊಳೆ ವನ್ಯಜೀವಿ ವಿಭಾಗ ಒಂದು. ಮಡಿಕೇರಿ ವಿಭಾಗ, ವೀರಾಜಪೇಟೆ ವಿಭಾಗಗಳು ಸೇರಿ ಸುಮಾರು 162 ಆನೆಗಳನ್ನು ಕೊಂದಿದ್ದಾರೆ. ಇದರ ವಿಚಾರ ಸಂಬಂಧಪಟ್ಟ ಮಂತ್ರಿಗಳು ವಿಚಾರಣೆ ಮಾಡಿದ್ದಾರೋ ಏನೋ ಗೊತ್ತಾಗಲಿಲ್ಲ. ಆದರೆ ಅಲ್ಲಿಯ ಅರಣ್ಯ ಅಧಿಕಾರಿಗಳು ಏನು ಮಾಡಿದ್ದಾರೆಂದರೆ ಆನೆ ಸತ್ತಂತಹ ಸಂದರ್ಭದಲ್ಲಿ ಆ ದಂತ ಏನಾದರೂ ಕದ್ದು ಹೋಗಿದ್ದರೆ ಅದು ಹೆಣ್ಣಾನೆ ಎಂದು ರೆಕಾರ್ಡ್ ಮಾಡಿದ್ದಾರೆ. ದಂತ ಇದ್ದರೆ ಮಾತ್ರ ಅದು ಗಂಡಾನೆ ಎಂದು ರೆಕಾರ್ಡ್ ಮಾಡಿದ್ದಾರೆ. ತಮಗೆ ಬೇಕಾದರೆ ನಾನು ಡೇಟ್‌ವಾರ್ ಮಾಹಿತಿಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಬೇಕಾದರೆ ಮಾನ್ಯ ಮಂತ್ರಿಗಳು ದಿನಾಂಕ 28-4-2000ನೇ ಇಸವಿಯ ದಿವಸ ಒಂದು ಆನೆಯನ್ನು ಕೊಲ್ಲಲಾಗಿದೆ. ಅದನ್ನು ಗಂಡು ಆನೆ ಎಂದು ಘೋಷಣೆ ಮಾಡಿದ್ದಾರೆ. 15-5-2000ರಂದು ಅವತ್ತು ಸಹ ಒಂದು ಆನೆಯನ್ನು ಕೊಲ್ಲಲಾಗಿದೆ. ಅದರ ದಂತವನ್ನು ಅಪಹರಿಸಿದ್ದಾರೆ, ಅದಕ್ಕೆ ಹೆಣ್ಣಾನೆ ಎಂದು ರೆಕಾರ್ಡ್ ಮಾಡಿದ್ದಾರೆ. ಒಂದು ದಂತದ ಬೆಲೆ ಎಷ್ಟು ಇದೆ? ಇದನ್ನು ತಡೆಗಟ್ಟಲಿಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಅಧ್ಯಕ್ಷರು:- ಸಮಯ ಇಲ್ಲ, ಗಂಡಾನೆ, ಹೆಣ್ಣಾನೆ ಇದು ಬೇಡ. ಒಟ್ಟಾರೆ ಹೇಳಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೇ, ನನಗೆ ಯಾವ ಸಂದರ್ಭದಲ್ಲೂ ತಾವು ಅವಕಾಶ ಕೊಡಲಿಲ್ಲ. ಶೂನ್ಯ ವೇಳೆಯಲ್ಲಿ ನಾನು 7-8 ಕಳುಹಿಸಿದ್ದೇನೆ ಅವಕಾಶ ಕೊಡಲಿಲ್ಲ. ನಾವೇನು ಮಾಡಬೇಕು? ಈಗಲಾದರೂ ಭಾಷಣ ಮಾಡಬೇಕು ತಾನೇ ಒಂದು ದಂತದ ಬೆಲೆ ಸುಮಾರು 3 ಲಕ್ಷ ರೂಯಿಂದ 5 ಲಕ್ಷ ರೂವರೆಗೂ ಹೋಗುತ್ತದೆಂದು ನಾನು ಕೇಳಿದ್ದೇನೆ. ಆಗ ಸುಮಾರು 70-80 ಆನೆಗಳ ದಂತ ಅಪಹರಿಸಿದ್ದಾರೆಂದು ಹೇಳಿದರೆ ಅದು ಎಷ್ಟು ಕೋಟಿ ರೂಪಾಯಿಗಳಾಗಿರಬಹುದು ಎಂಬುದನ್ನು ತಾವೇ ತಿಳಿದುಕೊಳ್ಳಬೇಕಾಗುತ್ತದೆ. ಅದರಜೊತೆಗೆ ಆನೆಯ ಸಂತತಿ ಎಷ್ಟು ಕಡಿಮೆಯಾಗುತ್ತದೆಂದು ತಾವು ಯೋಚನೆ

ಮಾಡಬೇಕಾಗುತ್ತದೆ. ಇನ್ನು ಮುಂದಿನ ದಿನಗಳಲ್ಲಿ ಮಕ್ಕಳನ್ನು ಯಾರಾದರೂ ಆನೆ ನೋಡಿದ್ದೀಯಾ ಎಂದು ಕೇಳಿದರೆ ಯಾವುದಾದರೂ ಒಂದು ಕಲ್ಲಿನ ಆನೆ ಇಲ್ಲದಿದ್ದರೆ ಮರದ ಆನೆಯನ್ನು ತೋರಿಸಬೇಕಾಗುತ್ತದೆ ಈ ರೀತಿ ಆನೆ ಇತ್ತು ಅಂತ. ನಮ್ಮಲ್ಲಿ ಪರಿಸ್ಥಿತಿ ಏನಾಗಿದೆ ಅಂದರೆ ಈಗ ಶ್ರೀಗಂಧದ ಮರ ಯಾರಾದರೂ ನೋಡಬೇಕೆಂದು ಹೇಳಿದರೆ ನಮ್ಮ ಗಾರ್ಡನ್‌ನಲ್ಲಿ ನೆಟ್ಟಿರುವ ಮರವನ್ನು ತೋರಿಸಬೇಕು ಇದು ಶ್ರೀಗಂಧದ ಮರ ಅಂತ. ಈ ಸ್ಥಿತಿಯಾಗಿದೆ. ಇದಕ್ಕೆ ಅರಣ್ಯ ಇಲಾಖೆಯವರು ಬಹಳಷ್ಟು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಏನಾಗಿದೆ ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳ ಹುದ್ದೆಗಳು ಹೆಚ್ಚುತ್ತಾ ಹೋಗುತ್ತದೆ. ಆದರೆ ಯಾರು ಈ ವಾಚರ್ಸ್ ಇದ್ದಾರೆ ಯಾರು ಈ ಫಾರೆಸ್ಟರ್ಸ್ ಇದ್ದಾರೆ ಯಾರು ಗಾರ್ಡ್‌ಗಳು ಇದ್ದಾರೆ ಅವರನ್ನು ನೇಮಕ ಮಾಡುತ್ತಿಲ್ಲ. ಒಬ್ಬ ಕನ್ಸರ್‌ವೇಟರ್‌ನ್ನು ನೇಮಕ ಮಾಡುವುದರಲ್ಲಿ ಸುಮಾರು 10 ಜನ ಗಾರ್ಡ್‌ಗಳನ್ನು ನೇಮಕ ಮಾಡಬಹುದು. ಈ ವಿಚಾರನ್ನು ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ಕಾಡಾನೆಗಳು ಏಕೆ ಊರಿಗೆ ಬರುತ್ತವೆ ಎನ್ನುವುದನ್ನೂ ಸಹ ಚಿಂತನೆ ಮಾಡಬೇಕಾಗುತ್ತದೆ. ಯಾರೋ ಒಬ್ಬ ಐ ಎ ಎಸ್ ಅಧಿಕಾರಿ ವರದಿ ಕೊಟ್ಟಿರಬಹುದು. ನಾವು ತೇಗದ ಮರ ನೆಟ್ಟರೆ ಸುಮಾರು 50 ವರ್ಷದಲ್ಲಿ ಇಷ್ಟು ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ವರದಿ ಕೊಟ್ಟಿರಬಹುದು. ಎಲ್ಲಾ ತೇಗದ ಮರ ನೆಟ್ಟಿದ್ದಾರೆ. ಇವತ್ತು ಅರಣ್ಯದಲ್ಲಿ ಆನೆಗಳಿಗೆ ತಿನ್ನಲಿಕ್ಕೆ ಆಹಾರ ಇಲ್ಲ. ಕುಡಿಯಲಿಕ್ಕೆ ನೀರು ಇಲ್ಲ. ತಾವು ಈ ಚಿಂತನೆಯನ್ನು ಮಾಡಿ. ಅರಣ್ಯವನ್ನು ಮಾಡುವಂತಹ ಸಂದರ್ಭದಲ್ಲಿ ಬಿದಿರು, ಹಲಸಿನ ಮರ ನೆಡುವಂತಾದ್ದು ಆಗಬೇಕು, ಅದರ ಜೊತೆಗೆ ಅರಣ್ಯದ ಮಧ್ಯದಲ್ಲಿ ಕೆರೆಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಮಾಡಬೇಕಾಗುತ್ತದೆ. ಆಗ ಆನೆಗಳೂ ಕೂಡ ಬರುವುದನ್ನು ತಡೆಯಬಹುದು. ನಮ್ಮ ಕೊಡಗಿನಲ್ಲಿ 4 ದೊಡ್ಡ ಬೆಟ್ಟಗಳು ಇವೆ.

ಶ್ರೀ ಕೆ.ಹೆಚ್. ರಂಗನಾಥ್:- ಬೆಟ್ಟಕ್ಕೆ ಚಡ್ಡಿ ಹೊಲಿಸಿದ ಹಾಗೆ ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯಮಂತ್ರಿಗಳು ಈ ವಿಚಾರವನ್ನು ದಯವಿಟ್ಟು ಹಗುರವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಕೆ.ಹೆಚ್. ರಂಗನಾಥ್:- ಅವರು ಈಗ ಭಾಷಣ ಮಾಡುತ್ತಾ ಹೇಳುತ್ತಿದ್ದರು. ನಮ್ಮ ಮಲೆನಾಡು ಕೂರ್ಗ್‌ನಲ್ಲೂ ಕೂಡ ಈ ಸಾರಿ ಬರಗಾಲದಿಂದ ನರಳುತ್ತಾ ಇದ್ದೇವೆ. ಮಳೆ ಬರಲಿಲ್ಲವೆಂದು ಹೇಳಿದರು. ಕಳೆದ ಎರಡು ವರ್ಷಗಳಿಂದಲೂ ಅದೇ ಪರಿಸ್ಥಿತಿಯಾಗಿದೆ. ಹಾಗಾಗಿ, ಸಣ್ಣ ಸಣ್ಣ ಝುರಿಗಳೇನಿದೆ ಅದೆಲ್ಲಾ ಒಣಗಿ ಹೋಗಿದೆ. ಅವುಗಳಿಗೆಲ್ಲಾ ನಾನು ನೀರು ಕೊಡಬೇಕೆಂದರೆ ಕರ್ನಾಟಕ ರಾಜ್ಯ ಸರ್ಕಾರದ ದುಡ್ಡಲ್ಲ, ಕೇಂದ್ರ ಸರ್ಕಾರದ ದುಡ್ಡು ತಂದು ಹಾಕಿದರೂ ಆಗುವುದಿಲ್ಲ. ಅದಕ್ಕೇ ನಾನು ಹೇಳಿದ್ದು, ಬೆಟ್ಟಕ್ಕೆ ಚಡ್ಡಿ ಹೊಲಿಸಿದ ಹಾಗೆ ಆಗುತ್ತೆ ಎಂದು.

ಶ್ರೀ ಎಸ್.ಎಸ್. ಪಾಟೀಲ್:- ಕೇವಲ ಮಲೆನಾಡು ಏರಿಯಾ ಅಷ್ಟೇ ಅಲ್ಲ. ರಾಜ್ಯದಲ್ಲಿ ನಮ್ಮ ಭಾಗದಲ್ಲಿಯೂ ಗುಡ್ಡಗಳು ಇವೆ. ಸಾಕಷ್ಟು ಪ್ರಾಣಿ, ಪಕ್ಷಿಗಳೂ ಇವೆ. ಆದರೆ, ಈಗ ಎಲ್ಲಿಯೂ ಕುಡಿಯುವುದಕ್ಕೆ ನೀರು ಇಲ್ಲ. ಎಷ್ಟೋ ಪ್ರಾಣಿ, ಪಕ್ಷಿಗಳು ಜಾಗ ಬಿಟ್ಟು ಹೋಗಿವೆ, ಸತ್ತು ಹೋಗಿವೆ, ನೀರಿಲ್ಲದ ಪರಿಸ್ಥಿತಿ ಇದೆ. ಆ ಕಾರಣದಿಂದ, ಬರಗಾಲ ಕಾಮಗಾರಿಯಲ್ಲೂ ಕೂಡ ನಿಮ್ಮ ಅಧಿಕಾರಿಗಳಿಗೆ ಹೇಳುತ್ತಿದ್ದೇವೆ. ಅಲ್ಲಲ್ಲಿ ಕೆರೆಗಳನ್ನು ನಾವು ಕಡಿದು ಇಡಬೇಕು. ಆಮೇಲೆ ಎಲ್ಲಿ ನೀರು ಬೀಳುತ್ತದೆ, ಬೋರ್ ಹಾಕಿ ನೀರಿನ ವ್ಯವಸ್ಥೆಯನ್ನು

ಮಾಡದೇ ಇದ್ದರೆ, ಪ್ರಾಣಿ ಸಂಕುಲ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ. ದಯವಿಟ್ಟು ಇದನ್ನು ತಾವು ಸೀರಿಯಸ್ಸಾಗಿ ತೆಗೆದುಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ್:- ಬೋರ್ ತೆಗೆದು ಆನೆಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- 'ಫಾರೆಸ್ಟ್‌ನಲ್ಲಿ ನೀವು ಕೆರೆ ಮಾಡುವುದೂ ಬೇಡ, ಚಡ್ಡಿ ಹೊಲಿಸುವುದೂ ಬೇಡ. ಆದರೆ, ಆನೆಗಳು ಊರಿಗೆ ಬರದ ಹಾಗೆ ಹೇಗೆ ತಡೆಗಟ್ಟುತ್ತೀರಿ? ಅದಕ್ಕೇನಾದರೂ ಬಜೆಟ್‌ನಲ್ಲಿ ಹಣ ಇಟ್ಟಿದ್ದೀರಾ, ಅದಾದರೂ ಸ್ವಲ್ಪ ಹೇಳಿ. ಆನೆಗಳನ್ನು ಊರಿಗೆ ಬರದಹಾಗೆ ತಡೆಗಟ್ಟುವುದಕ್ಕೆ ಏನಾದರೂ ಕ್ರಮ ಕೈಗೊಂಡಿದ್ದೀರಾ? ನೀವು ಆನೆಗೆ ಚಡ್ಡಿ ಹೊಲಿಸಬೇಡಿ. ನಿಮ್ಮ ಗಾರ್ಡ್ ಇದ್ದಾರಲ್ಲಾ ಅವರಿಗಾದರೂ ಚಡ್ಡಿ ಹೊಲಿಸಿ. ಅವರಿಗೆ ಹಾಕಲಿಕ್ಕೆ ಬಟ್ಟೆ ಇಲ್ಲ ಸಮವಸ್ತ್ರ ಕೊಟ್ಟಿಲ್ಲ. ಅದರ ಜೊತೆಗೆ ನಮ್ಮ ಕೊಡಗಿನಲ್ಲಿ ನಾಲ್ಕು ದೊಡ್ಡ ಬೆಟ್ಟಗಳು ಇವೆ. ಈ ಬೆಟ್ಟಗಳು, ಕಾಡುಗಳೂ ಇರುವುದರಿಂದ ಹೆಚ್ಚು ಮಳೆ ಬೀಳುತ್ತದೆ. ನಮ್ಮ ಬ್ರಹ್ಮಗಿರಿ ಬೆಟ್ಟ, ಬಹಳ ದೊಡ್ಡದು. ಅದಾದಮೇಲೆ ಪಡಿಯಣ್ಣಮೂಡು, ಆಮೇಲೆ ಪುಷ್ಪಗಿರಿ ಬೆಟ್ಟ, ಮೂರನೆಯದು ಓಟೆ ಬೆಟ್ಟ, ನಾಲ್ಕನೆಯದು ಮೂಕಳಿ ಬೆಟ್ಟ. ಈ ಮೂಕಳಿ ಬೆಟ್ಟದಲ್ಲಿ ಯಾವುದೇ ಅನುಮತಿ ಇಲ್ಲದೆ, ಅರಣ್ಯ ಇಲಾಖೆಯ ಅನುಮತಿ ಇಲ್ಲ, ರೆವಿನ್ಯೂ ಇಲಾಖೆಯ ಅನುಮತಿ ಕೇಳಿಲ್ಲ, ಎನ್.ಒ.ಸಿ. ಕೇಳಿಲ್ಲ, ಗ್ರಾಮ ಪಂಚಾಯ್ತಿಯಿಂದ ಎನ್.ಒ.ಸಿ. ಕೇಳಲಿಲ್ಲ. ಆದರೆ, ಏಕಾಏಕಿ ಊರುಡ್ವೆ ಫಾರೆಸ್ಟನಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು, ಗಣಿ ಕೈಗಾರಿಕೆ ಮಾಡುವಂಥ 83 ಪೀಸ್ ಕಲ್ಲುಗಳನ್ನು ಮಾಡಿದ್ದಾರೆ. ಸುಮಾರು ಒಂದುಭಾಗ ಬೆಟ್ಟವನ್ನೇ ಮುಗಿಸಿಬಿಟ್ಟಿದ್ದಾರೆ. ಆದರೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕೇಳುವವರೇ ಇಲ್ಲ, ಅವರು ಆಡತಕ್ಕ ಮಾತು ಕೇಳಿದರೆ, ದೊಡ್ಡ ದೊಡ್ಡ ಮಂತ್ರಿಗಳ ಹೆಸರುಗಳನ್ನು ಹೇಳುತ್ತಾರೆ. ನನಗೆ ಅವರು ನೆಂಟರು ಎಂದು ಹೇಳುತ್ತಾರೆ, ಸ್ವಾಮೀಜಿಗಳ ಹೆಸರನ್ನು ಹೇಳುತ್ತಾರೆ. ಈ ಸ್ಥಿತಿಯಲ್ಲಿದೆ ಸ್ವಾಮಿ. ನಾನು ಅವರಿಗೆ ಹೇಳಿದೆ, ನೀವು ಸುಮ್ಮನೆ ಮಂತ್ರಿಗಳ ಹೆಸರನ್ನು, ಸ್ವಾಮೀಜಿಗಳ ಹೆಸರನ್ನು ಬೀದಿಗೆ ತರಬೇಡಿ. ತಾವು ಇವರುಗಳನ್ನು ಮಿಸ್‌ಯೂಸ್ ಮಾಡಬೇಡಿ ಎಂದು. ದಯವಿಟ್ಟು ಈ ಗಣಿ ಕೈಗಾರಿಕೆ ಎನುಂಟು, ಅದನ್ನು ತಡೆಯುಂಥ ಕೆಲಸವನ್ನು ಮಾಡಿ. ನಾವು ಯಾವುದೇ ಕಾರಣಕ್ಕೆ ಅದನ್ನು ಒಡೆಯಲಿಕ್ಕೆ ಬಿಡುವುದಿಲ್ಲ. ನಮ್ಮ ಕೊಡಗಿನ ಪ್ರಕೃತಿ ಸೌಂದರ್ಯ ಏನಿದೆ, ಅದನ್ನು ಉಳಿಸಬೇಕು; ಆ ಸಂಪತ್ತನ್ನು ಉಳಿಸಬೇಕೆಂಬುದು ನಮ್ಮ ಆಸೆ. ಯಾರು ಎಷ್ಟು ಕಲ್ಲನ್ನು ಪೀಸ್ ಮಾಡಿ ಇಟ್ಟಿದ್ದೀರಿ, ಅದರ ಬೆಲೆ ಎಷ್ಟು? ನಾನು ಮೊನ್ನೆ ಮಂತ್ರಿಗಳನ್ನೂ ಕೂಡ ಕೇಳಿದೆ. ಅವರಿಗೆ ಹತ್ತುಸಾವಿರ ರೂಪಾಯಿ ಫೈನ್ ಹಾಕಿ ಕೊಟ್ಟುಬಿಡೋಣ ಎಂದರು. ಸ್ವಾಮಿ, ಅದು ಹತ್ತು ಸಾವಿರ ರೂಪಾಯಿಗಳ ಫೈನ್ ಅಲ್ಲ. ಸುಮಾರು ಒಂದು ಕೋಟಿಗೂ ಮೇಲೆ ಇದೆ. ಹತ್ತು ಸಾವಿರಕ್ಕೆ ಕೊಡುವುದಿದ್ದರೆ ಅಲ್ಲಿಯೇ ಕೊಟ್ಟುಬಿಡಿ. ಅದನ್ನು ಬೇರೆ ಜನಕ್ಕೆ ಐದು ಲಕ್ಷಕ್ಕೆ ಕೊಟ್ಟು, ಒಡೆದು ಮನೆ ಕಟ್ಟಲಿಕ್ಕಾದರೂ ಉಪಯೋಗಿಸುತ್ತಾರೆ. ಇಷ್ಟು ದೊಡ್ಡ ಹಗಲು ಲೂಟಿ ಮಾಡಿದ್ದರೂ ಕೂಡ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟಿನವರೂ ಸುಮ್ಮನೆ ಕುಳಿತಿದ್ದಾರೆ. ಅದರ ಜೊತೆಗೆ ಮೂರು ವರ್ಷಗಳ ಹಿಂದೆ ಒಂದು ಷಿಫ್ ಕಂಪನಿಗೆ ಶೌಚಾಲಯ ಕಟ್ಟುವುದಕ್ಕೆ ಕೊಟ್ಟಿದ್ದರು. ಆ ಶೌಚಾಲಯ ಕಟ್ಟುವ ಸಂದರ್ಭದಲ್ಲಿ ಯಾವುದೇ ಟೆಂಡರ್‌ನ್ನು ಕರೆಯಲಿಲ್ಲ. ಆ ಸಂದರ್ಭದಲ್ಲಿ ಸಂಬಂಧಪಟ್ಟ

ಮಂತ್ರಿಗಳಿಗೂ ನಾನು ಪತ್ರವನ್ನು ಬರೆದಿದ್ದೆ. ಆದಗೆ, ಮಂತ್ರಿಗಳಿಂದ ಯಾವುದೇ ಉತ್ತರ ಬರಲಿಲ್ಲ. ಶೌಚಾಲಯವನ್ನು ಕಟ್ಟಿದಂಥ ಸಂದರ್ಭದಲ್ಲಿ, ಆ ಶೌಚಾಲಯಗಳನ್ನು ನಾನು ಉದ್ಘಾಟನೆ ಮಾಡುವುದಿಲ್ಲವೆಂದು ಹೇಳಿದೆ. ಆದರೆ, ಇವತ್ತು ಪತ್ರಿಕೆಯಲ್ಲಿ ಬಂದಿದೆ. ಕೇವಲ ಒಂಭತ್ತು ತಿಂಗಳೊಳಗೆ ಆ ಶೌಚಾಲಯ ಗುಂಡಿ ಬಿದ್ದಿದೆ ಎಂದು ಲೋಕಲ್ ಆಂಧೋಲನ ಪತ್ರಿಕೆಯಲ್ಲಿ ಬಂದಿದೆ. ಈ ರೀತಿ ದುರಾಡಳಿತ ನಡೆಯುತ್ತಾ ಇದೆ. ಈ ಬಜೆಟ್‌ನಿಂದ ಸರ್ಕಾರ ಏನೂ ಸಾಧಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಮುಂದಿನ ಚುನಾವಣೆಯನ್ನು ಯೋಚನೆ ಮಾಡಿ ಈ ಬಜೆಟ್‌ನ್ನು ಮಾಡಿದ್ದಾರೆ. ಇದು ಪ್ರಗತಿಪರ ಬಜೆಟ್ ಅಲ್ಲ. ಕೇಂದ್ರ ಬಜೆಟ್ ವಿಚಾರದಲ್ಲಿ ನಮ್ಮ ಗೌಡರು ಒಂದು ಮಾತು ಹೇಳಿದರು. ಕೇಂದ್ರಸರ್ಕಾರ ಗೊಬ್ಬರದ ಬೆಲೆಯನ್ನು 10 ರೂಪಾಯಿಗಳಷ್ಟು ಹೆಚ್ಚಿಸಿದ್ದಾರೆಂದು ಹೇಳಿದರು. ಇವತ್ತು ಬಜೆಟ್‌ನ್ನು ಪಾಸ್ ಮಾಡತಕ್ಕ ಸಂದರ್ಭದಲ್ಲಿ, ಕೇಂದ್ರಸರ್ಕಾರ ಯಾವ ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡಿದ್ದಾರೆ, ಅದನ್ನು ಕೆಳಗೆ ಇಳಿಸಿದ್ದಾರೆ. ಈ ಸರ್ಕಾರ ಕೂಡ ರೈತರ ಬಗ್ಗೆ ಚಿಂತನೆ ಇಟ್ಟು, ಸಹಕಾರವನ್ನು ಕೊಡುವಂತಾಗಲೀ ಈ ಬಜೆಟ್‌ನಿಂದ ಯಾವುದೇ ಪ್ರಗತಿಪರ ಆಗುವುದಿಲ್ಲ. ಈ ಬಜೆಟ್‌ನ್ನು ಸಂಪೂರ್ಣವಾಗಿ ವಿರೋಧಿಸಿ, ನನ್ನ ಮಾತನ್ನು ಮುಗಿಸುತ್ತೇನೆ, ಧನ್ಯವಾದಗಳು.

+ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ತುರುವೇಕೆರೆ):- ಮಾನ್ಯ ಅಧ್ಯಕ್ಷರೇ, 2003-04ನೇ ಸಾಲಿನ ಆಯವ್ಯದ ಮೇಲೆ ಮಾತನಾಡಲಿಕ್ಕೆ ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಯಾವುದೇ ಒಂದು ಸರ್ಕಾರ ಬಂದಂಥ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಆಗತಕ್ಕ ಅನುಕೂಲಗಳನ್ನು ಒದಗಿಸಿಕೊಡಲಿಕ್ಕೆ, ಒಳ್ಳೆಯ ಕಾರ್ಯಗಳನ್ನು ಮಾಡಿಕೊಡಲಿಕ್ಕೆ ಸರ್ಕಾರ ಆಯವ್ಯಯವನ್ನು ಮಾಡತಕ್ಕಂಥಾದ್ದು. ಅನೇಕ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಬಜೆಟ್‌ನಲ್ಲಿ ಆದ್ಯತೆ ಕೊಟ್ಟಿಲ್ಲ. ಅದರಲ್ಲೂ ಈ ಬಜೆಟ್‌ನಲ್ಲಿ ನೀರಾವರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿಲ್ಲವೆಂಬ ವಾದವನ್ನು ಮಂಡಿಸಲಿಕ್ಕೆ ನಾನು ನಿಂತಿದ್ದೇನೆ. ಮೊನ್ನೆ ತಾನೆ ನಮ್ಮ ನೀರಾವರಿ ಸಚಿವರಾಗಿರತಕ್ಕಂಥ ಮಾನ್ಯ ಹೆಚ್.ಕೆ. ಪಾಟೀಲರು ಮೇಲ್ಮನೆಯಲ್ಲಿ ಅತ್ಯುತ್ತಮವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಇಡೀ ಕರ್ನಾಟಕ ಎಲ್ಲಾ ನೀರಾವರಿ ಯೋಜನೆಗಳು ಎರಡು ವರ್ಷಗಳಲ್ಲಿ ಪೂರ್ಣ ಮಾಡುತ್ತೇವೆಂಬ ಮಾತನ್ನು ಹೇಳಿ, ಬಹಳ ಸೊಗಸಾದ ಉತ್ತರವನ್ನು ಕೊಟ್ಟಿದ್ದಾರೆ. ಅದೇ ಮಂತ್ರಿಗಳು ನಮ್ಮ ಹೇಮಾವತಿ ಯೋಜನೆಗೆ ಸಂಬಂಧಪಟ್ಟಂತೆ ಕಳೆದ ಮೂರು ದಿವಸಗಳ ಹಿಂದೆ, ವಿಧಾನ ಸೌಧದಲ್ಲಿ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದರು. ಆ ಸಂದರ್ಭದಲ್ಲಿ ನಮ್ಮ ಹೇಮಾವತಿ ಯೋಜನೆ 1968ನೇ ಇಸವಿಯಲ್ಲಿ 16 ಕೋಟಿ ರೂಪಾಯಿಗಳಿಗೆ ಪ್ರಾರಂಭವಾಗಿರತಕ್ಕ ಯೋಜನೆ ಇವತ್ತಿನದಿವಸ ಅದು ಪೂರ್ಣಗೊಳ್ಳದೇ ಹಾಸನ ಜಿಲ್ಲೆ, ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆ ಈ 3-4 ಜಿಲ್ಲೆಗಳಿಗೆ ಅತ್ಯುತ್ತಮವಾಗಿರತಕ್ಕಂಥ ನೀರಾವರಿ ಯೋಜನೆ 1994-95ಕ್ಕೆ ಮುಗಿಯಬೇಕಾಗಿತ್ತು. ಸನ್ಮಾನ್ಯ ಹಿರಿಯರಾಗಿರತಕ್ಕಂಥ ವೈ.ಕೆ. ರಾಮಯ್ಯನವರು ಈ ಸದನದಲ್ಲಿ ಆಸೀನರಾಗಿದ್ದಾರೆ. ಅವರೂ ಕೂಡ ಇದರ ಬಗ್ಗೆ ತುಂಬಾ ಹೋರಾಟ ಮಾಡಿ ಈ ಯೋಜನೆ ಬಗ್ಗೆ ಕೇಳಿಕೊಂಡಿದ್ದರು. ಈ ದೃಷ್ಟಿಯಲ್ಲಿ ಕಳೆದ 10 ವರ್ಷಗಳಲ್ಲಿಯೂ ಮುಗಿಯಬೇಕಾಗಿರತಕ್ಕ ಈ ಯೋಜನೆ, ಇನ್ನೂ ಕೂಡ 140ನೇ ಕಿಲೋಮೀಟರನ್ನು ದಾಟಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಇನ್ನೂ ಕೂಡ ನಮ್ಮ ತುಮಕೂರು ಜಿಲ್ಲೆಯಲ್ಲಿ ನಾಲ್ಕಾರು ತಾಲ್ಲೂಕುಗಳಿಗೆ ನೀರನ್ನು ಕೊಡಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ಏಕೆ ಈ ಮಾತನ್ನು ಉಲ್ಲೇಖ ಮಾಡಲಿಕ್ಕೆ ತಮ್ಮ ಮುಂದೆ ನಿಂತಿದ್ದೇನೆ,

ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯನ್ನು ಬಾರಿಸಲಿಕ್ಕೆ ಹೇಳುತ್ತಿದ್ದೇನೆಂದರೆ ಕಳೆದ ಮೂರು ವರ್ಷಗಳಿಂದಲೂ ಸತತವಾಗಿ ಬರಗಾಲ ತಾಂಡವವಾಡತಕ್ಕ ಈ ಸಂದರ್ಭದಲ್ಲಿ ಹೇಮಾವತಿ ನೀರನ್ನು ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆ ಮತ್ತು ಹಾಸನ ಜಿಲ್ಲೆಗೆ ಬಿಡಬೇಕಾದಂಥ ಸಂದರ್ಭದಲ್ಲಿ ಐ.ಸಿ.ಸಿ. ಮೀಟಿಂಗ್‌ನಲ್ಲಿ ಕಳೆದ ವರ್ಷ ತೀರ್ಮಾನವಾಗಿರತಕ್ಕ ಸಂಗತಿ ಮೇಲೆ ತುಮಕೂರು ಜಿಲ್ಲೆಗೆ ಏಳೂವರೆ ಟಿಎಂಸಿ ನೀರನ್ನು, ಕುಡಿಯತಕ್ಕ ನೀರಿಗೆ ಸಣ್ಣ ಕೆರೆಕಟ್ಟೆಗಳಿಗೆ ಬಿಡಬೇಕೆಂಬ ತೀರ್ಮಾನವಾಗಿದ್ದರೂ ಕೂಡ, ಪರಿಪೂರ್ಣವಾದಂಥ ನೀರನ್ನು ಕೊಡಲಿಕ್ಕೆ ಈ ವರ್ಷ ಸಾಧ್ಯವಾಗಲಿಲ್ಲ. ಏಕೆ ಎಂಬ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೇವಲ 2 ರಿಂದ 3 ಟಿ.ಎಂ.ಸಿ. ನೀರನ್ನು ಕೊಟ್ಟು, ಬಾಕಿ ಉಳಿದಿರತಕ್ಕ ನೀರನ್ನು ತಮಿಳುನಾಡಿಗೆ ಬಿಟ್ಟಂಥಾದ್ದು. ಇವತ್ತು ಇಡೀ ತುಮಕೂರು ಜಿಲ್ಲೆಯ ಕೆರೆ ಕಟ್ಟೆಗಳನ್ನು ತುಂಬಿಸಲಿಕ್ಕೆ ಸಾಧ್ಯವಾಗಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿ ಆಯಿತು; ಗೋಗರೆದಿದ್ದಾಯಿತು. ಕುಡಿಯುವ ನೀರಿಗೆ ಇವತ್ತು ಬಹಳ ಹಾಹಾಕಾರವಾಗಿರತಕ್ಕಂಥಾದ್ದು. ಅಂತಹ ಒಂದು ಸಂದರ್ಭದಲ್ಲಿ ಇವತ್ತು ಹೇಮಾವತಿ ಯೋಜನೆಗೆ ಹಣವನ್ನು ಜಾಸ್ತಿ ಇಡಬೇಕೆಂಬ ಒತ್ತಾಯವನ್ನು ಕಳೆದ ಮೂರು ವರ್ಷಗಳಿಂದಲೂ ಕೂಡ ಎಲ್ಲಾ ಶಾಸಕರೂ ಸನ್ಮಾನ್ಯ ಸಚಿವರಿಗೆ ಮತ್ತು ಮಾನ್ಯಮುಖ್ಯಮಂತ್ರಿಗಳಿಗೆ ನಿವೇದನೆ ಮಾಡಿದ್ದೇವೆ.

5.30 ಪಿಎಂ

ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ಈ ಯೋಜನೆಗಳಲ್ಲಿ ಇತ್ತೀಚಿನ ದಿವಸಗಳಲ್ಲಿ ಪೆಂಡಿಂಗ್ ಬಿಲ್‌ಗಳು ಸುಮಾರು 45 ಕೋಟಿ ರೂ.ಗಳಷ್ಟು ಬಾಕಿ ಇದೆ. ಕೆಲಸ ಮಾಡಿರತಕ್ಕಂಥ ಕಂಟ್ರಾಕ್ಟರ್ಸ್ ಇರಹುದು, ಅಲ್ಲಿ ಕೆಲಸ ಮಾಡಿರತಕ್ಕಂಥವರಿಗೆ ಬಿಲ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವರು ಈಗಾಗಲೇ ನೂರಾರು ಧರಣಿಗಳನ್ನು ಕಚೇರಿ ಮುಂದೆ ಮಾಡಿರತಕ್ಕಂಥಾದ್ದು ಆಗಿದೆ. ಆದರೂ ಇವೊತ್ತಿನವರೆಗೆ ಅವರಿಗೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ನಂತರದ ದಿವಸಗಳಲ್ಲಿ ಈ ಒಂದು ಯೋಜನೆಗೆ ರೈತರುಗಳ ಜಮೀನನ್ನು ಅಕ್ವೈರ್ ಮಾಡಿರತಕ್ಕಂಥ ಸಂದರ್ಭದಲ್ಲಿ ನಮ್ಮ ತುಮಕೂರು ಜೋನ್‌ಗೆ ಸುಮಾರು 26 ಕೋಟಿ ರೂ.ಗಳನ್ನು ಲ್ಯಾಂಡ್ ಅಕ್ವಯರ್ ಮಾಡಿರತಕ್ಕಂಥ ರೈತರುಗಳಿಗೆ ಕೊಟ್ಟಿಲ್ಲ. ಈಗಾಗಲೇ ಕಳೆದ 2-3 ವರ್ಷಗಳಿಂದಲೂ ಕೂಡ ಸರಕಾರ ಬಂದ ನಂತರವೂ ಅವರು ಎಲ್‌ಓಸಿಯಲ್ಲಿ ಅದಕ್ಕಾಗಿ 20 ಪರ್ಸೆಂಟ್ ಹಣವನ್ನು ಮೀಸಲಾಗಿಡುತ್ತೇವೆಂಬ ಮಾತನ್ನು ಹೇಳಿದರು. ಆದರೆ ಇವೊತ್ತಿನವರೆಗೂ ಒಬ್ಬ ರೈತನಿಗೂ ಹಣವನ್ನು ಕೊಡಲು ಆಗಲಿಲ್ಲ. ಅದಕ್ಕೆ ಯಾವ ರೈತರು ಜಮೀನನ್ನು ಕಳೆದುಕೊಂಡಿದ್ದಾರೆ ಅವನಿಗೆ ಪರಿಪೂರ್ಣವಾದ ಹಣವನ್ನು ಕೊಡಲಿಕ್ಕೆ ಬಜೆಟ್‌ನಲ್ಲಿ ಯಾವುದೇ ಮಾತುಗಳಿಲ್ಲ. ಅವರಿಗೆ ಹಣವನ್ನು ಕೂಡಲೇ ಕೊಡತಕ್ಕಂಥಾದ್ದು ಆಗಬೇಕು. ತಪ್ಪು ಮಾಹಿತಿಯನ್ನು ಕರ್ನಾಟಕದ ಐದುಕೋಟಿ ಜನಸಂಖ್ಯೆಗೆ ಕೊಡತಕ್ಕಂಥಾದ್ದು ಸರಿಯಲ್ಲ ಎಂಬುದನ್ನು ನಾನು ಹೇಳಬಯಸುತ್ತೇನೆ. ಈ ಹೇಮಾವತಿ ಯೋಜನೆಯನ್ನು ಮುಗಿಸಲಿಕ್ಕೆ ಸರಕಾರದ ಮಾಹಿತಿ ಪ್ರಕಾರ 2200 ಕೋಟಿ ರೂ.ಗಳ ಹಣ ಬೇಕಾಗುತ್ತದೆ. ಆದರೆ ಹಣ ಇಟ್ಟಿರತಕ್ಕಂಥಾದ್ದು ಎಷ್ಟು ? ಕೇವಲ 23 ಕೋಟಿ ರೂ.ಗಳು ಮಾತ್ರ. ಅದರಲ್ಲಿ 20 ಕೋಟಿ ರೂ.ಗಳು ಸ್ಯಾಲರಿಗೆ ಹೋಗುತ್ತದೆ. ಇನ್ನೂ ಕೂಡ 47 ಕೋಟಿ ರೂ.ಗಳು ಪೆಂಡಿಂಗ್ ಇರತಕ್ಕಂಥ ಸಂದರ್ಭದಲ್ಲಿ, ಅದು ಸಾಕಾಗುವುದಿಲ್ಲವೆಂಬ ವಿಚಾರವನ್ನು ಹೇಳಿದ್ದೇವೆ, ಕನಿಷ್ಟಪಕ್ಷ ಈ ಒಂದು ಮೂರು ಜಿಲ್ಲೆಗಳ ಕುಡಿಯುವ ನೀರಿನ ವಿಚಾರ ಬಂದಾಗ, ಈ ಒಂದು ಕಾವೇರಿ ಜಲಾನಯನ ಯೋಜನೆಯಲ್ಲಿ ಬರತಕ್ಕಂಥ 29

ಏತನೀರಾವರಿ ಯೋಜನೆಗಳು ಕೂಡ ಇದರಲ್ಲಿ ಸೇರಿಕೊಂಡಿವೆ. ಅವುಗಳು ಸೇರಿಕೊಂಡಂತೆ ಕೆಲವು ಇನ್ನೂ ಕೂಡ ಸರ್ವೆ ಕಾರ್ಯ ಆರಂಭವಾಗಿಲ್ಲ. ಆದ್ದರಿಂದ ಈ ಯೋಜನೆಗೆ ಕಡಿಮೆ ಎಂದರೆ 200 ಕೋಟಿ ರೂ.ಗಳ ಹಣವನ್ನಾದರೂ ಕೂಡ ಇಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಅಲ್ಲಿ ಏನು ಕೆಲಸ ಆಗಿಲ್ಲ, ಆಗಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡುವುದು ಬೇಡ ಎಂದು ಬೇಡಿಕೊಳ್ಳುತ್ತೇನೆ. ಅದು ಏಕೆ ಎಂದು ನಾನು ಅವರಿಗೆ ಹೊರಗಡೆಯಲ್ಲಿ ಹೇಳುತ್ತೇನೆ. ಸಾರ್ವಜನಿಕವಾಗಿ ಇದನ್ನೆಲ್ಲಾ ಹೇಳುವುದು ಬೇಡವೆಂದು ನನ್ನ ಪ್ರಾರ್ಥನೆ, ಅವರು ಬೇರೆ ವಿಷಯಗಳನ್ನು ಮಾತನಾಡಲಿ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:- ಸನ್ಮಾನ್ಯ ಹಿರಿಯರಾಗಿರತಕ್ಕಂಥ ರಾಮಯ್ಯರವರು ಹೇಳಿದ್ದಾರೆ. ಅವರು ಪರಿಪೂರ್ಣವಾದ ವಿಚಾರಗಳನ್ನು ತಿಳಿದುಕೊಂಡಿರ ತಕ್ಕಂಥವರು. ನಾನು ಆ ಬಗ್ಗೆ ಹೆಚ್ಚು ವಿಚಾರಗಳನ್ನು ಹೇಳಲು ಹೋಗುವುದಿಲ್ಲ. ಆದರೆ ಮನನೊಂದು ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಮ್ಮ ಹೇಮಾವತಿ ಯೋಜನೆಗೆ ಈ ವರ್ಷ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರತಕ್ಕಂಥ ಸಂದರ್ಭದಲ್ಲಿ ನಾನು ಈ ವಿಚಾರವನ್ನು ಹೇಳಬಯಸುತ್ತೇನೆ. ಅದಕ್ಕೋಸ್ಕರ ಕನಿಷ್ಟಪಕ್ಷ 200 ರಿಂದ 300 ಕೋಟಿ ರೂ.ಗಳ ಹಣವನ್ನಾದರೂ ಕೂಡ ಈ ಯೋಜನೆಗೆ ಕೊಡಬೇಕೆಂದು ಹೇಳುತ್ತಾ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳೂ ಅವರೇ ಆಗಿರತಕ್ಕಂಥ ಸಂದರ್ಭದಲ್ಲಿ, ಒಂದೇ ಒಂದು ಉದಾಹರಣೆಯನ್ನು ತಮಗೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಇಡೀ ರಾಜ್ಯದಲ್ಲಿಯೇ ಅತ್ಯುತ್ತಮವಾಗಿರತಕ್ಕಂಥ ಆಸ್ಪತ್ರೆ ಅಂದರೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆ. ನರರೋಗ ವಿಜ್ಞಾನಕ್ಕೆ ಸಂಬಂಧಪಟ್ಟ ಹಾಗೆ ಇದು ರಾಷ್ಟ್ರದಲ್ಲಿಯೇ ಹೆಸರುವಾಸಿ ಆಸ್ಪತ್ರೆಯಾಗಿದೆ. ಪ್ರತಿ ದಿವಸ 1000 ದಿಂದ 1200 ರೋಗಿಗಳು ಬರತಕ್ಕಂಥ ಆಸ್ಪತ್ರೆಗೆ ಇವೊತ್ತಿನ ದಿವಸ ನಮ್ಮ ಸರಕಾರ ಮೂರು ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಕಡಿತ ಮಾಡಿದೆ. ದಯಮಾಡಿ ಇದು ಆಗಬಾರದು. ಏಕೆಂದರೆ ನಿನ್ನೆ ತಾನೆ, ಲೋಕಾಯುಕ್ತ ಧಾಳಿಯಾಗಿರತಕ್ಕಂಥ ವಿಚಾರಗಳು ಬಂದಾಗ ಏನಾಯಿತು ಎಂಬುದು ಗೊತ್ತಿದೆ, ಅದರ ಬಗ್ಗೆ ನಾನು ಹೇಳಬಯಸುವುದಿಲ್ಲ. ರಾಜ್ಯದಲ್ಲಿನ ಜನಸಂಖ್ಯೆಯ 9-10 ಪರ್ಸೆಂಟ್‌ನಷ್ಟು ಜನರು ಮಾನಸಿಕ ಖಾಯಿಲೆಗಳಿಗೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ಈ ಒಂದು ಅತ್ಯುತ್ತಮ ಆಸ್ಪತ್ರೆಯ ಆರ್ಥಿಕ ಬಲವನ್ನು ಕ್ಷೀಣಿಸ ತಕ್ಕಂಥ ವ್ಯವಸ್ಥೆಯು ಈ ಸರಕಾರದ್ದಾಗಿದೆ, ಆದ್ದರಿಂದ ಕಡಿತ ಮಾಡಿರತಕ್ಕಂಥ ಹಣವನ್ನು ಪುನಃ ಒದಗಿಸಿಕೊಟ್ಟು ಆ ಆಸ್ಪತ್ರೆಯ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತಾ ಅಬಕಾರಿಯನ್ನು ಸೇಲ್‌ಟ್ಯಾಕ್ಸ್‌ನಿಂದ ವಿಭಾಗ ಮಾಡಿರತಕ್ಕಂಥಾದ್ದು. ಅದು ಹೀಗೆ ಆಗಬಾರದು, ಇದರಿಂದ ಸಾವಿರಾರು ಕೋಟಿ ರೂ.ಗಳು ನಷ್ಟವಾಗುತ್ತವೆ. ಇವೊತ್ತಿನ ದಿವಸ ಪರಿಶಿಷ್ಟ ಜಾತಿ:ಪಂಗಡಗಳಿಗೆ, ವೈಯಕ್ತಿಕವಾಗಿ ಒಂದೊಂದು ಕೊಳವೆ ಭಾವಿಯನ್ನು ಕೊಡಲಾಗುವುದು ಎಂಬ ಉತ್ತರವನ್ನು ಸರಕಾರದವರು ಕೊಟ್ಟಿದ್ದಾರೆ. ತಾವೇನು 50000 ಕೊಳವೆ ಭಾವಿಗಳನ್ನು ಈ ವರ್ಗದವರಿಗೆ ರಾಜ್ಯದಲ್ಲಿ ಕೊರೆಸಿ ಕೊಡುತ್ತೇವೆಂದು ಹೇಳಿದ್ದೀರಿ, ಆ ಉದ್ದೇಶಕ್ಕಾಗಿ ಬಜೆಟ್‌ನಲ್ಲಿ ಹಣವನ್ನು ಇಟ್ಟು ಆ ಜನಾಂಗದವರಿಗೆ ಉತ್ತೇಜನ ಕೊಡಬೇಕೆಂಬ ಬಗ್ಗೆ ಆಗ್ರಹ ಮಾಡುತ್ತೇನೆ.

ಇನ್ನು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿನ ವೈದ್ಯರ ಕೊರತೆಯ ವಿಚಾರ. ಇದು ನನ್ನ ಒಬ್ಬರ ಪ್ರಶ್ನೆಯಲ್ಲ. ಎಲ್ಲಾ ಶಾಸಕರ ಆಗ್ರಹ ಇದಾಗಿದೆ. ಗ್ರಾಮಾಂತರ

ಪ್ರದೇಶದಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ 570 ವೈದ್ಯರ ಹುದ್ದೆಗಳು ಇನ್ನೂ ಖಾಲಿ ಇವೆ. ನಮ್ಮ ಆರೋಗ್ಯ ಸಚಿವರು ಕಳೆದ ಎರಡು ವರ್ಷಗಳಿಂದಲೂ ಹೇಳುತ್ತಾ ಇದ್ದಾರೆ. ಖಾಲಿ ಹುದ್ದೆಗಳನ್ನು ತುಂಬುತ್ತೇವೆಂದು ಹೇಳುತ್ತಾ ಇದ್ದಾರೆ. ಆದರೆ ತುಂಬಿಲ್ಲ. ರಾಜ್ಯದಲ್ಲಿನ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಒಟ್ಟು 790 ವೈದ್ಯರ ಹುದ್ದೆಗಳು ಖಾಲಿ ಇವೆ ಎಂದು ಉಲ್ಲೇಖ ಮಾಡಿದ್ದಾರೆ. ಅವರಿಗೆ ಎರಡು ತಿಂಗಳುಗಳಿಂದ ಸಂಬಳವನ್ನು ಕೊಟ್ಟಿಲ್ಲ. ದಯಮಾಡಿ ಅವರಿಗೆ ಸಂಬಳವನ್ನು ಕೂಡಲೇ ಕೊಡುವ ವ್ಯವಸ್ಥೆಯಾಗಬೇಕು. ಹಾಗೂ ಖಾಲಿ ಇರುವ 790 ವೈದ್ಯರ ಹುದ್ದೆಗಳನ್ನು ತಕ್ಷಣ ತುಂಬಬೇಕು. ಹಾಗೂ ಗ್ರಾಮೀಣಾಭಿವೃದ್ಧಿಗೆ ಇನ್ನೂ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಈ ಒಂದು ಬಜೆಟ್‌ನಲ್ಲಿ ಗ್ರಾಮೀಣ ಜನತೆಗೆ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಹಣವನ್ನು ಇಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಆಗ್ರಹ ಮಾಡಿ ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು, ಮಾನ್ಯ ಮುಖ್ಯಮಂತ್ರಿಗಳೇನು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ, ಅದರ ಬಗ್ಗೆ ಮಾತನಾಡಲು ಸಾಕಷ್ಟು ವಿಷಯಗಳಿದ್ದಾವೆ. ಆದರೆ ಸಮಯದ ಅಭಾವದಿಂದಾಗಿ ಕೆಲವೊಂದು ವಿಷಯಗಳನ್ನು ನಾನು ಟಚ್ ಮಾಡಲು ಬಯಸುತ್ತೇನೆ. ಇಂಥ ಸಮಸ್ಯೆಗಳು ಬಂದಾವು ಎಂಬ ಸಂಶಯವಿತ್ತು. ನಮ್ಮ ಪ್ಲಾನ್ ಪ್ರಕಾರ 29ರ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗಿತ್ತು. ಇವೊತ್ತು ಉತ್ತವರನ್ನು ಕೊಡುತ್ತೇವೆಂದು ಹೇಳಿದ ಕಾರಣ ನಮಗೆ ಸಮಯದ ಅಭಾವವಾಗಿದೆ, ಪ್ರಮುಖವಾದ ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಒಂದು ಬಜೆಟ್ ಬಗ್ಗೆ, ನಾವು ಒಟ್ಟಾರೆ ಹೇಳಬೇಕಾದರೆ, ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ಯೋಜನೆಗಳನ್ನೇನು ಘೋಷಣೆ ಮಾಡಿದ್ದಾರೆ, ಹಾಗೆಯೇ ಕೆಲವೊಂದು ವರ್ಗದ ಜನರನ್ನು ಗುರುತು ಮಾಡಿಕೊಂಡು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಇನ್ನು ಕೆಲವೊಂದು ಅಂಕಿಸಂಖ್ಯೆಗಳನ್ನು ನೋಡಿದಾಗ, ಇದೊಂದು ರಾಜ್ಯ ಸರಕಾರ ಸಾಲದ ಮೇಲೆ ಬದುಕುತ್ತಿರುವ ಸರ್ಕಾರ ಎಂದು ಹೇಳಬಹುದು, ಮತ್ತು ಕೇವಲ ಘೋಷಣೆ, ಹೊಸ ಯೋಜನೆಗಳ ಅಂದಚಂದದ ಮೇಲೆ ಬಜೆಟ್ ಮೂಲಕ ಜನಾಕರ್ಷಣೆ ಮಾಡಲು ರೂಪ ಕೊಟ್ಟಂಥ ಬಜೆಟ್ ಎಂತಲೂ ಹೇಳಬಹುದು. ಅದರ ಜೊತೆಗೆ ಕೆಲವೊಂದು ವಿಶ್ವವಿದ್ಯಾನಿಲಯಗಳನ್ನು ಘೋಷಣೆ ಮಾಡಿ, ಪ್ರಾದೇಶಿಕ ಅಸಮಾನತೆಯನ್ನು ನೀಗಿಸಲು ಒಂದಷ್ಟು ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದು ತೋರುವ ಮತ್ತು ಇದೊಂದು ಕಣ್ಣೊರೆಸುವ ತಂತ್ರ ಎಂದು ನಾನು ಹೇಳಬೇಕಾಗುತ್ತದೆ. ಇಲ್ಲಿ ಮುಖ್ಯವಾಗಿ ಯಾವುದೇ ಒಂದು ಬಜೆಟ್ ಮಂಡನೆಯಾಗುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಗೊತ್ತುಗುರಿ ಮತ್ತು ಆ ವರ್ಷದ ನಿರ್ದಿಷ್ಟ ಕಾರ್ಯಕ್ರಮಗಳು plan and non plan expenditures ಮತ್ತು ಆ ಆಯವ್ಯಯವನ್ನು maintain ಮಾಡಿಕೊಂಡು ಹೋಗುವಂತಹ balance ಇದು ಬಹಳ ಮುಖ್ಯವಾದದ್ದು. ಅದರ ಜೊತೆಗೆ ನಾನು ಮೊಟ್ಟಮೊದಲಿಗೇ ಪ್ರಸ್ತಾಪ ಮಾಡಬಯಸುವುದು ಈಗಾಗಲೇ ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಈ on line lottery ಬಗ್ಗೆ. ಯಾಕೆಂದರೆ ನಾನು beginning ನಲ್ಲಿಯೇ ಪ್ರಸ್ತಾಪ ಮಾಡುತ್ತಿದ್ದೆ. ಇವತ್ತು ಏನಾಗಿದೆ ಅಂದರೆ ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚಿಂತನೆಯಾಗಿ ಸಾಕಷ್ಟು ಚರ್ಚೆಯಾಯಿತು. on line lottery ಬಗ್ಗೆ ಸಾಕಷ್ಟು ವಿರೋಧ

ಇವತ್ತು ಆಗಿದೆ. ಸಾರ್ವಜನಿಕರಿಂದ, ಸಂಘಸಂಸ್ಥೆಗಳಿಂದ ಇವತ್ತು ವಿರೋಧ ಆಗುತ್ತಾ ಇದೆ. ಆದರೂ ಮಾನ್ಯ ಮುಖ್ಯಮಂತ್ರಿಗಳು ಒಂದು ಹಠ ತೊಟ್ಟಂತೆ ಅದೊಂದು ಪ್ರತಿಷ್ಠೆ ಪ್ರಶ್ನೆಯನ್ನಾಗಿ ಮಾಡಿಕೊಂಡು ಇಲ್ಲ ನಾನು ಈ on line lottery ಯನ್ನು ಮುಂದುವರೆಸುತ್ತೇನೆಂದು ಹೇಳುತ್ತಿದ್ದಾರೆ. ಇಲ್ಲಿ ಏನು ಒಂದು ಪ್ರಶ್ನೆ ಬರುತ್ತದೆ ಮತ್ತು ಅದಕ್ಕೆ ಪೂರಕವಾಗಿ ಈ ರೀತಿಯೆಲ್ಲಾ ವಿರೋಧ ಬಂದ ಸಂದರ್ಭದಲ್ಲಿ ಇದನ್ನು ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಮಧ್ಯಾಹ್ನದ ಊಟಕ್ಕೆ ಆ ಆದಾಯವನ್ನು ಉಪಯೋಗ ಮಾಡುತ್ತೇನೆ ಎಂದು ಬಜೆಟ್‌ನಲ್ಲಿ ಏನು mention ಮಾಡಿದ್ದಾರೆ ಇದರಲ್ಲಿ ಒಂದು ನೈತಿಕತೆ ಪ್ರಶ್ನೆ ಬರುತ್ತದೆ. ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ನಾನು ಹೆಚ್ಚು ಹೇಳುವುದಿಲ್ಲ. ಇವತ್ತು ನಾವು ಆರ್ಥಿಕವಾಗಿ ನಾವೇನಾದರೂ ಹಿಂದೆ ಬಿದ್ದರೆ ಆದಾಯದಲ್ಲಿ ಒಂದಷ್ಟು ಕಡಿಮೆಯಾದರೆ ಆರ್ಥಿಕವಾಗಿ ಹೆಚ್ಚೂಕಡಿಮೆ ಆದರೆ ಅದನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ನಮಗೆ ಸಾಕಷ್ಟು ಮಾರ್ಗಗಳಿದ್ದಾವೆ. ಆದರೆ ಒಂದು ಸಲ ನೈತಿಕತೆಯನ್ನು ನಾವು ಕಳೆದುಕೊಂಡರೆ ನಮ್ಮ ಮನುಷ್ಯನಲ್ಲಿರುವ ಸಮಾಜದಲ್ಲಿರುವ ಆ ಸಂಸ್ಕೃತಿ ಆ ಪರಂಪರೆ ಆ ನೈತಿಕತೆಯನ್ನು ನಾವು ಕಳೆದುಕೊಂಡರೆ ಅದನ್ನು ಬಹುಶಃ ಯಾವ ಬೆಲೆ ಕೊಟ್ಟಾದರೂ ಅದನ್ನು ನಾವು ಸುಧಾರಣೆ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ. ಅದಕ್ಕಾಗಿ ಈ on line lottery ಯನ್ನು ಮುಂದುವರೆಸುವಂತಹದು ಈ ಅಕ್ಷರದಾಸೋಹ ಕಾರ್ಯಕ್ರಮಕ್ಕೆ ನಾವು ಆ ಆದಾಯ ಕೊಡುತ್ತೇವೆ ಎಂದು ಅದಕ್ಕೆ ಒಂದು ಬೇರೆ ರೀತಿಯ ರೂಪವನ್ನು ಕೊಟ್ಟು ಜನರನ್ನು ಮರುಳು ಮಾಡಿ ಇದನ್ನು ಮುಂದುವರೆಸುವ ಕಾರ್ಯಕ್ರಮವೇನು ಹಾಕಿಕೊಳ್ಳುತ್ತಿದ್ದೀರಲ್ಲಾ ಇದರಿಂದ ಮುಂದೆ ಬರುವ ದಿನಗಳಲ್ಲಿ ಜನ ಈ ಸರ್ಕಾರಕ್ಕೆ ತಕ್ಕ ಪಾಠ ಕಲಿಸುವರು ಎಂಬ ಎಚ್ಚರಿಕೆ ಮಾತು ಇಲ್ಲಿ ನಾನು ಹೇಳಬಯಸುತ್ತಿದ್ದೇನೆ. ಅಧ್ಯಕ್ಷರೇ, ಇಲ್ಲಿ ಮುಖ್ಯವಾಗಿ ನಾನು ಪ್ರಸ್ತಾಪ ಮಾಡುವಂತಹದು ಇವತ್ತು ನಾವು ರೈತರ ಪರವಾಗಿದ್ದೇವೆ ಗ್ರಾಮೀಣ ಅಭಿವೃದ್ಧಿ ಬಗ್ಗೆ ನಾವು ಹೆಚ್ಚು ಒತ್ತು ಕೊಡುತ್ತೇವೆ ಎಂಬ ಬಗ್ಗೆ ಮುಖ್ಯಮಂತ್ರಿಗಳು ಇಲ್ಲಿ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಹಲವಾರು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಂತಹ ರೈತರ ಕುಟುಂಬಕ್ಕೆ ಪರಿಹಾರ ಕೊಡುವುದು - ಇದನ್ನು ಕಳೆದ ಎರಡು ವರ್ಷದಿಂದ ನಾವು ಪ್ರತಿಪಕ್ಷಗಳು ಸದನದಲ್ಲಿ ಒತ್ತಾಯ ಮಾಡುತ್ತಾ ಬಂದೆವು. ಡಾ।। ವೀರೇಶ್ ವರದಿ ಇರಬಹುದು, ಅದನ್ನೂ ಬದಿಗೊತ್ತಿ ಇವತ್ತು ರೈತರು ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆ ಕುಟುಂಬಕ್ಕೆ ಪರಿಹಾರ ಕೊಡಿ ಅಂತ ನಾವು ಒತ್ತಾಯ ಮಾಡಿದ್ದೆವು, ಅದು ಕೊನೆಗೂ ಸರ್ಕಾರದ ಕಣ್ಣು ತೆರೆಸಿದೆ. ಸರ್ಕಾರ ಸ್ಪಂದನ ಮಾಡಿದೆ. ಮುಖ್ಯಮಂತ್ರಿಗಳೇನು ಒಂದು ಲಕ್ಷ ರೂ. ಪರಿಹಾರಧನ ಘೋಷಣೆ ಮಾಡಿದ್ದಾರೆ ಇವತ್ತು Assistant Commissioner ನೇತೃತ್ವದಲ್ಲಿದ್ದ Committee ಮೂಲಕ ಮೂರು ತಿಂಗಳೊಳಗಾಗಿ time bound fix ಮಾಡಿದ್ದಾರಲ್ಲಾ ಅದು ಸರಿಯಾದ ಕ್ರಮವೆಂದು ನಾನು ಹೇಳುತ್ತಾ ಇದ್ದೇನೆ. ಅದೇ ರೀತಿ ರೈತರ ಬಡ್ಡಿ ಮನ್ನಾ. ಅದು ಕೇವಲ ಮುಂಗಾರು ಕಾಲದ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದ್ದಾರೆ. ಆದರೆ ಹಿಂಗಾರು ಸಾಲ ಏನಿದೆ ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ನಾವು ಒತ್ತಾಯ ಮಾಡಿದ್ದೆವು. ಸಂಪೂರ್ಣವಾದ ಬಡ್ಡಿ ಮನ್ನಾ ಆಗಬೇಕು ಎಂಬ ಒತ್ತಾಯವನ್ನು ನಾವು ಮಾಡುತ್ತಾ ಬಂದಿದ್ದೇವೆ. ಆದರೆ ಅದಕ್ಕೆ ಸರ್ಕಾರ ಸ್ಪಂದನ ಕೊಟ್ಟಿಲ್ಲ. ಮತ್ತು 127 ಕೋಟಿ ಏನು ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ ಇವತ್ತಿಗೂ ಅದರ ಲಾಭ ರೈತನಿಗೆ ಸಿಕ್ಕಿಲ್ಲ. ಹೀಗಾಗಿ ಸರ್ಕಾರ ತಕ್ಷಣವೇ ಹಣ

ಬಿಡುಗಡೆ ಮಾಡಬೇಕಾಗಿದೆ. ಅದೇ ರೀತಿ ಬೆಳೆ ವಿಮೆ ಬಗ್ಗೆ ಬೆಳೆ ವಿಮೆಯ ಸಂಪೂರ್ಣಹಣ ಇವತ್ತು ನಮ್ಮ ರೈತನಿಗೆ ಸಿಕ್ಕಿಲ್ಲ. ಆ ಸಂಪೂರ್ಣ ಹಣ ರೈತನಿಗೆ ಸಿಗಬೇಕಾಗಿದೆ. ಆ ಹಣವನ್ನೂ ಇವತ್ತು ಸರ್ಕಾರ ಬಿಡುಗಡೆ ಮಾಡಬೇಕಾಗಿದೆ, ಅದೂ ಆಗಿಲ್ಲ, ಅದರ ಜೊತೆಗೆ ನಾನು ಇಲ್ಲಿ ಹೇಳುವಂತಹದು ಆವರ್ತನಿಧಿ ಬಗ್ಗೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳಿದ್ದಾರೆ. ಆವರ್ತನಿಧಿ ನೂರು ಕೊಟಿ ಇತ್ತು, ಎರಡು ನೂರು ಕೋಟಿ, ಅದನ್ನು ಇವತ್ತು ನಾಲ್ಕು ನೂರು ಕೋಟಿ ಮಾಡಿದ್ದೇನೆ ಎಂದು ಹೇಳಿದ್ದಾರೆ. ಆದರೆ ಅವರು ಒಂದು ಶ್ವೇತಪತ್ರ, details ಕೊಟ್ಟರೆ, ಆ ನೂರು ಕೋಟಿ ರೂ.ಮಾಡಿದಾಗ, ಎರಡು ನೂರು ಕೋಟಿ ರೂ. ಮಾಡಿದಾಗ ಎಷ್ಟು ರೈತರಿಗೆ ನೀವು ಅದನ್ನು benefit ಮಾಡಿದಿರಿ? ಎಷ್ಟು purchase ಮಾಡಿದಿರಿ ಎಂಬ ಬಗ್ಗೆ ಅವರು ಒಂದು ಸ್ಪಷ್ಟ ಚಿತ್ರಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಸದನಕ್ಕೆ ತಿಳಿಸಬೇಕಾಗುತ್ತದೆ. ಯಾಕೆಂದರೆ ಎಷ್ಟೋ ಸಂದರ್ಭಗಳಲ್ಲಿ ಇವತ್ತು ಆಲೂಗೆಡ್ಡೆ ಬೆಳೆಗಾರರಿರಬಹುದು, ಬೇರೆ ಯಾವುದೇ ಬೆಳೆ ಬಂದ ಸಂದರ್ಭದಲ್ಲಿ ಅದರ ಬೆಲೆ ಕುಸಿದಂತಹ ಸಂದರ್ಭದಲ್ಲಿ ತಕ್ಷಣವೇ intervene ಮಾಡಬೇಕಾಗುತ್ತದೆ. Intervene ಎಷ್ಟೋ ಸಂದರ್ಭಗಳಲ್ಲಿ ಆಗಲಿಲ್ಲ. ಹಾಗಾದರೆ ಆವರ್ತನಿಧಿಯ ಪ್ರಯೋಜನವೇನು ಎಂದು ಇವತ್ತು ಕೇಳಬೇಕಾಗುತ್ತದೆ. ಪ್ರಯೋಜನ ಆಗಿಲ್ಲ. ಅದಕ್ಕೇ ಇವತ್ತು ಆವರ್ತನಿಧಿ ಹೆಚ್ಚಿಗೆ ಮಾಡಲಿಕ್ಕೆ ನೀವು cess ಜಾಸ್ತಿ ಮಾಡುತ್ತಾ ಇದ್ದೀರಿ, ಒಂದು percent ಇದ್ದುದ್ದು 1.5% ಮಾಡುತ್ತಾ ಇದ್ದೀರಿ. ಮತ್ತೆ ಯಾರ ಮೇಲೆ burden? ಅದೇ ರೈತರ ಮೇಲೇ ಮತ್ತೆ burden. ಹೀಗಾಗಿ ಒಂದು ಕಡೆ ಇವತ್ತು ಕಿತ್ತುಕೊಳ್ಳುವುದು ಒಂದು ಕಡೆ ಕೊಡುವುದು. ಅದೇ ರೀತಿ ಶಾಸಕರ ನಿಧಿ, ಮಾನ್ಯ ಸಿಂಧ್ಯಾ ಅವರು ಆಗಲೇ ಪ್ರಸ್ತಾಪ ಮಾಡಿದರು. ಶಾಸಕರ ನಿಧಿ ಪರಿಸ್ಥಿತಿ ಹಾಗೇ ಆಗಿದೆ. 25 ಲಕ್ಷ ರೂ. ಎಂದು ಮೊದಲನೇ ವರ್ಷ ಘೋಷಣೆ ಮಾಡಿದಿರಿ. ಅದು ಬಂತು, ನಾನು ಒಪ್ಪಿಕೊಳ್ಳುತ್ತಾ ಇದ್ದೇನೆ. ಎರಡನೇ ವರ್ಷ 40 ಲಕ್ಷ ರೂ. ಹಣ, ಇವತ್ತು ಶಾಸಕರು ಯಾರಾದರೂ ಹೇಳಲಿ, ಎಲ್ಲಾ ಕ್ಷೇತ್ರಗಳಲ್ಲಿ ಶಾಸಕರು ಆಗಲೇ ಕಾಮಗಾರಿಗಳ list ಕೊಟ್ಟುಬಿಟ್ಟಿದ್ದರು. ಈ ಕೆಲಸ ಆಗಬೇಕು ಅಂತ. ಏನಾಗಿದೆ ಶಾಸಕರ ಪರಿಸ್ಥಿತಿ ಅಂದರೆ ಅಧ್ಯಕ್ಷರೇ, ತಾವೇ ಆಗಲೇ ಹೇಳುತ್ತಿದ್ದಿರಿ, ಒಂದು ಗುಂಡುಸೂಜಿಯನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ. ನಮ್ಮ ಕ್ಷೇತ್ರಕ್ಕೆ ಒಂದು ಗುಂಡುಸೂಜಿ ಕೊಡಲಾರದ ಸ್ಥಿತಿಯಲ್ಲಿದ್ದೇವೆಂದು ತಾವು ಆಗಲೇ ಹೇಳಿದಿರಿ. ಈ ಕಡೆ ZP. ಮಾನ್ಯ ಘೋರ್ಪಡೆಯವರು ಒಂದು meeting ಕರೆಯಲು ತಯಾರಾಗಲಿಲ್ಲ. ಅಂದರೆ ಶಾಸಕರು ZP ಗೂ ಇಲ್ಲ. ತಾಲ್ಲೂಕು ಪಂಚಾಯಿತ್ತಿಗೂ ಇಲ್ಲ, ಗ್ರಾಮ ಪಂಚಾಯಿತ್ತಿಗೂ ಇಲ್ಲ. ಅಲ್ಲಿ ಯಾರೂ ನಮ್ಮನ್ನು ಮಾತನಾಡಿಸುವವರು ಇಲ್ಲ. ಆದರೆ MP ಗಳು ಎರಡು ಕೋಟಿ ರೂ. ಪಡೆದು ಎಲ್ಲಾ ಕಡೆ ಅಡ್ಡಾಡುತ್ತಿದ್ದಾರೆ. ಶಾಸಕರು ಏನಾದರೂ ಒಂದು ಕೆಲಸ ಆಗಲಿ ಎಂದು ಕಾಮಗಾರಿಯ list ಕೊಟ್ಟರೆ ಅವೂ ಮಂಗಮಾಯ. ಆ ಪರಿಸ್ಥಿತಿಯಾಗಿದೆ ಶಾಸಕರದ್ದು. ಇವತ್ತು ಬರಗಾಲ ಪರಿಸ್ಥಿತಿ ಇದೆ ಅದಕ್ಕಾಗಿ ಒಂದು separate fund ಕೊಡಿ. ಅದಕ್ಕಾಗಿ separate ಕಾಮಗಾರಿಗಳನ್ನು ಕೊಡಿ, ಬೇರೆ ಅನುದಾನದಿಂದ. ಕೇಂದ್ರ ಸರ್ಕಾರದಿಂದಲೂ ಹಣ ಬಂದಿದೆ. ಅದನ್ನೂ ತೆಗೆದುಕೊಳ್ಳಿ. ಅದರ ಜೊತೆಗೆ ಇವತ್ತು ಬಡ್ಡಿ ಮನ್ನಾ ಮಾಡುತ್ತೀರಿ, ಈ ಬಡ್ಡಿ ಮನ್ನಾಕ್ಕೆ separate budget provision ಮಾಡಿ, ಅದು ಬಿಟ್ಟು ನಾವು ಶಾಸಕರು ವಿರೋಧ ಮಾಡುವ ಹಾಗೂ ಇಲ್ಲ. ಶಾಸಕರು ವಿರೋಧ ಮಾಡಿದರೆ ನೋಡ್ರಿ ರೈತ ವಿರೋಧ ಇದ್ದಾರೆ, ಬಡ್ಡಿ ಮನ್ನಾಕ್ಕೆ ಬೇಡ

ಅನ್ನುತ್ತಾರೆ, ಬರಗಾಲಕ್ಕೆ ಕಾಮಗಾರಿ ಬೇಡ ಅನ್ನುತ್ತಾರೆ. ನಮ್ಮ ಮೇಲೇ ಹಣೆಪಟ್ಟ ಮತ್ತೆ ನಾವು ಬೈಯಿಸಿಕೊಳ್ಳುವವರು. ನಾವು ಬಹಳ ಒತ್ತಾಯ ಮಾಡಿದರೆ ಅದಕ್ಕಾಗಿ ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಾ ಇದ್ದೇನೆ. ಈ ಒಂದು ಶಾಸಕರ ಅಭಿವೃದ್ಧಿ ನಿಧಿ ಎಂದು ಮಾಡಿದ್ದೀರಿ 40 ಲಕ್ಷ ರೂ. ದಯವಿಟ್ಟು ಅದನ್ನು touch ಮಾಡಬೇಡಿ ಯಾಕೆಂದರೆ ಇರುವುದು ಅದೊಂದೇ ನಾವು ನಮ್ಮ ಕ್ಷೇತ್ರದಲ್ಲಿ ಏನಾದರೂ ಜನರಿಗೆ ಸಹಾಯ ಉಪಕಾರ ಮಾಡಲಿಕ್ಕೆ. ಏಕೆಂದರೆ emergency ಯಲ್ಲಿ ಸಣ್ಣಪುಟ್ಟ ಸಹಾಯ ಮಾಡಲಿಕ್ಕೂ ನಮಗೆ ಅಧಿಕಾರ ಇಲ್ಲ. ಹೀಗಾಗಿ ದಯವಿಟ್ಟು ಆ 40 ಲಕ್ಷ ರೂ, ಚಾಲ್ತಿ ವರ್ಷದ್ದು, ಅದೂ ಬಹುಶಃ ಬಡ್ಡಿ ಮನ್ನಾ ಮಾಡಿಕೊಳ್ಳುತ್ತಾ ಕೂರುತ್ತೀರಿ, ಚಾಲ್ತಿ ವರ್ಷದ್ದು ಮಾನ್ಯ ಖರ್ಗೆಯವರು ಹೇಳಿದರು ಇಲ್ಲ ಹಣ ಬಿಡುಗಡೆ ಮಾಡುತ್ತೇವೆ ಅಂತ. ನನಗೆ ಇವತ್ತಿಗೂ ಸಂಶಯ ಇದೆ. ಮತ್ತೆ ಈಗ ಚಾಲ್ತಿಗೆ ಬರುವ 40 ಲಕ್ಷ ರೂ. ಹಣ ಮತ್ತೆ ಯಾವುದೋ accountಗೆ adjust ಮಾಡುತ್ತೀರಿ ಎಂಬ ಸಂಶಯ ನನಗೆ ಇದೆ. ಅದಕ್ಕೇ ಮುಖ್ಯಮಂತ್ರಿಗಳು ಸ್ಪಷ್ಟನೆ ಮಾಡಬೇಕಾಗುತ್ತದೆ: ಈ ವರ್ಷದ್ದು ತೆಗೆದುಕೊಂಡಿದ್ದೇವೆ 40 ಲಕ್ಷ ರೂ. ಮುಂದಿನ ವರ್ಷದ 40 ಲಕ್ಷ ರೂ.ಗೆ ಕೈಹಚ್ಚಬಾರದು. ಅದಕ್ಕೆ ಯಾವುದು disturb ಆಗಬಾರದು ಎಂದು ನಾನು ಎಲ್ಲಾ ಶಾಸಕರ ಪರವಾಗಿ ಒತ್ತಾಯ ಮಾಡುತ್ತಿದ್ದೇನೆ. ಶಾಸಕರ ಪರಿಸ್ಥಿತಿ ಹೀಗಾಯಿತು. ಇವತ್ತು ಮಲೆನಾಡು ಅಭಿವೃದ್ಧಿ ಮಂಡಲಿ ಹೈದರಾಬಾದ್ ಅಭಿವೃದ್ಧಿ ಮಂಡಲಿ - ಇವುಗಳ ಪರಿಸ್ಥಿತಿ ಏನಾಗಿದೆ ಅಂದರೆ ಇಲ್ಲಿ ಒಂದಷ್ಟು ಅಂಕಿಸಂಖ್ಯೆಗಳನ್ನು ಹೇಳಿಬಿಡುತ್ತೇನೆ. ಏನಾಗಿದೆ ಅಂದರೆ ಪ್ರತಿ ವರ್ಷ ಹಣ ಕಡಿಮೆಯಾಗುತ್ತಾ ಇದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ: 1999-2000ರಲ್ಲಿ 54.60 ಕೋಟಿ ರೂ. ಕೊಟ್ಟಿದ್ದು. 2000-01ರಲ್ಲಿ 60.50 ಕೋಟಿ ರೂ. ಆಮೇಲೆ 2001-02 58 ಕೋಟಿ ರೂ - ಈ ವರ್ಷ 60 ಕೋಟಿ ರೂ. ಇದ್ದುದ್ದು 58 ಕೋಟಿ ರೂ. ಗೆ ಇಳಿಯಿತು. ಮುಂದೆ 2002-03ಕ್ಕೆ 31.85 ಕೋಟಿ ರೂ. ಅಂದರೆ ಪ್ರತಿವರ್ಷ ಇದು ಹತ್ತು ಕೋಟಿ ರೂ ಇಪ್ಪತ್ತು ಕೋಟಿ increase ಆಗಬೇಕು. ಆದರೆ ಪ್ರತಿವರ್ಷ ಐದು ಹತ್ತು ಕೋಟಿ ರೂ. ಕಡಿಮೆಯಾಗುತ್ತಾ ಇದೆ. ಬೇರೆ ಕಡೆ ಎಲ್ಲಾ increase ಆಗುತ್ತದೆ. ಇಲ್ಲಿ ಅದಿಲ್ಲ. ಯಾಕೆಂದರೆ ಇಲ್ಲಿ ಶಾಸಕರ ಮುಖಾಂತರ ಕೆಲಸ ಮಾಡುವುದು, ಅದಕ್ಕಿಲ್ಲ, ಮುಂದೆ, ಬಯಲುಸೀಮೆ, ಮಾನ್ಯ ಅಧ್ಯಕ್ಷರ ಕ್ಷೇತ್ರವೂ ಬರುತ್ತದೆ ಬಯಲುಸೀಮೆಯಲ್ಲಿ. 1999-2000 ರಲ್ಲಿ 15.50 ಕೋಟಿ ರೂ. ಈ ಸರ್ಕಾರ ಬಂದಮೇಲೆ 15 ಕೋಟಿ ರೂ. ಎಂದು ಅನೌನ್ಸ್ ಮಾಡಿದರು. ಬಿಡುಗಡೆಯಾಗಿದ್ದು 4 ಕೋಟಿ 99 ಲಕ್ಷ ರೂ. ಎಲ್.ಓ.ಸಿ. ಬಿಡುಗಡೆಯಾಗಿದ್ದು 4 ಕೊಟಿ 99 ಲಕ್ಷ ರೂ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು. ಇದರ ಬಗ್ಗೆ ನಮ್ಮ ಶಾಸಕರು ಇಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡಿದ್ದಾರೆ. ಇದರ ಬಗ್ಗೆ ಬಯಲುಸೀಮೆ ಅಭಿವೃದ್ಧಿ ಮಂಡಳಿ, ಹೈದರಬಾದ್ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ ವಿಷಯವಾಗಿ ಪ್ರತಿ ವರ್ಷ ಧರಣಿ ಸತ್ಯಾಗ್ರಹ ಇಲ್ಲಿ ನಡೆಯುತ್ತಿದೆ. ಆಮೇಲೆ 9 ಕೋಟಿ ರೂ. ಎಂದು ಅನೌನ್ಸ್ ಮಾಡಿದರು. ಆದರೆ ರಿಲೀಸ್ ಮಾಡಿದ್ದು 6 ಕೋಟಿ 60 ಲಕ್ಷರೂ. ಮುಂದೆ 2001-02 3 ಕೋಟಿ 80 ಲಕ್ಷ ರೂ, ಕಡಿಮೆಯಾಯಿತು. ಕಡಿಮೆಯಾಗಿ ಮತ್ತೆ ಅದರಲ್ಲಿ ರಿಲೀಸ್ ಮಾಡಿದ್ದು 2 ಕೋಟಿ 30 ಲಕ್ಷ ರೂ. ಮುಂದೆ 2002-03 ಚಾಲ್ತಿ 4 ಕೋಟಿ 20 ಲಕ್ಷ ರೂ, ಆಮೇಲೆ ಬಿಡುಗಡೆಯಾಗಿದ್ದು ಎರಡು ಕೋಟಿ ರೂ. ಮಾತ್ರ. ಅಂದರೆ ಎಲ್ಲಿಗೆ ಹೋಗಬೇಕು? ಮಲೆನಾಡು ಅಭಿವೃದ್ಧಿ ಮಂಡಳಿಯದೂ ಅದೇ. 1999-2000

32 ಕೋಟಿ 84 ಲಕ್ಷ ರೂ ಬಿಡುಗಡೆಯಾಗಿದ್ದು 24 ಕೊಟಿ, 2000-01 34 ಕೋಟಿ ರೂ, ಬಿಡುಗಡೆಯಾಗಿದ್ದು 32 ಕೋಟಿ ರೂ, 2001-02ರಲ್ಲಿ 17 ಕೋಟಿ ರೂ, ಬಿಡುಗಡೆಯಾಗಿದ್ದು 11 ಕೋಟಿ ರೂ. ಮುಂದೆ 2002-03 16 ಕೋಟಿ 45 ಲಕ್ಷ ರೂ, ಬಿಡುಗಡೆಯಾಗಿದ್ದು 5 ಕೋಟಿ 48 ಲಕ್ಷ ರೂ. ಅಂದರೆ ಶಾಸಕರು ಯಾರಿಗೆ ಉತ್ತರ ಹೇಳಬೇಕು. ಬಯಲುಸೀಮೆಯದೂ ಕಡಿಮೆಯಾಗಿದೆಯಲ್ಲಾ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:- ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಮಂಡಳಿಯದು ಇನ್ನೂ 16 ಕೋಟಿ ರೂ. ಬಾಕಿ ಇದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಈ ವರ್ಷ 16 ಕೋಟಿ 45 ಲಕ್ಷ ರೂ. ಬಿಡುಗಡೆಯಾಗಿದೆ. ಅದರಲ್ಲಿ ಬಿಡುಗಡೆಯಾಗಿದ್ದು 5 ಕೋಟಿ 48 ಲಕ್ಷ ರೂ. ಇದು ಮಲೆನಾಡು ಅಭಿವೃದ್ಧಿಯದು. ಅಂದರೆ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಏಕೆ ಇಷ್ಟೊಂದು ಒತ್ತಡ ಇದ್ದಾಗ್ಯೂ, ಒತ್ತಾಯ ಮಾಡಿದ್ದಾಗ್ಯೂ ಈ ರೀತಿ ಮಾಡಿದ್ದಾರೆ. ಅದಕ್ಕೇ ನಾವು ಆಗಲೇ ಹೇಳುತ್ತಿದ್ದೇವೆ, ದಯವಿಟ್ಟು ಈ ಮಂಡಳಿಗಳನ್ನು ಮುಚ್ಚಿಬಿಡಿ ಎಂದು. ಏಕೆಂದರೆ ನಾವು ಜನರಿಗೆ ಉತ್ತರ ಕೊಡಬೇಕಲ್ಲಾ. ಆಮೇಲೆ ನಬಾರ್ಡ್ 50 ಲಕ್ಷ ರೂ. ಕೊಡಿ ಎಂದು ಹೇಳಿದ್ದೆವು. ಇದುವರೆಗೂ ಅದು ಮಂಜೂರು ಆಗಲಿಲ್ಲ. ಇದು ಪರಿಸ್ಥಿತಿ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎನ್ನುವಂಥದ್ದು ಇವತ್ತು ಹೇಳಬೇಕು. ಆಮೇಲೆ ಭೂಮಿ ಯೋಜನೆ. ಈ ಭೂಮಿ ಯೋಜನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ರೈತರಿಗೇನು ತೊಂದರೆಯಾಗಿದೆ ಎಂದರೆ ಇವತ್ತು ಯಾರಾದರೂ ಹೊಸದಾಗಿ ಸೇಲ್ ಡೀಡ್ ಮಾಡಿಕೊಳ್ಳಬೇಕೆಂದರೆ, ಟೈಟ್ಲ್ ಛೇಂಜ್ ಆದರೆ ಅವರಿಗೆ ಆರು ತಿಂಗಳವರೆಗೆ ಎಂಟ್ರಿ ಆಗುವುದಿಲ್ಲ. ಇದು ಪರಿಸ್ಥಿತಿ ಇದೆ. ಮೊದಲೇನು ತಲಾಟಿಯನ್ನು ಹಿಡಿದುಕೊಂಡು, ಆ ಸರ್ಕಲ್ ಇನ್ಸ್‌ಪೆಕ್ಟರ್‌ನ್ನೂ ಹಿಡಿದುಕೊಂಡು ತಕ್ಷಣ ಒಂದು ತಿಂಗಳಲ್ಲಿ ಎಂಟ್ರಿ ಮಾಡಿಕೊಂಡು ಬರುತ್ತಿದ್ದರು. ಇವತ್ತು ಈ ಭೂಮಿ ಯೋಜನೆ ಬಂದಮೇಲೆ ಆರು ತಿಂಗಳಲ್ಲಿ ಹೊಸದಾಗಿ ಯಾರದಾದರೂ ಟೈಟಲ್ ಛೇಂಜ್ ಆದರೆ ಆರು ತಿಂಗಳವರೆಗೂ ಎಂಟ್ರಿಯಾಗುವುದಿಲ್ಲ. ಏನಾದರೂ ಒಂದಿಷ್ಟು ಹಣ ಕೈಬದಲಾವಣೆಯಾದರೆ ಇಮ್ಮಿಡಿಯೇಟ್‌ಲಿ ಆಗುತ್ತದೆ. ಇಲ್ಲದಿದ್ದರೆ ಇಲ್ಲ. ಇದರಲ್ಲಿ ಅದೇ ಪರಿಸ್ಥಿತಿ ಮುಂದುವರೆದಿದೆ. ಮತ್ತೆ ಏನಾದರೂ ಉತ್ತರ ಬೇಕೆಂದರೆ ಇಮ್ಮಿಡಿಯೇಟ್‌ಲಿ ಸಿಗುವುದಿಲ್ಲ. ಒಂದು ದಿವಸ, ಎರಡು ದಿವಸ ಕಾಯಬೇಕು. ಆ ಹಳ್ಳಿಯಿಂದ ಅವರು ತಾಲ್ಲೂಕು ಪ್ಲೇಸ್‌ಗೆ ಬರಬೇಕು. ಮೊದಲೇನೋ 15-20 ರೂಪಾಯಿ ಖರ್ಚು ಮಾಡಿದ್ದರೆ ತನಗೆ ಬೇಕಾದ ಮಾಹಿತಿಯನ್ನು ತೆಗೆದುಕೊಂಡು ಹೋಗುತ್ತಿದ್ದ. ಆದರೆ ಇವತ್ತು 50-100 ರೂ. ಖರ್ಚಾಗುತ್ತಿದೆ. ಒಬ್ಬ ಬಡ ರೈತನಿಗೆ ಇದೇ 50-100 ರೂ. ದೊಡ್ಡದು. ಇದರ ಬಗ್ಗೆಯೂ ಸಹ ಸರ್ಕಾರ ಗಮನಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಮತ್ತು ಇನ್ನೊಂದು ಇಲ್ಲಿ ಹೇಳುವಂಥದ್ದು ಇವತ್ತು ಗ್ರಾಮೀಣ ಪ್ರದೇಶದ ವಿದ್ಯುತ್‌ನ ಬಗ್ಗೆ. ವಿದ್ಯುತ್ ಅಭಾವ ಇದೆ. ಆಮೇಲೆ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಕಡಿಮೆಯಾಗಲಿಲ್ಲ. 32 ಪರ್‌ಸೆಂಟ್ ಇರುವುದನ್ನು 30 ಪರ್‌ಸೆಂಟ್ ಮಾಡುತ್ತೇವೆಂದು ಹೇಳಿದಿರಿ. ಕೇವಲ ಕೆಲವೇ ವರ್ಷಗಳ ಹಿಂದೆ ರಾಜ್ಯದಲ್ಲಿ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಕೇವಲ 18 ಪರ್‌ಸೆಂಟ್ ಇತ್ತು. ಆದರೆ ಇವತ್ತು ಕೆಇಆರ್‌ಸಿ ಯವರ ಮುಂದೆ ಕೆಪಿಟಿಸಿಎಲ್‌ನವರು ಹೋಗಿ ವಿನಂತಿ

ಮಾಡಿಕೊಂಡಿದ್ದಾರೆ, ನಾವು 28 ಪರ್‌ಸೆಂಟ್‌ಗೆ ಇಳಿಸುತ್ತೇವೆಂದೂ ಲಾಸ್ ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳುತ್ತಾರೆ, ನಾವು 32 ರಿಂದ 30 ಪರ್‌ಸೆಂಟ್ ಮಾಡುತ್ತೇವೆಂದು ಹೇಳಿ. ಈ ಲಾಸ್ ಕೇವಲ ಒಂದು ಪರ್‌ಸೆಂಟ್ ಕಡಿಮೆ ಮಾಡಿದರೆ 700 ಕೋಟಿ ರೂಪಾಯಿ ಉಳಿಯುತ್ತದೆ. ಅದನ್ನು ಮಾಡಲಿಕ್ಕೆ ಸರ್ಕಾರಕ್ಕೆ ಆಗುತ್ತಿಲ್ಲ. ಏಕೆ ಎಂದು ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ಅದೇ ಕಬ್ಬು ಬೆಳೆಗಾರರದು ಸಮಸ್ಯೆ ಇದೆ. ಆಮೇಲೆ ಕಾವೇರಿ ಕಣಿವೆ ರೈತರು, ಸನ್ಮಾನ್ಯ ಅಧ್ಯಕ್ಷರೇ, ತಾವು ಸ್ವಲ್ಪ ಅವಧಿ ಕೊಟ್ಟರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:- ಆರು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕಮೆನ್ಸ್ ಮಾಡುತ್ತಾರೆ. ಪಾಯಿಂಟ್‌ಗಳೆಲ್ಲಾ ಹೇಳಿದ್ದೀರಲ್ಲಾ. ತಮ್ಮ ಪಾರ್ಟಿಯವರು ಇನ್ನೂ ಮೂರು ಗಂಟೆ ಕಾಲ ಜಾಸ್ತಿ ತೆಗೆದುಕೊಂಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಚೀಫ್ ಮಿನಿಸ್ಟರ್ ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು:- ಮುಖ್ಯಮಂತ್ರಿಗಳು ಒಪ್ಪಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಕಾವೇರಿ ಕಣಿವೆ ರೈತರ ಬಗ್ಗೆ ಮಾನ್ಯ ಮಾದೇಗೌಡರು ಮೀಟಿಂಗ್‌ನ್ನು ಕರೆದಿದ್ದರು. ನಾವೂ ಹೋಗಿದ್ದೆವು. ಏಪ್ರಿಲ್ 14ನೇ ತಾರೀಖಿಗೆ ಅವರೊಂದು ಗಡುವನ್ನು ಕೊಟ್ಟಿದ್ದಾರೆ. ಅಲ್ಲೇನು ಇವತ್ತು ಸಮಸ್ಯೆಯಾಗಿದೆ, ತಮಿಳುನಾಡಿಗೆ ಕಾವೇರಿ ನದಿಯಿಂದ ನೀರು ಬಿಟ್ಟಿದ್ದು, ಮತ್ತು ಅಲ್ಲೇನು ಕೃತಕವಾದಂಥ ಬರಗಾಲ ಸೃಷ್ಟಿಯಾಗಿದೆ ಎನ್ನುವಂಥದ್ದು ಮತ್ತು ಕಬ್ಬು ಬೆಳೆಗಾರರಿಗೆ ಆ ಸ್ಟಾಂಡಿಂಗ್ ಕ್ರಾಪ್‌ಗೆ ತೊಂದರೆಯಾಗಿದೆ ಎನ್ನುವಂಥದ್ದು ಅವರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಸಿ ಇವತ್ತು ಆ ರೈತ ನಾಯಕರನ್ನು ಕರೆಸಿ ಅಷ್ಟರೊಳಗಾಗಿ ಏನಾದರೊಂದು ಮಾತುಕತೆಯನ್ನು ಮಾಡಿ ಆ ಸಮಸ್ಯೆಯನ್ನು ಬಗೆಹರಿಸಿದರೆ ಆ ಒಂದು ಸಂಘರ್ಷ ಘರ್ಷಣೆ ತಪ್ಪಲಿಕ್ಕೆ ಸಾಧ್ಯ ಇದೆ. ಏಪ್ರಿಲ್ 14 ರಿಂದ ಒಂದು ಪಾದಯಾತ್ರೆ, ಒಂದು ರ್‍ಯಾಲಿಯನ್ನು ತೆಗೆದುಕೊಂಡು ಹೋಗತಕ್ಕಂಥದ್ದು, ಆ ಪರಿಹಾರಕ್ಕಾಗಿ ಒತ್ತಾಯ ಮಾಡುತ್ತಿದ್ದಾರೆ. ಬೆಳೆ ನಷ್ಟವಾಗಿರುವ ಬಗ್ಗೆ ಪರಿಹಾರಕ್ಕಾಗಿ ಒತ್ತಾಯ ಮಾಡುತ್ತಿದ್ದಾರೆ. ಸಾಲ ಮನ್ನಾ ಮಾಡಿ ಎಂದು ಅವರು ಕೇಳುತ್ತಿದ್ದಾರೆ. ಅದರಲ್ಲಿ ಯಾವುದು ರೀಸನಬಲ್ ಇದೆ ಏನು ಎನ್ನುವಂಥದ್ದು ಸರ್ಕಾರ ಒಂದು ಆರ್ಥಿಕ ದೃಷ್ಟಿಯನ್ನು ಇಟ್ಟುಕೊಂಡು ಅವರಿಗೇನು ಸಹಾಯ ಮಾಡಲಿಕ್ಕೆ ಸಾಧ್ಯವಿದೆ ಎನ್ನುವಂಥದ್ದನ್ನು ಪರಿಶೀಲನೆ ಮಾಡಿ ಅವರ ಜೊತೆ ಮಾತುಕತೆ ಮಾಡಿದರೆ ಅದಕ್ಕೇನಾದರೂ ಒಂದು ಪರಿಹಾರ ಹುಡುಕುವುದಕ್ಕೆ ಸಾಧ್ಯ ಇದೆ. ಇಲ್ಲದಿದ್ದರೆ ಏಪ್ರಿಲ್ 14 ರಿಂದ ಅವರ ಹೋರಾಟ, ರ್‍ಯಾಲಿ ಪ್ರಾರಂಭವಾಗುವಂಥದ್ದು ಇದೆ ಮತ್ತೆ 18ನೇ ತಾರೀಖಿಗೆ ಬೆಂಗಳೂರಿಗೆ ಅವರು ಬರುವವರಿದ್ದಾರೆ. ಮುಖ್ಯಮಂತ್ರಿಗಳ ಮನೆಗೆ ರ್‍ಯಾಲಿ ತೆಗೆದುಕೊಂಡು ಮುತ್ತಿಗೆ ಹಾಕುವಂಥ ಕಾರ್ಯಕ್ರಮವನ್ನೂ ಅವರು ಹಾಕಿಕೊಂಡಿದ್ದಾರೆ. ಅದಕ್ಕಾಗಿ ಅದಕ್ಕೆ ಆಸ್ಪದ ಕೊಡದೆ ಮುಖ್ಯಮಂತ್ರಿಗಳು ಅವರನ್ನು ಕರೆಸಿ ಮೊಟ್ಟಮೊದಲು ಮಾತನಾಡುವಂಥ ಕೆಲಸವಾಗಬೇಕು. ಅಂದರೆ ಅದಕ್ಕೆ ಪರಿಹಾರವನ್ನು ಹುಡುಕುವಂಥ ಕೆಲಸವಾಗಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಭೈರೇಗೌಡರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು:- ಕ್ಲಾರಿಫಿಕೇಷನ್ ಮೂಲಕ ಅವರು ಮಾತನಾಡಲಿ. ನಿಮ್ಮಿಷ್ಟ ಸ್ವಾಮಿ, ನಾನೇನೂ ಹೇಳುವುದಿಲ್ಲ. ನಿಮಗೆಷ್ಟು ಸಮಯ ಇತ್ತು, ನೀವು ಇನ್ನೂ ಮೂರು ಗಂಟೆ ಹೆಚ್ಚು ಕಾಲಾವಕಾಶ ತೆಗೆದುಕೊಂಡಿದ್ದೀರಿ. ನಾವು ಅದಕ್ಕೇನು ಮಾಡೋಣ? ನೀವು ನೀವು ಅಡ್ಜಸ್ಟ್ ಮಾಡಿಕೊಳ್ಳಬೇಕು. ನಾನೇನು ಮಾಡಲಿ. ಏಕೆಂದರೆ ನೀವೆಲ್ಲಾ ಬುದ್ಧಿವಂತರಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಬೇರೆ ಬೇರೆ ಪ್ರಸಂಗಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಸದನದ ಹೊರಗಡೆ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಂದು ಗಮನವನ್ನು ಕೊಟ್ಟು ಅದಕ್ಕೆ ಪ್ರತಿಯಾದ ಕೌಂಟರ್ ಹೇಳಿಕೆಯನ್ನೂ ಕೊಟ್ಟಿದ್ದರು. ಇವತ್ತು ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ. ಸರ್ಕಾರ ದಿವಾಳಿಯಾಗುತ್ತಿದೆ ಎನ್ನುವ ಮಾತನ್ನು ನಾವು ಸಾಕಷ್ಟು ಕಡೆ ಹೇಳಿದ್ದೇವೆ. ಅದನ್ನು ನಾನು ಇಲ್ಲಿಯೂ ಹೇಳಬಯಸುತ್ತಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಸರ್ಕಾರ ಎಲ್ಲಿ ದಿವಾಳಿಯಾಗಿದೆ, ಪ್ರತಿಪಕ್ಷದವರು ಸುಮ್ಮನೆ ಟೀಕೆ ಮಾಡುತ್ತಿದ್ದಾರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ್ದು ವರದಿಯನ್ನು ತೆಗೆದುಕೊಂಡು ನೋಡಲಿ ಅವರು, ಅನ್ನುವಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸರ್ಕಾರ ದಿವಾಳಿಯಾಗಿಲ್ಲವೆನ್ನುವಂಥ ಮಾತನ್ನು ಹೇಳಿದರು. ಆದರೆ ಇವತ್ತು ಪರಿಸ್ಥಿತಿ ಏನು ಆಗುತ್ತಿದೆ ಎಂದರೆ ಇವತ್ತು ಯಾವುದಕ್ಕೆ ವೆಚ್ಚವನ್ನು ಕಡಿತ ಮಾಡಬೇಕು, ಆಡಳಿತ ಸುಧಾರಣಾ ಆಯೋಗವನ್ನು ನೇಮಕ ಮಾಡಿದರು. ಹಾರ್ನಳ್ಳಿ ರಾಮಸ್ವಾಮಿಯವರು ಅಧ್ಯಕ್ಷರಾಗಿದ್ದರು. ವೆಚ್ಚವನ್ನು ಕಡಿತ ಮಾಡಬೇಕಾಯಿತು, ಮಾಡಲಿಲ್ಲ. ಮತ್ತು ಎಲ್ಲಿ ಅನವಶ್ಯಕ ಖರ್ಚುಗಳನ್ನು ಮಾಡುತ್ತಿದ್ದಾರೆ, ಅದನ್ನು ತಡೆಯಲಿಕ್ಕೆ ಆಗಲಿಲ್ಲ. ಇದರ ಬಗ್ಗೆ ಅಕೌಂಟೆಂಟ್ ಜನರಲ್‌ರವರ ರಿಪೋರ್ಟ್ ಇದೆ. ಎ.ಜಿ. ಅವರ ರಿಪೋರ್ಟ್‌ನಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಕ್ಲಿಯರ್‌ಕಟ್ ಆಗಿ ಹೇಳಿದ್ದಾರೆ. ಇವತ್ತು ಒಂದೆರಡು ಮೂರು ವಿಷಯಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಒಂದು ವಿಷಯವನ್ನು ಅಕೌಂಟೆಂಟ್ ಜನರಲ್‌ರವರು ಏನು ಹೇಳಿದ್ದು ಎಂದರೆ: "The amount received as state's share of Union Taxes, duties and grants in aid and contributions increased from Rs. 2,937.12 crores in 1997-98 to Rs. 4,374 crores in 2001-02. An increase of 49%. But as a share of revenue receipts of the state is increased from 28% in 1997-98 to 29% in 2001-02." ಅಂದರೆ ಕೇವಲ ಒಂದು ಪರ್‌ಸೆಂಟ್ ಮಾತ್ರ ರೆವಿನ್ಯೂ ರೆಸಿಟ್ ಜಾಸ್ತಿಯಾಯಿತು. ಆದರೆ ಸೆಂಟ್ರಲ್ ಗ್ರಾಂಟ್ಸ್‌ನಿಂದ ಇನ್‌ಕ್ರೀಸ್ ಆಗಿದ್ದು 49 ಪರ್‌ಸೆಂಟ್. ಇಲ್ಲಿ ಇನ್‌ಕ್ರೀಸ್ ಆಗಿದ್ದು ಕೇವಲ ಒಂದು ಪರ್‌ಸೆಂಟ್. ಆಮೇಲೆ ಇನ್ನೊಂದು ಕೇಸನ್ನು ನಾನು ಇಲ್ಲಿ ಹೇಳುವಂಥದ್ದು State's inclination: "The alomost constant ratio of tax receipts to gross state's domestic product extablishes, the state's inclination to meet the deficit by borrowing instead of improving the tax compliance. As a result of the financial assets of the state, government are being over taken by its liabilities". ಲಯಬಿಲಿಟೀಸ್ ಜಾಸ್ತಿಯಾಗಿದೆ ಎನ್ನುವಂಥ ಮಾತನ್ನು ಇವತ್ತು ಎ.ಜಿ. ರಿಪೋರ್ಟ್‌ನಲ್ಲಿ ಹೇಳಿದ್ದಾರೆ. In 45 cases, 27 grants, supplementary provision of Rs. 354 crores, 58 lakhs proved unnecessary. ಎನ್ನುವಂಥ ಮಾತನ್ನು ಎ.ಜಿ. ಅವರು ಹೇಳಿದ್ದಾರೆ. ಸಪ್ಲಿಮೆಂಟರಿ ಪ್ರಾವಿಷನನ್ನು ಏನು ಮಾಡಿಕೊಂಡಿದ್ದಾರೆ,

ಆದರಲ್ಲಿ 354 ಕೋಟಿ ರೂ ಅಷ್ಟು ಅನ್‌ನೆಸಸರಿಯಾಗಿ ಸಪ್ಲಿಮೆಂಟರಿ ಮಾಡಿಕೊಂಡಿದ್ದಾರೆ ಎನ್ನುವಂಥ ಮಾತನ್ನು ಇಲ್ಲಿ ಹೇಳಿದ್ದಾರೆ. ಆಮೇಲೆ ಇನ್ನೊಂದು ಇಲ್ಲಿ ಹೇಳುವಂಥದ್ದು ಕರ್ನಾಟಕ ಭಾಗ್ಯ ಜಲ ನಿಗಮ ಇರಬಹುದು, ಕಾವೇರಿ ಇರಬಹುದು, ಇದರಲ್ಲಿ ಏನು ಹೇಳುತ್ತಾರೆ. Karnataka released an amount of Rs. 2558 crores to KBJNL during the period 1995-96 to 2001-02 towards re-payment of principal and payment of interest on borrowings out of Rs. 757 crores were retained in the public account, without being actually credited to the current account of the KBJNL. In view of retention of funds in public account without being transferred to the accounts of the concerns, KBJNL and KNNL has to discharge their liabilities, principal and interest to the extent of Rs. 1,065 Crores out of fresh borrowings." ಇಲ್ಲಿ ಏನಾಗುತ್ತದೆ, ಕೆಬಿಜೆಎನ್‌ಎಲ್ ಮತ್ತು ಕೆ.ಎನ್.ಎಲ್. ಸಂಸ್ಥೆಗಳಿಗೆ ಏನು ಅಮೌಂಟ್‌ನ್ನು ಕೊಡಬೇಕಾಗಿತ್ತು. ಆ ಅಕೌಂಟ್‌ಗೆ ಕೊಡಲಿಲ್ಲ.

6.00 ಪಿಎಂ

ಬೇರೆ ಕರೆಂಟ್ ಅಕೌಂಟ್‌ಗೆ ಇಟ್ಟರು. ಅಂದರೆ ಸರಿಯಾದ ಉಪಯೋಗ ಆಗಲಿಲ್ಲ ಎನ್ನುವಂತಹದು ಇಲ್ಲಿ ಎ ಜಿ ಅವರು ಅಬ್ಜೆಕ್ಷನ್ ಮಾಡಿದ್ದಾರೆ. ಮತ್ತು ಈಗಾಗಲೇ ನಿನ್ನೆ ವಿಧಾನ ಪರಿಷತ್ತಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇಲ್ಲೂ ಇದೆ. ಟೋಟಲ್ ನಮ್ಮ ರಾಜ್ಯದ ಡೆಬ್ಟ್ ಎಷ್ಟು ಇದೆ? ನಮ್ಮ ರಾಜ್ಯದ ಒಟ್ಟು ಸಾಲ ಏನು ಇದೆ, 38,937 ಕೋಟಿ ರೂ. ಇರುವಂತಹದು. ಇವತ್ತು ನಮ್ಮ ಮೇಲೆ ಬರ್ಡನ್ ಇರುವಂತಹದು. ಹೀಗಾಗಿ ಅವರು ಇಲ್ಲಿ ಹೇಳುತ್ತಾರೆ. The financial assets of the State Government were being rapidly overtaken by its liabilities indicating unsatisfactory financial condition of the State Government. ಇದೇ ಅಕೌಂಟೆಂಟ್ ಜನರಲ್ ಹೇಳುತ್ತಾರೆ. unsatisfactory financial condition of the State Government ಇದರ ಮೇಲೆ ಹೇಳಬಹುದು. ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಕಡೆಗೆ, ಯಾವ ದಿಕ್ಕಿಗೆ ಹೊರಟಿದೆ ಎನ್ನುವುದನ್ನು ನಾನು ಇಲ್ಲಿ ಹೇಳಬಯಸುತ್ತಿದ್ದೇನೆ. ಆದರ ಜೊತೆಗೆ ಇವತ್ತೇನು ಬಜೆಟ್‌ನಲ್ಲಿ ಅವರು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಸರ್ಕಾರ ಪಾವತಿಸಬೇಕಾದ ಬಡ್ಡಿ, ವೇತನ ಮತ್ತು ಪಿಂಚಣಿಗಳಿಗೆ 2004-05ರ ವೇಳೆಗೆ ರಾಜಸ್ವ ಕೊರತೆಯನ್ನು ಶೂನ್ಯಕ್ಕೆ ತೆಗೆದುಕೊಂಡು ಬರುತ್ತೇನೆ ಎನ್ನುವಂತಹ ಮಾತನ್ನು ಹೇಳಿದರು. ಅಂದರೆ ಇನ್ನೊಂದು ವರ್ಷ ಬಿಟ್ಟು. ಮುಂದಿನ ವರ್ಷ. ಅಷ್ಟರೊಳಗೆ ನಾವು ಶೂನ್ಯಕ್ಕೆ ತೆಗೆದುಕೊಂಡು ಬರುತ್ತೇವೆ ಎನ್ನುವಂತಹ ಮಾತನ್ನು ಹೇಳಿದರು. ಆದರೆ ಇವತ್ತು ರಾಜಸ್ವ ಕೊರತೆ ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಇದ್ದುದ್ದು 1573 ಕೋಟಿರೂಪಾಯಿಗಳು. ಆಮೇಲೆ 2002-03 ಇಲ್ಲಿಯವರೆಗೆ 3405 ಕೋಟಿ ರೂಪಾಯಿಗೆ ಏರಿದೆ. ಅಂದರೆ ಪ್ರತಿ ವರ್ಷ ಏರುತ್ತಾ ಹೋಗಿದೆ. ಒಂದು ಕಡೆ ರಾಜಸ್ವ ಕೊರತೆಯನ್ನು ನಾವು ಶೂನ್ಯ ಮಾಡುತ್ತೇವೆ ಎಂದು ಹೇಳಿದಂತಹ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಒಂದು ವರ್ಷ ಉಳಿದಿದೆ ಅವಧಿ. ಆದರೆ ಆ ಕೊರತೆ ಇನ್ನೂ ಏರುತ್ತಾ ಹೋಗುತ್ತಿದೆ. ಹೀಗಾಗಿ ಇದು

ಸರ್ಕಾರದ ಈ ಒಂದು ಆರ್ಥಿಕ ಪರಿಸ್ಥಿತಿ ಯಾವ ದಿಕ್ಕಿನ ಕಡೆಗೆ ಇದೆ ಎಂಬುದನ್ನು ಇದು ತೋರಿಸುತ್ತಿದೆ. ಮತ್ತು ನಾನು ಇಲ್ಲಿ ಬಹು ಮುಖ್ಯವಾದಂತಹ ಇನ್ನೊಂದು ಪ್ರಸ್ತಾವನೆಯನ್ನು ಮಾಡುತ್ತಿದ್ದೇನೆ. ಇವತ್ತು ಈ ಒಂದು ಪ್ರಾದೇಶಿಕ ಅಸಮತೋಲನದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಸಾಕಷ್ಟು ಒತ್ತು ಕೊಟ್ಟು, ಬಹಳಷ್ಟು ದೊಡ್ಡದಾದಂತಹ ಒಂದು ಕಾಣಿಕೆಯನ್ನು ಈ ಒಂದು ಉತ್ತರ ಕರ್ನಾಟಕಕ್ಕೆ ನಾನು ಕೊಟ್ಟಿದ್ದೇನೆ ಎನ್ನುವಂತಹ ರೀತಿಯಲ್ಲಿ ಅವರು ಅದರಲ್ಲಿ ಬಿಂಬಿತ ಮಾಡಿದ್ದಾರೆ ಎನ್ನವಂತಹದ್ದನ್ನು ನಾನು ಇಲ್ಲಿ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಾಗಾದರೆ ಇಲ್ಲಿ ಬೀದರ್‌ನಲ್ಲಿ ಇವತ್ತು ಪಶು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಿಕ್ಕೆ ಒಂದು ಘೋಷಣೆಯನ್ನು ಮಾಡಿದ್ದಾರೆ. ಆಮೇಲೆ ಮುಂದೆ ಈ ಒಂದು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯದ ಒಂದು ಘೋಷಣೆ ಮಾಡಿದ್ದಾರೆ. ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಸಾರ್ವಜನಿಕ ಆಯುಕ್ತರ ಕಛೇರಿ ಸ್ಥಾಪನೆ ಮಾಡಲಿಕ್ಕೆ ಅವರು ಹೇಳಿದ್ದಾರೆ. ಅದರ ಜೊತೆಗೆ ಜಲಮಂಡಲಿ ಸ್ಥಾಪನೆ. ನೀರು ಸರಬರಾಜು ಮತ್ತು ಜಲ ಮಂಡಲಿಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಹಾಗಾದರೆ ಈ ಒಂದು ನಾಲ್ಕು ಕಛೇರಿಗಳು ಬಂದು ಬಿಟ್ಟರೆ ಉತ್ತರ ಕರ್ನಾಟಕದ ಅಭಿವೃದ್ಧಿ ಆಗುತ್ತದೆಯೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಅವರೇನು ಇಲ್ಲಿಯವರೆಗೆ ಪ್ರಾಮಿಸ್ ಮಾಡಿದ್ದರು, ಇಲ್ಲಿಯವರೆಗೆ ಏನು ನಡೆದುಕೊಂಡು ಬಂದಿದ್ದಾರೆ, ಅದು ಆಗಬೇಕು. ಏಕೆಂದರೆ ಈ ಒಂದು ವಿಶ್ವವಿದ್ಯಾಲಯಗಳನ್ನು, ಈ ರೀತಿ ಕಛೇರಿಗಳು ಆಗಬೇಕು. ಹಿಂದೆ ಕಛೇರಿಗಳನ್ನು ಮಾಡುತ್ತೇವೆಂದು ಘೋಷಣೆ ಮಾಡಿದಾಗ ಏನಾಗಿದೆ ಎಂಬುದು ನಮಗೆ ಗೊತ್ತಿದೆ. ನೀರಾವರಿ ನಿಗಮ ಬಂತು. ಎಷ್ಟೊಂದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ? ಜವಳಿ ನಿಗಮ ಹುಬ್ಬಳ್ಳಿಗೆ ಬಂತು. ಏನಾಯಿತು? ಜವಳಿ ನಿಗಮ ಅಸ್ತಿತ್ವಕ್ಕೆ ಬರಲೇ ಇಲ್ಲ. ಸಕ್ಕರೆ ನಿರ್ದೇಶನಾಲಯ ಬೆಳಗಾವಿಗೆ ಬಂತು. ಬಂದು ಹೋಯಿತು, ಸಕ್ಕರೆ ನಿರ್ದೇಶನಾಲಯ, ಬೆಳಗಾವಿಯಲ್ಲಿ ಆಫೀಸು ತೆಗೆಯಲಿಲ್ಲ. ಆಮೇಲೆ ಮೈಸೂರಿಗೆ ರೇಷ್ಮೆ ನಿರ್ದೇಶನ ಅದೂ ಬರಲಿಲ್ಲ, ಅದು ಬೆಂಗಳೂರಿನಲ್ಲಿಯೇ ಉಳಿಯಿತು. ಆಮೇಲೆ ರಾಯಚೂರಿಗೆ ಒಂದು ಘೋಷಣೆ ಮಾಡಿದ್ದರು. ಅದೂ ಏನಾಗಲಿಲ್ಲ. ಹಾಗಾದರೆ ಇದೂ ಅದೇ ರೀತಿಯೇನೋ ಹೇಗೆ ಎಂದು ನಾನು ಇವತ್ತು ಪ್ರಶ್ನೆ ಮಾಡುತ್ತೇನೆ. ಇವತ್ತು ಡಾ|| ನಂಜುಂಡಪ್ಪನವರ ರಿಪೋರ್ಟ್. ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಹಿಂದೆ ಪ್ರಾದೇಶಿಕ ಅಸಮಾನತೆ ಬಗ್ಗೆ ಸರ್ಕಾರದಲ್ಲಿ ಚರ್ಚೆ ಆಗುತ್ತಿತ್ತು. ಸಂವಾದ ಆಗುತ್ತಿತ್ತು. ಕೆಲವರು ಪುಸ್ತಕಗಳನ್ನೂ ಬರೆದರು. ಅಂಕಿ ಸಂಖ್ಯೆಗಳನ್ನೂ ಕೊಟ್ಟರು. ಆದರೆ ಅದಕ್ಕೊಂದು ಅಧ್ಯಯನ ಮಾಡಬೇಕು ಎನ್ನುವಂತಹದ್ದು ಸರ್ಕಾರದಿಂದ ಎಲ್ಲೂ ಆಗಿರಲಿಲ್ಲ. ಹೀಗಾಗಿ ಒಂದು ಪ್ರೊಫೆಸರ್ ಅಲಗ್ ಅವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದರು. ಅವರು ಒಂದು ವರ್ಷ ಕೆಲಸ ಮಾಡಲಿಲ್ಲ. ಮುಂದೆ ಡಾ|| ನಂಜುಂಡಪ್ಪನವರ ಅಪಾಯಿಂಟ್ ಆಯಿತು. ಡಾ|| ನಂಜುಂಡಪ್ಪನವರ ಅಪಾಯಿಂಟ್‌ಮೆಂಟ್ ಆದ ಮೇಲೆ ಅವರು ಪ್ರಾಮಾಣಿಕವಾಗಿ, ಹಾರ್ಡ್ ವರ್ಕ್ ಮಾಡಿ ಒಂದು ರಿಪೋರ್ಟ್‌ನ್ನು ತಯಾರು ಮಾಡಿದ್ದಾರೆ. ನಾನು ದಯವಿಟ್ಟು ನಮ್ಮ ಶಾಸಕ ಮಿತ್ರರನ್ನು ವಿನಂತಿ ಮಾಡುತ್ತೇನೆ. ದಯವಿಟ್ಟು ಈ ರಿಪೋರ್ಟ್‌ನ್ನು ಎಲ್ಲರೂ ಓದಬೇಕು. ಇದು ಕೇವಲ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎನ್ನುವುದು ಅಲ್ಲ. ಇಡೀ ಸಮಗ್ರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಅವರು ಹಲವಾರು

ಉತ್ತಮವಾದ ಸಲಹೆ-ಸೂಚನೆಗಳನ್ನು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಅದನ್ನು ಓದಿದರೆ ಯಾವ ತಾಲ್ಲೂಕು ಹಿಂದುಳಿದಿದೆ? ಯಾವ ತಾಲ್ಲೂಕಿನಲ್ಲಿ ಏನು ಕೆಲಸ ಮಾಡಬೇಕು ಎನ್ನುವಂತಹ ಚಿತ್ರಣ ನಮ್ಮ ಮುಂದೆ ಬರುತ್ತದೆ. ಒಂದು ಕಂಪ್ಯೂಟರ್ ಇದ್ದ ಹಾಗೆ ಅದು. ಆ ರೀತಿ ಚಿತ್ರಣ ಬರುತ್ತದೆ. ಅದರ ಮೇಲೆ ನಾವು ಇಡೀ ಕರ್ನಾಟಕದ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯ ಇದೆ. ಹೀಗಾಗಿ ಇವತ್ತು ಅದನ್ನು ನಾವು ನೋಡಿದಾಗ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ನಿರ್ಲಕ್ಷ್ಯ ಆಗಿದೆ ಎನ್ನುವಂತಹ ಮಾತನ್ನು ನಾವು ಹೇಳುತ್ತಿದ್ದೇವೆ. ಆದರೆ ನಾವು ಅಂಕಿ ಸಂಖ್ಯೆಗಳನ್ನು ನೋಡಿದಾಗ ಇವತ್ತು ಆ ಭಾಗದಿಂದ ಬಂದವರಿಗೆ ಸಂಕಟ ಆಗುತ್ತದೆ, ಆ ರಿಪೋರ್ಟ್‌ನ್ನು ಓದಿದರೆ ನಾವು ಎಷ್ಟೊಂದು ಹಿಂದುಳಿದಿದ್ದೇವೆ ಆ ಭಾಗದವರು ಎಂಬುದು ಗೊತ್ತಾಗುತ್ತದೆ. ಅಪಾಯಿಂಟ್‌ಮೆಂಟ್ಸ್ ಇರಬಹುದು, ನೇಮಕಾತಿ ಇರಬಹುದು. ರಾಜಕೀಯದ ಒಂದು ನೇಮಕಗಳು ಇರಬಹುದು. ಎ ಗ್ರೇಡ್, ಬಿ ಗ್ರೇಡ್ ಇರಬಹುದು. ಐಎಎಸ್ ಆಫೀಸರ್ ಇರಬಹುದು, ಕೆಎಎಸ್ ಆಫೀಸರ್ ಇರಬಹುದು. ಕೆಪಿಎಸ್‌ಸಿಯ ಛೇರ್ಮನ್ ಇರಬಹುದು. ಸರ್ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು:- ಸಾಕು ಎಂದು ಹೇಳಿದೆ..

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾಗ ತಾವು ಅವಕಾಶವನ್ನು ಮಿತಿಗೊಳಿಸಿದರೆ....

ಶ್ರೀ ಕಾಗೋಡು ತಿಮ್ಮಪ್ಪ:- ಹೇಳಿದ್ದೇ ಹೇಳುವ ಕಿಸ್‌ಬಾಯಿದಾಸ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ:- ಅವರು ಮಾತನಾಡುವಾಗ ಯಾವುದೇ ರೀತಿ ಮಧ್ಯದಲ್ಲಿ ಅಡಚಣೆ ಆಗದ ರೀತಿಯಲ್ಲಿ ಅವಕಾಶ ಕೊಡಬೇಕು.

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಈ ಸದನದಲ್ಲಿ ರಾತ್ರಿ 2 ಗಂಟೆಯವರೆಗೆ, 2.30 ಗಂಟೆಯವರೆಗೆ ಕೂಡ ಸದನವನ್ನು ನಡೆಸಿರತಕ್ಕಂಥಹ ಉದಾಹರಣೆಗಳು ಇದ್ದಾವೆ. ಇದು ಅತ್ಯಂತ ಮುಖ್ಯವಾಗಿರತಕ್ಕಂಥಹ ವಿಷಯುವನ್ನು ನಾವು ಚರ್ಚೆ ಮಾಡುತ್ತಿದ್ದೇವೆ. ನಾವು ಸದಸ್ಯರಾಗಿರತಕ್ಕಂಥವರು ನಮ್ಮ ಅಭಿಪ್ರಾಯಗಳನ್ನು ವಿವರವಾಗಿಲ್ಲದೇ ಇದ್ದರೂ ಕೂಡ ಸೂಕ್ಷ್ಮವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ವಿಶೇಷವಾದಂತಹ ಸ್ಥಾನಮಾನವನ್ನು ಹೊಂದಿರತಕ್ಕವರು. ಅವರಿಗೆ ತಡೆ ಒಡ್ಡತಕ್ಕದ್ದು ಸರಿಯಾದ ಕ್ರಮ ಆಗುವುದಿಲ್ಲ ಎನ್ನತಕ್ಕ ಮಾತನ್ನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಹೇಳಿದೆ. ನಾನು ಬಹಳಷ್ಟು ವಿಷಯ ಟಚ್ ಮಾಡುವುದಿಲ್ಲ. ಬಹಳಷ್ಟು ವಿಷಯ ಟಚ್ ಮಾಡಿದರೆ ಎರಡು ತಾಸು ಮೂರು ತಾಸು ಮಾತನಾಡಿದರೂ ಮುಗಿಯುವುದಿಲ್ಲ. ಆದರೆ ನಾನು ಕೆಲವೊಂದು ಪ್ರಮುಖ ವಿಷಯವನ್ನು ಇಲ್ಲಿ ಹೇಳುತ್ತೇನೆ. ಕೆಲವೊಂದು ಅಂಕಿ ಸಂಖ್ಯೆಗಳನ್ನು ಇಲ್ಲಿ ಸದನದ ಗಮನಕ್ಕೆ ತೆಗೆದುಕೊಂಡು ಬಂದರೆ ಇಡೀ ರಾಜ್ಯದ ಗಮನಕ್ಕೆ ಹೋಗುತ್ತದೆ, ಯಾವ ರೀತಿ ಅನ್ಯಾಯ ಆಗಿದೆ ಎಂದು. ಆ ದೃಷ್ಟಿಯಿಂದ ನಾನು ಕೆಲವೊಂದು ಪ್ರಮುಖವಾದಂತಹ ಅಂಕಿ ಸಂಖ್ಯೆಗಳನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಾನು ಬಯಸುತ್ತಿದ್ದೇನೆ. ಈ ಒಂದು ಕೊನೆಯ

ವಿಷಯವನ್ನು ಮಾತನಾಡಿ ನಾನು ಮುಗಿಸುತ್ತೇನೆ. ಇವತ್ತು ಒಂದು ರೀತಿ ಶೈಕ್ಷಣಿಕವಾಗಿ ಯಾವ ರೀತಿ ಹಿಂದೆ ಉಳಿದಿದ್ದೇವೆ ಎನ್ನುವುದಕ್ಕೆ ಉದಾಹರಣೆ ಇಲ್ಲಿ ಹೇಳುತ್ತೇನೆ. ನಾನು ಡಾ|| ನಂಜುಂಡಪ್ಪನವರ ವರದಿಯನ್ನು ರೆಫರ್ ಮಾಡುತ್ತಿದ್ದೇನೆ. ಬೇರೆ ಯಾವ ವರದಿಯನ್ನೂ ನಾನು ರೆಫರ್ ಮಾಡುವುದಿಲ್ಲ. ಬೇರೆ ಯಾವ ಅಂಕಿ ಸಂಖ್ಯೆಗಳನ್ನೂ ನಾನು ತೆಗೆದುಕೊಳ್ಳುವುದಿಲ್ಲ. ಇಲ್ಲಿ ಇವತ್ತು ದಕ್ಷಿಣ ಕರ್ನಾಟಕದ ಪ್ರದೇಶದಲ್ಲಿ ಇಂಜಿನಿಯರಿಂಗ್ ಕಾಲೇಜುಗಳು 59 ಇದ್ದಾವೆ. ದಕ್ಷಿಣ ಭಾಗದಲ್ಲಿ 59, ಉತ್ತರ ಭಾಗದಲ್ಲಿ 23 ಇಂಜಿನಿಯರಿಂಗ್ ಕಾಲೇಜುಗಳು ಇದ್ದಾವೆ. ಆಮೇಲೆ ಪಾಲಿಟೆಕ್ನಿಕ್ಸ್ 128 ದಕ್ಷಿಣದಲ್ಲಿ, ಉತ್ತರದಲ್ಲಿ 64 ಇದ್ದಾವೆ. ಕೈಗಾರಿಕಾ ತರಬೇತಿ ಸಂಸ್ಥೆಗಳು 748, ಅಲ್ಲಿ 208. ಪದವಿ ಕಾಲೇಜುಗಳು 571 ಹಾಗೂ ಆ ಕಡೆ 345. ಪ್ರೌಢಶಾಲೆಗಳು 5010 ದಕ್ಷಿಣದಲ್ಲಿ ಉತ್ತರ ಕರ್ನಾಟಕದಲ್ಲಿ 3,137, ಎರಡು ಸಾವಿರದಷ್ಟು ಡಿಫರೆನ್ಸ್. ಅಂದರೆ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಎರಡೂ ಕೂಡಿಕೊಂಡು ನಾನು ಹೇಳುತ್ತಿದ್ದೇನೆ. ಇದು ಶಿಕ್ಷಣದ್ದು. ಇನ್ನು ಮುಂದೆ ಗೆಜೆಟೆಡ್ ಹುದ್ದೆಗಳ ವಿಚಾರ. ಗೆಜೆಟೆಡ್ ಹುದ್ದೆಗಳಲ್ಲಿ ಪರ್ಸೆಂಟೇಜ್ ಕಡಿಮೆ ಇದೆ. ಆಮೇಲೆ ಎ ಮತ್ತು-ಬಿ ಸಮುದಾಯದ ಅಪಾಯಿಂಟ್‌ಮೆಂಟಿನಲ್ಲಿ ಕಡಿಮೆ ಇದೆ. ಮುಂದೆ ಇಲ್ಲಿ ಪ್ರಮುಖವಾಗಿ ಇನ್ನೊಂದು ಪ್ರಸ್ತಾಪ ಮಾಡುವಂತಹದ್ದು ಸಚಿವಾಲಯದ ಅಧಿಕಾರಿಗಳು; ತಮ್ಮ ಸುಪರ್ದಿಗೆ ಬರುತ್ತದೆ ಇಲ್ಲಿ ಬೆಂಗಳೂರಿನಲ್ಲಿ ಇರುವಂತಹದು. ಇವೊತ್ತು ಮೈಸೂರು ವಿಭಾಗದಿಂದ 24 ಪರ್ಸೆಂಟ್, ಕರ್ನಾಟಕದ ಹೊರಗಿನವರು 5 ಪರ್ಸೆಂಟ್, ಉತ್ತರ ಭಾದದವರು 21 ಪರ್ಸೆಂಟ್ ಮತ್ತು ದಕ್ಷಿಣ ಕರ್ನಾಟಕದವರು 72 ಪರ್ಸೆಂಟ್ ಮಂದಿ ಸಚಿವಾಲಯದಲ್ಲಿದ್ದಾರೆ. ಐಎಎಸ್ ಅಧಿಕಾರಿಗಳ ಬಗ್ಗೆ ತೆಗೆದುಕೊಂಡರೆ, ದಕ್ಷಿಣ ಕರ್ನಾಟಕಕ್ಕೆ ಬಂದವರು 95. ಅಂದರೆ 36 ಪರ್ಸೆಂಟ್, ಉತ್ತರ ಕರ್ನಾಟಕದಿಂದ ಕೇವಲ 25 ಮಂದಿ, ಅಂದರೆ 10 ಪರ್ಸೆಂಟ್. ಅನಂತರ, ಇಡೀ ಕರ್ನಾಟಕ ರಾಜ್ಯದ ಬೇರೆ ಭಾಗಗಳಿಂದ ಬಂದಂಥವರು 54 ಪರ್ಸೆಂಟ್. ಒಟ್ಟಾರೆ 265 ಮಂದಿ. ಶೇಕಡ ನೂರರಷ್ಟಾಯಿತು. ಉತ್ತರ ಕರ್ನಾಟಕದಿಂದ ಬಂದ ಐಎಎಸ್ ಅಧಿಕಾರಿಗಳು ಶೇಕಡ 10 ಮಾತ್ರ. ಇನ್ನೊಂದು ಪ್ರಮುಖವಾದ ಹುದ್ದೆ ಕೆಎಎಸ್. ಇವರೆಲ್ಲರೂ ಆಡಳಿತ ಯಂತ್ರದ ಚುಕ್ಕಾಣಿ ಹಿಡಿಸಿದವರು, ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸುವವರು. ಕೆಎಎಸ್ ಕೆಟಗಿರಿಯನ್ನು ನೋಡಿದಾಗ ಇವೊತ್ತು ಉತ್ತರ ಕರ್ನಾಟಕದಿಂದ ಬಂದವರು ಶೇಕಡ 32, ದಕ್ಷಿಣ ಕರ್ನಾಟಕದಿಂದ ಶೇಕಡ 64, ಇನ್ನಿತರರು ಶೇಕಡ 2. ಐಎಎಸ್, ಕೆಎಎಸ್‌ಗಿಂತಲೂ ಪ್ರಮುಖವಾಗಿರುವಂಥಾದ್ದು ಮುಖ್ಯಮಂತ್ರಿ ಹುದ್ದೆ. ಮುಖ್ಯಮಂತ್ರಿಗಳು ಎಷ್ಟು ಮಂದಿ ಆಗಿದ್ದಾರೆಂದರೆ, ಇಲ್ಲಿಯವರೆವಿಗೂ ಒಟ್ಟು 11 ಜನ ಮುಖ್ಯಮಂತ್ರಿಗಳಾಗಿದ್ದಾರೆ. ಅದರಲ್ಲಿ 7 ಮಂದಿ ದಕ್ಷಿಣ ಕರ್ನಾಟಕದವರಾಗಿದ್ದರೆ, 4 ಮಂದಿ ಉತ್ತರ ಕರ್ನಾಟಕದವರು. ಅದು ಹೈದರಾಬಾದ್- ಕರ್ನಾಟಕ ಇರಬಹುದು. ಅಲ್ಲಿಂದ ನಾಲ್ಕು ಜನ ಮುಖ್ಯಮಂತ್ರಿಗಳಾಗಿದ್ದಾರೆ. ಬಹಳ ಮುಖ್ಯವಾದುದೇನೆಂದರೆ, ನಲವತ್ತು ವರ್ಷಗಳ ಅವಧಿಯೊಳಗೆ ಒಟ್ಟು 525 ಮಂದಿ ಮಂತ್ರಿಗಳಾಗಿದ್ದಾರೆ. ಅದರಲ್ಲಿ 318 ಸಚಿವರು ದಕ್ಷಿಣ ಕರ್ನಾಟಕದವರಾಗಿದ್ದರೆ, 207 ಸಚಿವರು ಉತ್ತರ ಕರ್ನಾಟಕದವರಾಗಿದ್ದಾರೆ. ಅನಂತರ, 31 ಉಪ ಸಚಿವರಲ್ಲಿ ಈ ಕಡೆಯವರು 21 ಮಂದಿಯಿದ್ದಾರೆ.

ಶ್ರೀ ವಿ. ಮುನಿಯಪ್ಪ:- ದಯವಿಟ್ಟು ನೀರಾವರಿಗೆ ಎಷ್ಟು ಖರ್ಚು ಮಾಡಿದ್ದೇವೆ ಎಂಬುದನ್ನೂ ಸಹ ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ಅದೂ ಸಹ ಇದೆ, ನೀರಾವರಿ ಬಗ್ಗೆಯೂ ಹೇಳುತ್ತೇನೆ. ಬೇಕಿದ್ದರೆ ನೀರಾವರಿಯದ್ದೂ ಸಹ ಹೋಲಿಕೆ ಮಾಡೋಣ. ಇನ್ನು ಲೋಕಸೇವಾ ಆಯೋಗಕ್ಕೆ ನೇಮಕವಾದ ಅಧ್ಯಕ್ಷರು.......

ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಸದಸ್ಯರು ಆಲಮಟ್ಟಿ ಬಗ್ಗೆ ಹೇಳಿದರು. ಆಲಮಟ್ಟಿ ಅಣೆಕಟ್ಟು ಯೋಜನೆ 1964ರಲ್ಲಿ ಪ್ರಾರಂಭಗೊಂಡು 37 ವರ್ಷಗಳಾದರೂ ಇನ್ನೂ ಪರಿಪೂರ್ಣಗೊಂಡಿಲ್ಲದಿರುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಲೋಕಸೇವಾ ಆಯೋಗದ ವಿಚಾರ ಬಹಳ ಮುಖ್ಯವಾದುದು. ಸದರಿ ಆಯೋಗಕ್ಕೆ 12 ಮಂದಿಯ ಪೈಕಿ ದಕ್ಷಿಣ ಕರ್ನಾಟಕದಿಂದ ಇದುವರೆವಿಗೂ 9 ಜನ ಅಧ್ಯಕ್ಷರು ನೇಮಕಗೊಂಡಿದ್ದರೆ, 55 ಸದಸ್ಯರ ಪೈಕಿ 38 ಮಂದಿ ಇಲ್ಲಿನವರಾಗಿದ್ದಾರೆ. ಉತ್ತರ ಕರ್ನಾಟಕದಿಂದ ಕೇವಲ ಇಬ್ಬರಿದ್ದಾರೆ. 14 ಮಂದಿ ಸದಸ್ಯರಿದ್ದಾರೆ. ಇದು ಇರುವ ಪರಿಸ್ಥಿತಿ. ಇವೊತ್ತು ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ನಂತರ ಎಲ್ಲವನ್ನೂ ಸುದಾರಣೆ ಮಾಡಬೇಕೆಂದು ಹೇಳುತ್ತಿಲ್ಲ. ಆದರೆ, ಇನ್ನೂ ಹೆಚ್ಚು ಒತ್ತು ನೀಡಬೇಕೆಂದು ಹೇಳುತ್ತಿದ್ದೇನೆ. ನಲವತ್ತು ವರ್ಷಗಳ ಸತ್ಯವನ್ನು ನಾನು ಹೇಳುತ್ತಿದ್ದೇನೆ. ನಾನು ಕ್ರಿಟಿಸೈಜ್ ಮಾಡುತ್ತಿಲ್ಲ. ಪರಿಸ್ಥಿತಿ ಏನಿದೆ ಎಂಬುದು ಇಡೀ ರಾಜ್ಯದ ಜನತೆಗೆ ಗೊತ್ತಾಗಬೇಕು. ವರದಿ ಸುಮಾರು ಒಂದು ಸಾವಿರ ಪುಟಗಳಷ್ಟು ಇರುವುದರಿಂದ ಅದನ್ನು ವಿವರವಾಗಿ ಓದುವುದಿಲ್ಲ.

ಶ್ರೀ ಎಸ್. ಎಸ್. ಪಾಟೀಲ್:- ನಾಡಗೌಡರಿಗೆ ಇದರ ಬಗ್ಗೆ ಹೇಳಲು ಧೈರ್ಯ ಸಾಲದು.

ಶ್ರೀ ಕರಿಯಣ್ಣ:- ನಾವು ಇಷ್ಟಾದರೂ ಮಾಡಿದ್ದೇವೆ. ನೀವು ಏನೂ ಮಾಡಲಿಲ್ಲವಲ್ಲಾ.

ಶ್ರೀ ಬಿ.ಹೆಚ್. ಬನ್ನಿಕೋಡ್:- ವಿರೋಧ ಪಕ್ಷದ ನಾಯಕರಿಗೆ ತಿಳಿಸುವುದೇನೆಂದರೆ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಸತ್ಯವನ್ನು ಸಂಶೋಧಿಸುವ ಮೂಲಕ ಈ ಸದನಕ್ಕೆ, ರಾಜ್ಯದ ಜನತೆಗೆ ವರದಿ ಅರ್ಪಿಸಿರುವುದನ್ನು ತಾವು ಒಪ್ಪಬಹುದೆಂದು ತಿಳಿದಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:- ಇನ್ನೊಂದು ಲಾಸ್ಟ್ ಐಟಂ ಹೇಳುತ್ತೇನೆ. ಇವೆಲ್ಲಾ ರಾಜಕೀಯ ಅಪಾಯಿಂಟ್‌ಮೆಂಟ್ಸ್ ಆಯಿತು. ಕಲಾವಿದರಿಗೆ ಪ್ರಶಸ್ತಿ ಕೊಡುವುದರಲ್ಲಿ ಉತ್ತರ ಕರ್ನಾಟಕ ಭಾಗದವರಿಗೆ 35 ಪರ್ಸೆಂಟ್, ದಕ್ಷಿಣ ಕರ್ನಾಟಕದವರಿಗೆ 64 ಪರ್ಸೆಂಟ್. ಆ ಕಡೆಯವರು ಕಲಾವಿದರಲ್ಲವೇ? ಇದರ ಬಗ್ಗೆ ಸ್ವಲ್ಪ ಜಗಳವೂ ನಡೆದಿದೆ. ಅನಂತರ, ಮಾನ್ಯ ಮುಖ್ಯಮಂತ್ರಿಗಳು ನಿಗಮ, ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿದರು. ನಾನು ಹೇಳುತ್ತಿರುವುದು ನಲವತ್ತು ವರ್ಷಗಳ ಕಥೆಯಲ್ಲ. 1999-2000ನೇ ಇಸವಿಯಲ್ಲಿ ನಿಗಮ ಮಂಡಳಿಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿದ್ದಾರಲ್ಲಾ ಒಟ್ಟು 49 ಮಂದಿಯನ್ನು ನೇಮಿಸಿದ್ದು. ಅದರಲ್ಲಿ ದಕ್ಷಿಣ ಕರ್ನಾಟಕದವರು 29 ಮಂದಿ ಇದ್ದರೆ, ಉತ್ತರ ಕರ್ನಾಟಕದ 12 ಮಂದಿಯನ್ನು ನೇಮಕ ಮಾಡಿದ್ದಾರೆ. ಅಂದರೆ, ಒಂದು ಕಡೆ ಶೇಕಡ 70 ರಷ್ಟು ಪ್ರಾತಿನಿಧ್ಯ ನೀಡಿದ್ದರೆ ಮತ್ತೊಂದು ಕಡೆ ಶೇಕಡ 29ರಷ್ಟು ನೀಡಿದ್ದಾರೆ. ಇದು ವಸ್ತುಸ್ಥಿತಿ. ಇದನ್ನು ನಾವು ವಿವರವಾಗಿ ನೋಡಿದಾಗ ಯಾವ ರೀತಿ ಅನ್ಯಾಯವಾಗಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಂ.ಜಿ. ಮುಳೆ:- ಹಾಗೆಯೇ ಆರ್ಟಿಕಲ್ 370ರ ಬಗ್ಗೆಯೂ ಹೇಳಿ.

ಶ್ರೀ ಸಿ.ಎಸ್.ನಾಡಗೌಡ:- ಶೆಟ್ಟರ್‌ರವರೆ, ತಾರತಮ್ಯವಾಗಿರುವುದನ್ನು ಸರ್ಕಾರ ಒಪ್ಪಿಕೊಂಡು ವರದಿಯನ್ನು ಜಾರಿಗೆ ತರಲು ಪ್ರಯತ್ನ ಮಾಡಿರುವ ಮೊಟ್ಟಮೊದಲ ಮುಖ್ಯಮಂತ್ರಿ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಎನ್ನುವುದನ್ನು ತಾವು ಮರೆಯಬಾರದು.

ಶ್ರೀ ಪಿ.ಹೆಚ್.ಪೂಜಾರ್:- ಈ ವಿಷಯವನ್ನು ನಾವು ಸ್ವಾಗತಿಸುತ್ತಿದ್ದೇವೆ.

ಶ್ರೀ ಎಸ್.ಜಿ. ನಂಜಯ್ಯನಮಠ:- ಪೂಜಾರ್‌ರವರೆ, ಆಲಮಟ್ಟಿ ಅಣೆಕಟ್ಟು ಸಲುವಾಗಿ ಅಡಿಗಲ್ಲನ್ನಿಟ್ಟು 37 ವರ್ಷಗಳಾಯಿತೆಂದು ಹೇಳಿದಿರಲ್ಲಾ ಕಳೆದ 37 ವರ್ಷಗಳಲ್ಲಿ ಮೊಟ್ಟಮೊದಲ ಬಾರಿಗೆ 618 ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಮುಖ್ಯಮಂತ್ರಿ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಎಂಬುದನ್ನು ತಿಳಿದುಕೊಂಡು ತಾವು ಶ್ಲಾಘಿಸಬೇಕು. ಯಾವ ಸರ್ಕಾರ ಅಧಿಕಾರದಲ್ಲಿದ್ದಾಗ ಇಷ್ಟು ಪ್ರಮಾಣದಲ್ಲಿ ದುಡ್ಡು ಕೊಟ್ಟಿದೆ? ಬಾಗಲಕೋಟೆ ವಿಷಯದಲ್ಲಿ ಸುಮಾರು 618 ಕೋಟಿ ರೂಪಾಯಿಗಳಷ್ಟು ಹಣ ನೀಡುವ ಕುರಿತಂತೆ ಯಾರೂ ಘೋಷಣೆ ಮಾಡಿರಲಿಲ್ಲ. ಇದನ್ನು ತಾವೇ ಸ್ವಾಗತಿಸಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾನು ಪ್ರಸ್ತಾಪಿಸುತ್ತಿರುವುದೇನೆಂದರೆ, ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ಕುರಿತಂತೆ ಡಾ।। ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ಸ್ಟಡಿ ಮಾಡಿಸಿದ್ದು, ಅದರ ರಿಪೋರ್ಟ್ ಇವೊತ್ತು ಹೊರಗೆ ಬಂದಿದ್ದು, ಇದನ್ನೆಲ್ಲಾ ನಾನು ಅಪ್ರೀಷಿಯೇಟ್ ಮಾಡುತ್ತೇನೆ, ಅಭಿನಂದಿಸುತ್ತೇನೆ. ವರದಿಯ ಪುಸ್ತಕ ನಮ್ಮ ಕಡೆ ಬಂತಲ್ಲಾ. ಇವೊತ್ತು ಎಲ್ಲೆಲ್ಲಿ ಅನ್ಯಾಯವಾಗಿದೆ ಎಂಬ ಮಾಹಿತಿ ನಮ್ಮ ಮುಂದಿದೆ. ಇವೊತ್ತಿನ ಸರ್ಕಾರ ಇರಬಹುದು, ನಾಳಿನ ಸರ್ಕಾರ ಇರಬಹುದು, ವರದಿ ಒಂದು ಗೀತೆ ಇದ್ದಂತೆ, ಗೈಡ್‌ಲೈನ್ಸ್ ಇದ್ದಂತೆ. ಅದರ ಪ್ರಕಾರ ನಾಳೆ ಇಂಪ್ರೂವ್‌ಮೆಂಟ್ ಮಾಡಲು ಸಾಧ್ಯವಿದೆ.

ಡಾ।। ನಂಜುಂಡಪ್ಪನವರು ಇಷ್ಟೆಲ್ಲಾ ಶಿಫಾರಸ್ಸುಗಳನ್ನು ಮಾಡಿ, ಹೋದ ವರ್ಷ ಬಜೆಟ್ ಮಾಡುವುದಕ್ಕೂ ಮೊದಲು ಮಧ್ಯಂತರ ವರದಿಯನ್ನು ಕೊಟ್ಟಿದ್ದರು. ಕೆಲವೊಂದು ಪ್ರಪೋಸಲ್‌ಗಳನ್ನು ಕೊಟ್ಟಿದ್ದರು. ಹೋದ ವರ್ಷದ ಬಜೆಟ್‌ನಲ್ಲಿ ಏನಾದರೂ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡುತ್ತಾರೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಯಾವುದನ್ನೂ ಮಾಡಲಿಲ್ಲ. ಆದರೆ ಇವತ್ತಿನ ಬಜೆಟ್‌ನಲ್ಲಿ ಕೆಲವು ವಿಶ್ವವಿದ್ಯಾನಿಲಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಹಿಳಾ ವಿಶ್ವವಿದ್ಯಾನಿಲಯ, ಪಶು ಸಂಗೋಪನಾ ವಿಶ್ವವಿದ್ಯಾನಿಲಯ, ಸಾರ್ವಜನಿಕ ಶಿಕ್ಷಣದ ಆಯುಕ್ತರ ಕಛೇರಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಒಂದು ಹಂತದಲ್ಲಿ ಪ್ರಾರಂಭವಾಗಲಿ. ಹಂತ ಹಂತವಾಗಿ ಏಳು, ಎಂಟು ವರ್ಷಗಳಲ್ಲಿ ಆ ಭಾಗವನ್ನು ಅಭಿವೃದ್ಧಿ ಮಾಡಬೇಕೆಂದು ಡಾ।। ನಂಜುಂಡಪ್ಪನವರು ಶಿಫಾರಸ್ಸು ಮಾಡಿದ್ದಾರೆ. ಪ್ರತಿ ವರ್ಷ ಕೊನೆಯ ಪಕ್ಷ ಎರಡು ಸಾವಿರ ಕೋಟಿ ಅನುದಾನವನ್ನು ವಿಶೇಷವಾದ ಪ್ಯಾಕೇಜ್‌ನ ಮೂಲಕ ಬಜೆಟ್‌ನಲ್ಲಿ ಇಡಬೇಕೆಂದು ವರದಿಯಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಎರಡು ಸಾವಿರ ಕೋಟಿ ರೂ. ಅಲ್ಲದಿದ್ದರೂ ಒಂದು ಸಾವಿರ ಕೋಟಿಯನ್ನಾದರೂ ಈ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಯ ಸಲುವಾಗಿ, ಇನ್‌ಫ್ರಾಸ್ಟಕ್ಚರ್ ಇರಬಹುದು, ಶೈಕ್ಷಣಿಕ ಅಭಿವೃದ್ಧಿ ಇರಬಹುದು, ಆರೋಗ್ಯ ಇರಬಹುದು ಇದರ ಬಗ್ಗೆ ಅವರೇನು ವರದಿಯಲ್ಲಿ ಸಲಹೆ ಮಾಡಿದ್ದಾರೆ ಅದಕ್ಕೆ ಒತ್ತು ಕೊಡಲು ಪ್ರಯತ್ನ ಆಗಬೇಕಾಗಿತ್ತು ಎಂಬುದು

ನನ್ನ ಒತ್ತಡ. ಡಾ॥ ನಂಜುಂಡಪ್ಪನವರ ವರದಿಯನ್ನು ಕೂಡಲೇ ಅನುಷ್ಠಾನ ಮಾಡುವಂಥದ್ದು ಆದರೆ ಅದಕ್ಕೆ ಪ್ರಾಮಾಣಿಕ ಪ್ರಯತ್ನವಾಗುತ್ತಿತ್ತು. ಆದರೆ ಅದು ಆಗಿಲ್ಲ ಎಂಬುದು ನನ್ನ ಕಳಕಳಿಯ ಒತ್ತಾಯ. ತಾವು ಕೇರಾಯ್ಡ್ ಸಂಸ್ಥೆಯನ್ನು ಮಾಡಿದ್ದೀರಿ. ಮೊನ್ನೆ ನಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದಾಗ ಬಜೆಟ್‌ನಲ್ಲಿ ನಾವು ಏನಾದರೂ ಪ್ರಸ್ತಾಪ ಮಾಡುತ್ತೇವೆ ಎಂಬ ರೀತಿಯಲ್ಲಿ ತಾವು ಹೇಳಿದ್ದಿರಿ. ಹಿಂದಿನ ಬಜೆಟ್‌ನಲ್ಲಿ ಗದಗ್ ಬಿಜಾಪುರ ಸೊಲ್ಲಾಪುರ ನಡುವಿನ ರೈಲ್ವೆ ಗೇಜ್ ಪರಿವರ್ತನೆಗೆ 20 ಕೋಟಿ ರೂ. ಕೊಡುವುದಾಗಿ ಅನೌನ್ಸ್ ಮಾಡಿದ್ದೀರಿ. ಆದರೆ ಅದನ್ನು ಕೊಡಲಿಲ್ಲ. ಕೇರಾಯ್ಡ್ ಒಪ್ಪಂದದ ಪ್ರಕಾರ 26 ಪರ್‌ಸೆಂಟ್ ತಮ್ಮ ಪಾಲನ್ನು ಕೊಡಬೇಕಾಗಿದೆ. ಆದರೆ ತಮ್ಮ ಕಡೆಯಿಂದ ಅದು ಆಗಲಿಲ್ಲ. ಅದರ ಬಗ್ಗೆ ಅನೌನ್ಸ್‌ಮೆಂಟ್ ಆಗಬೇಕು. ಅದು ಆಗಲಿಲ್ಲ. ತಾವು ಕೆಲವು ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಅಲ್ಯುಮಿನಿಯಂ ಪಾತ್ರೆಗಳ ಮೇಲೆ ಹೋದ ಸಲವೂ ತೆರಿಗೆಯನ್ನು ಹಾಕಿದ್ದಿರಿ, ಅನಂತರ ಅದನ್ನು ವಾಪಸ್ ತೆಗೆದುಕೊಂಡಿರಿ. ಅಲ್ಯುಮಿನಿಯಂ ಪಾತ್ರೆಯನ್ನು ಬಡವರು ಉಪಯೋಗ ಮಾಡುವಂಥದ್ದು. ಅದರ ಮೇಲೆ ತೆರಿಗೆಯನ್ನು ಹಾಕಬಾರದು. ಅದನ್ನು ಮಾರಾಟ ಮಾಡುವಂಥವರೂ ಬಡವರೇ. ಆದ್ದರಿಂದ ಅದರ ಮೇಲೆ ಹಾಕಿರುವ ತೆರಿಗೆಯನ್ನು ದಯಮಾಡಿ ತೆಗೆಯಬೇಕು. ಸಿ.ಇ.ಟಿ. ಬಗ್ಗೆ ಗೊಂದಲ ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ. ಸಬ್‌ಕಮಿಟಿ ಮಾಡಿದ್ದೀರಿ, ಕಮಿಟಿಯ ಅಧ್ಯಕ್ಷರ ಬದಲಾವಣೆಯಾಯಿತು, ಏನೇನೋ ಆಯಿತು. ಆದರೆ ಅದರ ಬಗ್ಗೆ ಸ್ಪಷ್ಟವಾಗಿ ಇದುವರೆಗೆ ಹೊರಕ್ಕೆ ಬರಲಿಲ್ಲ. ಇವತ್ತಿಗೂ ಆ ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ. ತಾವು 30, 31ರಂದು ಸಿ.ಇ.ಟಿ. ಪರೀಕ್ಷೆ ಮಾಡುವುದಾಗಿ ಹೇಳಿದ್ದೀರಿ. ಆದರೆ ಅದು ಇನ್ನೂ ಗೊಂದಲದಲ್ಲಿದೆ. ಸಿ.ಇ.ಟಿ. ಬಗ್ಗೆ ಏನಾಯಿತು ಎಂಬುದು ಹೊರಕ್ಕೆ ಬರಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾದ ಸಬ್ಸಿಡಿ ಬಾಕಿ 370-380 ಕೋಟಿ ರೂ. ಇದೆ. ಅದರ ಬಗ್ಗೆ ಬಜೆಟ್‌ನಲ್ಲಿ ಪ್ರೊವಿಜನ್ ಮಾಡುತ್ತೀರೆಂದು ತಿಳಿದುಕೊಂಡಿದ್ದೆವು. ಆದರೆ ಅದು ಆಗಲಿಲ್ಲ. ಆದ್ದರಿಂದ ಸಣ್ಣ ಕೈಗಾರಿಕೆಗಳು ನಶಿಸಿಹೋಗುತ್ತಿದೆ. ಅದಕ್ಕೆ ಜೀವ ಕೊಡುವಂಥ ಕೆಲಸವಾಗಬೇಕಿತ್ತು. ಅದು ಆಗಲಿಲ್ಲ. ಇವತ್ತು ಈ ಬಜೆಟ್ ಏನಿದೆ ಜನರಿಗೆ ಮರುಳುಮಾಡುವಂಥದ್ದಾಗಿದೆ. ಮೋಸ ಮಾಡುವಂಥದ್ದಾಗಿದೆ. ಒಂದಿಷ್ಟು ಯೋಜನೆಗಳನ್ನು ಘೋಷಣೆ ಮಾಡಿ ಆ ಎಲ್ಲಾ ಯೋಜನೆಗಳನ್ನು ಲೆಕ್ಕ ಮಾಡಿದರೆ 150 ಕೋಟಿ ರೂ ದಾಟುವುದಿಲ್ಲ. ರೈತರ ಪರವಾಗಿ, ಗ್ರಾಮೀಣ ಅಭಿವೃದ್ಧಿಯ ಪರವಾಗಿ ಎಂದೇನು ಹೇಳಿದ್ದೀರಿ ನಿಜವಾಗಿ ಲೆಕ್ಕ ಮಾಡಿದರೆ ಬಜೆಟ್‌ನಲ್ಲಿ ಕೇವಲ ಐದು ಪರ್‌ಸೆಂಟ್ ಹಣವನ್ನು ಅದಕ್ಕಾಗಿ ಇಟ್ಟಿದ್ದೀರಿ. ಗ್ರಾಮೀಣ ಅಭಿವೃದ್ಧಿಗೆ ಐದು ಪರ್‌ಸೆಂಟ್, ಕೃಷಿಗೆ 2 ಪರ್‌ಸೆಂಟ್ ಇಟ್ಟಿದ್ದೀರಿ. ಪ್ರಧಾನ್ಯತೆ ಯಾವುದಕ್ಕಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಬರಗಾಲವಿದೆ. ರೈತರ ಬಡ್ಡಿ ಮನ್ನಾ ಸಂಪೂರ್ಣವಾಗಿ ಆಗಬೇಕು, ಬೆಳೆ ವಿಮೆ ಹಣ ಸಂಪೂರ್ಣವಾಗಿ ಬಿಡುಗಡೆಯಾಗಬೇಕು; ಪ್ರಾದೇಶಿಕ ಅಸಮಾನತೆ ನೀಗುವಲ್ಲಿ ಕೇರಾಯ್ಡ್‌ಗೆ ಹಣವನ್ನು ಕೊಡಬೇಕು, ಡಾ॥ ನಂಜುಂಡಪ್ಪನವರ ವರದಿಯ ಪ್ರಕಾರ ಇನ್ನೂ ಹೆಚ್ಚು ಹಣವನ್ನು ಕೊಡಬೇಕು, ಆ ದಿಸೆಯಲ್ಲಿ ಪ್ರಯತ್ನವಾಗಬೇಕು, ಸಿ.ಇ.ಟಿ. ಬಗ್ಗೆ ಸ್ಪಷ್ಟನೆಯಾಗಬೇಕು. ಇಲ್ಲದಿದ್ದರೆ ಇದು ಕೇವಲ ಘೋಷಣೆಗಳ ಬಜೆಟ್ ಆಗುತ್ತದೆ. ಜನರಿಗೆ ಸಹಾಯವಾಗುವುದರ ಬದಲಾಗಿ ಕೇವಲ ಘೋಷಣೆಗಳ ಬಜೆಟ್, ಕೇವಲ ಕನಸುಗಳನ್ನು

ಹಂಚುವುದು ಆಗುತ್ತದೆ. ಅದು ಆಗಬಾರದು. ದಯವಿಟ್ಟು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಂಡು ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ಸಚಿವರು):- ನಾನು ಕೇಳುವುದು ಇಷ್ಟೇ, ಪಾರ್ಟಿವೈಸ್ ಸಮಯವನ್ನು ಮಾತನಾಡಲು ನಿಗದಿ ಮಾಡುತ್ತೀರಿ.

ಮಾನ್ಯ ಸದಸ್ಯರು:- ಬರೇ ಕೇಳಿದ್ದನ್ನೇ ಕೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:-ತಾವು ಹೇಳಿದ್ದಕ್ಕೆ..

ಶ್ರೀ ಡಿ.ಬಿ. ಚಂದ್ರೇಗೌಡ:-ನನಗೆ ಗೊತ್ತಾಗುವುದಿಲ್ಲವೇ? ತಮ್ಮಿಂದ ಅಷ್ಟೂ ತಿಳಿದುಕೊಳ್ಳಬೇಕೆ?

ಶ್ರೀ ಸಿ. ಬೈರೇಗೌಡ:- ಗೊತ್ತಿದ್ದರೂ ಎದ್ದು ನಿಂತಿದ್ದೀರಲ್ಲಾ?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕರ ಮಾತೇ ಕೊನೆಯ ಮಾತು ಎಂದರು. ಅದಕ್ಕೆ ಹೇಳಿದೆ. ಹೇಳಬಾರದೇ?

ಶ್ರೀ ಸಿ. ಬೈರೇಗೌಡ:- ಹೇಳಿ, ನಾವೂ ಮಾತನಾಡುವುದಕೋಸ್ಕರವೇ ಬಂದಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರ ಆದೇಶದ ವಿರುದ್ಧ ಏಕೆ?

ಅಧ್ಯಕ್ಷರು:- ಮಾನ್ಯ ಬೈರೇಗೌಡರೆ, ತಮ್ಮ ಪಕ್ಷಕ್ಕೆ ಎಷ್ಟು ಸಮಯ ಕೊಟ್ಟಿದ್ದೆವೋ ಅದಕ್ಕಿಂತ ಎರಡು ಗಂಟೆ ಜಾಸ್ತಿ ತೆಗೆದುಕೊಂಡಿದ್ದೀರಿ. ಐದು ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ 2003-2004ನೇ ಅಂದಾಜನ್ನು ಮಾನ್ಯ ಸಭೆಯ ಒಪ್ಪಿಗೆಗಾಗಿ ಮಂಡಿಸಿದ್ದಾರೆ.

ಅಧ್ಯಕ್ಷರು:- ತಾವು ಮೊದಲೇ ಮಾತನಾಡಿದ್ದರೆ ಸರಿಯಾಗುತ್ತಿತ್ತು. ಕೊನೆ ಘಳಿಗೆಯಲ್ಲಿ ಮಾತನಾಡಿದರೆ ಹೀಗೇ ಆಗುವುದು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ಪದ್ಧತಿಗಳು, ನಿಯಮಾವಳಿಗಳು ಅವರವರಿಗೆ ತಕ್ಕ ಹಾಗೆ ಅನುಕೂಲವಾಗಬೇಕೇ? ಸಾರ್ವತ್ರಿಕವಾಗಿ ಅಪ್ಪಣೆಯಾಗಬೇಕೇ? ಕಳೆದ 25 ವರ್ಷದಲ್ಲಿ ನಾನು ನೋಡಿದ್ದು, ಆಯವ್ಯಯದ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿದ್ದು ವಿರೋಧ ಪಕ್ಷದ ನಾಯಕರು, ಅದು ಆದ ಮೇಲೆ ಅವರ ಉಪನಾಯಕರೋ, ನಾಯಕರೋ ಮಾತನಾಡುತ್ತಾರೆ. ಅದು ಪದ್ಧತಿಯಲ್ಲವೇ? ಈಗ ಕೊನೆಯಲ್ಲಿ ವಿರೋಧ ಪಕ್ಷದ ನಾಯಕರು ಇನ್‌ಶಿಯೇಟ್ ಮಾಡಿದರೆ ಹೇಗೆ? ಮೊದಲು ವಿರೋಧ ಪಕ್ಷದ ನಾಯಕರು ಇನ್‌ಶಿಯೇಷನ್ ಮಾಡಿದ್ದರೆ ಅದರ ಆಧಾರದ ಮೇಲೆ ನಾವೆಲ್ಲಾ ಮಾತನಾಡಲು ಅನುಕೂಲವಾಗುತ್ತಿತ್ತು. ಈಗ ಏನಾಗಿದೆಯೆಂದರೆ, ನಾವೆಲ್ಲಾ ಮಾತನಾಡಿದ ಮೇಲೆ ವಿರೋಧ ಪಕ್ಷದ ನಾಯಕರು ಉತ್ತರ ಕೊಟ್ಟಂತೆ ಆಗಿದೆ. ಈಗ ವಿರೋಧ ಪಕ್ಷದ ಇನ್ನೊಬ್ಬ ನಾಯಕರು ನಾವೆಲ್ಲಾ ಮಾತನಾಡಿದಮೇಲೆ ಕೊನೆ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು:- ಮಾನ್ಯ ಬೈರೇಗೌಡರೇ, ತಾವು ಮೊದಲೇ ಮಾತನಾಡಿದ್ದರೆ ತೊಂದರೆ ಇರುತ್ತಿರಲಿಲ್ಲ.

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೆ, ಸಂಜೆ ಆರು ಗಂಟೆಗೆ ಮುಖ್ಯಮಂತ್ರಿಯವರಿಂದ ಉತ್ತರವೆಂದು ತಾವು ಹೇಳಿದ್ದಿರಿ. ಅಷ್ಟರೊಳಗೆ ಎಲ್ಲರದ್ದೂ ಭಾಷಣ ಮುಗಿಯಬೇಕೆಂದು ಹೇಳಿದ್ದೀರಿ. ಐದು ಗಂಟೆಯೆಂದು ಹೇಳಿ ಈಗ ಆರೂವರೆ ಗಂಟೆಯಾಯಿತು.

(ಗೊಂದಲ)

ಅಧ್ಯಕ್ಷರು:- ತಾವು ಮೊದಲೇ ಮಾತನಾಡಿದ್ದರೆ ತೊಂದರೆಯಾಗುತ್ತಿರಲಿಲ್ಲ. ಕೊನೆಯಲ್ಲಿ ಮಾತನಾಡುತ್ತಿರುವುದರಿಂದ ಈ ರೀತಿಯಾಗುತ್ತಿದೆ. ತಾವು ಒಂದು ಕೆಲಸ ಮಾಡಿ, ಜೂನ್, ಜುಲೈನಲ್ಲಿ ಮತ್ತೆ ಸದನ ಸೇರುತ್ತಿದ್ದೇವೆ, ಆಗ ತಾವು ಮೊದಲು ಮಾತನಾಡಿ, ಆಗ ಒಂದು, ಎರಡು ಗಂಟೆಗಳ ಕಾಲ ಮಾತನಾಡಿ.

ಶ್ರೀ ಸಿ. ಬೈರೇಗೌಡ:- ಮಾತನಾಡಬೇಕೆಂದು ನಾನು ಮಾತನಾಡುತ್ತಿಲ್ಲ.

ಶ್ರೀ ಯು.ಆರ್. ಸಭಾಪತಿ:- ಸೋಮಶೇಖರ್‌ರವರು ಮಾತನಾಡುವಾಗ ಮಾನ್ಯ ಸಿಂಧ್ಯಾರವರು ನಮ್ಮ ಪಕ್ಷದ ಎಲ್ಲಾ ಸಮಯವನ್ನು ಸೋಮಶೇಖರ್‌ರವರಿಗೆ ಕೊಡಿ ಎಂದು ಹೇಳಿದ್ದರು. ಸೋಮಶೇಖರ್‌ರವರೊಬ್ಬರೇ ಎರಡು ಗಂಟೆ ಇಪ್ಪತ್ತೈದು ನಿಮಿಷ ಮಾತನಾಡಿದರು.

ಅಧ್ಯಕ್ಷರು:- ಅವರೂ ಬುದ್ಧಿವಂತರಿದ್ದಾರೆ. ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ನಾಯಕರೇ ಇದ್ದಾರೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ(ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, ಮುಂಗಡ ಪತ್ರದ ವಿಚಾರದಲ್ಲಿ ಬಹಳ ಗಂಭೀರ ಸ್ವರೂಪದ ಚರ್ಚೆ ನಡೆಯುತ್ತಿದೆ. ತಾವು ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಕೂಡ ಮಾತನಾಡಲು ಒಂದು ಕಾಲವನ್ನು ನಿಗದಿ ಮಾಡಿದ್ದೀರಿ. ನಮ್ಮ ಅನುಭವಕ್ಕೆ ಸರ್ವೇಸಾಮಾನ್ಯವಾಗಿ ಬಂದಿರತಕ್ಕದ್ದು ಏನೆಂದರೆ ಯಾವಾಗಲೂ ಆ ಕಾಲಮಿತಿ ಜಾಸ್ತಿ ಆಗುತ್ತಲೇ ಇರುತ್ತದೆ. ಆದ್ದರಿಂದ ಮಾನ್ಯ ಸದಸ್ಯರಿಗೆ ನಾನು ಪ್ರಾರ್ಥನೆ ಮಾಡಿಕೊಳ್ಳತಕ್ಕದ್ದು ಏನೆಂದರೆ ಮಾನ್ಯ ವಿರೋಧ ಪಕ್ಷದ ಸದಸ್ಯರ ಭಾಷಣವನ್ನು ದಯವಿಟ್ಟು ಕೇಳಬೇಕು ಎಂದು.

ಶ್ರೀ ಸಿ. ಬೈರೇಗೌಡ:- ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳು. 2003-04ನೇ ಸಾಲಿನ ಆಯವ್ಯಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಇದನ್ನು ನಾನು ವಿರೋಧಿಸುತ್ತಾ ಕೆಲವೇ ಕೆಲವು ಮುಖ್ಯ ಅಂಶಗಳ ಬಗ್ಗೆ ಮಾತ್ರ ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ. ಆಯವ್ಯಯದ ಮುಖ್ಯಾಂಶಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ, ಕೃಷಿ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ, ನೀರಾವರಿ, ಶಿಕ್ಷಣ, ಆರೋಗ್ಯ, ಸಮಾಜಕಲ್ಯಾಣ, ಮಹಿಳೆಯರ ಸಬಲೀಕರಣಕ್ಕೆ ಪ್ರೋತ್ಸಾಹವೆಂದು ತಿಳಿಸಿದ್ದೀರಿ. ಆಯವ್ಯಯದಲ್ಲಿ ಇದನ್ನೆಲ್ಲಾ ಬಿಂಬಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಭಾಷಣ ಓದುತ್ತಿದ್ದಾಗ ನನಗೆ ಬಹಳ ಸಂತೋಷವಾಯಿತು.

6.30 ಪಿ.ಎಂ

ಓಹೋ ಪರವಾಗಿಲ್ಲ, ರೈತರು ಎನ್ನತಕ್ಕಂಥವರು ಈ ರಾಜ್ಯದಲ್ಲಿದ್ದರೆ, ರೈತರ ಪರವಾಗಿ ಏನೋ ಮಾತನಾಡುತ್ತಿದ್ದಾರೆ ಎನ್ನುವಂತಹ ಸಂತೋಷವಂತೂ ನನಗೆ ಉಂಟಾಯಿತು. ಆದರೆ ನನಗೆ ಆ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ. ಈ ಭಾಗ ಮುಗಿದು ಇನ್ನೊಂದು ಭಾಗಕ್ಕೆ ಬಂದಂತಹ ಸಂದರ್ಭದಲ್ಲಿ ಎಷ್ಟು ನಿರ್ದಯವಾಗಿ ರೈತರ ಬಗ್ಗೆ ಈ ಸರ್ಕಾರ ಮತ್ತು ಮಾನ್ಯ

ಮುಖ್ಯಮಂತ್ರಿಗಳು ನಡೆದುಕೊಂಡಿದ್ದಾರೆ ಎನ್ನುವುದನ್ನು ಕಂಡು ನನಗೆ ನಿಜವಾಗಿಯೂ ಕೂಡ ಬಹಳ ಹೆದರಿಕೆ ಮತ್ತು ಭಯ ಉಂಟಾಯಿತು. ಒಂದು ಕಡೆ ಕೆಲವು ಉಪಕರಣಗಳಿಗೆ ಶೇಕಡ 25ರಷ್ಟು ಸಬ್ಸಿಡಿ ಇರುವುದನ್ನು ಶೇಕಡ 50ಕ್ಕೆ ಏರಿಸುತ್ತೇವೆ ಎಂಬುದನ್ನು ಓದಿದಾಗ ಸಂತೋಷವಾಯಿತು. ಅದೇ ರೀತಿಯಲ್ಲಿ ಟ್ಯಾಕ್ಸೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಇವರು ಯಾವುದರ ಮೇಲೆ ಶೇಕಡ 4ರಷ್ಟು ತೆರಿಗೆ ಹಾಕಿದ್ದಾರೆ ಎಂದರೆ, ರಾಸಾಯನಿಕ ಗೊಬ್ಬರಗಳು ಮತ್ತು ರಾಸಾಯನಿಕ ಗೊಬ್ಬರ ಮಿಶ್ರಣಗಳು, ಕೀಟ ನಾಶಕಗಳು, ಕ್ರಿಮಿನಾಶಕಗಳು, ದಶಾಂಶ ನಾಶಕಗಳು, ಶಿಲೀಂದ್ರ ನಾಶಕಗಳು, ಕಳೆ ನಾಶಕಗಳು, ಹರ್ಬಿಸೈಡ್‌ಗಳು, ಸಸ್ಯ ನಿಯಂತ್ರಕಗಳು ಮತ್ತು ಸಸ್ಯ ಬೆಳವಣಿಗೆ ಪೋಷಕಾಂಶಗಳು. ಇವೆಲ್ಲವೂ ಇಲ್ಲದೆ ಇವತ್ತಿನ ದಿವಸ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಸ್ವಾಮಿ, ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ, horizontal expansion of agriculture is impossible. ವಿಸ್ತೀರ್ಣದಲ್ಲಿ ಕೃಷಿಯನ್ನು ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಿಲ್ಲ. Agriculture in this country can grow only vertically. ಅಂದರೆ ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯತೆ ಇದೆಯೇ ವಿನಃ ಕೃಷಿಯ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅಂತಹ ಸಂದರ್ಭದಲ್ಲಿ ಇವತ್ತು ಅತಿ ಆಧುನಿಕವಾಗಿರತಕ್ಕಂಥ ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಕೃಷಿಯಲ್ಲಿ ಬಳಸಿಕೊಳ್ಳದೇ ಇದ್ದರೆ, ಈ vertical growth of agricultrue is impossible. ಇದು ಈ ರೀತಿಯಾಗಿ ಬರೀ ಇಲ್ಲಿರತಕ್ಕಂಥ ರಾಸಾಯನಿಕ ಗೊಬ್ಬರಗಳು ಮತ್ತು ರಾಸಾಯನಿಕಗಳಿಗೆ ಮಾತ್ರ ಇವತ್ತು ಸೀಮಿತವಾಗಿಲ್ಲ. ಬೀಜದ ಬಗ್ಗೆ ಹೇಳುವುದಾದರೆ, ಸ್ವಾಮಿ ಇವತ್ತಿನ ದಿವಸ ಕೃಷಿಯಲ್ಲಿ ಬೀಜ ಬಹಳ ಮುಖ್ಯವಾಗಿರತಕ್ಕಂಥದ್ದು. ಆ ಬೀಜದ ಮೇಲೂ ಕೂಡ ಶೇಕಡ 4ರಷ್ಟು ತೆರಿಗೆಯನ್ನು ಹಾಕಿರತಕ್ಕಂಥದ್ದು ಸರಿಯಲ್ಲ. ಇಂದು ರೈತರ ಕೃಷಿ ಆಧಾರಿತವಾಗಿರತಕ್ಕಂಥ ಉತ್ಪನ್ನಕ್ಕೆ ಆದ್ಯತೆ ಸಿಗುತ್ತಿಲ್ಲ. ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳು, ಅವುಗಳ ಭಾಗಗಳು ಮತ್ತು ಟ್ರೇಲರ್‌ಗಳೂ ಸೇರಿದಂತೆ ಸಾಧನ ಸಾಮಗ್ರಿಗಳು ಆದರೆ, ಬ್ಯಾಟರಿಗಳು, ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲ್ಯಾಪ್‌ಗಳನ್ನು ಹೊರತುಪಡಿಸಿ ಶೇಕಡ 4ರಷ್ಟು ತೆರಿಗೆ ವಿಧಿಸಲಾಗಿದೆ. ಇದೇನು ಸ್ವಾಮಿ? ಸಾಮಾನ್ಯವಾಗಿ ವ್ಯಾಪಾರಸ್ಥರು ಲೆಕ್ಕ ಬರೆಯುವಾಗ ಏನು ಹೇಳುತ್ತಾರೆ ಎಂದರೆ, ಒಂದು 'ರಾಮನ ಲೆಕ್ಕ', ಮತ್ತೊಂದು 'ಕೃಷ್ಣನ ಲೆಕ್ಕ' ಎಂದು ಹೇಳುತ್ತಾರೆ. ಎಲ್ಲವೂ ಕೂಡ ಸರಿಯಾಗಿರತಕ್ಕಂಥದ್ದನ್ನು ರಾಮನ ಲೆಕ್ಕ ಎನ್ನುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಒಂದು ಕಡೆ ಶೇಕಡ 25ರಿಂದ 50ಕ್ಕೆ ಸಬ್ಸಿಡಿಯನ್ನು ಏರಿಸಿ, ಇನ್ನೊಂದು ಕಡೆ ಈ ರೀತಿಯಾಗಿ ಟ್ಯಾಕ್ಸ್ ಅನ್ನು ಹಾಕತಕ್ಕಂಥ ಬಜೆಟ್‌ಗೆ 'ಕೃಷ್ಣನ ಲೆಕ್ಕ' ಎನ್ನುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಾದ ಕೃಷ್ಣರವರು ಕೃಷ್ಣನ ಬಜೆಟ್ ಅನ್ನು ಮಂಡಿಸಿದ್ದಾರೆ. ಇದು ದುರಾದೃಷ್ಟಕರವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ನೀವು ರೈತರ ಬಗ್ಗೆ ದಯೆ ತೋರಿಸಿ. ಇದೇನು ಟ್ಯಾಕ್ಸ್‌ಗಳನ್ನು ನೀವು ಹಾಕಿದ್ದೀರಿ, ಈ ಬಗ್ಗೆ ನಾನು ಹೊಸದಾಗಿ ನಿಮಗೇನು ಹೇಳಬೇಕಾಗಿಲ್ಲ. ತಮಗೆ ಎಲ್ಲಾ ಅನುಭವವೂ ಕೂಡ ಇದೆ, ಇದನ್ನು ದಯವಿಟ್ಟು ವಾಪಸ್ ಪಡೆಯತಕ್ಕಂಥ ಕೆಲಸ ಮಾಡಿ. ಗೊಬ್ಬರದ ಮೇಲೆ, ಇಂಪ್ಲಿಮೆಂಟ್ಸ್ ಮೇಲೆ ಮತ್ತು ರಾಸಾಯನಿಕಗಳ ಮೇಲೆ ಹಾಕಿರತಕ್ಕಂಥ ಟ್ಯಾಕ್ಸ್ ಅನ್ನು ದಯವಿಟ್ಟು ವಾಪಸ್ ಪಡೆಯಬೇಕು ಎಂಬ ಆಗ್ರಹವನ್ನು ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿದ್ದಾರೆ,

ಅವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾರೆ. ಇವತ್ತು ಕೆರೆಗಳಿಂದ ಹೂಳು ಎತ್ತತಕ್ಕಂಥ ಕಾರ್ಯಕ್ರಮವನ್ನು ಬೃಹದಾಕಾರವಾದಂತಹ ರೂಪದಲ್ಲಿ ನಾವು ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರ ಹೇಳೀತ್ತು. ಮೊದಲು 25 ಸಾವಿರ ಕೆರೆಗಳ ಹೂಳು ಎತ್ತುತ್ತೇವೆ ಎಂದು ಹೇಳಲಾಗಿತ್ತು. ಬಳಿಕ ಅದು ಹೋಬಳಿಗೆ 2 ಕೆರೆಗಳೆಂದು ಆಯಿತು, ಈಗ ಹೋಬಳಿಗೆ 1 ಕೆರೆ ಎಂದು ಆಗಿದೆ. ಕೆರೆಗಳ ಹೂಳು ಎತ್ತತಕ್ಕಂಥ ಕೆಲಸ ಆಗಲೇ ಬೇಕು. ಸ್ವಾಮಿ ಇಲ್ಲಿ ಏನಾಗಿದೆ ಎಂದರೆ? ಸರ್ಕಾರಕ್ಕೆ ಹಣ ಖರ್ಚಿಲ್ಲದೇ ಕರೆಗಳ ಹೂಳೆತ್ತುವುದಕ್ಕೂ ಕೂಡ ಸಾಧ್ಯತೆ ಇದೆ. ಇದು ಹೇಗೆ? ಎಂದರೆ, ನೀವು ಇಲ್ಲಿ ಇಟ್ಟಿಗೆ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಇಟ್ಟಿಗೆ ಸಾಮಾನ್ಯವಾಗಿ ಕರೆಯ ಮಣ್ಣಿನಿಂದಲೇ ತಯಾರಿಸುತ್ತಾರೆ. ನಮ್ಮ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಸರ್ಕಾರದಿಂದ ಒಂದು ನಯಾಪೈಸೆ ಖರ್ಚಿಲ್ಲದೇ ಅಲ್ಲಿನ 200 ಹೆಂಚಿನ ಕಾರ್ಖಾನೆಗಳು ಅಲ್ಲಿರತಕ್ಕಂಥ ಸುಮಾರು 50 ಕೆರೆಗಳಲ್ಲಿ 10-15 ಅಡಿಗಳಿಂದ ಮಣ್ಣನ್ನು ತೆಗೆದು, ಅದನ್ನು ಬಳಸಿಕೊಂಡು ಇಟ್ಟಿಗೆ ಮತ್ತು ಹೆಂಚುಗಳನ್ನು ತಯಾರಿಸಿ ಬೆಂಗಳೂರು ಮುಂತಾದ ಕಡೆಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ನೀವು ಅಂತಹವರ ಮೇಲೆ ಶೇಕಡ 4ರಷ್ಟು ತೆರಿಗೆಯನ್ನು ಹಾಕಿದ್ದೀರಿ. ನಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಅವರ ಮೇಲೆ ಹೇರಿದ್ದಂತಹ ರಾಯಲ್ಟಿಯನ್ನು ನಾವು ತೆಗೆದು ಹಾಕಿ, ಕರೆಗಳ ಹೂಳು ಎತ್ತುವುದಕ್ಕೆ ಪ್ರೋತ್ಸಾಹ ಕೊಟ್ಟಿದ್ದೆವು. ನೀವೇನು ಮಾಡಿದ್ದೀರಿ? ಎಂದರೆ, ಒಂದು ಕಡೆ ಹೂಳು ಎತ್ತುವುದಕ್ಕೆ ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. ಮತ್ತೊಂದು ಕಡೆ ಆ ಹೂಳನ್ನು ಬಳಸಿಕೊಂಡು ತಯಾರು ಮಾಡಿದಂತಹ ಹೆಂಚು ಮತ್ತು ಇಟ್ಟಿಗೆಗಳಿಗೆ ಶೇಕಡ 4ರಷ್ಟು ತೆರಿಗೆಯನ್ನು ಹಾಕುತ್ತಿದ್ದೀರಿ. ಇದು ಯಾವ ನ್ಯಾಯ? ಕೊನೆಯ ಪಕ್ಷ ಸರ್ಕಾರದವರು ಯಾರ್‍ಯಾರು ಕೆರೆಗಳಲ್ಲಿ ಮಣ್ಣನ್ನು ಎತ್ತಿ ಇಟ್ಟಿಗೆ ಮತ್ತು ಹೆಂಚುಗಳನ್ನು ತಯಾರು ಮಾಡುತ್ತಾರೋ, ಅವರಿಗಾದರೂ ಕೂಡ ಈ ತೆರಿಗೆಯಿಂದ ವಿನಾಯಿತಿಯನ್ನು ಕೊಡಬೇಕೆಂಬ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಷ್ಟಪಡುತ್ತೇನೆ. ನೀವು ಈ sprinkler irrigation ಮತ್ತು drip irrigation ಮಾಡುವವರಿಗೆ, ಕೆಲವರಿಗೆ ಶೇಕಡ 50ರಷ್ಟು, ಕೆಲವರಿಗೆ 100ರಷ್ಟು ಸಬ್ಸಿಡಿಯನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ತುಂಬಾ ಸಂತೋಷ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇದಕ್ಕೆ ನಾನು ಮೊದಲಿನಿಂದಲೂ ಒಂದು ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ಏನಾದರೂ ಒಂದು ವೈಜ್ಞಾನಿಕವಾದಂತಹ ಅಪ್ರೋಚ್ ಇರಬೇಕು. There should be a scientific approach to this problem ಅನ್ನುವುದನ್ನು ನಾನು ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು 43 ತಾಲ್ಲೂಕುಗಳು either they are Grey or Dark. ಬಿಜಾಪುರ ಜಿಲ್ಲೆಗೆ ಶೇಕಡ 100ರಷ್ಟು ಸಬ್ಸಿಡಿಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಬಜೆಟ್‌ನಲ್ಲಿ ಹೇಳಿದ್ದೀರಿ. ಅದರ ಜೊತೆಗೆ ಇವತ್ತು Grey and Dark ಅನ್ನತಕ್ಕಂಥ ಪ್ರದೇಶಗಳೇನಿವೆ, ಆ ಪ್ರದೇಶಗಳಿಗೆ ಈ ಯೋಜನೆಯನ್ನು ವಿಸ್ತಾರ ಮಾಡಬೇಕಾಗುತ್ತದೆ. ಏಕೆಂದರೆ, it is scientifically proved that ಅಲ್ಲಿ ಅಂತರ್ಜಲ ಎಂಬುದು 700-800 ಅಡಿ ಕೆಳಗಡೆ ಹೋಗಿರುವ ಕಾರಣದಿಂದ ನೀರನ್ನು ಮಿತವ್ಯಯಿಯಾಗಿ ಬಳಸುವುದಕ್ಕೆ ಉತ್ತೇಜನ ಕೊಡಬೇಕಾಗಿರತಕ್ಕಂಥದ್ದು ಅವಶ್ಯಕತೆ ಇದೆ. ಈ ಕಾರಣದಿಂದ ತಾವು ದಯವಿಟ್ಟು ಒಂದು ಜಿಲ್ಲೆಗೇ ಸೀಮಿತಗೊಳಿಸಿರತಕ್ಕಂಥ ಯೋಜನೆಯನ್ನು Dark and Grey ಏರಿಯಾಗಳೇನಿವೆ, ಅವುಗಳಿಗೂ ಕೂಡ ವಿಸ್ತರಣೆ ಮಾಡಬೇಕು ಅನ್ನತಕ್ಕಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಷ್ಟಪಡುತ್ತೇನೆ. ಇನ್ನೂ ಕೆಲವಾರು ಬೇರೆ ಬೇರೆ ವಿಚಾರಗಳ

ಬಗ್ಗೆ ನಮ್ಮ ಸ್ನೇಹಿತರು ಆಗಲೇ ಹೇಳಿದ್ದಾರೆ. ವಿದ್ಯುಚ್ಛಕ್ತಿ ಸುಧಾರಣೆ ಬಗ್ಗೆ ಬಜೆಟ್‌ನಲ್ಲಿ ಸಾಕಷ್ಟು ಹೇಳಲಾಗಿದೆ. ವಿದ್ಯುತ್ ಅನ್ನು ನಾವು ಅನೇಕ ಮೂಲಗಳಿಂದ ಪಡೆಯಬಹುದಾಗಿದೆ. ಅವುಗಳಲ್ಲಿ renewable sources of energy ಎಂಬುದು ಕೂಡ ಇದೆ. ಇದರ ಅವಶ್ಯಕತೆ ಇವತ್ತಿನ ದಿವಸ ಇದೆ. ವಿದ್ಯುತ್ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬಳಕೆಗೆ ಬೇಕಾಗಿರತಕ್ಕಂಥದ್ದು ಮತ್ತು ಅದರ ಕೊರತೆ ಇರತಕ್ಕಂಥದ್ದು ನಿಜ. ಇತರ ಮೂಲಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಇವತ್ತು ಉತ್ತೇಜನ ಕೊಡಬೇಕಾಗಿದೆ. ಕೇವಲ ಸಬ್ಸಿಡಿ ಕೊಡತಕ್ಕಂಥದ್ದು ಮಾತ್ರವಲ್ಲದೆ, ಇವತ್ತು renewable energy device ಮತ್ತು ಅವುಗಳ ಭಾಗಗಳಿಗೆ ನೀವೇನು ಮಾಡಿದ್ದೀರಿ ಎಂದರೆ ಶೇಕಡ 4ರಷ್ಟು ತೆರಿಗೆಯನ್ನು ಹಾಕತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಒಂದು ಕಡೆ ಸಬ್ಸಿಡಿಯನ್ನು ಕೊಡುತ್ತೀರಿ, ಮತ್ತೊಂದು ಕಡೆ ಅದರ ಮೇಲೆ ಟ್ಯಾಕ್ಸ್ ಅನ್ನೂ ಕೂಡ ಹಾಕುತ್ತೀರಿ. ಬೀಜಗಳ ಬಗ್ಗೆ ನಾನು ಆಗಲೇ ಹೇಳಿದೆ. ಬೀಜಗಳಿಗೂ ಕೂಡ ಶೇಕಡ 4ರಷ್ಟು ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೇ, ಅದ್ಯಾಕೋ ನನಗಂತೂ ಗೊತ್ತಿಲ್ಲ, ಸರ್ಕಾರಕ್ಕೆ ಈ excise ಲಾಬಿ ಮೇಲೆ ಬಹಳ ಮಮತೆ ಬಂದಿದೆ. Excise ಲಾಬಿ ಮೇಲೆ ಬಂದಿರತಕ್ಕಂಥ ಮಮತೆ ರೈತರ ಮೇಲೆ ಏಕಿಲ್ಲ? ಏಕೆಂದರೆ, ಅವರಿಗೆ 'ಕರ ಸಮಾಧಾನ' ಅನ್ನತಕ್ಕಂಥದ್ದನ್ನು ಮಾಡಿದ್ದೀರಿ. ಅದು ಎಷ್ಟರಮಟ್ಟಿಗೆ ಜಾರಿಯಾಯಿತೋ, ಇಲ್ಲವೋ ಎಂಬ ಬಗ್ಗೆ ಸಾಕಷ್ಟು ಸಮಯವಿಲ್ಲದಿರುವುದರಿಂದ ಈಗ ನಾನು ಅದರ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದರ ಜೊತೆಗೆ ಇವತ್ತಿನ ದಿವಸ ನೀವೇನು ಮಾಡಲಿಕ್ಕೆ ಹೊರಟಿದ್ದೀರಿ ಎಂದರೆ, ಕೆಲವು ಲೈಸೆನ್ಸ್ ಫೀಗಳನ್ನು ಕಡಿಮೆ ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಕಾರಣವೇನು? ಇದನ್ನು ಇವತ್ತು ಈ ರಾಜ್ಯದ ಜನತೆ ತಿಳಿದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಒಂದು ಕಡೆ ನೀವು ರೈತರ ಮೇಲೆ ತೆರಿಗೆಯನ್ನು ಹಾಕುತ್ತೀರಿ. ಮತ್ತೊಂದು ಕಡೆ ಇವರಿಗೆ ಸನ್ನದು ದರಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ಇನ್ನೂ ಅವರ ಬಗ್ಗೆ ಕೆಲವೊಂದು ವಿಚಾರಗಳಲ್ಲಿ ಉದಾರವಾಗಿ ನಡೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ನಿಮ್ಮ ನಡವಳಿಕೆ ಬಹಳ ಅನುಮಾನಕರವಾಗಿದೆ. ಇದನ್ನು ನೀವು ಪುನರ್ ವಿಮರ್ಶೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಲ್ಲದೆ ಸುಂಕ ಹಾಕತಕ್ಕ ಸಂದರ್ಭದಲ್ಲಿ ನಮ್ಮ ಎಕಾನಮಿ ಯಾವ ರೀತಿ ಇದೆ ಎಂದರೆ, It is knowledge-based economy ಇಡೀ ವಿಶ್ವದಾದ್ಯಂತ ಇದು ಜ್ಞಾನಾಧಾರಿತ ಎಕಾನಮಿಯನ್ನು ನಾವು ಆಧಾರವಾಗಿಟ್ಟುಕೊಂಡಿದ್ದೇವೆ. ಜ್ಞಾನಾಧಾರಿತ ಎಕಾನಮಿಯನ್ನು ನಂಬಿರತಕ್ಕಂತಹ ದೇಶಗಳು ಸ್ವಲ್ಪ ವ್ಯತ್ಯಾಸವಾದರೆ ಅಲ್ಲೋಲ ಕಲ್ಲೋಲವಾಗಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ಉದಾಹರಣೆಗೆ ಜಪಾನ್ ದೇಶ. ಜಪಾನ್ ದೇಶದಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಏನು ನಡೆಯಿತು ಎನ್ನುವುದೂ ಕೂಡ ಗೊತ್ತಿದೆ. ಆದರೆ ಅದರ ಪ್ರಭಾವ ನಮ್ಮ ದೇಶದ ಮೇಲೆ ಆಗಲಿಲ್ಲ. ಕಾರಣವೇನೆಂದರೆ, ಅದು ಜ್ಞಾನಾಧರಿತ. ಅಂದರೆ, Knowledge-based Economy ಅವರದ್ದು, ನಮ್ಮದು ಕೃಷಿ ಆಧಾರಿತ ದೇಶ ಕೃಷಿ ಆಧಾರಿತ ಎಕಾನಮಿ ನಮ್ಮದಾಗಿರುವ ಕಾರಣದಿಂದ ಅಲ್ಲಿ ಆರ್ಥಿಕವಾಗಿ ಏನು ವ್ಯತ್ಯಾಸಗಳಾದವು ಆ ವ್ಯತ್ಯಾಸಗಳು ಭಾರತ ದೇಶದಲ್ಲಿ ಆಗಲಿಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ ಕೃಷಿಗೆ ಉತ್ತೇಜನ ನೀಡುವ ಅವಶ್ಯಕತೆ ಇದೆ. ಎನ್ನತಕ್ಕಂಥದ್ದನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಷ್ಟ ಪಡುತ್ತೇನೆ. ಹಿಂದೆ ಕೆಲವು ಕಡೆ ರೈತರು ಹೋರಾಟ ನಡೆಸಿದ್ದಾರೆ. ಉದಾಹರಣೆಗೆ ವಿಠಲೇನ ಹಳ್ಳಿಯಲ್ಲಿ ನಡೆದಂತಹ ಪ್ರಕರಣದಲ್ಲಿ ರೈತರ ಮೇಲೆ ಅನೇಕ ಮೊಕದ್ದಮೆಗಳನ್ನು ಹಾಕಿದ್ದೀರಿ. ಅವುಗಳೆಲ್ಲವನ್ನು ವಾಪಸ್ ಪಡೆಯಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಅದು ಏನಾಯಿತು ಏನು ಎಂಬ ಬಗ್ಗೆ ಚೆನ್ನಪಟ್ಟಣದಲ್ಲಿ ದೊಡ್ಡ ಸಭೆಯನ್ನು ಮಾಡಿ ಅದನ್ನು ಸಮರ್ಥನೆ ಮಾಡಿಕೊಳ್ಳುವ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೀರಿ. ನಿಮಗೆ ಆ ಅಧಿಕಾರ ಇದೆ, ಆ ಹಕ್ಕು ಇದೆ ನೀವು ಮಾಡಿ. ಅಮಾಯಕ ರೈತರ ಮೇಲೆ ಹಾಕಿರತಕ್ಕಂತಹ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯುವ ಅವಶ್ಯಕತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಅದೇ ರೀತಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ರೈತರ ಮೇಲೆ ಹಾಕಿದ್ದಂತಹ ಮೊಕದ್ದಮೆಗಳನ್ನು ವಾಪಸ್ ಪಡೆಯತಕ್ಕಂತಹ ಅವಶ್ಯಕತೆ ಇದೆ ಎನ್ನುವುದನ್ನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆರೆಗಳನ್ನು ಹೂಳೆತ್ತತಕ್ಕಂಥದ್ದರ ಬಗ್ಗೆ ನಾನು ಆಗಲೇ ಹೇಳಿದೆ, ಕೆರೆಗಳ ಹೂಳೆತ್ತತಕ್ಕಂತಹ ಬೃಹದಾಕಾರವಾದ ಕಾರ್ಯಕ್ರಮವನ್ನು ತಾವು ಹಾಕಿಕೊಂಡಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಅದೇ ರೀತಿಯಲ್ಲಿ ಇವತ್ತಿನ ದಿವಸ ಹೋಬಳಿಗೆ ಒಂದೋ ಎರಡೋ ಕೆರೆಗಳನ್ನು ತೆಗೆದುಕೊಂಡರೆ, ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಕೊಟ್ಟ ಹಾಗಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವು ನಿಜವಾಗಿಯೂ ಮಜ್ಜಿಗೆಯನ್ನು ಹೆಚ್ಚಿಗೆ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಕಡೆ ವರ್ಲ್ಡ್ ಬ್ಯಾಂಕ್‌ನಲ್ಲಿ 2000 ಕೆರೆಗಳನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂತಹ ಯೋಜನೆ ಅಡಿಯಲ್ಲಿ ಒಂದು ಸಾವಿರ ಕೆರೆಗಳು ಕೋಲಾರ ಜಿಲ್ಲೆಗೆ ನಾವು ಅಪ್ರೂವ್ ಮಾಡಿ ಕೊಟ್ಟಿದ್ದೇವೆ. 1026 ಕೆರೆಗಳನ್ನು ಮಂಜೂರು ಮಾಡಿದ್ದೇವೆ. ಸುಮಾರು 569 ಕೋಟಿ ರೂ.ನಲ್ಲಿ ಅರ್ಧ ಭಾಗದಷ್ಟು ಹಣ ನಿಮಗೆ ಕೊಟ್ಟಿದ್ದೇವೆ, ಅದು ಮೂರು ವರ್ಷಗಳಲ್ಲಿ ಖರ್ಚು ಮಾಡಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಕೋಲಾರ ಒಂದು ಜಿಲ್ಲೆಗೆ ಸಾವಿರ ಕೆರೆಗಳನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದು ಹಾಗಾಗಿದೆ. ಸ್ಕೀಮ್ ಹಾಗೆಯೇ ಅವರು ತಯಾರು ಮಾಡಿಕೊಂಡು ಬಂದಿದ್ದಾರೆ ಅವರು. ಎರಡನೆಯದಾಗಿ ತಮಗೆ ಗೊತ್ತಿದ್ದ ಹಾಗೆ ಡ್ರಾಟ್ ರಿಲೀಫ್ ಫಂಡ್‌ನಲ್ಲಿ ಕೂಡ 10-10 ಲಕ್ಷ ರೂ ಪ್ರತಿಯೊಂದು ತಾಲ್ಲೂಕಿಗೆ ಕ್ಯಾಶ್ ಪೋರ್ಷನ್ ಅಲ್ಲದೆ ಫುಡ್ ಗ್ರೈನ್ಸ್ ಕೂಡ ಕೊಟ್ಟು, 40 ಲಕ್ಷ ರೂ ಅಂದರೆ, ಹೆಚ್ಚು ಕಡಿಮೆ ಒಂದೊಂದು ತಾಲ್ಲೂಕಿನಲ್ಲಿ 40 ಲಕ್ಷ ರೂ.ನಲ್ಲಿ ಎರಡೆರಡು ಕೆರೆಗಳನ್ನೂ ಕೂಡ ದುರಸ್ತಿ ಮಾಡಿದರೆ ಒಂದು ಜಿಲ್ಲೆಯಲ್ಲಿ 20-25 ಕೆರೆಗಳನ್ನು ದುರಸ್ತಿ ಮಾಡತಕ್ಕಂಥದ್ದು ಆ ಸ್ಕೀಮ್‌ನಲ್ಲಿ. ಆರು ತಿಂಗಳುಗಳಲ್ಲಿ 60 ಕೋಟಿ ರೂಪಾಯಿ ಇದಕ್ಕಾಗಿ ವಿಶೇಷವಾಗಿ ಖರ್ಚು ಮಾಡಿದ್ದೇವೆ. ಇನ್ನು 15 ದಿವಸಗಳಲ್ಲಿ ಇನ್ನೂ ಹಣ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಂದಿದ್ದೆಲ್ಲಾ ನೀವೇ ತೆಗೆದುಕೊಂಡು ನಮಗೆ ಏನೂ ಕೊಟ್ಟೇ ಇಲ್ಲ. ನಾವು ಪಕ್ಕದಲ್ಲಿಯೇ ಇದ್ದೇವೆ. ಐದು ಕೆರೆನೂ ನಮಗೆ ಕೊಡಲಿಲ್ಲ ನೀವು.

ಶ್ರೀ ಎ. ಮುನಿಯಪ್ಪ:- ಕೋಲಾರ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕೆರೆಗಳಿವೆ. ಲ್ಯಾಂಡ್ ಆಫ್ ಟ್ಯಾಂಕ್ಸ್ ಅದು.

ಶ್ರೀ ಸಿ. ಬೈರೇಗೌಡ:- ಕೆರೆಗಳನ್ನು ಹೂಳೆತ್ತತಕ್ಕಂತಹ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಅನೇಕ ಸಾರಿ ತಂದಿದ್ದೇನೆ. ತಾವು ಈಗ ಏನು ಖರ್ಚು ಮಾಡುತ್ತಿದ್ದೀರಿ, ಅದಕ್ಕೆ ಬದಲಾಗಿ ಕಡಿಮೆ ಖರ್ಚಿನಲ್ಲಿ ಹೂಳೆತ್ತುವುದಕ್ಕೆ ಸಾಧ್ಯ ಇದೆ ಎಂಬುದನ್ನು ನಾನು ಬಹಳ ಸಾರಿ ಹೇಳಿದ್ದೇನೆ. ಆದರೆ ಅವರು ನಮ್ಮ ಮಾತನ್ನು ಕೇಳುವುದಕ್ಕೆ ತಯಾರಿಲ್ಲ. ಅದನ್ನು ನಾನು ಅವರಿಗೇ ಬಿಟ್ಟು ಬಿಡುತ್ತೇನೆ. ನಾನು ಆ ವಿಚಾರದಲ್ಲಿ ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಿನಿಮಾ ಥಿಯೇಟರ್‌ಗಳ ಮೇಲೆ ಕೆಂಗಣ್ಣು ಬೀಳುತ್ತಿದೆ. ಒಂದು ಕಡೆ ಎಕ್ಸೈಸ್‌ನವರಿಗೆ ಅವರ ಮೇಲೆ ಬಹಳ ವಿಶ್ವಾಸ ಮಮತೆಯನ್ನು ತೋರಿಸತಕ್ಕಂತಹ ಸರ್ಕಾರ, ಇವತ್ತು ಸಿನಿಮಾ ಥಿಯೇಟರ್‌ಗಳ ಕತೆ ಏನಾಗಿದೆ ಎಂದರೆ, ಪ್ರತಿ ಮನೆಯಲ್ಲಿಯೂ ಕೂಡ ಕೇಬಲ್ ಕನೆಕ್ಷನ್ ಇದೆ, ವೀಡಿಯೋ ಇರುತ್ತವೆ, ಸಿನಿಮಾ ಮಂದಿರಗಳಿಗೆ ಯಾರೂ ಹೋಗುತ್ತಿಲ್ಲ. ಅದಕ್ಕೋಸ್ಕರ ಬೇರೆ ಬೇರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆ ಎಂದರೆ, ಅದರ ಮೇಲೆ ಹಾಕಿರತಕ್ಕಂತಹ ಶೋ ಟ್ಯಾಕ್ಸನ್ನು ವಜಾ ಮಾಡಿರತಕ್ಕಂತಹ ಉದಾಹರಣೆಗಳು ಕೂಡ ಇವೆ. ನೀವು ಬೇರೆ ಬೇರೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮತ್ತು ಉಳಿದಿರತಕ್ಕಂತಹವುಗಳನ್ನು ಹಾಕಿ, ಅದರ ಮೇಲೆ ಶೋ ಟ್ಯಾಕ್ಸ್ ಕೂಡ ಹಾಕಿದರೆ ಅಳಿದು ಉಳಿದಿರತಕ್ಕಂತಹ ಸಿನಿಮಾ ಮಂದಿರಗಳೂ ಕೂಡ ಮುಚ್ಚಿ ಹೋಗುತ್ತವೆ. ಆದ್ದರಿಂದ ದಯವಿಟ್ಟು ತಾವು ಇವತ್ತು ಏನು ಪ್ರಸ್ತಾಪ ಮಾಡಿದ್ದೀರಿ, ಸಿನಿಮಾ ಮಂದಿರಗಳ ಮೇಲೆ ಶೋ ಟ್ಯಾಕ್ಸ್ ಹಾಕತಕ್ಕಂಥದ್ದು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಕೈಬಿಡಬೇಕು. ಏಕೆಂದರೆ, ಅವುಗಳೆಲ್ಲಾ ಮುಚ್ಚಿ ಹೋಗುತ್ತವೆ. ಅನೇಕರು ನಿರುದ್ಯೋಗಿಗಳಾಗುತ್ತಾರೆ. ಆದ್ದರಿಂದ ಈ ವಿಚಾರವನ್ನು ತೀವ್ರವಾಗಿ ಗಮನಿಸಬೇಕೆಂಬ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸ್ನೇಹಿತರು ಅನೇಕರು ನಮ್ಮ ರಾಜ್ಯದಲ್ಲಿ ಆಗಿರತಕ್ಕಂತಹ ಅಭಿವೃದ್ಧಿ ಅಸಮತೋಲನದ ಬಗ್ಗೆ ಮಾತನಾಡಿದ್ದಾರೆ. ನಾನು ಅದನ್ನು ಮತ್ತೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ರೈಲ್ವೆ ಅಭಿವೃದ್ಧಿ ನಿಗಮದಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಏನು ಪ್ರಾಶಸ್ತ್ಯ ಕೊಡಬೇಕಾಗಿತ್ತು. ಆ ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ ಒಂದು ಕೆಲಸ ಕೂಡ ಕೈಗೆತ್ತಿಕೊಂಡಿಲ್ಲ. ಉತ್ತರ ಕರ್ನಾಟಕ ಎಂದರೆ, ಕೇವಲ ಬಿಜಾಪುರ, ಬೆಳಗಾಂ, ಅಥವಾ ಧಾರವಾಡ ಅಂದರೆ ಆಗುವುದಿಲ್ಲ, ಉತ್ತರ ಕರ್ನಾಟಕ ಎಂದರೆ, ಹೈದರಾಬಾದ್ ಕರ್ನಾಟಕ ಕೂಡ ಇದರಲ್ಲಿ ಸೇರಿಕೊಂಡಿದೆ. ಇವತ್ತು ಇದಕ್ಕೆ ಪ್ರಾಶಸ್ತ್ಯ ಕೊಟ್ಟಿಲ್ಲ. ಆದ್ದರಿಂದ ನೀವು ಮೆಹಬೂಬ್ ನಗರದಿಂದ ರಾಯಚೂರಿನವರೆಗೆ, ಹಾಗೂ ಕೊಪ್ಪಳದಿಂದ.....

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಇಂಬ್ಯಾಲೆನ್ಸ್ ಸರಿಪಡಿಸತಕ್ಕಂತಹ ಯೋಜನೆ ಹಾಕಿಕೊಂಡಿದ್ದಾರೆ, ನಾವು ಸ್ವಾಗತ ಮಾಡುತ್ತೇವೆ. ಆದರೆ ನಮ್ಮ ಭಾಗವಾದ ಮೆಹಬೂಬ್ ನಗರದಿಂದ ಮುನಿರಾಬಾದ್ ಕೊಪ್ಪಳ ಎಂದು ಇದೆ, ಆ ರೈಲ್ವೆ ಲೈನ್ ಈಗಾಗಲೇ ಮಂಜೂರಾಗಿದೆ, ಕೈರಾಯ್ಡ್ ಎಂದು ಸಂಸ್ಥೆ ಮಾಡಿಕೊಂಡಿದ್ದೀರಿ ಆ ಸಂಸ್ಥೆಗೆ ಒಳಪಟ್ಟು ಲ್ಯಾಂಡ್ ಅಕ್ವೈರ್ ಮಾಡತಕ್ಕಂತಹ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಅನ್ನು ಡೆಪ್ಯೂಟ್ ಮಾಡತಕ್ಕಂತಹ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಆ ಭಾಗದ ಸದಸ್ಯರು ಅವರ ಬೇಡಿಕೆಯನ್ನು ಮುಂದಿಟ್ಟಿದ್ದಾರೆ, ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ನಾನು ಕೂಡ ಮನವಿ ಮಾಡುತ್ತೇನೆ. ನಮ್ಮೆಲ್ಲರಿಗೂ ಕೂಡ ಅದರಲ್ಲೂ ಪ್ರಮುಖವಾಗಿ ನಮ್ಮ ಪಕ್ಷದ ಎಲ್ಲಾ ಸದಸ್ಯರಿಗೆ ಇನ್ನೂ ಕಗ್ಗತ್ತಲು ಆಗಿರುವುದು ನಾಗಪ್ಪನವರ ನಿಗೂಢವಾದ ಕೊಲೆ. ಸದಾಶಿವನಿಗೆ ಅದೇ ಚಿಂತೆ ಎನ್ನುವಹಾಗೆ ನಮ್ಮ ಚಿಂತೆ ನೀವು ಮಾಡಬೇಡಿ ಬಿಟ್ಟು ಬಿಡಿ.

ಅಧ್ಯಕ್ಷರು:- ಬೈರೇಗೌಡರೇ, ದಯವಿಟ್ಟು ಮುಂದುವರೆಸಿ.

ಶ್ರೀ ಸಿ. ಬೈರೇಗೌಡ:- ನಮ್ಮ ಚಿಂತೆಗೆ ನಮ್ಮದು ಏನಿದೆ ನಮ್ಮ ಪಾಡಿಗೆ ನಾವು ಬಿದ್ದು ಎದ್ದುಕೊಳ್ಳುತ್ತೇವೆ. ನಮ್ಮ ಚಿಂತೆ ದಯವಿಟ್ಟು ಬಿಟ್ಟು ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮ್ಮ ಬಾಯಿಗೆ ಬಂದಿದ್ದು ನೋಡಿ, ಪಾಪ ನಿಮಗೆ ಅದೇ ಕೆಲಸ ಮಾಡುತ್ತಿದೆ ತಲೆಯಲ್ಲಿ. ಬೇರೆ ಏನಾದರೂ ಮಾತನಾಡಲಿ ಎಂದು ಹೇಳಿದ್ದು.

ಶ್ರೀ ಸಿ. ಬೈರೇಗೌಡ:- ಬೇರೆಯದನ್ನೇ ಮಾತನಾಡುತ್ತೇನೆ. ಅದಕ್ಕೇ ನಾನು ತಮಗೆ ಹೇಳಿದ್ದು, ನಮ್ಮ ಚಿಂತೆ ಬಿಟ್ಟು ಬಿಡಿ ಎಂದು. ಈ ನಿಮಿಷದವರೆಗೆ ಕೂಡ ನಾಗಪ್ಪನವರ ಕೊಲೆ ಯಾವ ರೀತಿ ಆಯಿತು ಎಂದು ಸರ್ಕಾರದಿಂದ ಅಧಿಕೃತವಾಗಿ ತಿಳಿದು ಬಂದಿಲ್ಲ. ನಮ್ಮೆಲ್ಲರಿಗೂ ಕೂಡ ಗಾಢವಾಗಿ ಇರತಕ್ಕಂತಹ ಅಭಿಪ್ರಾಯ ಏನೆಂದರೆ, ವೀರಪ್ಪನ್‌ನಿಂದ ನಾಗಪ್ಪನವರು ಸಾಯಲಿಲ್ಲ. ತಮಿಳುನಾಡು ಮತ್ತು ಕರ್ನಾಟಕದ ಪೋಲೀಸರಿಂದಲೇ ಅವರು ಸತ್ತಿದ್ದಾರೆ ಎನ್ನುವುದು ನಮ್ಮೆಲ್ಲರ ಗಾಢವಾದ ನಂಬಿಕೆ. ಆ ನಂಬಿಕೆಯನ್ನು ಹೋಗಲಾಡಿಸತಕ್ಕಂತಹ ಪ್ರಯತ್ನ ಸರ್ಕಾರದಿಂದ ಇಲ್ಲಿಯವರೆಗೂ ಆಗಲಿಲ್ಲ. ಆದ್ದರಿಂದಲೇ ನಾವು ಇದನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂಬ ಒತ್ತಾಯವನ್ನು ನಾವು ಮೊದಲಿನಿಂದಲೂ ಸಹ ಮಾಡುತ್ತಲೇ ಬಂದಿದ್ದೇವೆ. ಮೊದಲನೇ ದಿವಸದಿಂದಲೂ ನಾವು ಈ ಒತ್ತಾಯವನ್ನು ಮಾಡುತ್ತಲೇ ಬಂದಿದ್ದೇವೆ. ಈಗಲೂ ಸಹ ಕಾಲ ಮಿಂಚಿಲ್ಲ. ಇದನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಅದನ್ನು ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೂ ಹಾಗೂ ತಮ್ಮ ಸೈನ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೂ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಬಜೆಟ್ ಮೇಲಿನ ಚರ್ಚೆಗೆ ಉತ್ತರ.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಈ ಸದನದ 23 ಗೌರವಾನ್ವಿತ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿ, ನಾನು 21ನೇ ತಾರೀಖು ಯಾವ ಮುಂಗಡ ಪತ್ರವನ್ನು ಸಭೆಯ ಮುಂದೆ ಮಂಡಿಸಿದ್ದೆನೋ, ಆ ಮುಂಗಡ ಪತ್ರದ ಬಗ್ಗೆ ದೀರ್ಘವಾದಂತಹ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಈ ಸರ್ಕಾರದ ನಾಲ್ಕನೇ ಆಯವ್ಯಯ ಇದು. ಈ ಸರ್ಕಾರದ ಮೊಟ್ಟಮೊದಲನೆಯ ಮುಂಗಡ ಪತ್ರದಲ್ಲಿ ಯಾವ್ಯಾವ ದೃಷ್ಟಿಕೋನಗಳನ್ನು ನಮ್ಮ ಕಾರ್ಯಕ್ರಮಗಳ ಹಿನ್ನಲೆಯಾಗಿ ನಾನು ಸೇರಿಸಿಕೊಂಡಿದ್ದೆವೋ ಆ ಎಲ್ಲಾ ಕಾರ್ಯಕ್ರಮಗಳು ಫಲಪ್ರದವಾಗುವಂತೆ ಈ ಸರ್ಕಾರ ಪ್ರಯತ್ನಶೀಲವಾಗಿದೆ. ಕಳೆದ ಮೂರು ಮುಂಗಡ ಪತ್ರಗಳಲ್ಲಿ ಚಾಲನೆಗೆ ನೀಡಲಾಗಿದ್ದ ಕಾರ್ಯಕ್ರಮಗಳ ಅನುಷ್ಠಾನದ ವಿಚಾರದಲ್ಲಿ ಈ ಸರ್ಕಾರಕ್ಕೆ ಇರತಕ್ಕಂಥ

ಬದ್ಧತೆಯನ್ನು ನಾನು ಮತ್ತೆ ದೃಢಪಡಿಸಿದ್ದೇನೆ. ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಮಾನ್ಯ ಅರಗ ಜ್ಞಾನೇಂದ್ರ, ಆನಂತರ ಸರ್ವಶ್ರೀಗಳಾದ ರಾಮದಾಸ್‌ರವರು, ಯೋಗೀಶ್‌ಭಟ್‌ರವರು, ಪ್ರಭಾಕರ ಬಂಗೇರರವರು, ಸಭಾಪತಿಯುವರು, ಗೋಪಾಲ ಪೂಜಾರಿಯುವರು, ನಂಜಯ್ಯನಮಠ್‌ರವರು, ವೈ.ಕೆ. ರಾಮಯ್ಯನವರು, ರುದ್ರಪ್ಪ ಲಮಾಣಿಯವರು, ಪೂಜಾರ್‌ರವರು, ಸೋಮಶೇಖರ್‌ರವರು, ಬಚ್ಚೇಗೌಡರು, ಕೃಷ್ಣಮೂರ್ತಿಯವರು, ಜಯಪ್ರಕಾಶ ಹೆಗ್ಡೆಯವರು, ಸುರೇಶ್ ಕುಮಾರ್‌ರವರು, ಕರಡಿ ಸಂಗಣ್ಣನವರು, ಪಿ.ಜಿ.ಆರ್. ಸಿಂಧ್ಯಾರವರು, ಚನ್ನಿಗಪ್ಪನವರು, ಇಬ್ರಾಹಿಂರವರು, ಸುಬ್ಬಾರೆಡ್ಡಿಯುವರು, ಅಪ್ಪಚ್ಚು ರಂಜನ್‌ರವರು, ಎಂ.ಡಿ.ಲಕ್ಷ್ಮೀನಾರಾಯಣರವರು, ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಜಗದೀಶ್ ಶೆಟ್ಟರ್‌ರವರು ಮತ್ತು ಶ್ರೀ ಬೈರೇಗೌಡರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಮುಂಗಡ ಪತ್ರವನ್ನು ಪದರ ಪದರವಾಗಿ ಬಿಡಿಸಲಿಕ್ಕೆ ಅವರು ಶ್ರಮಪಟ್ಟಿದ್ದಾರೆ. ಅವರು ಕೆಲವೊಂದು ವಿಚಾರಗಳನ್ನು ಸ್ವಾಗತಿಸಿದ್ದಾರೆ. ಮತ್ತೆ ಕೆಲವೊಂದು ವಿಚಾರಗಳ ಬಗ್ಗೆ ತಮ್ಮ ತೀವ್ರತರವಾದಂತಹ ಟೀಕೆಯನ್ನು, ಮೌಲ್ಯಾಧಾರಿತ ಮತ್ತು ಮೌಲ್ಯಯುತ ಸಲಹೆಗಳನ್ನು, ಸದಾಭಿಪ್ರಾಯಗಳನ್ನು ತಾವೇನು ಇಲ್ಲಿ ಹೇಳಿದ್ದೀರಿ, ಅದನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ. ನಮ್ಮ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಆಗಿರತಕ್ಕಂಥ ಕೊರತೆಗಳು, ಸಂಭವನೀಯ ಕೊರತೆಗಳು ಇವುಗಳೆಲ್ಲವನ್ನೂ ಕೂಡ, ಆ ಲೋಪದೋಷಗಳೇನು ತಾವು point out ಮಾಡಿದ್ದೀರಿ, ಆ ಲೋಪದೋಷಗಳನ್ನು ಮುಂಬರತಕ್ಕಂಥ ದಿನಗಳಲ್ಲಿ ಸರಿಪಡಿಸಿಕೊಳ್ಳತಕ್ಕಂಥ ದಿಸೆಯಲ್ಲಿ ಸರ್ಕಾರ ಹೆಜ್ಜೆ ಇರಿಸುತ್ತದೆ ಎನ್ನತಕ್ಕಂಥ ಮಾತುಗಳನ್ನು ಈ ಸದನದಲ್ಲಿ ನಾನು ಹೇಳಿಕೊಳ್ಳುತ್ತಾ ಇದ್ದೇನೆ. ಸರ್ವೇ ಸಾಮಾನ್ಯವಾಗಿ ಒಂದು ಮುಂಗಡ ಪತ್ರ ಸದನಗಳ ಮುಂದೆ ಮಂಡಿಸತಕ್ಕಂಥ ಕಾಲದಲ್ಲಿ ಕೆಲವು ಸಾಂಪ್ರದಾಯಿಕ ಅಳತೆಗೋಲುಗಳಿರುತ್ತವೆ, ಆ ಮುಂಗಡ ಪತ್ರವನ್ನು ಹೇಗೆ ಸ್ವೀಕಾರ ಮಾಡಿದ್ದಾರೆ, ಆ ಮುಂಗಡ ಪತ್ರ ಸ್ವಾಗತಾರ್ಹವಾದಂತಹ ಮುಂಗಡ ಪತ್ರವೇ, ಸ್ವೀಕಾರಾರ್ಹವಾದಂತಹ ಮುಂಗಡ ಪತ್ರವೇ ಎನ್ನತಕ್ಕಂಥದ್ದನ್ನು ಅಳೆಯಲಿಕ್ಕೆ ಕೆಲವು ಸಾಂಪ್ರದಾಯಿಕ conventional methodology ಇದೆ, conventional yardsticks ಇದೆ. ಇವತ್ತು ನಾನು ಬಹಳ ಧೈರ್ಯದಿಂದ ಮತ್ತು ವಿಶ್ವಾಸದಿಂದ ಹೇಳಬಹುದಾದರೆ, ಆ ಸಾಂಪ್ರದಾಯಿಕ ಅಳತೆಗೋಲುಗಳಾದ ಯಾವುದನ್ನೇ ಈ ಮುಂಗಡ ಪತ್ರಕ್ಕೆ ಅಳವಡಿಸಿದರೂ ಕೂಡ ಈ ಸರ್ಕಾರ ವಿಶೇಷವಾಗಿ ಅದರಲ್ಲಿ ಯಶಸ್ಸನ್ನು ಸಾಧಿಸಿದೆ ಎನ್ನತಕ್ಕಂಥ ಪೂರ್ಣವಾದಂತಹ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ. ಅಂದ ಮಾತ್ರಕ್ಕೆ ಇದೊಂದೇ ಒಂದು ಮುಂಗಡ ಪತ್ರದಲ್ಲಿ ನಮ್ಮ ಡೊಂಕುಗಳೆಲ್ಲವನ್ನೂ ಕೂಡ ನಾವು ಸರಿಪಡಿಸಲಿಕ್ಕೆ ಪ್ರಯತ್ನ ಪಟ್ಟಿದ್ದೇವೆ ಎಂದಾಗಲೀ ಅಥವಾ ಅದರಲ್ಲಿ ನಾವು ಯಶಸ್ಸನ್ನು ಪಡೆದಿದ್ದೇವೆ ಎಂದಾಗಲೀ ನಾವು conclusionsಗೆ ಅಥವಾ ತೀರ್ಮಾನಗಳಿಗೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಮುಂಗಡ ಪತ್ರವೂ ಕೂಡ ಹಿಂದಿನ ಮುಂಗಡ ಪತ್ರವನ್ನು ಆಧಾರವಾಗಿಟ್ಟು, ಮುಂದಿನ 12 ತಿಂಗಳುಗಳ ಒಂದು ಭವಿಷ್ಯವನ್ನು ಚಿಂತನೆ ಮಾಡಬೇಕಾಗಿರತಕ್ಕಂಥ ಮುಂಗಡ ಪತ್ರವಾಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಬಹಳ ಸದಸ್ಯರುಗಳು ಈ ಮುಂಗಡ ಪತ್ರದಲ್ಲಿ ಹಣಕಾಸಿನ ನಿರ್ವಹಣೆ, ವಿತ್ತೀಯ ಕೊರತೆ, ಸಂಪನ್ಮೂಲಗಳ ಕ್ರೋಢೀಕರಣ ಇವುಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಇರತಕ್ಕಂಥ ಬದ್ಧತೆ ಮತ್ತು ರಾಜ್ಯ ಸರ್ಕಾರಕ್ಕೆ ಇರತಕ್ಕಂಥ ಸಾಮರ್ಥ್ಯ ಇವುಗಳ ಬಗ್ಗೆ ಸ್ಥೂಲವಾಗಿ ತಾವು

ತಮ್ಮ incisive comments ಮೂಲಕ ತಾವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೀರಿ. ಹಣಕಾಸು ನಿರ್ವಹಣೆ ಇವತ್ತಿನ ದಿವಸಗಳಲ್ಲಿ ಅತ್ಯಂತ ಕಠಿಣವಾದಂತಹ ನಿರ್ವಹಣೆಯಾಗಿದೆ. ಒಂದು ಕಡೆ ಶ್ರೀಸಾಮಾನ್ಯನ expectations ಏನಿದೆ, ಇನ್ನೊಂದು ಕಡೆ ಶ್ರೀಸಾಮಾನ್ಯರ ಮೇಲೆ ಹೊರೆಯನ್ನು ಯಾವುದೇ ಕಾರಣ ಜಾಸ್ತಿಯಾಗದಂತೆ ನಿಯಂತ್ರಣದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದೇ ಉಸಿರಿನಲ್ಲಿ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸಬೇಕು? ಹೊಸ ಅಭಿವೃದ್ಧಿ ಯೋಜನೆಗಳಿಗೆ ನಾವು ಸಂಪನ್ಮೂಲಗಳನ್ನು ರೂಢಿಸಬೇಕಾಗಿದ್ದರೆ, ಆ ಸಂಪನ್ಮೂಲಗಳನ್ನು ಅದಕ್ಕೆ ಬಳಸಬೇಕಾಗಿದ್ದರೆ, ಆ ಸಂಪನ್ಮೂಲಗಳನ್ನು ನಾವು ಹೇಗೆ ಪಡೆಯಬೇಕು ಎನ್ನತಕ್ಕಂಥದ್ದರ ಬಗ್ಗೆ ಈ ಬಜೆಟ್, ಹಣಕಾಸಿನ ಸಚಿವರು ಮಾಡತಕ್ಕಂಥ ಒಂದು ಸರ್ಕಸ್ ಅಥವಾ ಒಂದು exercise. ಆ exercise ನಲ್ಲಿ ಎಷ್ಟರಮಟ್ಟಿಗೆ ನಾವು ಜಯಶೀಲರಾಗಿದ್ದೇವೆ ಎನ್ನತಕ್ಕಂಥದ್ದನ್ನು ನಾವು ಮೊಟ್ಟಮೊದಲನೆಯ ಬಾರಿಗೆ ಕಳೆದ ಸಾರಿ ನಮ್ಮ mid term fiscal plan, ಇದನ್ನು ಈ ಎರಡೂ ಸದನಗಳ ಮುಂದೆ ಇಡುವುದರ ಮೂಲಕ ನಾವು ಈ ಸರ್ಕಾರಕ್ಕೆ ಒಂದು continuity ಇದೆ, our chain of thinking ನಲ್ಲಿ, financial matter ನಲ್ಲಿ, ಹಣಕಾಸಿನ ವಿಚಾರದಲ್ಲಿ ಹೇಗೆ ಒಂದು continuous strain ಇರಬೇಕು, ಒಂದು continuing rhythm ಇರಬೇಕು, ಆ continuing rhythm ಗೆ ಮೂಲಭೂತವಾದಂತಹ ಆಯಾಮವನ್ನು ನಾವು ಈ 2002ನೇ ಸಾಲಿನ mid term fiscal plan ನಲ್ಲಿ ಒದಗಿಸಿಕೊಟ್ಟಿದ್ದೇವೆ. ಈ ಜುಲೈನಲ್ಲಿ ನಾನು ಮತ್ತೊಮ್ಮೆ ತಮ್ಮ ಮುಂದೆ ಈ mid term fiscal plan for the year 2003-2004 ಮಂಡಿಸಲಿದ್ದೇನೆ. In a way ಅದು ನಮ್ಮ performance budget ಆಗುತ್ತದೆ. ನಾವೇನು ಸದನದ ಮುಂದೆ ಮಂಡಿಸುತ್ತೇವೆಯೋ, ಅದು performance budget ಆಗುತ್ತದೆ. ನಿನ್ನೆ ಮಾನ್ಯ ಸಿಂಧ್ಯಾರವರು ಇಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು. Performance Budget ಎಲ್ಲಿ ಎಂಬ ಪ್ರಶ್ನೆಯನ್ನು ಅವರು ಇಲ್ಲಿ ಕೇಳಿದ್ದರು. Finance Minister ಭಾಷಣವೇ Performance Budget, as far as the finance department is concerned. But ಇತರ department ಗಳೇನಿವೆ, ಅವುಗಳ ಬಗ್ಗೆ subject committeesಗೆ ತಾವು ಹೋದಾಗ.........

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನಾನು intervene ಆಗಬಾರದು. ಅದು ಸತ್‌ಸಂಪ್ರದಾಯವಲ್ಲ. ಆದರೂ ಸಹಿತ ನಾನು ಕೇಳಿರತಕ್ಕಂಥದ್ದು ಏನು? ಎಂದರೆ, department-wise ನಮಗೆ Performance budget ಬರದೇ ಹೋದರೆ ನಾವು ಮಾತನಾಡುವುದಾದರೂ ಹೇಗೆ?

7.00 ಪಿಎಂ

ಶ್ರೀ ಎಸ್.ಎಂ. ಕೃಷ್ಣ:- ನಾನು ಅದಕ್ಕೇ ಬರುತ್ತಿದ್ದೆ. ನಮ್ಮ ಡಿಪಾರ್ಟ್‌ಮೆಂಟ್ ಪರ್‌ಫಾರ್ಮೆನ್ಸ್ ರಿಪೋರ್ಟ್ ಏನಿದೆ ಅದನ್ನು ನೀವು ಸಬ್ಜೆಕ್ಟ್ ಕಮಿಟಿಗಳಿಗೆ ಹೋದಾಗ ಕೆಲವು ಮೇಜರ್ ಡಿಪಾರ್ಟ್‌ಮೆಂಟ್ ಬಜೆಟ್ ತಮ್ಮ ಮುಂದೆ ಇಡುತ್ತಾರೆ. ಅದರ ಆಧಾರದ ಮೇಲೆ ನೀವು ತೀರ್ಮಾನಗಳನ್ನು, ನಿಮ್ಮ ರೆಕಮೆಂಡೇಷನ್ ಅನ್ನು ಸಬ್ಜೆಕ್ಟ್ ಕಮಿಟಿಗಳಲ್ಲಿ ಮಾಡಿದ್ದೀರಿ, ಮತ್ತೆ ಜೂನ್ ಜುಲೈಗೆ ಅಧಿವೇಶನ ಸೇರಿದಾಗ ಆಗ ಅದನ್ನು ಕೂಲಂಕುಷವಾಗಿ ಪರಿಶೋಧನೆ ಮಾಡಬಹುದು. ಅದರ ಬಗ್ಗೆ ಹೆಚ್ಚು ಗಮನವನ್ನು ಅಲ್ಲಿ ಕೊಡಬಹುದು ಹಾಗೆಂದು ಹೇಳುತ್ತೇನೆ.

ಮಾನ್ಯ ಸಿಂಧ್ಯರವರು ಭಾಷಣ ಮಾಡುತ್ತಾ, 2003-04ರಲ್ಲಿ ಏನು ರೆವಿನ್ಯೂ ಡೆಫಿಸಿಟ್ ಇಷ್ಟಕ್ಕೆ ಇರುತ್ತದೆ ಎಂದು ಹೇಳಿದ್ದೇನೆ, ಅದು ಯಾವ ಕಾರಣಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಈ ರೆವಿನ್ಯೂ ಡೆಫಿಸಿಟ್ 4000 ಆಗುತ್ತದೆಂದು ಅವರು ವಿಶ್ಲೇಷಣೆ ಮಾಡಿದ್ದಾರೆ. ನಾನು ಕಳೆದ ಮೂರು ವರ್ಷದಲ್ಲಿ ಹೇಗೆ ಹಣಕಾಸಿನ ನಿರ್ವಹಣೆ ಮಾಡಿದ್ದೇವೆ ಅದರ ಆಧಾರವಾಗಿ ನಮ್ಮ ಮುಂದಿನ ಹಣಕಾಸಿನ ವ್ಯವಸ್ಥೆಯನ್ನು ಹೇಗೆ ನಿರ್ವಹಣೆ ಮಾಡುತ್ತೇವೆ ಎನ್ನುವಂತಹ ಹೋಲಿಕೆ ಮಾಡಿದರೆ ನನಗೆ ಒಂದು ಸ್ಪಷ್ಟವಾದಂತಹ ವಿಶ್ವಾಸ ಇದೆ. ನಾನೇನು ಮುಂಗಡ ಪತ್ರದಲ್ಲಿ ನಿರೂಪಿಸಿದ್ದೇನೆ, ನಮೂದಿಸಿದ್ದೇನೆ, 2100, 2605 ಅದಕ್ಕೆ ನಾನು ಸೀಮಿತ ಮಾಡುತ್ತೇನೆ ಎನ್ನುವಂತಹ ಮಾತುಗಳನ್ನು ನಾನು ಬಹಳ ಧೈರ್ಯವಾಗಿ ಹೇಳುತ್ತೇನೆ. ಏಕೆಂದರೆ ನಾವು ಸ್ಪೆಷಲ್ ರೆವಿನ್ಯೂ ಡೆಫಿಸಿಟ್ ಮ್ಯಾನೇಜ್ ಮಾಡದೆ ಹೋದರೆ, ನಿಜ ಒತ್ತಡಗಳು ಇರುತ್ತವೆ. ಆ ಒತ್ತಡಗಳೆಲ್ಲವನ್ನು ಗಮನಿಸಿ ಈ ರೆವಿನ್ಯೂ ಡೆಫಿಸಿಟ್ ಅನ್ನು 2135 ಕೋಟಿ ರೂಪಾಯಿಗೆ ನಮೂದು ಮಾಡಿದ್ದೇನೆ. ಒಂದು 200 ಕೋಟಿ ರೂಪಾಯಿ ಇತ್ತ ಕಡೆ, ಅತ್ತ ಕಡೆ ನಾವು ಅದನ್ನು ನಾವು ನಿರ್ವಹಿಸುತ್ತೇವೆ, ಹತೋಟಿಯಲ್ಲಿ ಇಡುತ್ತೇವೆ ಎನ್ನುವಂತಹ ಭರವಸೆಯ ಮಾತುಗಳನ್ನು ಹೇಗೆ ಆಡುವುದಕ್ಕೆ ಶಕ್ತಿ ಇದೆ ಎಂದರೆ ನಮ್ಮ ಹಣಕಾಸಿನ ನಿರ್ವಹಣೆಯಲ್ಲಿ ನಮಗೆ ಇರತಕ್ಕಂಥ ವಿಶ್ವಾಸವನ್ನು ಎದ್ದು ತೋರಿಸುತ್ತದೆ. ಯಾವ ರಾಜ್ಯ ಎರಡು ಬಾರಿ ಬರ ಎದುರಿಸಿ ಇಂತಹ ಒಂದು ಮುಂಗಡ ಪತ್ರವನ್ನು ಇಡಬಹುದು ಎನ್ನುವ ಪ್ರಶ್ನೆ ಸ್ವಾಭಾವಿಕವಾಗಿ ಬರುತ್ತದೆ. ಇದು ನಾರ್ಮಲ್ ಇಯರೇ? Two abnormal years. Two drought stricken years. Failure of monsoons. ಕಾರಿಫ್ ಮೇಲೆ ರಬಿ ಮೇಲೆ ಯಾವ ರೀತಿಯಾದಂತಹ ಒತ್ತಡವನ್ನು ಈ ಸರ್ಕಾರ ಎದುರಿಸಿತ್ತು ಎನ್ನುವುದನ್ನು ಇತಿಹಾಸ ಬರೆಯುವವರು ಹೇಳುತ್ತಾರೆ. ಆದುದರಿಂದ ನಾರ್ಮಲ್ ಇಯರ್ ಕಳೆದ ಎರಡು ವರ್ಷಗಳು ಆಗದೆ ಇದ್ದರೂ ಕೂಡ ಇಷ್ಟು ಸಮರ್ಥನೀಯವಾಗಿ ನಾವು ಈ ಹಣಕಾಸಿನ ವಿಚಾರಗಳನ್ನು ನಿರ್ವಹಣೆ ಮಾಡಿದ್ದೇವೆ ಎನ್ನುವುದು ಬಹಳ ಅಭಿಮಾನದ ಮಾತು ಎಂದು ಹೇಳುತ್ತೇನೆ. 1999-2000ರಲ್ಲಿ ಇದ್ದಂತಹ ರಾಜಸ್ವ ಆದಾಯ ಎಷ್ಟು? 12,900 ಕೋಟಿ ರೂಪಾಯಿಗಳು. 2002-03ರಲ್ಲಿ ಪರಿಷ್ಕೃತವಾದಂತಹ ಅಂದಾಜಿನಂತೆ 17 ಸಾವಿರ ಕೋಟಿ ರೂಪಾಯಿಗಳು ರಾಜಸ್ವ ಆದಾಯ. ಸರಾಸರಿ ಶೇಕಡ ಹತ್ತರಷ್ಟು ಬೆಳವಣಿಗೆ. ಯಾವುದೇ ರಾಜ್ಯ ಹತ್ತರಷ್ಟು ವಾರ್ಷಿಕ ಬೆಳವಣಿಗೆಯನ್ನು even in an abnormal year ಬರ ತಟ್ಟಿದ ವರ್ಷ ಕೂಡ 10 ಪರ್ಸೆಂಟ್. ಮಾನ್ಯ ಬೆಲ್ಲದ್‌ವರಿಗೆ ಅರ್ಥವಾಗುತ್ತದೆ. ಈ ಹತ್ತು ಪರ್ಸೆಂಟ್ ಗ್ರೋಥ್ ಎನಿದೆ ಅದು ಗ್ರಾಫ್‌ನಲ್ಲಿ ಇಳಿಮುಖವಾಗಬೇಕಾಗಿತ್ತು. ಆದುದರಿಂದ ನಾನು ಈ ದಿವಸ ಎರಡು ವರ್ಷಗಳ ಬರ ಮತ್ತು ಆರ್ಥಿಕ ಹಿನ್ನೆಲೆ ಹಿಂಜರಿಕೆ ಇದ್ದರೂ ಕೂಡ 10.6 ಇದು ಒಂದು ಸರಾಸರಿ ಅವರೇಜ್. 1999-2000ನೇ ಸಾಲಿನಲ್ಲಿ ರಾಜ್ಯದ ತೆರಿಗೆ ಆದಾಯ 7744 ಕೋಟಿ ರೂಪಾಯಿಗಳು ಇತ್ತು. 2002-03ರಲ್ಲಿ ಅದು 10.881 ಕೋಟಿ ರೂಪಾಯಿಗೆ ಹೋಗಿದೆ. ವಾರ್ಷಿಕ ಸರಾಸರಿ ಬೆಳವಣಿಗೆ 13.6. 13.6 ವಾರ್ಷಿಕ ಸರಾಸರಿ ಬೆಳವಣಿಗೆಯನ್ನು ನಾವು ಸಾಧಿಸುವುದಕ್ಕೆ ಸಾಧ್ಯವಾಗಿರಬೇಕಾದರೆ ನಮ್ಮ ಕಂದಾಯಗಳನ್ನು ಮತ್ತು ನಮ್ಮ ಆದಾಯಗಳನ್ನು ಹೆಚ್ಚಿಸುವುದಕ್ಕೆ ಇದಕ್ಕಿಂತ ಹೆಚ್ಚು eloquent expression ಇನ್ನೂ ಯಾವುದು ಬೇಕು? Raise in revenue collection in an abnormal year; Bottom line, ನಾವು ಅರ್ಥ ಮಾಡಿಕೊಳ್ಳಬೇಕಾಗಿರುವುದು ಹಾಗೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿರುವುದು ಈ ಎರಡು

ಅಬ್‌ನಾರ್ಮಲ್ ಇಯರ್‌ಗಳನ್ನು ಧಾಟಿ ಶೇಕಡ 13ರಷ್ಟು ನಮ್ಮ ತೆರಿಗೆ ಸರಾಸರಿ ಬೆಳವಣಿಗೆಯನ್ನು ಮಾಡಿರತಕ್ಕಂಥಾದ್ದು ಸಾಮಾನ್ಯವಾದಂತಹ ಪ್ರಕ್ರಿಯೆ ಎಂದು ನಾನು ಭಾವನೆ ಮಾಡುವುದಕ್ಕಾಗುವುದಿಲ್ಲ. ಹಣಕಾಸಿನ ವಿಚಾರಗಳನ್ನು ತಿಳಿದುಕೊಂಡಿರತಕ್ಕಂಥ ಪಂಡಿತರೂ ಕೂಡ ಇದರ ಬಗ್ಗೆ ವಿಶೇಷವಾಗಿ ನಮೂದನೆಯನ್ನು ಮಾಡಬೇಕಾಗಿರುವಂಥಾದ್ದು ಬಹಳ ಅವಶ್ಯಕತೆ ಇದೆ. ನಾನ್ ಟ್ಯಾಕ್ಸ್ ರೆವಿನ್ಯೂ, ತೆರಿಗೆಯೇತರ ಆದಾಯದಲ್ಲಿ ಕೂಡ ಹೆಚ್ಚಳವನ್ನು ಸಾಧಿಸಿದ್ದೇವೆ. 2001-02ರಲ್ಲಿ ತೆರಿಗೆಯೇತರ ಆದಾಯ 1100 ಕೋಟಿ ರೂಪಾಯಿಗಳು ಇತ್ತು. 2002-03ರಲ್ಲಿ ಅದು 1300 ಕೋಟಿ ರೂಪಾಯಿಗಳಿಗೆ ಏರಿತು. ಎಂದರೆ 18ರಷ್ಟು ಬೆಳವಣಿಗೆಯನ್ನು ನಾವು ಸಾಧಿಸಿದ್ದೇವೆ. ಈ ನಾನ್ ಟ್ಯಾಕ್ಸ್ ರೆವಿನ್ಯೂ ಅನ್ನು ಮೇಲೆ ತೆಗೆದುಕೊಳ್ಳುವುದಕ್ಕೆ ಯಾವ ಉಸಿರಿನಲ್ಲಿ ನೀವು ಹೇಳುತ್ತೀರಿ, ಈ ಸರ್ಕಾರ ಸಮರ್ಥವಾದ ರೀತಿಯಲ್ಲಿ ಆರ್ಥಿಕ ನಿರ್ವಹಣೆ ಮಾಡಲಿಲ್ಲವೆಂದು? ನಿವ್ವಳ ಸಂಪನ್ಮೂಲಗಳನ್ನು ಆಧರಿಸಿ 9th Five year plan ನಲ್ಲಿ ಅನುಮೋದಿಸಲಾಗಿದ್ದು 29,106 ಕೋಟಿ ರೂಪಾಯಿಗಳು. ಆದರೆ ವಾಸ್ತವವಾದಂತಹ ಸಾಧನೆ 31, 498 ಕೋಟಿ ರೂಪಾಯಿಗಳು! ನಮ್ಮ ಐದು ವರ್ಷಗಳ ಸರಾಸರಿ ಯೋಜನೆ ಸಾಧನೆ ಮತ್ತು ಪ್ರಮಾಣ, ಎಂದರೆ 108 ಪರ್ಸೆಂಟ್ ಜಾಸ್ತಿಯಾಗಿದೆ. 108 ಪರ್ಸೆಂಟ್‌ನಷ್ಟು ಸಾಧನೆಯನ್ನು ನಾವು ಮಾಡಿದ್ದೇವೆ. ಆದನ್ನೆ ನಾನು ಹೇಳುವಂಥಾದ್ದು ಸಾಂಪ್ರದಾಯಿಕ ಅಳತೆಗೋಲುಗಳು ಇವೆಲ್ಲಾ. ಸಾಂಪ್ರದಾಯಿಕ ಅಳತೆಗೋಲುಗಳಿಗೆ ಎಲ್ಲಾದರೂ ವಿದಾಯ ಹೇಳಿಬಿಟ್ಟು ನೀವು ಇದಕ್ಕೆ ಇಷ್ಟು ಖರ್ಚು ಮಾಡಲಿಲ್ಲ, ಅದಕ್ಕೆ ಅಷ್ಟು ಖರ್ಚು ಮಾಡಿದ್ದೀರಿ, ಕೆರೆ ಹೂಳು ಎತ್ತಿಸಬೇಕು, ನೀವು ಏಕೆ ಮಾಡಲಿಲ್ಲ ಎಂದರೆ ಅದು ಬಜೆಟ್ ಡಿಸ್‌ಕಷನ್ ಆಗುವುದಿಲ್ಲ. ಬಜೆಟ್ ಡಿಸ್‌ಕಷನ್ ಎಂದರೆ ಒಟ್ಟು ನಮ್ಮ ರಾಜ್ಯದ ಆದಾಯ ಎಷ್ಟು? ಎಷ್ಟು ಖರ್ಚಾಗುತ್ತಿದೆ? ಆ ಖರ್ಚು ಯಾವ್ಯಾವ ಬಾಬ್ತುಗಳಿಗೆ ಆಗುತ್ತದೆ? ಪ್ಲಾನ್ ಸೈಜ್ ಏನು? ಪ್ಲಾನ್ ಇಂಪ್ಲಿಮೆಂಟೇಷನ್ ಏನು? ಕೇಂದ್ರ ಯೋಜನಾ ಮಂಡಲಿಯವರು ಪ್ಲಾನ್‌ಗಳನ್ನು ವಿಮರ್ಶಿಸುತ್ತಾರೆ. ಡಿಸೆಕ್ಟ್ ಮಾಡುತ್ತಾರೆ. ಹೇಗೆ ಡಾಕ್ಟರ್ ವಿಂಗಡಿಸುತ್ತಾರೆ, ಹಾಗೆ ಪ್ರತಿ ವರ್ಷನೂ ಅವರು ಡಿಸೆಕ್ಟ್ ಮಾಡುತ್ತಾರೆ. ಅಂಥಾದ್ದರಲ್ಲಿ ಅವರು ಶಹಬಾಸ್‌ಗಿರಿಯನ್ನು ಕೊಡುತ್ತಾರೆ. ಆದರೆ ನಮ್ಮ ಕೆಲವು ಮಾನ್ಯ ಸದಸ್ಯರುಗಳಿಗೆ ಆ ಶಹಬಾಸ್‌ಗಿರಿಯನ್ನು ಕೊಡುವುದರಲ್ಲಿ ಒಂದು ಅಂಶವನ್ನಾದರೂ ಶೇರ್ ಮಾಡಿಕೊಳ್ಳುವಂತಹ ಔದಾರ್ಯ ಬಾರದೆ ಹೋದರೆ ಇದಕ್ಕೆ ಔಷಧಿ ಎಲ್ಲಿ ಎಂಬುದು ನನಗೆ ಗೊತ್ತಾಗುವುದಿಲ್ಲ. ಯೋಜನೇತರ ವೆಚ್ಚಗಳ ಮೇಲೆ ನೀವು ನಿರ್ಬಂಧ ಹಾಕಲಿಲ್ಲವೆಂದರೆ ಸರ್ವೇಸಾಮಾನ್ಯವಾಗಿ ಸರ್ಕಾರಗಳ ಮೇಲೆ ವಿರೋಧಪಕ್ಷದವರು ಮಾಡಿರತಕ್ಕಂಥ ಒಂದು ಆಪಾದನೆ. ಅದಕ್ಕೆ ಏನಾದರೂ ಒಂದು ಆಧಾರ ಬೇಕಲ್ಲಾ. ಅದಕ್ಕೇ ನಾನು ಹೇಳಿದೆ ಇವೆಲ್ಲಾ ಸಾಂಪ್ರದಾಯಿಕ ಅಳತೆಗೋಲುಗಳು ಎಂದು. ಇದೆಲ್ಲಾ ಯೋಜನೇತರ ವೆಚ್ಚದ ಮೇಲೆ ನೀನೇನು ನಿಯಂತ್ರಣ ಸಾಧಿಸಿದೆ? 1995-96ರಲ್ಲಿ ಯೋಜನೇತರ ವೆಚ್ಚ 7,169 ಕೋಟಿ ರೂಪಾಯಿಗಳು ಇತ್ತು, 1999-2000ದ ವೇಳೆಗೆ ಸರಾಸರಿ ಶೇಕಡ 17ರಷ್ಟು ದರದಲ್ಲಿ 13 ಕೋಟಿ ರೂಪಾಯಿಗಳಿಗೆ ಏರಿತು, ಈ ಬೆಳವಣಿಗೆ ಈ ಸರ್ಕಾರದ ಅವಧಿಯಲ್ಲಿ 13ರಷ್ಟು ಏನಿತ್ತು, ಅದನ್ನು ನಾವು 12.80ಕ್ಕೆ ನಿಲ್ಲಿಸಿದ್ದೇವೆ, ವಾಸ್ತವವಾಗಿ ಈ ಸರ್ಕಾರ ಪ್ರಥಮ ವರ್ಷದಲ್ಲೇ ಯೋಜನಾ, ಮತ್ತು ಯೋಜನೇತರ ವೆಚ್ಚದ ಬೆಳವಣಿಗೆ ಶೇಕಡ 7 ಎಂದು ನಾವು ನಿಬಂಧನೆ ಮಾಡಿದ್ದೇವೆ. ಯೋಜನೇತರ ವೆಚ್ಚವನ್ನು ಶೇಕಡ 7ರಷ್ಟು ಕಡಿತಗೊಳಿಸಲು, ಈ ಬಜೆಟ್‌ನಲ್ಲಿ ನಾನು ಕ್ರಮ ಕೈಗೊಂಡಿದ್ದೇನೆ,

ಯೋಜನೇತರ ವೆಚ್ಚದ ಮಿತಿಯನ್ನು ಬಜೆಟ್‌ನಲ್ಲಿ 22,000 ಕೋಟಿ ರೂಪಾಯಿಗಳಿಂದ 20,400 ಕೋಟಿ ರೂಪಾಯಿಗಳಿಗೆ ಇಳಿಸಿದ್ದೇನೆ, ಇದು ಏನನ್ನು ತೋರಿಸುತ್ತದೆ, ಇದನ್ನು ಇಲ್ಲವೆನ್ನುವಂಥದ್ದಕ್ಕೆ ಮಾನ್ಯ ಎಸ್.ಎಸ್. ಪಾಟೀಲ್‌ರವರು ಆಲ್‌ಟರ್‌ನೇಟೀವ್ ಫಿಗರ್ಸ್ ಏನಾದರೂ ಕೊಟ್ಟರೆ, ನಾನು ತಿದ್ದಿಕೊಳ್ಳುವುದಕ್ಕೆ ತಯಾರಾಗಿದ್ದೇನೆ, ನಾವು ಸೂಕ್ಷ್ಮವಾದ ನೋಟವನ್ನು ಬೀರುವಂತಹ ಕಾಲದಲ್ಲಿ, ನಾವು ಹೇಗೆ ಯೋಜನೇತರ ವೆಚ್ಚದ ಮೇಲೂ ಕಡಿವಾಣವನ್ನು ಹಾಕಲಿದ್ದೇವೆ, ಇಲ್ಲಿ ಶೇಕಡ 7 ಎಂದು ಏನು ನಿಗದಿ ಮಾಡಿದ್ದೇವೆ, ಅದಕ್ಕೆ ನಮ್ಮನ್ನು ನಾವೇ ಬಂಧಿಸಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿದ್ದೇವೆಂಬುದಕ್ಕೆ, ಈ ಮುಂಗಡ ಪತ್ರ, ಸಾಕ್ಷಿ, ಆಧಾರ ಮಾಹಿತಿ, ಎಲ್ಲವನ್ನೂ ಒದಗಿಸಿಕೊಡಬಲ್ಲದು. ಇನ್ನು ಯೋಜನಾ ವಲಯದಲ್ಲಿ ಕೆಲವು ನೂತನ ಕ್ರಮಗಳನ್ನು, ಪ್ರಕಟಿಸಿದ್ದೇನೆ, ಆದರೆ ಈ ಹೊಸ ಕಾರ್ಯಕ್ರಮಗಳಿಗೆ ಮುಂಗಡ ಪತ್ರದಲ್ಲಿ ಸೂಕ್ತ ರೀತಿಯಲ್ಲಿ ಹಣಕಾಸು ಹಂಚಿಕೆ ಮಾಡಿರುವ ಬಗ್ಗೆ, ಕೆಲವು ಸದಸ್ಯರುಗಳು ಸಂಶಯವನ್ನು ವ್ಯಕ್ತಪಡಿಸಿದ್ದಾರೆ; ಆನ್ಯುಯಲ್ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ 2003-2004, ಕೊನೆಯ ಪೇಜ್‌ನಲ್ಲಿ ನಾನು Addendum: Modification to Budget Document 2003-04 ಯಾವ್ಯಾವ ಕಾರ್ಯಕ್ರಮಗಳನ್ನು ನಾನು ಘೋಷಣೆ ಮಾಡಿದ್ದೇನೆ, ಆ ಕಾರ್ಯಕ್ರಮಗಳೆಲ್ಲಕ್ಕೂ, ಮತ್ತೆ ಅದಕ್ಕೆ ಮಾಡಿರುವಂತಹ ಪ್ರಾವಿಜನ್ ಅನ್ನು ಇಲ್ಲಿ ನಾನು ತೋರಿಸಿದ್ದೇನೆ. ಆದರಿಂದ ಯಾರಾದರೂ ಮಾನ್ಯ ಸದಸ್ಯರುಗಳಿಗೆ ಅಲ್ಪಸ್ವಲ್ಪ ಸಂಶಯಗಳಿದ್ದರೂ ಆ ಸಂಶಯಗಳಿಗೆ ವಿದಾಯ ಹೇಳಿ, ಈಗ ನಾವು ಆನ್ಯುಯಲ್ ಫೈನಾನ್ಷಿಯಲ್ ಸ್ಟೇಟ್‌ಮೆಂಟ್‌ನಲ್ಲಿ ಇವೆಲ್ಲವನ್ನೂ ನಮೂದಿಸಿದ್ದೇವೆ, ಅದರ ಪಕ್ಕದಲ್ಲಿ ಎಷ್ಟು ಹಣವನ್ನು ಇರಿಸಿಕೊಂಡಿದ್ದೇವೆಂಬ ಪೂರ್ಣ ವಿವರಗಳನ್ನು, ನಾನು ತಮಗೆ ಕೊಟ್ಟಿದ್ದೇನೆ, ಸಂಪನ್ಮೂಲಗಳ ಕೊರತೆ ಇದ್ದರೂ ಕೂಡ, ಆದ್ಯತೆಯ ವಲಯಗಳು ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ಕುಡಿಯುವ ನೀರಿನ ಸರಬರಾಜು, ನೈರ್ಮಲ್ಯ, ವಸತಿ, ಹಾಗೂ ನಗರಾಭಿವೃದ್ಧಿ, ಇವುಗಳಿಗೆ ಗಮನಾರ್ಹವಾಗಿ ಬಜೆಟ್ ಹಂಚಿಕೆಯಲ್ಲಿ ಹೆಚ್ಚಳ ಮಾಡಲಾಗಿದೆ. ನಾವು ಮಾಡಿರುವಂತಹ ಸಾಲದ ಬಗ್ಗೆ ಕಳೆದ ಮೂರು ವರ್ಷಗಳಿಂದಲೂ ವ್ಯತ್ಯಾಸಗಳು ನಡೆಯುತ್ತಲೇ ಇದೆ. ನಾನು ಹೇಳುತ್ತಲೇ ಇದ್ದೆ, ನಾನು ಮೂರು ವರ್ಷಗಳು, ನಮಗೆ ಮತ್ತು ಮಿಕ್ಕ ರಾಜ್ಯಗಳೊಂದಿಗೆ ಹೋಲಿಕೆ ಮಾಡಿ ಮಾಡಿ ಹೇಳುತ್ತಿದ್ದೆ, ಹೌದು, ಸಾಲ ಮಾಡಿದ್ದೇವೆ, ನಿಜ ಸಾಲವನ್ನು ಯಾರು ಮಾಡಲಿಲ್ಲ? ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ನೀವು ಅಧಿಕಾರದಲ್ಲಿದ್ದಾಗ ಸಾಲ ಮಾಡಲಿಲ್ಲವೇನು?

ಶ್ರೀ ಎಸ್.ಎಸ್. ಪಾಟೀಲ್:- ಜಾಸ್ತಿ ಮಾಡಲಿಲ್ಲ.

ಶ್ರಿ ಎಸ್.ಎಂ. ಕೃಷ್ಣ:- ಜಾಸ್ತಿ ಮಾಡಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೆನ್ನು ತಟ್ಟುತ್ತಾರೆ,

ಶ್ರೀ ಎಸ್.ಎಂ. ಕೃಷ್ಣ:- ಬೆನ್ನು ತಟ್ಟುವವರು ಹೊರಗಡೆ ಇದ್ದಾರೆ, ಯಾರು ನಮಗೆ ಬೆನ್ನು ತಟ್ಟುತ್ತಾರೆ, ಈ ಮುಂಗಡ ಪತ್ರವನ್ನು ಮಂಡಿಸಿರುವುದಕ್ಕೆ, ಮತ್ತು ಕಳೆದ ಮೂರೂವರೆ ವರ್ಷಗಳಿಂದ ಮಾಡಿರುವಂತಹ ಸಾಧನೆಗಳಿಗೆ ಜನರು ಆಗಿಂದಾಗ್ಗೆ, ಅವರು ನಮ್ಮ ಬೆನ್ನು ತಟ್ಟುತ್ತಾರೆ, ಅದಕ್ಕೆ ನಮ್ಮ ಭುಜಗಳು ರೆಡಿಯಾಗಿವೆ ಅವರಿಂದ ಬೆನ್ನು ತಟ್ಟಿಸಿಕೊಳ್ಳಲಿಕ್ಕೆ ಮತ್ತೊಂದಕ್ಕೆ. ಆದುದರಿಂದ ನಾನು ಇಲ್ಲಿ ಸಾಲದ ವಿಚಾರವನ್ನು ಹೇಳುತ್ತಿದ್ದೇನೆ, ಮಾನ್ಯ ಸದಸ್ಯರುಗಳಿಗೆ ನಾವು

ಮಾಡುತ್ತಿರುವಂತಹ ಸಾಲಗಳು ಪ್ರಮಾದವಾಗಿದೆಯೋ, ಏನೋ, ಎಂಬುದು ಸ್ವಾಭಾವಿಕವಾಗಿ ಬರುತ್ತದೆ; ಮನೆಯಲ್ಲಿರುವವರು 36,000 ಕೋಟಿ ರೂಪಾಯಿಗಳು, 37,000 ಕೋಟಿ ರೂಪಾಯಿಗಳು ಸಾಲವನ್ನು ಮಾಡಿಬಿಟ್ಟಿದ್ದಾರೆ ಎಂದು ಹೇಳುತ್ತಾರೆ. 1994-95ನೇ ಇಸವಿಯಲ್ಲಿ Public Debt stock 7,137 ಕೋಟಿ ರೂಪಾಯಿಗಳು, ಪಬ್ಲಿಕ್ ಅಕೌಂಟ್ಸ್ ಲೆಯಾಬಿಲಿಟಿಸ್ 3,268 ಕೋಟಿ ರೂಪಾಯಿಗಳು ಒಟ್ಟು 10,405 ಕೋಟಿ ರೂಪಾಯಿಗಳು, 1998-99 ರಲ್ಲಿ Public Debt stock 7,000 ಕೋಟಿ ರೂಪಾಯಿಗಳು ಇದ್ದದ್ದು, 12,465 ಕೋಟಿ ರೂಪಾಯಿಗಳು ಆಯಿತು, ಪಬ್ಲಿಕ್ ಅಕೌಂಟ್ಸ್ ಲಯಾಯಿಲಿಟಿಸ್ 6,136 ಕೋಟಿ ರೂಪಾಯಿಗಳು, ಅಂದರೆ 18,602 ಕೋಟಿ ರೂಪಾಯಿಗಳು ಇದು 1999-2000ದಲ್ಲಿ 15,147 ಕೋಟಿ ರೂಪಾಯಿಗಳು ಪ್ಲಸ್ 7,900 ಕೋಟಿ ಪಬ್ಲಿಕ್ ಅಕೌಂಟ್ ಲಯಬಿಲಿಟಿ, ಈ ಪಬ್ಲಿಕ್ ಅಕೌಂಟ್ ಲಯಬಿಲಿಟಿಯ ಬಗ್ಗೆ ಸಾಕಾದಷ್ಟು confusion ಇದೆ, ಸಾಲವನ್ನು ಎರಡು ವಿಭಾಗವಾಗಿ, ನಮ್ಮ Financial Parlance ನಲ್ಲಿ financial ಲ್ಯಾಂಗ್‌ವೇಜ್‌ನಲ್ಲಿ ನಾವು ವಿಂಗಡಿಸುತ್ತೇವೆ. (1) ವರ್ಲ್ಡ್‌ಬ್ಯಾಂಕ್, ಹುಡ್ಕೋ, ನಬಾರ್ಡ್, ಮತ್ತೆ 1992ನೇ ಇಸವಿಯಲ್ಲಿ ಪಿಯರ್‌ಲೆಸ್ಸ್ ಕಂಪನಿಯಿಂದ ಸಾಲವನ್ನು ತಂದರಲ್ಲಾ, ಇದೆಲ್ಲವೂ ಒಂದು ಭಾಗವಾಗುತ್ತದೆ, (2) ಪಬ್ಲಿಕ್ ಅಕೌಂಟ್ಸ್ ಲಯಬಿಲಿಟಿಸ್ ಎಂದರೆ ಶೇಕಡ: 60ರಷ್ಟು ಪ್ರಾವಿಡೆಂಟ್ ಫಂಡ್‌ಗೆ ಸಂಬಂಧಿಸಿದ್ದು, ಪ್ರತಿಯೊಬ್ಬ ಸರ್ಕಾರಿ ನೌಕರರು ನಮ್ಮ ಮೇಲೆ ವಿಶ್ವಾಸವಿಟ್ಟು, ಒಂದಷ್ಟು ಹಣವನ್ನು ನಮ್ಮ ಜೊತೆಯಲ್ಲಿ ಇಡುತ್ತಾರೆ. ಇದನ್ನು ಆ ನೌಕರರು ನಿವೃತ್ತಿಹೊಂದಿದಂತಹ ಕಾಲದಲ್ಲಿ, ಸೂಪರ್ ಆನ್ಯುಯೇಷನ್ ಆಗತಕ್ಕಂತಹ ಕಾಲದಲ್ಲಿ ಆ ಹಣವನ್ನು ಅವರಿಗೆ ವಾಪಸ್ಸು ಕೊಡುತ್ತೇವೆ. But in financial term, financial parlance ಇದನ್ನೂ ಕೂಡ ಸಾಲವೆಂದು, ನಾವು ಪರಿವರ್ತನೆ ಮಾಡಿಕೊಂಡು, ಒಟ್ಟು debt ಸ್ಟಾಕ್ ಎಂದು broad categorisation ಮಾಡಿಬಿಡುತ್ತಾರೆ. ಇವತ್ತು Public debt stock ಎಷ್ಟಿದೆ, ಎಂದರೆ 26,507 ಕೋಟಿ ರೂಪಾಯಿಗಳು, to be very Precide. 26,507 ಕೋಟಿ ರೂಪಾಯಿಗಳು Public debt; ಪಬ್ಲಿಕ್ ಅಕೌಂಟ್ ಲಯಬಿಲಿಟಿ ಎಷ್ಟು ಎಂದರೆ 11,633 ಕೋಟಿ ರೂಪಾಯಿಗಳು, ಅದು ಒಟ್ಟು ಮೊತ್ತ 38,140 ಕೋಟಿ ರೂಪಾಯಿಗಳಾಗುತ್ತದೆ. ಆದುದರಿಂದ ನಾವು ಇಲ್ಲಿ ಗ್ರಹಿಸಬೇಕಾದಂಥದ್ದು ಏನೆಂದರೆ ಇಲ್ಲ 38 ಸಾವಿರ ಕೋಟಿ ರೂಪಾಯಿಗಳ ಸಾಲವಾಯಿತೆಂದು ಹೇಳಿ, ಒಟ್ಟಾರೆ ಜನರಲೈಜೇಶನ್ ಮಾಡುವಾಗ ಈ 11,000 ಕೋಟಿ ರೂಪಾಯಿಗಳು, ಏನು ಪ್ರಾವಿಡೆಂಟ್ ಫಂಡ್ ಅಡ್‌ಜೆಸ್ಟ್‌ಮೆಂಟ್, ಇಂಟರ್‌ನಲ್ ಅಡ್‌ಜೆಸ್ಟ್‌ಮೆಂಟ್, ಮಾಡಿಕೊಳ್ಳುತ್ತೇವೆ, ಇದಕ್ಕೆ ನಾವು ತೆಗೆದಿಟ್ಟ ನಮ್ಮ ಒಟ್ಟು ಸಾಲ 26,507 ಕೊಟಿ ರೂಪಾಯಿಗಳು ಎನ್ನುವಂಥಾದ್ದನ್ನು ಈ ಸಭೆಯ ವೇದಿಕೆಯ ಮೂಲಕ ಕರ್ನಾಟಕದ ಕನ್ನಡನಾಡಿನ ಎಲ್ಲರಿಗೂ ನಾನು ತಿಳಿಸಲಿಚ್ಛಿಸುತ್ತೇನೆ. ಇಷ್ಟು ಸಾಲವನ್ನು ಏಕೆ ಮಾಡಿದ್ದೀರಿ? ಈ ಸಾಲವನ್ನು ತೀರಿಸುವಂಥವರು ಯಾರು? ನಿಜ, ಒಂದು ರಾಜ್ಯದ ಒಟ್ಟು ಗ್ರಾಸ್ ಡೊಮಾಸ್ಟಿಕ್ ಪ್ರಾಡಕ್ಟ್ (ಜಿಡಿಪಿ) ನ್ಯಾಷನಲ್ ಜಿಡಿಪಿಯನ್ನು ಮತ್ತೊಂದು ಸ್ಟೇಟ್ ಜಿಡಿಪಿಯನ್ನು ತೆಗೆದುಕೊಳ್ಳಬಹುದು, ಇದನ್ನು ನಾವು ತೆಗೆದುಕೊಂಡಾಗ ಈ ಜಿಡಿಪಿ ಯಾವುದನ್ನು reflect ಮಾಡುತ್ತದೆ, ಕೃಷಿ, ನೀರಾವರಿ, ಬ್ರಿಡ್ಜಸ್, ರೋಡ್ಸ್, ಕ್ಲಾಸ್ ರೂಮ್ಸ್, ಸ್ಕೂಲ್ ಕಟ್ಟಡಗಳು, ಆಶ್ರಯ ಕಟ್ಟಡಗಳು, ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್, ಇವೆಲ್ಲವೂ ಕೂಡ ನಮ್ಮ ರಾಜ್ಯದ ಆರ್ಥಿಕ ಶಕ್ತಿಯನ್ನು

ಪ್ರತಿಬಿಂಬಿಸುತ್ತವೆ. ಹಾಗೆ ನಾವು ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆಯನ್ನು ಸಾಧಿಸದೆ ಹೋಗದಿದ್ದರೆ ನಮಗೆ ಯಾರು ಸಾಲ ಕೊಡುತ್ತಿದ್ದರು? ನಾನೇ ಏಕಾಏಕಿಯಾಗಿ ವಿಶ್ವಬ್ಯಾಂಕ್‌ನಲ್ಲಿ ಸಾಲವನ್ನು ನೆಗೋಷಿಯೇಟ್ ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕೆ ಎಕಾನಾಮಿಕ್ ಅಫೇರ್ಸ್ ಮಿನಿಸ್ಟರ್‌ರವರ ಪೂರ್ವಭಾವಿ ಅನುಮತಿ ಬೇಕು, ಮತ್ತು ನಮ್ಮ ರಾಜ್ಯ ಈ ಸಾಲವನ್ನು ಭರಿಸತಕ್ಕಂಥ ಶಕ್ತಿಯನ್ನು ಹೊಂದಿದೆಯೇ ಎನ್ನುವುದರ ಬಗ್ಗೆ ಕೇಂದ್ರ ಹಣಕಾಸು ವಿಭಾಗದವರಿಂದ ಕಂಟಿನ್ಯೂಯಿಂಗ್ ಮಾನಿಟರಿಂಗ್ ನಡೆಯುತ್ತಿರುತ್ತದೆ. ಮತ್ತೆ ಋಣ ಸಂದಾಯ ಬಾಬ್ತು ನಿರ್ವಹಿಸುವುದಕ್ಕೆ ಸಾಧ್ಯವೇ? ನಿನ್ನೆ ನಾನು ಆ ಮನೆಯಲ್ಲಿ ಹೇಳುತ್ತಿದ್ದೆ, ಇನ್ನು ಸಾಲವನ್ನು ಕೊಡುವುದಕ್ಕೆ ಬೇಕಾದಷ್ಟು ಜನರು ಮುಂದೆ ಬರುತ್ತಾರೆ, ಆದರೆ ನಾವು ಇನ್ನು ಸಾಲ ಮಾಡುವುದಕ್ಕೆ ಸಿದ್ಧರಿಲ್ಲ. ಏಕೆಂದರೆ ನಮ್ಮ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಮತ್ತೊಮ್ಮೆ ನಾನು ಸ್ಪಷ್ಟಪಡಿಸುತ್ತೇನೆ, ನಾವು ಈ 26,507 ಕೋಟಿ ರೂಪಾಯಿಗಳನ್ನು ಸಾಲವನ್ನಾಗಿ ಪಡೆದಿದ್ದೇವೆ. ಒಂದು ರಾಜ್ಯದ ಭವಿಷ್ಯವನ್ನು ಹೇಗೆ ಕಟ್ಟುವುದು? ಮಾನ್ಯ ವಿರೋಧಪಕ್ಷದ ನಾಯಕರು, ಇದೆಲ್ಲಾ ಕನಸುಗಳು ಎಂದು ಹೇಳಿದರು. ನಿಜ, ಕನಸು ಇಲ್ಲದೇ ಹೋದರೆ ರಾಜ್ಯಗಳನ್ನು ಕಟ್ಟಲಾಗುವುದಿಲ್ಲ, ದೇಶವನ್ನು ಸಮಾಜವನ್ನು ಕಟ್ಟುವುದಕ್ಕಾಗುವುದಿಲ್ಲ, ಕನಸುಗಳನ್ನು ಹೊತ್ತೇ ನಾವಿಲ್ಲಿ ಬಂದು ಕುಳಿತಿದ್ದೇವೆ ಎನ್ನತಕ್ಕದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಿಕ್ಕ ರಾಜ್ಯಗಳ ಪರಿಸ್ಥಿತಿಯನ್ನು ನೋಡೋಣ, ಕೇಂದ್ರ ಸರ್ಕಾರವನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ, ಸಾಂಪ್ರದಾಯಿಕ ಅಳತೆಗೋಲುಗಳೇನಿವೆ conventional yardsticks ಏನಿವೆ ಆ ಪ್ರಕಾರ ವಿತ್ತೀಯ ನಿರ್ವಹಣೆಯ ತುಲನಾತ್ಮಕ ಚಿತ್ರಣವನ್ನು ಇಟ್ಟುಕೊಳ್ಳಬೇಕಾಗುತ್ತದೆ. ವಿತ್ತೀಯ ನಿರ್ವಹಣೆ ತುಲನಾತ್ಮಕ ಚಿತ್ರಣದಲ್ಲಿ, ಗುಜರಾತ್‌ನಲ್ಲಿ ವಿತ್ತೀಯ ಕೊರತೆ 9,753 ಕೋಟಿ ರೂ. ತಮಿಳುನಾಡಿನಲ್ಲಿ ವಿತ್ತೀಯ ಕೊರತೆ 8,205 ಕೋಟಿ ರೂ. ಮಹಾರಾಷ್ಟ್ರದಲ್ಲಿ ವಿತ್ತೀಯ ಕೊರತೆ 7,995 ಕೋಟಿ ರೂ. ಆಂಧ್ರಪ್ರದೇಶದಲ್ಲಿ ವಿತ್ತೀಯ ಕೊರತೆ 7,499 ಕೋಟಿ ರೂ. ಇವುಗಳಿಗೆಲ್ಲಾ ಹೋಲಿಸಿ ನೋಡಿದಾಗ ನಮ್ಮ ವಿತ್ತೀಯ ಕೊರತೆ ಎಷ್ಟೆಂದರೆ 5,759 ಕೋಟಿ ರೂ. ಈ ಅಂಶಗಳನ್ನು ರಿಸರ್ವ್ ಬ್ಯಾಂಕ್‌ನವರು ಕೊಟ್ಟಿರುವುದು, ಇದನ್ನು ಮ್ಯಾನುಪಲೇಷನ್ ಮಾಡುವುದಕ್ಕಾಗುವುದಿಲ್ಲ. ಅಡ್ಜಸ್ಟ್‌ಮೆಂಟ್ ಮಾಡಲು ಸಾಧ್ಯವಿಲ್ಲ, ಹಾಗೆನೇ ನಮ್ಮ ರಾಜಸ್ವ ಆದಾಯದ ಶೇಕಡ ಎಷ್ಟರಷ್ಟನ್ನು ಬಡ್ಡಿಗಾಗಿ ನಾವು ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಕೂಡ ಕಂಪೇರಿಟಿವ್ ಆಗಿ ಅನಲೈಸ್ ಮಾಡಬೇಕಲ್ಲವೆ? ನಾವು ಸರಿಯಾದ ದಿಶೆಯಲ್ಲಿ ಇದ್ದೇವೆಯೇ; ರಸ್ತೆಯಲ್ಲಿದ್ದೇವೆಯೇ ಅಥವಾ ನಾವು ಕವಲು ದಾರಿಯಲ್ಲಿ ಹೋಗುತ್ತಿದ್ದೇವೆಯೇ ಎನ್ನುವುದಕ್ಕೆ ಕೇರಳ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್‌ನಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ನಾನು ಉತ್ತರಪ್ರದೇಶ, ಬಿಹಾರ್, ಒರಿಸ್ಸಾ ರಾಜ್ಯಗಳಿಗೆ ಹೋಲಿಸುವುದಿಲ್ಲ. ಪ್ರಗತಿಯ ದಿಕ್ಕಿನಲ್ಲಿರುವ ರಾಜ್ಯಗಳ ವಿತ್ತೀಯ ನಿರ್ವಹಣೆಯನ್ನು ಈ ಸದನದ ಮಾನ್ಯ ಸದಸ್ಯರಗಮನಕ್ಕೆ ತರುವುದು ನನ್ನ ಆಬ್ಲಿಗೇಷನ್ ಹಾಗೂ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ರಾಜಸ್ವ ಆದಾಯದ ಶೇಕಡ 30.5 ರಷ್ಟು ಆಂಧ್ರಪ್ರದೇಶದಲ್ಲಿ ಸಾಲ ಋಣವನ್ನು ತೀರಿಸುವುದಕ್ಕೆ ಖರ್ಚು ಮಾಡುತ್ತಿದ್ದಾರೆ, ಗುಜರಾತ್‌ನವರು ಅವರಿಗಿಂತ ಕಡಿಮೆಯಿಲ್ಲವೆಂದು 31.5 ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆ, ಕೇರಳದವರು ಶೇಕಡ 26ರಷ್ಟು ಮಾಡುತ್ತಿದ್ದಾರೆ, ಮಹಾರಾಷ್ಟ್ರದವರು ಶೇಕಡ 25 ರಷ್ಟು ವೆಚ್ಚ ಮಾಡುತ್ತಿದ್ದಾರೆ, ತಮಿಳುನಾಡು 24.5 ಪರ್ಸೆಂಟ್ ವೆಚ್ಚ ಮಾಡುತ್ತಿದ್ದಾರೆ, ಕರ್ನಾಟಕ ಎಷ್ಟಿರಬೇಕು? ಎಷ್ಟನ್ನು ವೆಚ್ಚ ಮಾಡಿದರೆ

ಈ ಹಣಕಾಸನ್ನು ಸಮರ್ಥನೀಯವಾಗಿ ನಿರ್ವಹಣೆ ಮಾಡಿದ್ದೇವೆ ಇಷ್ಟು ಸಾಲ ತಂದರೂ ಕೂಡ ಹಾಗೆ ಎಂದು ನೋಡಿದರೆ ನಮ್ಮದು ಶೇಕಡ 22ರಷ್ಟು ಇದೆ. ಈ ಅಂಕಿಅಂಶಗಳನ್ನು ಹಿಂದೆ ನಾನು ಹೇಳಿದ್ದೇನೆ, ಅದನ್ನು ಮತ್ತೆ ಸದನದ ರೆಕಾರ್ಡ್‌ಗೆ ಹೋಗಲೆಂದು ಹೇಳುತ್ತಿದ್ದೇನೆ. ಏಕೆಂದರೆ, ಮಾನ್ಯ ಸದಸ್ಯರು ಹೇಳಿರುವ ಮಾತುಗಳು ರೆಕಾರ್ಡ್‌ಗೆ ಹೋಗುತ್ತವೆ, ನನ್ನ ಮಾತುಗಳೂ ಕೂಡ ರೆಕಾರ್ಡ್‌ಗೆ ಸೇರಿಹೋಗಲೆಂದು ಮತ್ತೊಮ್ಮೆ ನಾನು ಪ್ರತಿಪಾದನೆ ಮಾಡುತ್ತಿದ್ದೇನೆ. ಇವತ್ತು ನಾನು ಒಟ್ ಅನ್ ಅಕೌಂಟ್ ಅನ್ನು ಕೇಳುತ್ತಿದ್ದೇನೆ, ನಾಲ್ಕು ತಿಂಗಳ ನಮ್ಮ ಖರ್ಚು ವೆಚ್ಚಗಳನ್ನು ನಿರ್ವಹಣೆ ಮಾಡುವುದಕ್ಕೆ ಈ ಸದನದ ಅಂಗೀಕಾರವನ್ನು ನಾನು ಕೇಳುತ್ತಿದ್ದೇನೆ. ಕಳೆದ ಮೂರೂವರೆ ವರ್ಷಗಳಲ್ಲಿ ಸುಧಾರಣೆಯ ಮಹಾಪೂರವನ್ನು ಜಾರಿಗೆತರಲು ಪ್ರಯತ್ನಪಟ್ಟಿದ್ದೇವೆ. ಆ ಸುಧಾರಣೆಯಲ್ಲಿ ಎಲ್ಲಾ ಕ್ಷೇತ್ರಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ, ಆ ಸುಧಾರಣೆಗಳನ್ನು ತರುವಂತಹ ದೃಷ್ಟಿಯಲ್ಲಿ ಈ ವ್ಯಾಟ್ ಪದ್ಧತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ನಾನಾ ವಿಧದ ವ್ಯಾಖ್ಯಾನಗಳು ಬರುತ್ತವೆ, ಒಂದೂವರೆ ವರ್ಷಗಳ ಕೆಳಗೆ ನಡೆದಂತಹ ಮುಖ್ಯಮಂತ್ರಿಗಳು ಸಮ್ಮೇಳನದಲ್ಲಿ ಆಗಿನ ಹಣಕಾಸಿನ ಮಂತ್ರಿಗಳಾದ ಶ್ರೀ ಯಶವಂತ್ ಸಿನ್ಹ ನೇತೃತ್ವದಲ್ಲಿ ಎಲ್ಲಾ ರಾಜ್ಯಗಳು ಒಂದು ಸಾಮೂಹಿಕ ತೀರ್ಮಾನಕ್ಕೆ ಬಂದೆವು, ಅದೇನೆಂದರೆ ಒಂದು ಯುನಿಫಾರಂ ಫ್ಲೋರ್ ರೇಟ್ ಆಫ್ ಟ್ಯಾಕ್ಸ್‌ಸೇಷನ್, ನಮ್ಮ ದೇಶದ ಎಲ್ಲಾ ದೃಷ್ಟಿಗಳಿಂದಲೂ ಕೂಡ, ನಮ್ಮ ದೇಶದ ಎಲ್ಲಾ ರಾಜ್ಯಗಳ ಹಿತದೃಷ್ಟಿಯಿಂದ ಇದು ಅಗತ್ಯವೆನ್ನುವ ತೀರ್ಮಾನಕ್ಕೆ ನಾವು ಬಂದೆವು. ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ನಮ್ಮ ಪ್ರಯತ್ನಗಳನ್ನು ಒಂದೂವರೆವರ್ಷಗಳ ಕೆಳಗೆ ಪ್ರಾರಂಭ ಮಾಡಿದೆವು. ಛೇಂಬರ್ ಆಫ್ ಕಾಮರ್ಸ್, ವರ್ತಕರ ಅಸೋಷಿಯೇಷನ್ ಇನ್ನಿತರರ ಜೊತೆಯಲ್ಲಿ ನಮ್ಮ ಸಮಾಲೋಚನೆಗಳನ್ನು ಪ್ರಾರಂಭ ಮಾಡಿದೆವು. ಈಗ ಅದು ಒಂದು ಘಟ್ಟವನ್ನು ತಲುಪಿದೆ; ಈ ಸದನಕ್ಕೆ ನಾನು ಕೃತಜ್ಞನಾಗಿದ್ದೇನೆ, ಮಾನ್ಯ ಕಾನೂನು ಮಂತ್ರಿಗಳು ಈ ವ್ಯಾಟ್ ಬಿಲ್ ಅನ್ನು ಈ ಸದನದಲ್ಲಿ ತಂದು ಏನು ಅಂಗೀಕಾರವನ್ನು ದೊರಕಿಸಿಕೊಂಡರು. ಅದಕ್ಕೆ ಮೇಲ್ಮನೆಯಲ್ಲೂ ಕೂಡ ಅಂಗೀಕಾರ ದೊರೆತಿದೆ, ಇವತ್ತು ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುವಂತಹ ಒಂದು ಬದಲಿ ತೆರಿಗೆ ಸಂಗ್ರಹಣ ಒಂದು ಚೌಕಟ್ಟು, ವ್ಯವಸ್ಥೆ. ಈ ವ್ಯವಸ್ಥೆಯನ್ನು ಇಡೀ ಸದನದಲ್ಲಿ ಎಲ್ಲರು ಸ್ವಾಗತಿಸಿದ್ದಾರೆ ಆದರೆ ತಮ್ಮದೇ ಆದ ರಿಸರ್ವೇಶನ್ಸ್ ಅನ್ನೂ ಕೂಡ ವ್ಯಕ್ತಪಡಿಸಿದ್ದಾರೆ, ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ವ್ಯಾಟ್ ವ್ಯವಸ್ಥೆಯನ್ನು ಮಿಕ್ಕರಾಜ್ಯಗಳೊಡನೆ ಸಮಾಲೋಚನೆ ಮಾಡಿದ್ದೇವೆ, ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇದಕ್ಕೊಂದು ಎಂಪವರ್ ಕಮಿಟಿ ಇದೆ, ಆ ಕಮಿಟಿ ಕೂಲಂಕುಷವಾಗಿ ಯಾವುದನ್ನು ವ್ಯಾಟ್‌ಗೆ ತರಬೇಕೆನ್ನುವ ಒಂದು ಪ್ರಸ್ತಾವನೆಯನ್ನು ಬಿಟ್ಟು ಬಾಕಿ ಪ್ರಸ್ತಾವನೆಯನ್ನು ಎಲ್ಲವನ್ನೂ ಕೂಡ ಫ್ಲೋರ್ ರೇಟ್ಸ್ ಏನು ಇರಬೇಕು. ನಾಲ್ಕರಿಂದ ಹನ್ನೆರಡೂವರೆವರೆಗೆ, ತೆರಿಗೆ ವಲಯದಲ್ಲಿ ಸುಧಾರಣೆಯಾಗಬೇಕೆನ್ನುವುದನ್ನು ಎಲ್ಲರೂ ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ, ಈ ತೆರಿಗೆ ಪದ್ಧತಿ ನಮ್ಮ ದೇಶ ಹಾಗೂ ರಾಜ್ಯಗಳಲ್ಲಿ ವ್ಯಾಟ್ ಮುಖಾಂತರ ಜಾರಿಗೆ ಬರಬೇಕು. ಅದನ್ನು ಮಾಡಬೇಕೆಂದು ನಮ್ಮ ಪ್ರಯತ್ನಗಳನ್ನು ಮುಂದುವರೆಸಿದ್ದೇವೆ. ಮಾನ್ಯ ಸದಸ್ಯರು ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್, ಅಲ್ಯುಮಿನಿಯಂ ಪಾತ್ರೆಗಳು, ಅಕ್ಕಿ, ಬನ್, ಬ್ರೆಡ್, ಗೋಧಿ ಇವುಗಳೆಲ್ಲವನ್ನು ತಾವು ನಮೂದಿಸಿದ್ದೀರಿ.

7.30 ಪಿಎಂ

ಇದರ ಬಗ್ಗೆ ಎಂಪವರ್ ಕಮಿಟಿ ಮುಂದೆ ನಾವು ಮತ್ತೆ ಹೋಗುತ್ತಿದ್ದೇವೆ. ಎಂಪವರ್ ಕಮಿಟಿ ಒಪ್ಪಿರತಕ್ಕಂಥದ್ದನ್ನು ನಾನು ಇಲ್ಲಿ ನಮೂದಿಸಿದ್ದೇನೆ. ಆ ಎಂಪವರ್ ಕಮಿಟಿಯಲ್ಲಿ ಎಲ್ಲಾ ರಾಜ್ಯಗಳ ಹಣಕಾಸಿನ ಸಚಿವರುಗಳೂ ಕೂಡ ಅಲ್ಲಿ ಪ್ರಾತಿನಿಧ್ಯ ವಹಿಸಿಕೊಂಡಿದ್ದಾರೆ. ಅವರ ಸಮಕ್ಷಮದಲ್ಲಿ ಆಗಿರತಕ್ಕಂಥ ನಿರ್ಧಾರಗಳನ್ನು ನಾನು ಅರ್ಥಾತ್ ನನ್ನ ಮುಂಗಡಪತ್ರಕ್ಕೆ ಅಳವಡಿಸಿಕೊಂಡಿದ್ದೇನೆ. ಆದರೆ ಎಲ್ಲಿ ಜನಗಳಿಗೆ ತೊಂದರೆಯಾಗುತ್ತದೆ, ಶ್ರೀಸಾಮಾನ್ಯನ ಮೇಲೆ ವಿಶೇಷವಾದಂಥ ಭಾರ ಬೀಳದಂಥ ರೀತಿಯಲ್ಲಿ ಎಲ್ಲಾ ಮುಂಜಾಗ್ರತೆಯನ್ನೂ ಕೂಡ ನಾವು ವಹಿಸುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಭೆಯಲ್ಲಿ ಸ್ಪಷ್ಟಪಡಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ವ್ಯಾಟ್‌ನಲ್ಲಿ ಫೆನಾಲ್ಟಿ ಕ್ಲಾಜ್ ಮತ್ತು ಕನ್‌ವಿಕ್ಷನ್ ಇದರ ಬಗ್ಗೆ ತಾವು ಹೇಳಬೇಕು. In Tamilnadu 5 ವರ್ಷ ಕನ್‌ವಿಕ್ಷನ್ ಮತ್ತು ಒಂದು ಲಕ್ಷ ರೂಪಾಯಿಗಳ ದಂಡ ಎಂದು ಇದೆ. ಆದರಿಂದ ವರ್ತಕರಲ್ಲಿ ಸೊಸೈಟಿ ಒಳಗಡೆ ಬಹಳ ಭಯದ ವಾತಾವರಣ ನಿರ್ಮಾಣವಾಗಿದೆ. ಏಕೆಂದರೆ ತಮಿಳುನಾಡಿನಲ್ಲಿ ತಂದಿರುವಂಥ ಬಿಲ್‌ನಲ್ಲಿ ಆ ರೀತಿಯಾದಂಥ ಕ್ಲಾಜ್ ಇಲ್ಲ. ಇದರ ಬಗ್ಗೆ ಮೊನ್ನೆ ಸಹ ಹೇಳಿದ್ದೇನೆ. ಆ ಭಯದ ವಾತಾವರಣ ನಿವಾರಣೆಯಾಗಬೇಕು.

ಶ್ರೀ ಎಸ್.ಎಂ. ಕೃಷ್ಣ:- ಈಗ ನೆಲಗಳ್ಳರು ಎನ್ನತಕ್ಕಂಥದ್ದು ಒಂದು ಸಾಮಾನ್ಯವಾದ ಫ್ರೇಸ್. ಬಹಳ ಪಾಪ್ಯುಲರ್ ಆಗಿರತಕ್ಕಂಥ ಫ್ರೇಸ್. ಆದರಲ್ಲೂ ನಮ್ಮ ಬಿ.ಡಿ.ಎ. ನಿರ್ವಹಿಸಿದಂಥ ಕರ್ತವ್ಯದಲ್ಲಿ ಇದಕ್ಕೆ ಒಂದು Added Dimension ಒಂದು ಸೇರಿದೆ, ಹಾಗೆಯೇ ಈ ತೆರಿಗೆಗಳ್ಳರ ವಿಚಾರದಲ್ಲಿ ತೆರಿಗೆ ಯಾರಾದರೂ ಕೊಡಬೇಕಾಗಿದ್ದರೆ, ಕಾನೂನು ಪ್ರಕಾರ ಅದನ್ನು ನಾವು ಸಾದರಪಡಿಸಿದ ಮೇಲೆ ತೆರಿಗೆಯನ್ನು ಕದ್ದರೆ ಶಿಕ್ಷೆ ಆಗಬೇಕೋ ಬೇಡವೋ ಎನ್ನತಕ್ಕಂಥದ್ದು. 'ಕಠಿಣವಾದ ಶಿಕ್ಷೆ' 'ಫೆನಾಲ್ಟಿ ಮತ್ತು ಶಿಕ್ಷೆ' ಎರಡನ್ನೂ ಏಕೆ ಹಾಕುತ್ತೀರಿ ಹಾಗೆಂದು ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಒಟ್ಟಾರೆ ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಜಗದೀಶ್ ಶೆಟ್ಟರ್ ಅವರು ಲೀಗಲ್ ಪ್ರಾಕ್ಟೀಷನರ್ ಕೂಡ ಹೌದು. ತಮಗೇ ಗೊತ್ತಿದೆ ಸೇಲ್ಸ್ ಟ್ಯಾಕ್ಸ್‌ನಲ್ಲೂ ಕೂಡ ಇಂಥ ಕಠಿಣವಾದಂಥ ಶಿಕ್ಷೆಗಳು ಅಡಕವಾಗಿದ್ದವು ಎಂದು. ಆದ್ದರಿಂದ ಈ ವ್ಯಾಟ್‌ನಲ್ಲಿ ಅದರಿಂದ ತೆಗೆದು ಇಲ್ಲಿಗೆ ಅಳವಡಿಸಿದ್ದೇವೆ ಮತ್ತು ಯಾರು ಅನಾವಶ್ಯಕವಾದಂಥ ಕಿರುಕುಳಗಳಿಗೆ, ಅಥವಾ ಅನಾವಶ್ಯಕವಾದಂಥ ಇಂಥ ದಂಡ ಅಥವಾ ಶಿಕ್ಷೆ ಆದರೆ, ಇವುಗಳಿಗೆ ಅಪೀಲು ಇರುತ್ತದೆ, ಅವರು ಕೋರ್ಟ್‌ಗೆ ಹೋಗಬಹುದು. There should be some deterrence for tax evaders. That is the purpose. ಆದ್ದರಿಂದ ಆ ಒಂದು ದೃಷ್ಟಿಕೋನದಲ್ಲಿ ತಾವು ಯೋಚನೆ ಮಾಡಬೇಕಾಗುತ್ತದೆ. ಸಾಮೂಹಿಕವಾಗಿ ಬಳಸಲ್ಪಡತಕ್ಕಂಥ ಬ್ರೆಡ್, ಬಿಸ್ಕತ್ತು, ಸ್ನಾನದ ವಸ್ತುಗಳು, ಸಿದ್ಧ ಉಡುಪುಗಳು, ಖಾದ್ಯ ತೈಲ ಇತ್ಯಾದಿಗಳ ಬೆಲೆ ಈ 'ವ್ಯಾಟ್' ವ್ಯವಸ್ಥೆ ಬಂದರೆ ಅವುಗಳಲ್ಲಿ ಕೆಲವುಗಳ ಧಾರಣೆಗಳು ಇಳಿಯುತ್ತದೆ ಎನ್ನುವ ವಿಶ್ವಾಸ ನಮ್ಮದಾಗಿದೆ. ಜನಸಾಮಾನ್ಯರು ಬಳಸತಕ್ಕಂಥ ರಾಗಿ, ಜೋಳ, ಸಜ್ಜೆ ಮುಂತಾದವುಗಳನ್ನು ತೆರಿಗೆ ವಿನಾಯತಿ ಪಟ್ಟಿಯಡಿಯಲ್ಲಿ ತರಲಾಗಿದ್ದು 'ವ್ಯಾಟ್' ಪದ್ಧತಿಯಡಿ ಅವುಗಳನ್ನು ತೆರಿಗೆಗೆ ಒಳಪಡಿಸುವುದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಸಾಮೂಹಿಕವಾಗಿ ರಾಗಿ, ಜೋಳ, ಸಜ್ಜೆ ಇವುಗಳ ಬಗ್ಗೆ ನನ್ನ ಬಜೆಟ್ ಭಾಷಣದ ಪುಟ 61-62ರ ಅನುಚ್ಛೇದ 2ನ್ನು ತಾವು ಗಮನಿಸಿದರೆ ಈ ವಿಚಾರಗಳು ಸ್ಪಷ್ಟವಾಗುತ್ತದೆ,

ಈ ವಿಚಾರಗಳ ಬಗ್ಗೆ ಸ್ಪಷ್ಟವಾದಂಥ ಬೆಳಕು, ತಿಳುವಳಿಕೆ ನಮಗೆ ಸಿಗುತ್ತದೆ. ಯಾವ ಯಾವ ವಸ್ತುಗಳನ್ನು ವಿನಾಯತಿಗೆ ಒಳಪಡಿಸಲಾಗಿದೆ ಎಂಬ ವಿವರ ಪುಟ 61-62ರ ಅನುಚ್ಛೇದ-2ರಲ್ಲಿ ಇದೆ. ತೆರಿಗೆ ಸುಧಾರಣೆಗಳನ್ನು ಮಾಡಬೇಕೆಂದು ನಾವು ಪ್ರಯತ್ನಗಳನ್ನು ಮುಂದುವರಿಸುತ್ತಿದ್ದೇವೆ. ನಮ್ಮ ವಿರೋಧ ಪಕ್ಷದ ನಾಯಕರಿಗೆ ಅತ್ಯಂತ ಪ್ರಿಯವಾದಂಥದ್ದು ಈ ಸ್ಟ್ಯಾಂಪ್ ಪೇಪರ್ ಮತ್ತು ನಕಲಿ ಸ್ಟ್ಯಾಂಪ್ ಪೇಪರ್ಸ್.... ನಿಮಗೆ ಪ್ರಿಯ ಎಂದು ಹೇಳಿದರೆ ಅದು ಸ್ಟ್ಯಾಂಪ್ ಪೇಪರ್‌ಗಳ ವಿಚಾರದಲ್ಲಿ, ಸ್ಟ್ಯಾಂಪ್ ಪೇಪರ್ ಹಗರಣ, ನಕಲಿ ಛಾಪಾ ಕಾಗದದ ಹಗರಣ, ಸಿ.ಬಿ.ಐ. ಮುಖಾಂತರ ತನಿಖೆ ಮಾಡಿಸಬೇಕು, 10 ಸಾವಿರ ಕೋಟಿ ರೂ 12 ಸಾವಿರ ಕೋಟಿ ರೂ. 22 ಸಾವಿರ ಕೋಟಿ ರೂ ಎಂದು ಹೇಳುತ್ತಿದ್ದರಲ್ಲಾ, ಅದಕ್ಕೇ ಹೇಳಿದೆ. ಎಷ್ಟೇ ಕೋಟಿ ರೂ.ಗಳು ಆಗಿರಲಿ, ಅದಕ್ಕೋಸ್ಕರ ಈಗ ಅದಕ್ಕೆ ಒಂದು ಸಲ್ಯೂಷನ್ ಅನ್ನು ನಾನು ತಮ್ಮ ಮುಂದೆ ಹಾಜರುಪಡಿಸುತ್ತೇನೆ. ಆ ಸಲ್ಯೂಷನ್ ಏನು ಎನ್ನತಕ್ಕಂಥದ್ದನ್ನು ನಾನು ನನ್ನ ಬಜೆಟ್ ಭಾಷಣದಲ್ಲಿ ಘೋಷಣೆ ಮಾಡಿದ್ದೇನೆ. ನಕಲಿ ಛಾಪಾ ಕಾಗದದ ನಿವಾರಣೆಗೆ ಮತ್ತು ಛಾಪಾ ಕಾಗದ ಹಾಗೂ ಮುದ್ರಾಂಕ ಇವುಗಳನ್ನು ರದ್ದು ಮಾಡುವುದರ ಮೂಲಕ ಒಂದು ಮುಕ್ತವಾದಂಥ ವ್ಯವಸ್ಥೆಗೆ ನಾವು ಎಡೆಮಾಡಿಕೊಡಬೇಕಾಗುತ್ತದೆ. ಕರೀಂಲಾಲಾ ಯಾವುದನ್ನು ಪ್ರಿಂಟ್ ಮಾಡಿದ್ದಾನೆ ಅವುಗಳೆಲ್ಲವೂ ಕೂಡ ಇನ್ನು ಮೇಲೆ ಶೂನ್ಯ ಆಗುತ್ತದೆ ಎನ್ನತಕ್ಕಂಥದ್ದು moral of the story ಅವನು 10 ಸಾವಿರ ಕೋಟಿ ರೂ. ಮಾಡಿರಲಿ, 20 ಸಾವಿರ ಕೋಟಿ ರೂ ಮಾಡಿರಲಿ, ಏಪ್ರಿಲ್ ಒಂದನೇ ತಾರೀಖು ಆದಮೇಲೆ ಅವುಗಳೆಲ್ಲವೂ ಶೂನ್ಯ ಆಗುತ್ತದೆ ಎನ್ನತಕ್ಕಂಥ ಮಾತನ್ನು ಏಕೆ ಹೇಳಬೇಕಾಯಿತು ಎಂದರೆ, ತಾವು ಏನು ಸಲಹೆಗಳನ್ನು ಕೊಟ್ಟಿರಿ, ಆ ಸಲಹೆಗಳನ್ನು ಆಧರಿಸಿ ನಾವು ಇಂಥ ಒಂದು ವೈಜ್ಞಾನಿಕವಾದಂಥ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಮಾನ್ಯ ಭೈರೇಗೌಡರೇ, ಇದನ್ನು ತಾವು ಕೇಳಿಸಿಕೊಳ್ಳಬೇಕು. ಅವರಿಗೇ ಏಕೆ ಹೇಳಿದೆನೆಂದರೆ, ಅವರ ಭಾಷಣಗಳಲ್ಲಿ ಒತ್ತು ಕೊಟ್ಟು ಯಾವಾಗಲೂ ವೈಜ್ಞಾನಿಕವಾದಂಥ ಆಟಿಟ್ಯೂಡ್ ಬೇಕು ಸೈಂಟಿಫಿಕ್ ಆಟಿಟ್ಯೂಡ್ ಬೇಕೆಂದು ಹೇಳುತ್ತಾರಲ್ಲಾ, ಆ ಸೈಂಟಿಫಿಕ್ ಆಟಿಟ್ಯೂಡನ್ನು ಇದಕ್ಕೆ ನಾವು ಅಳವಡಿಸಿ ತಾವುಗಳು ಮಾಡಿರತಕ್ಕಂಥ ಸಲಹೆ, ಟೀಕೆ ಟಿಪ್ಪಣಿ ಇವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದೇವೆ. ಇನ್ನು ಮೇಲೆ ನಮ್ಮ ಮೇಲೆ ಆ ದೋಷಾರೋಪಣೆ ಬರಬಾರದು. ಯಾರನ್ನೋ ರಕ್ಷಣೆ ಮಾಡುತ್ತಿದ್ದೇವೆ, ನಾವು ಯಾರನ್ನೋ ಪ್ರೋತ್ಸಾಹಿಸುತ್ತಾ ಇದ್ದೇವೆ ಹಾಗೆಂದು ನಮ್ಮ ಮೇಲೆ ದೋಷಾರೋಪಣೆ ಬರಬಾರದೆಂದು ಮಾಡಿದ್ದೇವೆ.

ಶ್ರೀ ಸಿ.ಭೈರೇಗೌಡ:-...ತಾವು ಯಾವಾಗಲೂ ಹೈಟೆಕ್, ಹೈಟೆಕ್... ಎಂದು ಅದೇ ಪದವನ್ನು ಜಪ ಮಾಡುತ್ತಿರುತ್ತೀರಿ. ಅಂಥದಕ್ಕೋಸ್ಕರ, ಸ್ವಲ್ಪ ಹೈಟೆಕ್‌ಗೆ ಇನ್ನೂ ಸ್ವಲ್ಪ ಮೇಲೇರತಕ್ಕಂಥದ್ದು ಇದೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರಬೇಕು ಎನ್ನುವ ಕಾರಣದಿಂದ ಅದಕ್ಕಾಗಿ ಹೈಟೆಕ್ ಮುಖ್ಯಮಂತ್ರಿಗಳಿಗೆ ಈ ಮಾತುಗಳನ್ನು ಹೇಳುತ್ತಿದ್ದೆ.

ಶ್ರೀ ಎಸ್.ಎಂ. ಕೃಷ್ಣ:- ನಾವು ಎಲ್ಲರೂ ಪಂಡಿತ್ ಜವಹಾರ್‌ಲಾಲ್ ನೆಹರು ಅವರ ಕಾಲದಿಂದಲೂ Quick temper ಎಂದು ಹೇಳುತ್ತೇವೆ, ಅದಕ್ಕೆ ನಾನು ಒತ್ತು ಕೊಟ್ಟೆ ಅಷ್ಟೆ. ಅದಕ್ಕೆ ನಿಮ್ಮ ಹೆಸರನ್ನೂ ಸೇರಿಸಿಕೊಂಡೆ. ಅಪರಾಧ ಆಗಿದ್ದರೆ ನಿಮ್ಮ ಹೆಸರನ್ನು ನಾನು ವಾಪಸ್ಸು ತೆಗೆದುಕೊಂಡುಬಿಡುತ್ತೇನೆ.

ಶ್ರೀ ಸಿ.ಭೈರೇಗೌಡ:- ನಾನು ಬೇರೆ ದೃಷ್ಟಿಯಿಂದ ಹೇಳಲಿಲ್ಲ. ಏಕೆಂದರೆ ಅದು ತಮಗೆ ಬಹಳ ಇಷ್ಟ....

ಶ್ರೀ ಎಸ್.ಎಂ. ಕೃಷ್ಣ:- ಈಗ ತಾವು ಏನು ಹೇಳಿದಿರಿ ಹೈಟೆಕ್ ಎಂದು ನನ್ನ ಕಿವಿಗಳಿಗೆ ಬಹಳ ಆಪ್ಯಾಯಮಾನಕರವಾಗಿರತಕ್ಕಂಥದ್ದು. ಆ 'ಹೈ' ಟೆಕ್ನಾಲಜಿಯನ್ನು ಇವತ್ತು ಈ ಮುದ್ರಾಂಕ ಶುಲ್ಕವನ್ನು ಅಬಾಲಿಶ್ ಮಾಡುವುದರ ಮೂಲಕ ನಾನು ಈ ದಿವಸ ರುಜುವಾತು ಮಾಡಿದ್ದೇನೆ. ಸಾರಿಗೆ ವಲಯದ ಬಗ್ಗೆ ಮಾನ್ಯ ಸಿಂಧ್ಯಾರವರು ಭಾಷಣ ಮಾಡುವಾಗ ನಾನು ಇಲ್ಲಿರದಿದ್ದರೂ ಕೇಳಿದ್ದೇನೆ. ಕೆ.ಎಸ್.ಆರ್.ಟಿ.ಸಿ.ಯ ಸುಧಾರಣೆ ನಿಮ್ಮ ಕಾಲದಲ್ಲಿ ಪ್ರಾರಂಭವಾಯಿತು. 4 ಭಾಗಗಳನ್ನಾಗಿಯೋ, 3 ಭಾಗಗಳನ್ನಾಗಿಯೋ ತಾವು ವಿಂಗಡಿಸಿದಿರಿ. ಅದರಿಂದ ಬಹಳಮಟ್ಟಿಗೆ ಸುಧಾರಣೆ ಆಯಿತು. ಬೆಂಗಳೂರು ವಲಯಕ್ಕೆ ಕೊಂಚ ಜಾಸ್ತಿ ಹಣಕಾಸಿನ ಉಪಯೋಗ ಆದರೂ ಕೂಡ ಈಶಾನ್ಯ ಮತ್ತು ಮತ್ತೊಂದು ವಲಯದಲ್ಲಿ ಸ್ವಲ್ಪ ಕುಂಠಿತವಾಯಿತು. ಆದರೆ ನಿಮ್ಮ ಸದುದ್ದೇಶ ಏನಿದೆ, ಆ ಸದುದ್ದೇಶವನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ದೇವರಾಜ ಅರಸ್‌ರವರ ವಿಚಾರವನ್ನು ಮಾತನಾಡಿದರು. ಎಷ್ಟು ಜನರಿಗೆ ದೇವರಾಜ ಅರಸ್‌ರವರ ಹೆಚ್ಚು ಪರಿಚಯ ಇತ್ತೋ ಗೊತ್ತಿಲ್ಲ. ದೇವರಾಜ ಅರಸ್‌ರವರು ಇಲ್ಲಿ ಕುಳಿತಿದ್ದರು ನಾನು ಅಲ್ಲಿ ಕುಳಿತಿದ್ದೆ (ಆಡಳಿತ ಪಕ್ಷದ ಮುಂದಿನ ಸಾಲನ್ನು ತೋರಿಸಿ ಹೇಳಿದರು). ಏಕೆಂದರೆ ನಾನು ಪಾರ್ಲಿಮೆಂಟರಿ ಸಚಿವನೂ ಆಗಿದ್ದೆ, ಇಂಡಸ್ಟ್ರೀಸ್ ಮಿನಿಸ್ಟರ್ ಸಹ ಆಗಿದ್ದೆ, ಆದ್ದರಿಂದ ನಾವು ಇಲ್ಲಿ ಕುಳಿತುಕೊಳ್ಳುತ್ತಿದ್ದೆ. ದೇವರಾಜ್ ಅರಸ್‌ರವರ ನಾಯಕತ್ವವನ್ನು ಸೃಷ್ಟಿ ಮಾಡಲಿಕ್ಕೆ ಪುಷ್ಟಿ ಮಾಡಲಿಕ್ಕೆ ಕಾರಣೀಭೂತರಾಗಿರತಕ್ಕಂಥವರು ಶ್ರೀ ರಂಗನಾಥ್‌ರವರು ಅಲ್ಲಿ ಕುಳಿತಿದ್ದಾರೆ ಇಲ್ಲಿ ನಾನು ಕುಳಿತಿದ್ದೇನೆ. ಆದ್ದರಿಂದ ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಈ ಸರ್ಕಾರ ಗಮನಕೊಡಲಿಲ್ಲ ಎನ್ನತಕ್ಕಂಥ ಮಾತುಗಳು ಏನಿವೆ ಆ ಮಾತುಗಳು ಖಂಡಿತವಾಗಿಯೂ ನಮಗೆ ಅನ್ವಯಿಸುವುದಿಲ್ಲ. 1967-68-69ನೇ ಇಸವಿಯ ಬೆಳವಣಿಗೆಗಳನ್ನು ನಾವು ಗಮನಿಸಿದರೆ ನಡೆದಂಥ ರಾಜಕೀಯ ಸಂಘರ್ಷ ಹೇಗೆ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು, ಹೇಗೆ ರಾಜಧನವನ್ನು ರದ್ದು ಮಾಡಿದರು ಇಂದಿರಾಗಾಂಧಿಯವರು, ಹೇಗೆ ಭೂಮಿ ಸುಧಾರಣೆಯನ್ನು ಮಾಡಿದರು, ಆ ಭೂಮಿ ಸುಧಾರಣೆಗೆ ಕಾರಣರಾಗಿದ್ದಂಥವರು ದೇವರಾಜ ಅರಸ್‌ರವರು, ಅವರ ಜೊತೆಗೆ ಭುಜಕ್ಕೆ ಭುಜ ಕೊಟ್ಟು ದುಡಿದಂಥವರು ನಾವು. 1972ನೇ ಇಸವಿಯಲ್ಲಿ ಆಗ ಶಾಸನಸಭೆಗಳಿಗೆ ನೀವು ಕೆಲವರು ಬಂದಿರಲಿಲ್ಲ. 1969ನೇ ಇಸವಿಯಲ್ಲಿ 'ಕುಲಕ್ ಲಾಬಿ' ಇತ್ತಲ್ಲಾ, ಅದನ್ನು ಕುಲ್ಲಕ್ ಲಾಬಿ, ಕ್ಷುಲಕ್ ಲಾಬಿ ಎಂದು ನಾವು ಮತ್ತು ರಂಗನಾಥ್‌ರವರು ಬಹಳ ತಮಾಷೆಗೆ ಕರೆಯುತ್ತಿದ್ದೆವು. ಆ ಕ್ಷುಲಕ್ ಲಾಬಿಯವರು ಎಂತಹ ಸೈದ್ಧಾಂತಿಕ ಸಂಘರ್ಷವನ್ನು ಮಾಡಿಕೊಟ್ಟರು ಎನ್ನತಕ್ಕಂಥದ್ದು ಇನ್ನೂ ನಮ್ಮ ಮನಸ್ಸಿನಲ್ಲಿ ಹಸಿರಾಗಿಯೇ ಉಳಿದಿದೆ. ಅಂಥ ಹೋರಾಟದಲ್ಲಿ ತೇರ್ಗಡೆಯಾಗಿ ನಾವು ಇಲ್ಲಿ ಬಂದು ಕುಳಿತಿದ್ದೇವೆ. ಆದ್ದರಿಂದ ಹಿಂದುಳಿದ ವರ್ಗವನ್ನೇ ಆಗಲಿ, ದಲಿತ ವರ್ಗವನ್ನೇ ಆಗಲಿ ನಾವು ಗಮನಿಸಿಲ್ಲ ಎನ್ನತಕ್ಕಂಥದ್ದು ಅವುಗಳು ಭಾಷಣಗಳಿಗೆ ಸೀಮಿತವಾಗಿಯೇ ಇರಬೇಕೇ ವಿನಃ ನಮ್ಮ ಕಾರ್ಯಕ್ರಮಗಳನ್ನು ಯಾರು ನೋಡುತ್ತಾರೆ ಅವರಿಗೆ ಇಲ್ಲಿ ಸ್ಪಷ್ಟವಾದಂಥ ಉತ್ತರ ನಮ್ಮ ಕಳೆದ ಮೂರೂವರೆ ವರ್ಷಗಳ ಕಾರ್ಯಕ್ರಮದಲ್ಲಿ ಮತ್ತು ಅದರ ಹಿಂದೆ ನಮ್ಮ ಸರ್ಕಾರಗಳು ಇದ್ದಂಥ ಕಾಲದಲ್ಲಿ ಏನು ತೀರ್ಮಾನಗಳನ್ನು ತೆಗೆದುಕೊಂಡೆವು ಅವುಗಳಿಂದ ಗೊತ್ತಾಗುತ್ತದೆ. ಆದ್ದರಿಂದ ಶ್ರೀ

ಸಿಂಧ್ಯಾರವರಿಗೆ ನಾನು ಸ್ಪಷ್ಟವಾದಂಥ ಮಾತುಗಳಲ್ಲಿ ಭರವಸೆಯನ್ನು ಕೊಡುವುದೇನೆಂದರೆ -ಈ ಕೆ.ಎಸ್.ಆರ್.ಟಿ.ಸಿ ಯನ್ನು ವೀಕನ್ ಮಾಡಬೇಕೆನ್ನತಕ್ಕಂಥದ್ದು ನಮ್ಮ ದೃಷ್ಟಿ ಇಲ್ಲ. ಏಕೆಂದರೆ public sector again, democratic socialism ಜೊತೆಗೆ commanding heights of economy. ಮೈಸೂರು ಪೇಪರ್ ಮಿಲ್ ಅನ್ನು ಖಾಸಗಿಯವರು ಕಬಳಿಸಬೇಕೆಂಬ ಪ್ರಯತ್ನ ಮಾಡಿ ನನ್ನ ಸಚಿವ ಸ್ಥಾನಕ್ಕೇ ಸಂಚು ತರತಕ್ಕಂಥ ಹುನ್ನಾರವನ್ನು ಮಾಡಿದರು. ಆದರೆ ನಾವು ಎದೆಗುಂದಲಿಲ್ಲ. ಮೈಸೂರು ಪೇಪರ್ ಮಿಲ್ಸ್ ಅನ್ನು ಸಂಪೂರ್ಣ ರಾಜ್ಯಸರ್ಕಾರದ ಆಸ್ತಿಯನ್ನಾಗಿ ಪರಿವರ್ತನೆ ಮಾಡಿದಂಥ ಶಾಶ್ವತವಾದಂಥ ಕೀರ್ತಿಗೆ ನಾವು ಭಾಗಿಗಳಾಗಿದ್ದೇವೆ. ಆದ್ದರಿಂದ ಯಾರಾದರೂ ಪಬ್ಲಿಕ್ ಸೆಕ್ಟಾರ್ ಮೇಲೆ ನಮಗೆ ಭಾಷಣ ಮಾಡಬೇಕಾದರೆ ಈ ವಿಚಾರಗಳನ್ನೂ ಕೂಡ ಅವರು ಎಲ್ಲೋ ಒಂದು ಕಡೆ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕರ್ನಾಟಕ ಪವರ್ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ, ಇವತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿ ಇಷ್ಟು ದೊಡ್ಡ ಬಂಡವಾಳವನ್ನು ಕಳೆದ ಮೂರೂವರೆ ವರ್ಷಗಳಲ್ಲಿ ನಾವು ಹಾಕಿದ್ದೇವೆ. ವಿಜಯನಗರದಲ್ಲಿ 500 ಮೆಗಾ ವ್ಯಾಟ್ ಮತ್ತು ಆಲಮಟ್ಟಿಯಲ್ಲಿ 290 ಮೆಗಾ ವ್ಯಾಟ್, ಈ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಭಾಷಣದಲ್ಲಿ ಪ್ರಧಾನವಾಗಿ ಪ್ರಸ್ತಾಪ ಮಾಡಿದ್ದು ಏನೆಂದರೆ- ಪ್ರಾದೇಶಿಕ ಅಸಮತೋಲನೆ ಬಗ್ಗೆ ಪ್ರೊ. ನಂಜುಂಡಪ್ಪ ಅವರ ವರದಿ ಬಗ್ಗೆ ಹೇಳಿದರು. ನಿಜ. ಪ್ರಾದೇಶಿಕ ಅಸಮಾನತೆ ಬಗ್ಗೆ ಹೇಳುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಕೃಪೆ ಮಾಡಿ ಹೇಳಿದ್ದಾರೆ. ಅದೇನೆಂದರೆ- 'ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ.'ಏಕೆಂದರೆ, ಇದುವರೆವಿಗೂ ಮಾತಿನಲ್ಲಿಯೇ ಪರಿಣಮಿಸುತ್ತಾ ಇದ್ದಂಥ ಒಂದು ವಿಚಾರಕ್ಕೆ ಒಂದು ಸೈದ್ಧಾಂತಿಕ ಆಯಾಮವನ್ನು ನೀವು ಸೃಷ್ಟಿ ಮಾಡಿಕೊಟ್ಟಿರಿ, ಎಂದು ಹೇಳಿದರು. ಅದು ನಂಜುಂಡಪ್ಪ ಸಮಿತಿಯವರು ಮಾಡಿರತಕ್ಕಂಥ ವರದಿ. ನಂಜುಂಡಪ್ಪ ಸಮಿತಿಯವರು ಮಾಡಿರತಕ್ಕಂಥ ವರದಿಯ ಪ್ರಕಾರ ಅವರ ಶಿಫಾರಸ್ಸುಗಳಲ್ಲಿ ಏನು ಹೇಳಿದ್ದಾರೆಂದರೆ-'ಚಾರಿತ್ರಿಕ ಕಾರಣಗಳಿಗೋಸ್ಕರ ಭೌಗೋಳಿಕ ಕಾರಣದಿಂದಾಗಿ ಕೆಲವು ಈ ಅಸಮತೋಲನಗಳು ಬೆಳೆದುಕೊಂಡೇ ಬಂದಿವೆ ಎಂದು ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಅದನ್ನು ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಅವರು-'ನಾನು ಒಂದೇ ವರ್ಷದಲ್ಲಿ ನಿರೀಕ್ಷಣೆ ಮಾಡುವುದಿಲ್ಲ, ಆದರೆ ಆ ದಿಕ್ಕಿನಲ್ಲಿ ನೀವು ಯೋಚನೆ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೀರಾ ಎನ್ನುವುದರ ಬಗ್ಗೆ ಸಮಜಾಯಿಸಿ ಬೇಕು ಎಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿಯೇ ಈ ಮುಂಗಡಪತ್ರದಲ್ಲಿ ಉತ್ತರ ಕರ್ನಾಟಕಕ್ಕೆ ಹೇಗೆ ಈ ಅಸಮತೋಲನವನ್ನು ಹೆಜ್ಜೆಹೆಜ್ಜೆಯಾಗಿ ಹಂತಹಂತವಾಗಿ ಕಡಿಮೆ ಮಾಡಬಹುದು ಎನ್ನುವುದಕ್ಕೆ ನಾವು ಮಾಡಿರತಕ್ಕಂಥ very humble ಪ್ರಯತ್ನಗಳು. ಬಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್‌ಗೆ ಡ್ರಿಪ್ ಇರಿಗೇಷನ್‌ಗಾಗಿ 100 ಪರ್ಸೆಂಟ್ ಸಬ್ಸಿಡಿ, ವೆಟರ್ನರಿ ಸೈನ್ಸಸ್ ಯೂನಿವರ್ಸಿಟಿ ಇದು ಶ್ಲಾಘನೆಗೆ ಬಂದಿರತಕ್ಕಂಥ ವಿಚಾರ, ವುಮೆನ್ಸ್ ಯೂನಿವರ್ಸಿಟಿ ಅದೂ ಕೂಡ ಪ್ರಶಂಸೆಗೆ ಒಳಗಾಗಿರತಕ್ಕಂಥ ವಿಚಾರ, ಕಾರ್ಡಿಯಾಲಜಿ ರೆಫರಲ್ ಸೆಂಟರ್ಸ್ ಹುಬ್ಬಳ್ಳಿ-ಧಾರವಾಡ, ಹಾಗೂ ಬಿಜಾಪುರದಲ್ಲಿ ಕಮಿಷನರೇಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಹುಬ್ಬಳ್ಳಿಯಲ್ಲಿ, 75 ಹೊಸ ಹಾಸ್ಟೆಲ್‌ಗಳು SC,ST and BC's with 30% reservation for women ಅದರಲ್ಲಿ 7 ನಾರ್ದನ್ ಬ್ಯಾಕ್‌ವಾರ್ಡ್ ಡಿಸ್ಟ್ರಿಕ್ಟ್ಸ್, canal modernization

under Tunga and Bhadra Dam ಹಾಗೆಯೇ ಮುಲ್ಲಾಮರಿ ಮತ್ತು ಬೆಣ್ಣೆತೋರ ಇವುಗಳನ್ನು ನೀರಾವರಿ ನಿಗಮಕ್ಕೆ ತೆಗೆದುಕೊಳ್ಳುವುದರ ಮೂಲಕ ನಾವು ಅವುಗಳನ್ನು ಆದಷ್ಟು ಬೇಗ ಕಂಪ್ಲೀಟ್ ಮಾಡುತ್ತೇವೆ. ಉಗ್ರಾಣ ಪ್ರಾಜೆಕ್ಟ್ ದಾವಣಗೆರೆ, ಆಲಮಟ್ಟಿ 290 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ, ಸಪರೇಟ್ ಅರ್ಬನ್ ವಾಟರ್ ಸಪ್ಲೈ ಬೋರ್ಡ್, ಹಾಗೆಯೇ Suvarna Cultural Complex at Dharwad and Gulbarga ಜೊತೆಗೆ ಉತ್ತರ ಕರ್ನಾಟಕದ 20 ಟೌನ್‌ಗಳಿಗೆ, ಅರ್ಬನ್ ಸೆಂಟರ್ಸ್‌ಗೆ ನಾವು ವಿಶೇಷವಾದಂಥ ಗಮನವನ್ನು ಕೊಡಲಿಕ್ಕೆ ಎ.ಡಿ.ಬಿ. ಮೂಲಕ ಪ್ರಯತ್ನ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ. ಇವು ಪ್ರಾರಂಭಿಕವಾಗಿ ನಾವು ಮಾಡುತ್ತಾ ಇರತಕ್ಕಂಥ humble attempts. ಇದರಿಂದ ನನ್ನ ಹೆಗಲಿನ ಮೇಲೆ ನಾನೇ ಭುಜ ತಟ್ಟಿಕೊಂಡು ಅದಕ್ಕೆ ನಾನು ಊರಿಗೆಲ್ಲಾ ಹೋಗುವ ಹಾಗಿಲ್ಲ. ಅದಕ್ಕೋಸ್ಕರವೇ ನಾನು ಈ ಭಾಷೆ ಮತ್ತು ಈ phrase ಏನಿದೆ humble attempt ಎಂದು ಏನು ಹೇಳುತ್ತಿದ್ದೇನೆ, ಆ humble attempt ನಾವು ಮಾಡಿದ್ದೇವೆ. ಅದನ್ನು ಲಾಜಿಕಲಿ ಮುಂದೆ ನಾವು ತೆಗೆದುಕೊಂಡು ಹೋಗಬೇಕಾಗುತ್ತದೆ. ಈ ಸುಧಾರಣೆಗಳು ಕೇವಲ ನಮ್ಮ ಸಾರಿಗೆ ವ್ಯವಸ್ಥೆ; ಮುದ್ರಾಂಕ ಶುಲ್ಕ, ಮತ್ತು ಮಾರಾಟ ತೆರಿಗೆ ವ್ಯಾಟ್ ಪದ್ಧತಿ ಇವುಗಳಿಗೇ ಸೀಮಿತ ಮಾಡಿಕೊಂಡರೆ, ಅಬಕಾರಿ ವಲಯದಲ್ಲಿ ನಡೆಯುತ್ತಿರತಕ್ಕಂಥ ಏರುಪೇರುಗಳು, ಈ ಸರ್ಕಾರ ಅಬಕಾರಿಯವರ ಕಪಿಮುಷ್ಠಿಗೆ ಸಿಕ್ಕಿದೆ, ಹಾಗೆಂದು ನೀವು ಹೇಳುತ್ತಲೇ ಇರುತ್ತೀರಿ ನಮ್ಮ ಆದಾಯ ಜಾಸ್ತಿಯಾಗುತ್ತಲೇ ಇದೆ. ಇದು ವಿಪರ್ಯಾಸ-ವಿಪರ್ಯಾಸ ಯಾವುದು ಎಂದರೆ, ಅಬಕಾರಿ ಲಾಬಿಯ ಕಪಿಮುಷ್ಠಿಗೆ ನಾನು ಸಿಕ್ಕಿದ್ದೇನೆ, ಆದರೆ ಅದು ಹೇಗೆ ರಿಫ್ಲೆಕ್ಟ್ ಆಗಬೇಕೆಂದರೆ, ನನ್ನ ಸರ್ಕಾರಕ್ಕೆ ಬರಬೇಕಾದ ಆದಾಯ ಅದು ಸೋರಿಕೆ ಆದರೆ, ಬಿದ್ದುಹೋದರೆ, ಹೇಗೆ ಆದಾಯವನ್ನು ಜಾಸ್ತಿ ಮಾಡಬೇಕೆಂದು ಪಾಪ, ಇವರು ನಮಗೆ ತೋರಿಸಿಕೊಟ್ಟು ಹೋದರು; ಅದೇ ಚೈನನ್ನು ಹಿಡಿದುಕೊಂಡು ನಾನು ಮುಂದುವರೆದಿದ್ದೇನೆ. ಆದರೂ ಅಪವಾದ ಮಾತ್ರ ಇವರು ಅಬ್ಕಾರಿ ದೊರೆಗಳ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆ ಎಂದು ಬರುತ್ತಿದೆ. ಯಾರು ಯಾರ ದಾಕ್ಷಿಣ್ಯಕ್ಕೆ ಯಾವಾಗ ಸಿಕ್ಕಿದರು, ಎನ್ನತಕ್ಕಂಥದ್ದನ್ನು ಕಾಲ ಬಂದಾಗ ಹೇಳುತ್ತೇವೆ. ಅದನ್ನು ಇವತ್ತು ಹೇಳಲಿಕ್ಕೆ ಆಗುವುದಿಲ್ಲ. ಯಾವ ನಾಲಗೆಯಿಂದ ಈ ಸರ್ಕಾರವನ್ನು ಅಬಕಾರಿ ದೊರೆಗಳ ಹಿಡಿತಕ್ಕೆ ಸಿಕ್ಕಿದೆ ಎಂದು ಹೇಳುತ್ತೀರೋ, ಅದೇ ಕಣ್ಣಿನಿಂದ, ಅದೇ ಕಿವಿಯಿಂದ ಈ ಮಾತುಗಳನ್ನೂ ಕೂಡ ನೀವು ಕೇಳಲಿಕ್ಕೆ ಸಿದ್ಧರಾಗಿರಬೇಕು ಎಂದು ಹೇಳುತ್ತೇನೆ. ನಮ್ಮ ಅಬಕಾರಿ ಗ್ರಾಫ್ ಹೇಗೆ ಹೋಗುತ್ತಿದೆ, ಆದರೆ ಇಷ್ಟು ಸಾಕೇ? ಇಷ್ಟೂ ಸಾಲದು. ಇನ್ನೂ ಮಾಡಬೇಕಾಗಿರತಕ್ಕಂಥದ್ದು ಈ ಅಬಕಾರಿ ಕ್ಷೇತ್ರದಲ್ಲಿ, ವಲಯದಲ್ಲಿ ಬ್ರಹ್ಮಾಂಡದಷ್ಟು ಇದೆ. ಆ ಮನೆಯಲ್ಲಿ ಶ್ರೀಮಾನ್ ನಾಣಯ್ಯನವರು ಸಂವೇದನಾಶೀಲರಾಗಿ ಕೆಲವು ಮಾತುಗಳನ್ನು ನನಗೆ ಹೇಳಿದರು. ಅವರು ಹೇಳಿದ ಮಾತುಗಳನ್ನು ಇಲ್ಲಿ ನಾನು ನನ್ನ ಬಾಯಿಯಿಂದ ಪುನರುಚ್ಚಾರ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಅವರು ಏನು ಹೇಳಿದರೆಂದರೆ- You leave your foot prints on the sands of times'ನನ್ನ ಮುಂದೆ ಈ ವಿಚಾರ ಕಳೆದ ಕೆಲವಾರು ದಿವಸಗಳಿಂದ ಪರ ವಿರೋಧ ಭಾವನೆಗಳು ಆಗಿಂದಾಗ್ಗೆ ವ್ಯಕ್ತಪಡಿಸುತ್ತವೆ. ನಮ್ಮ ರಾಜ್ಯದಲ್ಲಿ ದುರಾದೃಷ್ಟವಶಾತ್ ಕೆಲವು ಚಾರಿತ್ರಿಕ ಕಾರಣಗಳಿಗೋಸ್ಕರ ಈ ಅಬಕಾರಿ ವಲಯದಲ್ಲಿ ಬಹಳ distortions ಬಂತು. ಆದರೆ ಯಾರಾದರೂ ಒಬ್ಬರು ಎಲ್ಲಾದರೂ ಒಂದು ಕಡೆ ಈ distortions ಅನ್ನು ಸರಿಪಡಿಸಲಿಕ್ಕೆ ಧೈರ್ಯವಾದಂಥ ಪ್ರಯತ್ನಗಳನ್ನು

ಮಾಡಬೇಕೆಂದು ಹೇಳಿ, ಅಂಥ ಧೈರ್ಯವಾದಂಥ ಪ್ರಯತ್ನಗಳನ್ನು ನಾನು ಸಭೆಯ ಮುಂದೆ ಈ ದಿವಸ ಮಂಡಿಸುತ್ತಿದ್ದೇನೆ. ಅಬಕಾರಿ ವಲಯದಲ್ಲಿ ಒಂದು ದೊಡ್ಡ ಕೊರತೆ ಏನೆಂದರೆ ಅವರು ತೆರಿಗೆಯನ್ನು ಸರಿಯಾಗಿ ಕೊಡುವುದಿಲ್ಲ. ಕಂಪ್ಲಾಯನ್ಸ್ ಇಲ್ಲ, ಮತ್ತು ಅವರು ಏನು ಮಾಡುತ್ತಾರೆಂದರೆ ಅದರ ಕರೆಕ್ಟ್ ಆದ ಅಕೌಂಟಿಂಗ್ ಇಲ್ಲ, ಅದನ್ನೇ ಕರ್ನಾಟಕ infamous ಆಗಿರತಕ್ಕಂಥದ್ದು ಯಾವುದು ಎಂದರೆ ಈ ಸೆಕೆಂಡ್ಸ್. ಮಾನ್ಯ ವಿರೋಧ ಪಕ್ಷದ ನಾಯಕರು ಕಮರಿ ಪೇಟೆಯ ವಿಚಾರವನ್ನು ಆಗಿಂದಾಗ್ಗೆ ನನ್ನ ಗಮನಕ್ಕೆ ತರುತ್ತಾರೆ. ಇವತ್ತು ನಾವು ತೆರಿಗೆ ಕೊಡದೆ ಮದ್ಯದ ವ್ಯವಹಾರವನ್ನು ನಡೆಸುತ್ತಿರತಕ್ಕಂಥ ಈ ಪ್ರಯತ್ನಗಳಿಗೆ ನಾವು ಯಾವತ್ತಾದರೂ ಒಂದು ದಿವಸ ಇತಿಶ್ರೀಯನ್ನು ಹಾಡಬೇಕಾಗಿದೆ, ಇವತ್ತು ನಾವು ಅದನ್ನು ಈ ವರ್ಷದಿಂದ ಪ್ರಾರಂಭಿಸುತ್ತೇವೆ. ಆಮದು ಮಧ್ಯೆ ಮತ್ತು ಭಾರತೀಯ ತಯಾರಿಕೆಯ ಮದ್ಯೆ ಇದರ ಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆಯನ್ನು ಪಾನೀಯ ನಿಗಮ Beverages Corporation ಒಂದನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಏನು ಇದೆ ಅದರಿಂದ ಮಾಡಲಿಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಇದು ಈ ಸರ್ಕಾರ ತೆಗೆದುಕೊಂಡ ಅತ್ಯಂತ ಮಹತ್ವಪೂರ್ಣವಾದ ಆರ್ಥಿಕ ನಿರ್ಣಯವೆಂದು ನಾನು ಭಾವಿಸುತ್ತೇನೆ. ಇದರ consequences ನಾನು ಬಲ್ಲೆ, ಇದರ ಆಗುಹೋಗುಗಳನ್ನು, ಏಳುಬೀಳುಗಳನ್ನು ನಾನು ಗಮನಿಸಿದ್ದೇನೆ, ಆದರೆ ಸರ್ಕಾರ ಎಲ್ಲಾದರೂ ಒಂದು ಕಡೆಗೆ corrective steps ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದೊಂದರಲ್ಲಿ ಮಾತ್ರ ಕರ್ನಾಟಕ ಬಹಳ ಹಿಂದೆ ಬಿದ್ದಿತ್ತು. ಯಾವಾಗಲೂ ಕರ್ನಾಟಕ ಇನ್ನೊಂದು ರಾಜ್ಯ ನಮ್ಮನ್ನು ಅನುಕರಣೆ ಮಾಡತಕ್ಕಂಥ ದಿಸೆಯಲ್ಲಿ ನಾವು ಮುಂದುವರಿದಿದ್ದೇವೆ. ಆದರೆ ದುರಾದೃಷ್ಟವಶಾತ್ ಈ ಮದ್ಯದ ಕ್ಷೇತ್ರದಲ್ಲಿ, ಅಬಕಾರಿ ಕ್ಷೇತ್ರದಲ್ಲಿ ನಾವು ಇತರ ರಾಜ್ಯಗಳಿಗಿಂತ ಹಿಂದೆ ಬಿದ್ದಿದ್ದೇವೆ, ಆದ್ದರಿಂದ ನಾನು ಆಂಧ್ರಪ್ರದೇಶ, ತಮಿಳುನಾಡು ಹಾಗೂ ಮಿಕ್ಕ ರಾಜ್ಯಗಳು ಏನು ಮಾಡುತ್ತಿದ್ದಾರೆ, ಅದನ್ನು ನಾವು ಅವರ ಸಾಲಿನಲ್ಲಿ ಸೇರಿಸಿ ಈ ಸೆಕೆಂಡ್ಸ್ ಹಾಗೂ ಥರ್ಡ್ಸ್ ಏನಿವೆ ಇವುಗಳ ಸಂಪೂರ್ಣ ಪ್ರತಿಬಂಧಕವನ್ನು ಜಾರಿಗೆ ತರಲಿಕ್ಕೆ ನಾವು ಸ್ಪಷ್ಟವಾದ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತೇವೆ, ಇದು ನಮ್ಮ ಹಣಕಾಸಿನ ಸುಧಾರಣೆ ದೃಷ್ಟಿಯಿಂದ ಗಮನಾರ್ಹವಾದಂಥ ಪ್ರಗತಿಯನ್ನು ನಾನು ಮುಂದಿನ ವರ್ಷದ ಬಜೆಟ್‌ನಲ್ಲಿ, ನಾವು ಏನು ಒಂದು ವರ್ಷದಲ್ಲಿ ಸಾಧನೆ ಮಾಡಲಿಕ್ಕೆ ಸಾಧ್ಯ ಎನ್ನುವುದರ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ಅದರಲ್ಲಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ನಾನು ಪ್ರಕಟಿಸಿದ್ದೇನೆ, ಈ ಡಿಸ್ಟಿಲರಿಗಳ ಆಡಳಿತದ ಸೂಕ್ಷ್ಮ ವಿಚಾರಗಳು, ಕ್ಲಿಷ್ಟ ವಿಚಾರಗಳ ಬಗ್ಗೆ ಸ್ವತಂತ್ರ ಸಂಸ್ಥೆಯಿಂದ ಲೆಕ್ಕಪತ್ರಗಳನ್ನು ಪರಿಶೀಲಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ಪ್ರಕಟಿಸಿದ್ದೇನೆ, ಇದು ಕೂಡ ಈ ಸೆಕೆಂಡ್ಸ್ ಹಾವಳಿಯಿಂದ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನಾವು ರಕ್ಷಣೆ ಮಾಡಿಕೊಳ್ಳತಕ್ಕಂಥ ದೃಷ್ಟಿಯಿಂದ ಇದು ಬಹಳ ಅಗತ್ಯವಾಗಿ ಆಗಬೇಕಾದ ಸುಧಾರಣೆ ಎಂದು ನಾನು ಭಾವಿಸುತ್ತೇನೆ. ಇದರಿಂದ ಅಬಕಾರಿ ಬಾಬ್ತು ಆದಾಯ ಹೆಚ್ಚಿಸಬೇಕು, ಆದರೆ ಇದಕ್ಕೆ ತಕ್ಕ ಹಾಗೆ ಕೆಲವು incentives ಕೊಡಬೇಕು, ಅಬಕಾರಿ ವಲಯದಲ್ಲಿ ತೆರಿಗೆ ತಪ್ಪಿಸಬೇಕಾಗಿದ್ದರೆ age old explanation of tax reforms, approach to taxation, ಏನೆಂದರೆ, incidence of ತೆರಿಗೆ ಕಡಿಮೆಯಾದರೆ compliance ಜಾಸ್ತಿಯಾಗುತ್ತದೆ ಎನ್ನತಕ್ಕಂಥದ್ದು, ಹಣಕಾಸಿನ ಚತುರರು ನಮಗೆ ಹೇಳಿಕೊಟ್ಟಂಥ ಪಾಠ. ಆದುದರಿಂದ, ಅಬಕಾರಿ ವಲಯದಲ್ಲಿ

ತೆರಿಗೆ ತಪ್ಪಿಸುವುದನ್ನು ನಿವಾರಿಸಲು ತೆರಿಗೆ ದರಗಳನ್ನು ನಾನು ಇಳಿಸಲು ತೀರ್ಮಾನ ಮಾಡಿದ್ದೇನೆ, ಏಕೆಂದರೆ, ಮದ್ಯದ ಮೇಲಿನ ಅತಿ ತೆರಿಗೆಯ ದರಗಳು ತೆರಿಗೆ ತಪ್ಪಿಸುವ ಪ್ರಕರಣಗಳು ಹೆಚ್ಚಲು ಕಾರಣವಾಗಿವೆ ಎಂಬುದು ನಮ್ಮ ಅನುಭವಕ್ಕೆ ಬಂದಿರತಕ್ಕಂಥ ವಿಚಾರ. ಪ್ರಸ್ತುತ ಮದ್ಯದ ಮೇಲಿನ ಒಟ್ಟಾರೆ ಶೇಕಡ 200 ಅಷ್ಟು ತಲುಪಿದೆ. 200 percent taxation ಯಾರು ಸಲೀಸಾಗಿ ಕೊಡುತ್ತಾರೆ? ಆದುದರಿಂದ ಈ incidence ನಮ್ಮಲ್ಲಿ ಬಹಳ ಹೆಚ್ಚಾಗಿದೆ ನಾನು ಇದನ್ನು ಕಡಿಮೆ ಮಾಡಲಿಕ್ಕೆ ತೀರ್ಮಾನ ಮಾಡಿದ್ದೇನೆ. ಇದು ತೆರಿಗೆಗಳ್ಳತನದಲ್ಲಿ ಇದೇ main incentive for tax evasion, Excise duty evasion ಏನೆಂದರೆ, 200 ಪರ್ಸೆಂಟ್ ಹಾಕತಕ್ಕಂಥದ್ದು. ರಾಷ್ಟ್ರ ಮಟ್ಟದಲ್ಲಿ successive Finance Ministers ಈ ತೆರಿಗೆ incidence ಕಡಿಮೆ ಮಾಡುವುದರ ಮೂಲಕ compliance ಅನ್ನು ಜಾಸ್ತಿ ಮಾಡಿ ಅದರ ಮೂಲಕ ಆದಾಯಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಿದ್ದಾರೆ. ಅದೇ ಪ್ರಯತ್ನವನ್ನು ನಾನು ಮಾಡಲಿಕ್ಕೆ ಉದ್ದೇಶಿಸಿದ್ದೇನೆ. ಈಗಾಗಲೇ ಪಾನೀಯ ನಿಗಮಗಳು, ಆಂಧ್ರ, ತಮಿಳುನಾಡು, ಕೇರಳ, ಇತ್ಯಾದಿ ರಾಜ್ಯಗಳಲ್ಲಿವೆ. ಅವುಗಳಿಗೆ ನಾವೂ ಕೂಡ ಮುಂದೆ, ಯಾವಾಗ ಇದನ್ನು ನೋಟಿಫೈ ಮಾಡುತ್ತೇವೆ ಅವತ್ತಿನಿಂದ ಇದು ಜಾರಿಗೆ ಬರುತ್ತದೆ. ಈ ಎಲ್ಲಾ ಕ್ರಮಗಳನ್ನು ನಾವು ತೆಗದುಕೊಳ್ಳಬೇಕು, ಮತ್ತು ಅಗತ್ಯವಾಗಬಹುದಾದ ಹೆಚ್ಚುವರಿ ಕ್ರಮಗಳನ್ನು ನಾವು ಅಳವಡಿಸಿಕೊಳ್ಳಬೇಕಾಗುತ್ತದೆ. ಅಬಕಾರಿ ಬಾಬ್ತು ಆದಾಯ ನಮ್ಮ ಆರ್ಥಿಕ ನಿರ್ವಹಣೆಗೆ ಬಹಳ ಪೂರಕವಾಗಿದೆ. ನಾನು ಯಾವ ನಕ್ಷತ್ರದಲ್ಲಿ ಆ ವಾಕ್ಯವನ್ನು ಓದಿದೆನೋ, ಏನೆಂದರೆ "ಕರ ಸಮಾಧಾನ" 1948 ರಿಂದ, ಡ್ರೈವರ್‌ಗಳು ಹಾಗೂ ಅಡಿಗೆ ಮಾಡುವವರ ಹೆಸರಿನಲ್ಲಿ ಬಾಬುಗಳನ್ನು ನಿಲ್ಲಿಸಿಬಿಟ್ಟು, ಪಾಪ ;ಅವರೆಲ್ಲರೂ ಮೇಲೆ ಹೊರಟು ಹೋದರು, ಆದರೆ ನಾವು ಮಾತ್ರ ಅದಕ್ಕೆ ಆನ್ಸರಬಲ್ ಆಗಿದ್ದೇವೆ. 48ರಲ್ಲಿ ಕೆ.ಚಂಗಲರಾಯರೆಡ್ಡಿಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು, ಆನಂತರ ಹನುಮಂತಯ್ಯನವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು, ಆವತ್ತಿನ ಅಕೌಂಟ್ ಇದು. ಅದಕ್ಕೆ ನಾವು ಒನ್‌ಟೈಮ್‌ಸೆಟ್ಲಮೆಂಟ್ ಮಾಡಲಿ ಎಂದು, ಇದಕ್ಕೆ ವಾರೆಂಟ್, ಜಪ್ತಿ, ಏನೂ ಮಾಡುವುದಕ್ಕೆ ಬರುವುದಿಲ್ಲ, ಏಕೆಂದರೆ, ಅಡಿಗೆಯವರ ಹತ್ತಿರ ಸೌಟು ಸಿಗುತ್ತದೆ ಡ್ರೈವರ್ ಹತ್ತಿರ ಸ್ಟೇರಿಂಗ್ ಸಿಗುತ್ತದೆ ಅಷ್ಟೆ ಇನ್ನೇನೂ ಇಲ್ಲ. ಅವರ ಹತ್ತಿರ, ಫಿರ್ಯಾದಿ ಇಲ್ಲ ಏನೂ ಇಲ್ಲ ಅವರು ಬದುಕಿದ್ದಾರೋ ಇಲ್ಲವೋ ಅದು ಗೊತ್ತಿಲ್ಲ. ಅಂಥದ್ದರಲ್ಲಿ ನಾನು ಕರಸಮಾಧಾನ ಎಂದರೆ ಅದನ್ನೇ ನೀವು campaign point ಮಾಡಿಕೊಂಡಿರಿ, ಕರಸಮಾಧಾನ ಮಾಡಿದಿರಿ, ಅಧಿಕಾರಿ ದೊರೆಗಳ ಜೊತೆಯಲ್ಲಿ ನೀವು ಶಾಮೀಲು ಆಗಿದ್ದೀರಿ, ಅವರನ್ನು ನೀವು ಓಲೈಸುತ್ತೀರಿ, ಅಂದಿರಿ ಒಂದು ಕಾಸು ನಮಗೆ ಬಂದಿಲ್ಲ, ನಾವು ಒಂದು ಕಾಸು ಬಿಟ್ಟಿಲ್ಲ, ಮುಂದೆ ಬರತಕ್ಕಂಥ ಸರಕಾರಗಳಿಗೆ ಇದನ್ನು ಬಿಟ್ಟು ನಾವು ಹೋಗುತ್ತೇವೆ. ಈ 1948ರ ಅಕೌಂಟ್ ಏನಿದೆ, ಕರಸಮಾಧಾನ ಆಗಲಿಲ್ಲ, ರಿಯಾಯಿತಿ ಕೊಡಲಿಲ್ಲ, ಆದರೆ ನೀವು ಟೀಕೆ ಮಾಡುವುದನ್ನು ಬಿಡಲಿಲ್ಲ, ಆದ್ದರಿಂದ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ, ಇದನ್ನು ಮುಂದಕ್ಕೆ ಬಳುವಳಿಯನ್ನಾಗಿ ಬಿಡೋಣ ಎಂದು ಭಾವಿಸಿದ್ದೇನೆ. ನೀವು ಬಂದಾಗ ವಸೂಲಿ ಮಾಡಿಕೊಳ್ಳಿ ಹೇಗೆ ವಸೂಲಿ ಮಾಡುತ್ತೀರಿ? ನೀವಾಗಿ ಬಂದರೆ? ಮಾನ್ಯ ಹೆಗ್ಡೆಯವರೇ, ನನ್ನ ನಿಮ್ಮ ಒಪ್ಪಿಗೆಯಿಂದ ಇವೆಲ್ಲಾ ನಡೆಯುತ್ತವೆಯೇ? ಪ್ರತಿಯೊಂದು ಚುನಾವಣೆಯೂ ಕೂಡ ಒಂದು context ನಲ್ಲಿ ನಡೆಯುತ್ತವೆ, ಮುಂದಿನ ಚುನಾವಣೆಯು ಅಷ್ಟೇ ಒಂದು contextನಲ್ಲಿ ಮುಂದಿನ ಸೆಪ್ಟೆಂಬರ್‌ನಲ್ಲಿ ನಡೆಯುತ್ತದೆ, ಚುನಾವಣಾ

ಬಜೆಟ್ ಎಂದು ನೀವು ಟೀಕೆ ಮಾಡಿದಿರಿ, ಚುನಾವಣೆಯನ್ನು ಗಮನದಲ್ಲಿಡದೆ ಯಾವ ಸರ್ಕಾರ ಬಜೆಟ್ ಮಂಡಿಸಲಿಕ್ಕೆ ಆಗುತ್ತೆ? ಚುನಾವಣಾ ಬಜೆಟ್, ಚುನಾವಣಾ ಬಜೆಟ್, ಎಂದು ನೀವು ಹೇಳಿದಿರಿ. It is an open secret. correct. ಸಾರ್ವಜನಿಕವಾಗಿ ಬಹಿರಂಗವಾಗಿರತಕ್ಕಂಥ ಸತ್ಯ. ಎರಡೂವರೆ ಲಕ್ಷ ಮನೆಗಳನ್ನು ಕಟ್ಟತಕ್ಕಂಥದ್ದು open secret ರಸ್ತೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುವುದು visible secret, ಕಣ್ಣಿಗೆ ಕಾಣಿಸುವ ಸಿಕ್ರೇಟ್. ಮನೆಗಳನ್ನು ಕಟ್ಟಿಸತಕ್ಕಂಥದ್ದು ಕಣ್ಣಿಗೆ ಕಾಣುವ ಸಿಕ್ರೇಟ್. ದೇವರಾಜು ಅರಸುರವರ ಭವನ ನೀವು ಏಕೆ ಮಾಡಿದಿರಿ? ದುಡ್ಡು ಎಲ್ಲಿದೆ? ಅಂಬೇಡ್ಕರ್ ಭವನ ಕಟ್ಟಿ ನೀವು ಯಾರನ್ನು ಓಲೈಸುತ್ತೀರಿ ಎಂದು ನೀವು ಕೇಳುತ್ತೀರಿ. ನಮ್ಮ ಹೃದಯಗಳಿಗೆ ಅತಿ ಹತ್ತಿರವಾಗಿರತಕ್ಕಂಥ ಹೆಸರುಗಳು, ಕಾಂಗ್ರೆಸ್ ಪಾರ್ಟಿಗೆ, ಅಂಬೇಡ್ಕರ್‌ರವರ ಹೆಸರು, ದೇವರಾಜು ಅರಸು ರವರ ಹೆಸರು, ನಮಗೆ ಹತ್ತಿರವಾಗಿದೆ. ಎಲ್ಲೊ ಪಾಪ ;ಒಂದು ಅಥವಾ ಒಂದೂವರೆ ವರ್ಷಗಳ ಕಾಲ ನಿಮ್ಮ ಜೊತೆಯಲ್ಲಿ ಅವರು ಕುಳಿತಿದ್ದರು. ಇಂದಿರಾಗಾಂಧಿಯವರು ಹಾಗೂ ರಾಜೀವಗಾಂಧಿಯವರು ಅದು ನಮ್ಮ ಸ್ವತ್ತು. ಎಲ್ಲೋ ಅಪ್ಪಿತಪ್ಪಿ ದೇವರಾಜ್ ಅರಸು ರವರು ನಿಮ್ಮ ಕೈಗೆ ಒಂದು ಅಥವಾ ಒಂದೂವರೆ ವರ್ಷ ಸಿಕ್ಕಿದರು, ಅದಕ್ಕೆ ನೀವು ದೇವರಾಜ್ ಅರಸುರವರನ್ನೇ ಬಂಡವಾಳನ್ನಾವಾಗಿ ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ. ಯಾರು ದೇವರಾಜ್ ಅರಸು ಎನ್ನತಕ್ಕಂಥ ವ್ಯಕ್ತಿತ್ವವನ್ನು ಸೃಷ್ಠಿ ಮಾಡಿತೋ ಆ ಪಕ್ಷವನ್ನೇ ಮರೆತು ಹೈಜಾಕ್ ಮಾಡಿ, ಬೈಪಾಸ್ ಮಾಡಿ, ದೇವರಾಜ್ ಅರಸು ರವರ ಹೆಸರನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಮಾಡಿದಿರಿ? ದೇವರಾಜು ಅರಸುರವರು ನಮ್ಮ ಕಾಂಗ್ರೆಸ್ ಪಕ್ಷದ ಸ್ವತ್ತು..

8.00 ಪಿ.ಎಂ

ಗ್ರೋವರ್ ಕಮೀಷನ್‌ನ್ನು ನೀವು ಯಾರು ಮೇಲೆ ಮಾಡಿದಿರಿ? ನೀವು ಮಾನ್ಯ ದೇವರಾಜ ಅರಸುರವರ ಹೆಸರನ್ನು ಪ್ರಸ್ತಾಪ ಮಾಡಿ ಟೀಕೆ ಮಾಡಿದ್ದರಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಬೇಕಾಯಿತು. ಇಲ್ಲದಿದ್ದರೆ ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಗ್ರೋವರ್ ಕಮೀಷನ್‌ನ್ನು ನಾವೇ ಮಾಡಿದ್ದು. ಮಾನ್ಯ ದೇವರಾಜ ಅರಸುರವರ ಕ್ಯಾಬಿನೆಟ್ ನಲ್ಲಿ ಬಂಡಾಯ ಎದ್ದು ತಾವು ಹೊರಕ್ಕೆ ಹೋಗಿರತಕ್ಕಂಥದ್ದು ನಮಗೆ ಗೊತ್ತು.

ಶ್ರೀ ಎಸ್.ಎಂ.ಕೃಷ್ಣ:- ನಾನು ಹೊರಕ್ಕೆ ಹೋಗಿ ಕೊನೆಯ ದಿವಸಗಳಲ್ಲಿ ಅವರನ್ನು ವಾಪಸ್ಸು ತರುವುದಕ್ಕೆ ಪ್ರಯತ್ನ ಕೂಡ ಮಾಡಿದ್ದೇನೆ. ಇದು ನಿಮಗೆ ಗೊತ್ತಿಲ್ಲ. ಏಕೆಂದರೆ, ನಿಮಗೆ ಮಾನ್ಯ ದೇವರಾಜ ಅರಸುರವರು ಗೊತ್ತಿಲ್ಲ. ಆದರೆ, ನನಗೆ ಮಾನ್ಯ ದೇವರಾಜ ಅರಸುರವರ ಪರಿಚಯ ಚೆನ್ನಾಗಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ದೇವರಾಜ ಅರಸುರವರ ಅಕಾಲಿಕ ಸಾವಿಗೆ ಕಾಂಗ್ರೆಸ್ ಪಾರ್ಟಿಯೇ ಕಾರಣ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ:- ಎಲ್ಲರ ಸಾವಿಗೆ ಕಾಂಗ್ರೆಸ್ ಪಕ್ಷವೇ ಕಾರಣ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ದೇವರಾಜ ಅರಸುರವರ ಕ್ಯಾಬಿನೆಟ್‌ನಿಂದ ತಾವು ಬಂಡಾಯ ಎದ್ದು ಹೊರಕ್ಕೆ ಹೋಗಿ ಸೈಕಲ್ ಯಾತ್ರೆಯನ್ನು ಮಾಡಿದ್ದೀರಿ. ಈ ಎಲ್ಲಾ ಚರಿತ್ರೆಯನ್ನು ಮರೆಯುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ:- ಸೈಕಲ್ ಯಾತ್ರೆ ಅಲ್ಲ, ಉಪವಾಸ ಮಾಡಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಕಾಂಗ್ರೆಸ್ ಪಕ್ಷದ ಹೆಸರನ್ನು ತಾವು ಹೇಳಿದ್ದಕ್ಕೆ ನಾನು ಹೇಳಿದೆಯಷ್ಟೆ.

ಶ್ರೀ ಎಸ್.ಎಂ.ಕೃಷ್ಣ:- ನಾನು ಇನ್ನೂ ಯೀಲ್ಡ್ ಆಗಿಲ್ಲ. ನಾನು ಮಾತನಾಡಿದ ನಂತರ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ತಾವು ಒಂದು ನಿಮಿಷ ಯೀಲ್ಡ್ ಆಗಬೇಕು. ತಾವು ಡಾ|| ಅಂಬೇಡ್ಕರ್ ಸ್ಟಾಚ್ಯು ಬಗ್ಗೆ ಹೇಳಿದ್ದೀರಿ. ನಾನು ಬಜೆಟ್ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಪಾರ್ಟಿ ಹೆಸರನ್ನು ಪ್ರಸ್ತಾಪ ಮಾಡಿಲ್ಲ. ಆದರೆ, ತಾವು ಕಾಂಗ್ರೆಸ್ ಪಕ್ಷದ ಹೆಸರನ್ನು ಪ್ರಸ್ತಾಪ ಮಾಡಿದ್ದೀರಿ. ಈ ಸಂದರ್ಭದಲ್ಲಿ ಮಾನ್ಯ ರಾಜೀವ್ ಗಾಂಧಿಯವರ ಬಗ್ಗೆ ಮಾನ್ಯ ದೇಶಪಾಂಡೆಯವರು ಶಿಫಾರಸ್ಸು ಮಾಡಿದರು. ಮಾನ್ಯ ರಾಜೀವ್ ಗಾಂಧಿಯವರ ಬಗ್ಗೆ ಇವತ್ತಿನದಿವಸ ನಮಗೆಲ್ಲಾ ಗೌರವ ಇದೆ. ಆದರೆ ಇದು ಬೇರೆ ವಿಚಾರ. ಮಾನ್ಯ ರಾಜೀವ್ ಗಾಂಧಿಯವರು ಅಲ್ಲಿದ್ದಾಗ ಇವರೆಲ್ಲರೂ ಎಲ್ಲಿದ್ದರು ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಡಾ|| ಅಂಬೇಡ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿ ಕೊಟ್ಟು, ಪಾರ್ಲಿಮೆಂಟ್ ಭವನದಲ್ಲಿ ಅಂಬೇಡ್ಕರ್ ಸ್ಟಾಚ್ಯುವನ್ನು ಯಾರು ನಿಲ್ಲಿಸಿದರು ಎನ್ನತಕ್ಕಂಥದ್ದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾವು ಚಿಕ್ಕವರಾಗಿದ್ದು, ವಿದ್ಯಾರ್ಥಿಗಳಾಗಿದ್ದಂಥ ಸಂದರ್ಭದಲ್ಲಿ ಚಳುವಳಿ ಮಾಡಿದೆವು. ಆಗ ರಿಪಬ್ಲಿಕ್ ಪಾರ್ಟಿಯವರು ಹಾಗೂ ಬೇರೆ ಪಾರ್ಟಿಯವರು ಮಾಡಿದಾಗ ಮಾನ್ಯ ವೈ.ಬಿ. ಚವಾಣ್‌ರವರು ಮತ್ತು ಮಾನ್ಯ ಆರ್.ಎಸ್. ಗವಾಯಿರವರು ಸೇರಿಕೊಂಡು ಡಾ|| ಅಂಬೇಡ್ಕರ್‌ರವರ ಪ್ರತಿಮೆಯನ್ನು ಅಲ್ಲಿ ಸ್ಥಾಪನೆ ಮಾಡಿದರು. ಒಳಗೆ ಇರತಕ್ಕಂಥ ಚಿತ್ರದ ಬಗ್ಗೆ ನಾನು ಹೇಳುತ್ತಿಲ್ಲ. ತಾವು ಇದನ್ನು ವಿಚಾರ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ:- ಸೆಂಟ್ರಲ್ ಹಾಲ್‌ನಲ್ಲಿ ಡಾ|| ಅಂಬೇಡ್ಕರ್‌ರವರ ಫೋಟೋವನ್ನು ಯಾರು ಹಾಕಿದರೋ, ಆ ಪುಣ್ಯಾತ್ಮನಿಗೆ ಧನ್ಯವಾದಗಳನ್ನು ಮತ್ತು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಹಾಗೆಯೇ, ಭಾರತ ರತ್ನ ಕೊಟ್ಟಿರತಕ್ಕಂಥದ್ದೂ ಕೂಡ ಬಹಳ ಸಂತೋಷ. ಇದು ನಮ್ಮೆಲ್ಲರಿಗೂ ಸಮಾಧಾನವಾಗಿದೆ. ಆದರೆ, ಡಾ|| ಅಂಬೇಡ್ಕರ್‌ರವರು ನಮ್ಮ ಪಕ್ಷದಲ್ಲಿರಲಿಲ್ಲ. ಆದರೂ ಕೂಡ, ನಮಗೆ ಪ್ರಿಯವಾದಂಥ, ಪೂಜನೀಯವಾದಂಥ ಒಂದು ತತ್ವವನ್ನು ಪ್ರತಿಬಿಂಬಿಸಿದ್ದಾರೆ. ಹಾಗೆಯೇ, consolidation of Backward Classes ಇದರ ಹರಿಕಾರರು ಸನ್ಮಾನ್ಯ ದೇವರಾಜ ಅರಸುರವರು. ಹಾವನೂರು ಕಮಿಷನ್ ಮಾಡಿದಾಗ ನಾನು ಆ ಸಂದರ್ಭದಲ್ಲಿ ಸರ್ಕಾರದಲ್ಲಿದ್ದೆ. ಹಾವನೂರುರವರು ಕಾಂಗ್ರೆಸ್ ಪಕ್ಷದ ಬಗ್ಗೆ ಎಂತಹ ಸದಭಿಪ್ರಾಯಗಳನ್ನು ವ್ಯಕ್ತಪಡಿಸಿರತಕ್ಕಂಥದು ನಮ್ಮೆಲ್ಲರಿಗೂ ಗೊತ್ತಿದೆ. ಆದ್ದರಿಂದ, ಮಾನ್ಯ ದೇವರಾಜ ಅರಸುರವರ ಹೆಸರು ಬಹಳ ಬಿಲೇಟೆಟ್ ಆಗಿ ನಾನು ಅಲ್ಪಸ್ವಲ್ಪ ಉಪಯೋಗ ಮಾಡುತ್ತಿದ್ದೇವೆ. 20 ಅಂಶಗಳ ಕಾರ್ಯಕ್ರಮಗಳನ್ನು ಈ ರಾಜ್ಯದಲ್ಲಿ ಜಾರಿಗೆ ತರುವಲ್ಲಿ ಮಾನ್ಯ ದೇವರಾಜ ಅರಸುರವರು ಮಾಡಿರತಕ್ಕಂಥ ವಿಶೇಷ ಪ್ರಯತ್ನಗಳನ್ನು ಈ ಸಭೆ ಗಮನಿಸಬೇಕಾಗಿದೆ. ಹಾಗೆಯೇ ಈ ಸಭೆ ಸ್ಮರಿಸಬೇಕಾಗುತ್ತದೆ ಮತ್ತು ಪ್ರಣಾಮಗಳನ್ನು ಅರ್ಪಿಸಬೇಕಾಗಿರತಕ್ಕಂಥ ಅಗತ್ಯ ಕೂಡ

ಇದೆ. ಆದ್ದರಿಂದಲೇ ಮಾನ್ಯ ದೇವರಾಜಅರಸುರವರ ಸ್ಟಡಿಸರ್ಕಲ್ಸ್ ಜಾಸ್ತಿ ಆಗಬೇಕು ಹಾಗೂ ಚಿಂತನೆ ಜಾಸ್ತಿ ಮಾಡಬೇಕು ಎನ್ನತಕ್ಕಂಥದ್ದನ್ನು ನಾವು ಮನಸ್ಸಿಲ್ಲಿಟ್ಟುಕೊಂಡಿದ್ದು ಕೆಲವು ಪ್ರಯತ್ನಗಳನ್ನು ಮಾಡಿದ್ದೇವೆ. ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಆವರ್ತ ನಿಧಿ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಆದ್ದರಿಂದ, ಅವರಿಗೆ ನನ್ನ ಧನ್ಯವಾದಗಳನರ್ಪಿಸುತ್ತೇನೆ. ಏಕೆಂದರೆ, ಸತತವಾಗಿ ಅನೇಕ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಆದರೆ, ತಮ್ಮ ಥ್ರಸ್ಟ್ ಅಥವಾ ಫೋಕಸ್‌ನ್ನು ಯಾರೂ ಮಾಡಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಈ ದಿವಸ ಮಾಡಿದಂಥ ಭಾಷಣವನ್ನು ನಾನು ಕೇಳಿದ್ದೇನೆ. ಇವತ್ತಿನದಿವಸ 200 ಕೋಟಿ ರೂಪಾಯಿಗೆ ಆವರ್ತ ನಿಧಿಯನ್ನು ಹೆಚ್ಚಿಸಬೇಕೆಂದು ಮತ್ತು 500 ಕೋಟಿ ರೂಪಾಯಿಗಳವರೆಗೆ ವಹಿವಾಟನ್ನು ತೆಗೆದುಕೊಂಡು ಹೋಗುವುದಕ್ಕೆ ನನಗೆ ಶಕ್ತಿ ಬೇಕೆಂದು ನಮೂದಿಸಿದ್ದೇನೆ. ಈಗ ಎಷ್ಟು ವಹಿವಾಟು ನಡೆದಿದೆ ಎಂದು ತಾವು ಪರ್ಟಿಸೆಂಟ್ ಆಗಿ ಕೇಳಿದ್ದೀರಿ. ಕಳೆದ ವರ್ಷ 177 ಕೋಟಿ ರೂ.ಗಳಷ್ಟು ವಹಿವಾಟು ಆವರ್ತ ನಿಧಿ ಚೌಕಟ್ಟಿನಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಲೂಗಡ್ಡೆ ಮತ್ತು ಉಳ್ಳಾಗಡ್ಡೆ, ಥೂರ್‌ದಾಲ್, ಮೆಕ್ಕೆಜೋಳ, ರಾಗಿ, ಕೊಬ್ಬರಿ ಮತ್ತು ಅಡಿಕೆ. ಆದರೆ, ವಿಳ್ಯೆದಲೆಯೊಂದನ್ನು ಇದರಲ್ಲಿ ಬಿಟ್ಟಿದ್ದೇವೆ. ಉಳಿದವೆಲ್ಲವೂ ಕೂಡ ಆವರ್ತ ನಿಧಿ ಚೌಕಟ್ಟಿನೊಳಗೆ ಬಂದಿವೆ. ಮತ್ತೆ ಏನಾದರೂ ಇದರಲ್ಲಿ ಸೇರಿಸಬೇಕೆಂದು ಇದ್ದರೆ, ನಾವು ಸೇರಿಸುವುದಕ್ಕೆ ಸಿದ್ದರಿದ್ದೇವೆ. ರೈತರಿಗೆ ಈ ಸರ್ಕಾರ ಏನೂ ಮಾಡಿಲ್ಲವೆಂದು ಹೇಳುತ್ತೀರಿ. ಈ ಆವರ್ತ ನಿಧಿ ಇಲ್ಲದಿದ್ದರೆ ಇವತ್ತಿನದಿವಸ ಬೆಲೆಗಳು ಯಾವರೀತಿ ಇರುತ್ತಿತ್ತು ಎನ್ನತಕ್ಕಂಥದ್ದನ್ನು ಚಿಂತನೆ ಮಾಡಬೇಕಾಗುತ್ತದೆ. ಸಪೋರ್ಟ್ ಪ್ರೈಜ್ ಮೆಕಾನಿಜಂ ಎನ್ನತಕ್ಕಂಥ ಮಂತ್ರವನ್ನು ಜಾರಿಗೆ ತಂದಿದ್ದರಿಂದ ರೈತರಿಗೆ ಒಂದು ಫಲ ಸಿಕ್ಕಿದೆ. ಆದರೆ ಬಹಳ ದೊಡ್ಡ ಫಲ ಸಿಕ್ಕಿದೆ ಎಂದು ನಾನು ಹೇಳುವುದಿಲ್ಲ. ಒಂದು ಸಮಾಧಾನಕರವಾದ ರೀತಿಯಲ್ಲಿರಬಹುದು. ಹಾಗೆಯೇ ಮಿನಿಮಮ್ ಪ್ರೈಜ್ ಸಪೋರ್ಟಿನ ಉದ್ದೇಶ ಕೇವಲ ಸಮಾಧಾನ ತಂದು ಕೊಡತಕ್ಕಂಥದ್ದು ಅಲ್ಲ. ಮಾರ್ಕೆಟ್ ಫೋರ್ಸ್ ಕಂಟಿನ್ಯೂಯಸ್ ಆಗಿ ಆ್ಯಕ್ಷನ್‌ನಲ್ಲಿರುತ್ತದೆ. ಹಾಗೆಯೇ ಡಿಮಾಂಡ್ ಸಪ್ಲೈ ಇರುತ್ತದೆ. ಡಿಮಾಂಡ್ ಸಪ್ಲೈ ಮತ್ತು ಮತ್ತು ಮಾರ್ಕೆಟ್ ಪ್ರೈಜ್‌ನ್ನು ನಾವು ಗಮನದಲ್ಲಿಟ್ಟುಕೊಂಡು ಸಪೋರ್ಟ್ ಪ್ರೈಜ್ ಮೆಕಾನಿಜಂನಲ್ಲಿ 127 ಕೋಟಿ ರೂಪಾಯಿಗಳ ವಹಿವಾಟು ನಡೆಸಿದ್ದೇವೆ. ಈ ಸಂದರ್ಭದಲ್ಲಿ ರಾಜ್ಯದ ರೈತಾಪಿ ಜನಗಳಿಗೆ ಆಶ್ವಾಸನೆ ಕೊಡುವುದೇನೆಂದರೆ, ಸಪೋರ್ಟ್ ಪ್ರೈಜ್ ಮೆಕಾನಿಜಂನಿಂದ ರೈತಾಪಿ ಜನಗಳಿಗೆ ಮತ್ತು ಕೃಷಿಕಾರರಿಗೆ ಆಗಿರತಕ್ಕಂಥ ಅನುಕೂಲತೆಗಳನ್ನು ಗಮನಿಸಿ ಈ ಒಂದು ವ್ಯವಸ್ಥೆಯನ್ನು ಹೆಚ್ಚಿಗೆ ಸದೃಢವಾಗಿ ಮಾಡುವುದಕ್ಕೆ ನಮ್ಮ ಪ್ರಯತ್ನಗಳನ್ನು ಮುಂದುವರಿಯುತ್ತದೆ ಎನ್ನತಕ್ಕಂಥದ್ದನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಜೆಟ್ ಮೇಲೆ ಚರ್ಚೆ ಬೆಳಿಗ್ಗೆಯಿಂದ ನಿರಂತರವಾಗಿ ನಡೆಯುತ್ತಿದೆ. ಹಾಗೆಯೇ ಕಳೆದ ನಾಲ್ಕು ದಿವಸಗಳಿಂದಲೂ ಕೂಡ ನಡೆಯುತ್ತಿದೆ. ನಮ್ಮ ರಾಜ್ಯದ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅನೇಕ ವಿಚಾರಗಳನ್ನು ಸ್ಥೂಲವಾಗಿ ಎಲ್ಲಾ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಹಾಗೆಯೇ ವಿದ್ಯುತ್ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ವಿದ್ಯುತ್ ಪರಿಸ್ಥಿತಿ ಇವತ್ತಿನದಿವಸ ಎಷ್ಟು ಗಂಭೀರವಾಗಿದೆ ಎನ್ನತಕ್ಕಂಥದ್ದನ್ನು ಈ ಸದನದಲ್ಲಿರತಕ್ಕಂಥ ಎಲ್ಲಾ ಸದಸ್ಯರಿಗೂ ಕೂಡ ಅರ್ಥವಾಗಿರತಕ್ಕಂಥ ವಿಚಾರವಾಗಿದೆ. ಹಿಂದೆ ಇದ್ದಂಥ ಸರ್ಕಾರ ಈ ಒಂದು ಕ್ಷೇತ್ರದಲ್ಲಿ ಮಾಡಿರತಕ್ಕಂಥ ಸುಧಾರಣೆಗಳನ್ನು ನಾವೂ ಕೂಡ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಇದರಲ್ಲಿ ಬೆಂಗಳೂರನ್ನು ಇಂಥವರಿಗೆ

ಗುತ್ತಿಗೆಗೆ ಕೊಡಿ ಎನ್ನುವುದಾಗಲಿ ಅಥವಾ ಬೆಳಗಾಂ ವಿಭಾಗವನ್ನು ಯಾರೂ ತೆಗೆದುಕೊಳ್ಳಬಾರದು ಎನ್ನತಕ್ಕಂಥ ನಿರ್ಬಂಧವನ್ನು ನಾವು ಹಾಕುವುದಿಲ್ಲ. ನಾವು ಪಾರದರ್ಶಕ ಆ್ಯಕ್ಟನ್ನು ಜಾರಿಗೆ ತಂದ ಮೇಲೆ ಈ ಒಂದು ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಇವತ್ತಿನದಿವಸ ಕೆಪಿಟಿಸಿಎಲ್‌ನವರು ಮಾಡತಕ್ಕಂಥ ಎಲ್ಲಾ ಖರೀದಿ ಹಾಗೂ ತೆಗೆದುಕೊಳ್ಳತಕ್ಕಂಥ ಎಲ್ಲಾ ನಿರ್ಧಾರಗಳೂ ಕೂಡ ಪಾರದರ್ಶಕವಾಗಿರುತ್ತದೆ. ಹಾಗೆಯೇ, ಎಲ್ಲಾ ಕೆಲಸಗಳನ್ನು ಟೆಂಡರ್ ಮೂಲಕವೇ ವಿಲೇವಾರಿ ಮಾಡುತ್ತಿದ್ದಾರೆ. ಟ್ರಾನ್ಸ್‌ಮಿಷನ್ ಡಿಸ್ಟ್ರಿಬ್ಯೂಷನ್ ಲಾಸ್‌ನ್ನು 30 ಪರ್ಸೆಂಟ್‌ಗೆ ಇಳಿಸಿ ಅಥವಾ ಕಡಿಮೆ ಮಾಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಬಂದಿರತಕ್ಕಂಥ ಎಲ್ಲಾ ಸರ್ಕಾರಗಳೂ ಕೂಡ ಟ್ರಾನ್ಸ್‌ಮಿಷನ್ ಲಾಸಸ್‌ನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಲೇ ಬಂದಿವೆ. ಹಾಗೆಯೇ, ಈ ಸರ್ಕಾರ ಕೂಡ ಇದಕ್ಕೆ ಹೊರತೇನೂ ಆಗಿಲ್ಲ. ಆಕ್ಸಿಲರೇಟೆಡ್ ಪವರ್ ಡೆವಲಪ್‌ಮೆಂಟ್ ಚೌಕಟ್ಟು ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಂಡಿತು ಎನ್ನತಕ್ಕಂಥದ್ದನ್ನು ನಾವೆಲ್ಲರೂ ಗಮನಿಸಬೇಕಾದ ಅಂಶ. ಕೇಂದ್ರ ಸರ್ಕಾರ ಈ ಒಂದು ಯೋಜನೆಯನ್ನು ಜಾರಿಗೆ ಮಾಡಿದೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ನಾವು ಇವತ್ತಿನದಿವಸ ಮಾಜಿ ಇಂಧನ ಸಚಿವರಾದಂಥ ಮಾನ್ಯ ಸುರೇಶ್‌ಬಾಬುರವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಅವರು ಒಂದೂವರೆ ವರ್ಷಗಳ ಹಿಂದೆ ಮೊಟ್ಟಮೊದಲಬಾರಿಗೆ ಮಂಡ್ಯಕ್ಕೆ ಬಂದು ಈ ಒಂದು ಆಕ್ಸಿಲರೇಟೆಡ್ ಪವರ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನ್ನು ಚಾಲನೆ ಮಾಡಿದರು. ಅದನ್ನು ನಾವು ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಹೊಸ ವಿದ್ಯುತ್‌ನ್ನು ಉತ್ಪಾದನೆಯನ್ನು ಮಾಡುವುದು ಒಂದು ಭಾಗವಾದರೆ, ಇನ್ನೊಂದು ಭಾಗ ನಮ್ಮ ಈ ವಿತರಣೆಯ ವ್ಯವಸ್ಥೆಯಲ್ಲಿ ಸುಧಾರಣೆಯು ಗಣನೀಯವಾಗಿ ಕಂಡುಬರದೇ ಹೋದರೆ ನಾವು ಏನೇ ಸುಧಾರಣೆಗಳನ್ನು ಮಾಡಿದರೂ ಕೂಡ ಅದು ಯಶಸ್ಸಿನತ್ತ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣವಾಗಿ ಮಾನ್ಯ ಸದಸ್ಯರುಗಳು ಏನು ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೇ ನಾನು ಮೌಲ್ಯಾಧಾರಿತವಾದಂತಹ ಸಲಹೆಗಳೆಂದು ನಾನು ಸೂಕ್ಷ್ಮವಾಗಿ ಪ್ರಸ್ತಾಪವನ್ನು ಮಾಡಿದೆ. ಅವುಗಳೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡಿರುತ್ತೇವೆ. ಅವುಗಳನ್ನು ಮತ್ತು ಲೋಪದೋಷಗಳು ಏನಿವೆ, ತಾವು ಏನು ಟೀಕೆಗಳನ್ನು ಮಾಡಿದ್ದೀರಿ ಅದನ್ನೂ ಸಹ ನಾನು ಗಮನದಲ್ಲಿಟ್ಟುಕೊಂಡಿರುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಅಧ್ಯಕ್ಷರೆ, ಕಬ್ಬಿನ ಬಗ್ಗೆ ಪರ್ಚೆಸ್ ಟ್ಯಾಕ್ಸ್ ಇನ್‌ಸೆಂಟೀವ್ ಬಗ್ಗೆ ಮಹಾರಾಷ್ಟ್ರದವರು ಮಾಡಿರುವ ಬಗ್ಗೆ ನಾವು ಕೇಳಿದ್ದೆವು. ಅದರ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ:- ಕಬ್ಬಿನ ಬಗ್ಗೆ ಹೇಳುವುದಾದರೆ ಅತ್ಯಂತ ಕ್ಲಿಷ್ಟದಾಯಕವಾದ ಪರಿಸ್ಥಿತಿಯಲ್ಲಿ ನಮ್ಮ ಸಕ್ಕರೆ ಕಾರ್ಖಾನೆಗಳು ಸಿಕ್ಕಿವೆ. ಇದು ಕೇವಲ ರಾಜ್ಯಸರ್ಕಾರದ ಮೇಲೆ ಬಿದ್ದಿರತಕ್ಕಂತಹ ಹೊಣೆಗಾರಿಕೆ ಎಂದು ನಾನು ಭಾವನೆ ಮಾಡುವುದಿಲ್ಲ. ಕೇಂದ್ರ ಸರ್ಕಾರದವರು ಎನ್.ಸಿ.ಡಿ.ಸಿ.ಯವರು ಮತ್ತಿತರರು ಇದಕ್ಕೆ ತಮ್ಮ ಪೂರಕ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಮಹಾರಾಷ್ಟ್ರದವರು ಮಾಡಿದೆಲ್ಲವನ್ನೂ ನೀವು ಮಾಡಿ ಎಂದು ಹೇಳಿದರೆ ಕಠಿಣ ಸಾಧ್ಯವಾದಂತಹ ಮಾತಾಗಿದೆ. ಶ್ರೀ ಉಮೇಶ್‌ಕತ್ತಿಯುವರು ಎಕ್ಸ್‌ಪೋರ್ಟ್ ಇನ್‌ಸೆಂಟಿವ್ ಬಗ್ಗೆ ಭರವಸೆಯನ್ನಿಟ್ಟಿರುವುದು ನನಗೆ ಗೊತ್ತು. ಇವತ್ತು ಅವೆಲ್ಲವನ್ನೂ ಕೊಡಿ ಎಂದು ಕೇಳುತ್ತಿದ್ದಾರೆ,

ಅದಕ್ಕಾಗಿ ಅಗಾಧವಾದಂತಹ ಸಂಪನ್ಮೂಲಗಳು ಬೇಕಾಗುತ್ತದೆ. ನಿಮ್ಮ ಡಿಫಿಸಿಟ್‌ನ್ನು ಕಂಟ್ರೋಲ್‌ನಲ್ಲಿಟ್ಟುಕೊಳ್ಳಿ ಎಂದು ಒಂದು ಕಡೆ ತಾವು ಹೇಳುತ್ತೀರಿ. ಆ ಮಾತುಗಳನ್ನು ತಾವು ಹೇಳಲಿಲ್ಲ ನಿಮ್ಮ ನಾಯಕರುಗಳು ಹೇಳಿದರು. ಇನ್ನೊಂದು ಕಡೆ ಈ ಕಬ್ಬಿನ ಬೆಳೆಗಾರರಿಗೆ ಮತ್ತು ಕಬ್ಬಿನ ಕಾರ್ಖಾನೆಗಳಿಗೆ ಈ ವಿಶೇಷ ಎಕ್ಸ್‌ಪೋರ್ಟ್ ಇನ್‌ಸೆಂಟೀವ್ ಕೊಡಿ ಎಂದು ಹೇಳುತ್ತೀರಿ. ಈ ಕಬ್ಬಿನ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾನ್ಯ ಅಗ್ರಿಕಲ್ಚರ್ ಮಿನಿಸ್ಟರ್‌ರವರ ನೇತೃತ್ವದಲ್ಲಿ ನಾನು ಮಾಡಿದ್ದೇನೆ. ಅವರು ಈ ತಮ್ಮ ಸಲಹೆಗಳನ್ನು ಖಂಡಿತವಾಗಿಯೂ ಗಮನದಲ್ಲಿಟ್ಟುಕೊಂಡಿರುತ್ತಾರೆ. ಯೋಗ್ಯವಾದಂತಹ ಮತ್ತು ಪರಿಣಾಮಕಾರಿಯಾದಂತಹ ಸಲಹೆಗಳನ್ನು ಆ ಕ್ಯಾಬಿನೆಟ್ ಸಬ್‌ಕಮಿಟಿಯವರು ಕೊಟ್ಟಾಗ ಅದನ್ನು ನಾವು ಜಾರಿಗೆ ತರುತ್ತೇವೆ. ಮಾನ್ಯ ವಿರೋಧಪಕ್ಷದ ನಾಯಕರು ಸಿಇಟಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಅತ್ಯಂತ ಕಠಿಣವಾದಂತಹ ವಿಚಾರವಾಗಿದೆ, ಸುಪ್ರಿಂಕೋರ್ಟಿನವರು ಮಾಡಿದಂತಹ ತೀರ್ಮಾನದ ಚೌಕಟ್ಟಿನಲ್ಲಿ ನಾವು ನಮ್ಮ ಕಾರ್ಯನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಆದ್ದರಿಂದಲೇ ನಾವು ಒಂದು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡಿದ್ದೇವೆ. ಅವರು ತಮ್ಮ ಗಂಭೀರವಾದಂತಹ ದೃಷ್ಟಿಯನ್ನು ಈ ಒಂದು ಜ್ವಲಂತ ಸಮಸ್ಯೆಯ ಬಗ್ಗೆ ಇಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಸುಲಭ ಸಾಧ್ಯವಾದಂತಹ ಸಲ್ಯೂಷನ್ಸ್‌ಗಳು ಇಲ್ಲ. ಸಾಫ್ಟ್ ಅಪ್‌ಷನ್ಸ್‌ಗಳು ನಮ್ಮ ಮುಂದೆ ಇಲ್ಲ. ನಮ್ಮ ಹತ್ತಿರ ಇರತಕ್ಕಂಥದ್ದು ಹಾರ್ಡ್‌ಅಪ್‌ಷನ್ಸ್‌ಆ ಹಾರ್ಡ್ ಆಪಷನ್ಸ್‌ನಲ್ಲಿ ನಾವು ಯಾವುದನ್ನು ಮಾಡಬಹುದು ಸರ್ಕಾರ ಸಿದ್ದವಾದಂತಹ ಕಾಲದಲ್ಲಿ ನಮ್ಮ ದೃಷ್ಟಿ ಕ್ಲಾರಿಟಿ ಬಂದ ಮೇಲೆ ಇವತ್ತು ಹಾನೆಸ್ಟ್ಲಿ ಒಂದು ಕನ್‌ಫೀಷನ್ ಮಾಡಿಕೊಳ್ಳಬಹುದಾದರೆ ನಮ್ಮಲ್ಲಿ ಕ್ಲಾರಿಟಿ ಇಲ್ಲ. ಆ ಕ್ಲಾರಾಟಿಗೋಸ್ಕರ ನಾವು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದ್ದರಿಂದ ಯಾವಾಗ ನಮ್ಮಲ್ಲಿ ಆ ಪ್ರಯತ್ನಗಳು ಮತ್ತು ಕ್ಲಾರಿಟಿ ಮತ್ತು ಅದರ ಬಗ್ಗೆ ಒಂದು ನಿರ್ಣಯವನ್ನು ಪ್ರಕಟಿಸಬೇಕೋ ಆ ಸಮಿತಿಯು ನಿರ್ಣಯವನ್ನು ಪ್ರಕಟಿಸುತ್ತದೆಂದು ತಮ್ಮಲ್ಲಿ ಹೇಳಿಕೊಂಡು ಮಾನ್ಯ ಅಧ್ಯಕ್ಷರೆ, ಇಷ್ಟು ಸಮಾಧಾನವಾಗಿ ಮಾನ್ಯ ಸದಸ್ಯರುಗಳು ಈ ಉತ್ತರವನ್ನು ಮತ್ತು ಈ ಲೇಖಾನುದಾನದ ಒಪ್ಪಿಗೆಯ ಸಮಯದಲ್ಲಿ ನಾನು ಹೇಳತಕ್ಕಂತಹ ನಾಲ್ಕುಮಾತುಗಳನ್ನು ಹೇಳಿದ್ದೇನೆ 4 ತಿಂಗಳಿಗೆ ಅಷ್ಟೆ. ಫಾರ್ಮಲ್ ರೆಸ್ಯೂಲ್ಯೂಷನ್ ಅಥವಾ ಫಾರ್ಮಲ್ ಮೋಷನ್ಸ್ ತಮ್ಮ ಅಪ್ಪಣೆ ಪಡೆದು ನಾನು ಮೂವ್ ಮಾಡುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು:- ಮಾನ್ಯ ಸುಬ್ಬಾರೆಡ್ಡಿಯವರೆ, ನಿಮ್ಮ ನಾಯಕರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಕೆಲವೊಂದು ಮಹತ್ವದ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸ್ಪಷ್ಟನೆ ಬರಲಿಲ್ಲ. ಈ ಹಿಂಗಾರು ಬೆಳೆ ಬೆಳೆಯುವರ ಬೆಳೆ ವಿಮೆ ಬಗ್ಗೆ ಹಣ ಬಿಡುಗಡೆಯಾಗಿಲ್ಲ. ಏಕೆಂದರೆ ಇದು ಡೈರಕ್ಟಲಿ ಇದು ನಮ್ಮ ರೈತರಿಗೆ ಎಫೆಕ್ಟ್ ಆಗುವಂತದ್ದು. ಅವರು ಬೆಳೆ ಸಾಲವನ್ನು ಏನು ಮಾಡಿದ್ದಾರೆ ಅದರ ಮೇಲೆ ಬಡ್ಡಿ ಮನ್ನಾ ಮಾಡಬೇಕೆಂದು ನಮ್ಮ ಡಿಮ್ಯಾಂಡ್ ಆಗಿತ್ತು. ಅದರ ಬಗ್ಗೆಯೂ ಸರ್ಕಾರದಿಂದ ಉತ್ತರ ಬಂದಿಲ್ಲ, ಈ ಆನ್‌ಲೈನ್ ಲಾಟರಿಯ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದು ಗೊತ್ತಾಗಿದೆ, ಬಹುಶಃ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು

ಉತ್ತರವನ್ನು ಕೊಡಲಿಲ್ಲ. ಇನ್ನೊಂದು ಬಹು ಮುಖ್ಯವಾಗಿರುವಂತಹದ್ದು ಈ ಸ್ಟಾಂಪ್ ಪೇಪರ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪವನ್ನು ಮಾಡಿದರು. ಇದರ ಬಗ್ಗೆ ನಮ್ಮ ಕಂದಾಯ ಸಚಿವರು ಒಂದು ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ಗಳು ಏನಿವೆ, ಅದನ್ನು ನಾಶ ಮಾಡುತ್ತೇವೆಂದು ಹೇಳಿದ್ದಾರೆ. ನಾಸಿಕ್ ಪ್ರಿಂಟಿಂಗ್ ಪ್ರೆಸ್‌ನಿಂದ ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ಹಣ ಕೊಟ್ಟು ನೀವು ಅದನ್ನು ತೆಗೆದುಕೊಂಡು ಸ್ಟಾಕ್ ಇಟ್ಟುಕೊಂಡಿದ್ದೀರಿ. ಈ ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ಇಟ್ಟುಕೊಂಡಿದ್ದೀರಿ. ಈ ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ನಾಶ ಮಾಡುತ್ತಾರೆಂದು ಹೇಳಿದ್ದಾರೆ ಅದರ ಬಗ್ಗೆ ಸ್ಪಷ್ಟನೆಯಾಗಲಿ, ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಬರಲಿ.

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ತಾವು ಕೇಳಲಿಲ್ಲ, Fake stamp Papers will become. Waste Stamp Papers. It has no value.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿರುವಂತಹ ಪ್ರಶ್ನೆ ಸರ್ಕಾರದಲ್ಲಿ ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್ ಸ್ಟಾಕ್ ಇದೆ. ನೀವು ಅದನ್ನು ನಾಶ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಅದನ್ನು ಯಾರಿಗಾದರೂ ಮಾರಿಸಿಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ನೋ, ನೋ, ಅದನ್ನು ಹೇಳುತ್ತಿಲ್ಲ, ಈ ರೀತಿಯಾಗಿ ಚರ್ಚೆ ಮಾಡುವುದಲ್ಲ. ಈಸಿಯಾಗಿ ತೆಗೆದುಕೊಳ್ಳಬೇಡಿ ತಾವು ರೆಸ್ಪಾನ್ಸಿಬಲ್ ಪರ್ಸನ್. ನೀವು ಒಂದು ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ನಾಶ ಮಾಡುತ್ತೀರೆಂದು ಹೇಳಿದಿರಿ. ಅದು ನಿಮ್ಮ ಕಡೆ ಇರುವಂತಹದ್ದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅದನ್ನು ಇಟ್ಟುಕೊಂಡು ಏನು ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ನಿಮ್ಮ ಕಡೆ ಇರುವಂತಹದ್ದು ನಕಲಿ ಸ್ಟಾಂಪ್ ಪೇಪರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅದನ್ನು ಪುನಃ ಇಟ್ಟುಕೊಂಡು ನಕಲಿ ಸ್ಟಾಂಪ್ ಪೇಪರ್ ಎಂದು ತೋರಿಸಿಕೊಳ್ಳಬೇಕಾ?

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಕಡೆ ಇರುವುದು ಹಾಗಾದರೆ ನಕಲಿ ಸ್ಟಾಂಪ್ ಪೇಪರಾ? ನಾನು ಹೇಳುವುದನ್ನು ತಾವು ಅರ್ಥಮಾಡಿಕೊಳ್ಳುತ್ತಿಲ್ಲ ಏಕೆ? ಇವತ್ತು ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್ ಸರ್ಕಾರದ ಕಡೆ ಇದೆ. ಅದನ್ನು ನಾಶ ಮಾಡುತ್ತೇನೆಂದರೆ, ಇವತ್ತು ನೀವು ಅಷ್ಟು ಹಣವನ್ನು ಕೊಟ್ಟು ಆ ಸ್ಟಾಂಪ್ ಪೇಪರ್‌ನ್ನು ಪರ್ಚೆಸ್ ಮಾಡಿರುವುದು, ಅದನ್ನು ನಾಶ ಮಾಡುತ್ತೀರೆಂದರೆ ಏನರ್ಥ? ಸಾವಿರ ಕೋಟಿ ರೂಪಾಯಿಗಳನ್ನು ಕಳೆದುಕೊಳ್ಳುವುದಕ್ಕೆ ತಯಾರಾಗಿದ್ದೀರಿ? ಅದರ ಬಗ್ಗೆ ತಾವು ಹೇಳುತ್ತಿಲ್ಲವಲ್ಲಾ?

ಶ್ರೀ ಬಿ. ಸೋಮಶೇಖರ್(ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರಕ್ಕೆ ಸ್ಪಷ್ಟವಾದಂತಹ ಒಂದು ನಿಲುವು ಇಲ್ಲ. ಅದರ ಬಗ್ಗೆ ಮುಖ್ಯಮಂತ್ರಿ ಹೇಳಿದರೂ ಅದರಲ್ಲಿ ಯಾವುದೂ ಸ್ಪಷ್ಟತೆ ಕಾಣುತ್ತಿಲ್ಲ. ಅದನ್ನು ಯಾವ ರೀತಿಯಾಗಿ ನಿರ್ವಹಣೆ ಮಾಡುತ್ತಾರೆ, ಹೊಸ ವಿಧಾನ ಅಂದರೆ ನಮ್ಮ ಸರ್ಕಾರ ಮಾಡಿದ್ದಕ್ಕಿಂತ ಬೇರೆ ವಿಧಾನ ಏನು ಮಾಡುತ್ತೀರಿ

ಎಂಬುದನ್ನು ಹೇಳಲಿಲ್ಲ. ಈಗ ತಾವು ಸಾವಿರ ಕೋಟಿ ರೂಪಾಯಿಗಳ ಸ್ಟಾಂಪ್ ಪೇಪರ್‌ನ್ನು ನಾಶ ಮಾಡುತ್ತೇವೆಂದು ಹೇಳಿದಿರಿ, ನಾವು ಸ್ಟಾಂಪ್ ಪೇಪರ್‌ನ್ನು ಕೇಂದ್ರದಿಂದ ಇಂಡೆಂಟ್ ಮಾಡಿಕೊಳ್ಳುತ್ತೇವೆ. ಅದಕ್ಕೆ ಸರ್ಕಾರ ಹಣವನ್ನು ಕಟ್ಟಿಕೊಡಬೇಕು. ಈಗ ತಾವು ಏನು ನಾಶ ಮಾಡುತ್ತೇವೆಂದು ಹೇಳಿದ್ದಿರಿ ಅದು ಜೆನ್ಯೆನ್ ಸ್ಟಾಂಪ್ ಪೇಪರ್ಸ್? ಅದು ಫೇಕ್ ಸ್ಟಾಂಪ್ ಪೇಪರ್ಸ್ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಜೆನ್ಯೆನ್ ಸ್ಟಾಂಪ್ ಪೇಪರ್ ಆದರೆ ಅದನ್ನು ಹೇಗೆ ಸುಡುವುದಕ್ಕೆ ಆಗುತ್ತದೆ? ಅದನ್ನು ತಾವು ಖರ್ಚು ಮಾಡಲೇಬೇಕಾಗುತ್ತದೆ. ಇನ್ನು ಮುಂದೆ ಆ ರೀತಿಯಾಗಿ ಇಂಡೆಂಟ್ ಮಾಡಿಕೊಳ್ಳಬಾರದು. ನೀವು ಫೇಕ್ ಸ್ಟಾಂಪ್ ಪೇಪರ್‌ನ್ನು ತಂದು ನಾಶ ಮಾಡುತ್ತಿದ್ದೀರೆಂದು ಆಗುತ್ತದೆ. ಸರ್ಕಾರ ಇಂಡೆಂಟ್ ಮಾಡಿಕೊಳ್ಳದೆ ಫೇಕ್ ಸ್ಟಾಂಪ್ ಪೇಪರ್ ತಂದು ನಾಶ ಮಾಡುತ್ತಿದ್ದೀರಿ ಎಂದಾಗುತ್ತದೆ? ಇಲ್ಲ ಅಂದರೆ ದುಡ್ಡು ಕೊಟ್ಟು ಇಂಡೆಂಟ್ ಮಾಡಿಕೊಂಡಿದ್ದೀರಲ್ಲಾ, ಅದನ್ನು ಖರ್ಚು ಮಾಡಿ ಇನ್ನು ಮುಂದೆ ಇಂಡೆಂಟ್ ಮಾಡಿಕೊಳ್ಳುವುದನ್ನು ತಪ್ಪಿಸಬೇಕು. ಇಲ್ಲಿ ಬಹಳ ಪ್ರಮುಖವಾದಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಎಂದು ತಿಳಿದುಕೊಂಡಿದ್ದೆ, ನಾವು ವಿರೋಧಪಕ್ಷದವರು ಬಹಳ ಖಾರವಾಗಿ ನಿಮ್ಮ ಸರ್ಕಾರವನ್ನು ಟೀಕೆ ಮಾಡಿದ್ದೇವೆ ಸಾರ್ವಜನಿಕವಾಗಿ ಬಹಳ ಟೀಕೆಗಳು ಬಂದಿವೆ. ಈ ಆನ್‌ಲೈನ್ ಲಾಟರಿಯಿಂದ ಈ ಸಮಾಜದಲ್ಲಿ ನೈತಿಕ ಅನಬದ್ಧವಾಗುತ್ತಿದೆ, ಇದರಿಂದಾಗಿ ನಮ್ಮ ಯುವಕರುಗಳು ಹಾಳಾಗುತ್ತಿದ್ದಾರೆ. ಬಡವರು ಎಲ್ಲರೂ ಬೀದಿ ಪಾಲಾಗುತಿದ್ದಾರೆ, ಅದರ ಬಗ್ಗೆ ತಾವು ನಿಷೇಧ ಮಾಡಿ ಎಂದು ಇಷ್ಟೆಲ್ಲಾ ಹೇಳಿದ್ದೇವೆ. ಅದರ ಬಗ್ಗೆ ಅಷ್ಟೊಂದು ಟೀಕೆಯನ್ನೂ ಸಹ ಮಾಡಿದ್ದೇವೆ. ತಾವು ಅದರ ಬಗ್ಗೆ ಒಂದು ಚೂರೂ ಕೂಡ ಪ್ರಸ್ತಾಪ ಮಾಡಲಿಲ್ಲ. ಅದರ ಬಗ್ಗೆಯೂ ಕೂಡ ತಾವು ಸ್ಪಷ್ಟವಾಗಿ ಹೇಳಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಈ ಶಾಸಕರ ನಿಧಿಯ ಬಗ್ಗೆಯೂ ಕೂಡ ಚಕಾರವನ್ನು ಎತ್ತಿಲ್ಲ, ಇದು ನಮ್ಮೊಬ್ಬರಿಗೆ ಅಲ್ಲ, ಇದು ಎಲ್ಲರಿಗೂ ಬೇಕಾದಂತಹ ವಿಚಾರವಾಗಿದೆ. ಅದರ ಬಗ್ಗೆಯೂ ಮುಖ್ಯಮಂತ್ರಿಗಳು ಏನು ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಎಲ್ಲರೂ ಇಂತಹ ಕೆಲಸವನ್ನು ಮಾಡಿಸಿಕೊಡುತ್ತೇವೆ, ಶಾಸಕರ ನಿಧಿಯಿಂದ ಈ ಎಲ್ಲಾ ಕೆಲಸಗಳನ್ನು ಮಾಡಿಸಿಕೊಡುತ್ತೇವೆಂದು ಇವತ್ತು ಹೇಳಿದ್ದಾರೆ. ಅದರ ಬಗ್ಗೆ ಮುಖ್ಯಮಂತ್ರಿಗಳು ಏನನ್ನೂ ಹೇಳಲಿಲ್ಲ. ಇವೆರಡು ವಿಚಾರದ ಬಗ್ಗೆ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಪ್ರಾದೇಶಿಕ ಅಸಮಾನತೆಯ ಬಗ್ಗೆ ಒಂದು ಸ್ಪೆಷಲ್ ಪ್ಯಾಕೇಜ್‌ನ್ನು ಕೊಡಿ ಎಂದು ಹೇಳಿದ್ದೇವೆ. ಅದರ ಬಗ್ಗೆಯೂ ಏನಿಲ್ಲ. ಇವತ್ತು ಭವಿಷ್ಯಕಾರರ ಮೇಲೆ, ಯೋಗಾಸನ ಕಲಿಸುವಂತಹ ಶಿಕ್ಷಕರುಗಳ ಮೇಲೆ ಟ್ಯಾಕ್ಸ್‌ನ್ನು ಹಾಕಿದ್ದಾರೆ. ಅದೊಂದಕ್ಕೆ ತಾವು ವಿನಾಯಿತಿಯನ್ನು ಮಾಡಬೇಕು. ವಿದ್ಯುತ್ ಬಿಲ್ಲನ್ನು ಏನು ತುಂಬುತ್ತೇವೆ. ಅದರ ಮೇಲೆ 5 ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಈಗಲೇ ಅದು ಸಾಕಾಗಿಹೋಗಿದೆ, ಈಗಾಗಲೇ ಅದರ ಬಗ್ಗೆ ಸಾಕಷ್ಟು ಶಾಸಕರುಗಳು ಮಾತನಾಡಿದ್ದಾರೆ. ಅದರ ಬಗ್ಗೆಯೂ ಕೂಡ ವಿನಾಯಿತಿಯನ್ನು ಮಾಡಲಿಲ್ಲ; ಅದನ್ನು ಕೂಡ ತೆಗೆದುಹಾಕಲಿಲ್ಲ. ಪ್ರದೇಶಾಭಿವೃದ್ಧಿ ಮಂಡಳಿಯ ವಿಚಾರವಾಗಿಯೂ ಕೂಡ ಮಾತನಾಡಲಿಲ್ಲ. ಹೈದರಾಬಾದ್ ಬಯಲುಸೀಮೆ, ಮಲೇನಾಡು ಈ ರೀತಿಯಾದ ಅಭಿವೃದ್ಧಿ ಮಂಡಳಿಯ ಬಗ್ಗೆ ಏನನ್ನೂ ಹೇಳಲಿಲ್ಲ. ಈಗ ಹಣವು ಕಡಿಮೆಯಾಗುತ್ತಿದೆ. ಅದರ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಲಿಲ್ಲ. ಶಾಸಕರ ನಿಧಿಯನ್ನು ಮುಂದೆ ಡೈವರ್ಷನ್ ಮಾಡುವುದಿಲ್ಲವೆಂದು ಅದರ ಬಗ್ಗೆಯೂ ಕೂಡ ಹೇಳಲಿಲ್ಲ. ಬಹಳ ಪ್ರಮುಖವಾಗಿ ಸಣ್ಣ

ಕೈಗಾರಿಕೆಗಳ ಬಗ್ಗೆ ಕೃಪಾ ಆರ್ಶೀವಾದಗಳು ಬರುತ್ತಿಲ್ಲ. ನಿಮ್ಮ ದಾರಿಯನ್ನು ನೀವು ನೋಡಿಕೊಳ್ಳಿ ಸಬ್ಸಿಡಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದಾದರೂ ಹೇಳಿಬಿಡಲಿ. ಸುಮ್ಮನೆ ಅವರಿಗೆ ಭರವಸೆಯನ್ನು ಕೊಡುವುದು, ಬಜೆಟ್‌ನಲ್ಲಿ ಏನೋ ಮಾಡುತ್ತೇವೆ, ಮುಂದಿನ ವರ್ಷ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಈ ನಾಲ್ಕೈದು ವಿಷಯಗಳ ಬಗ್ಗೆ ಸ್ಪಷ್ಟೀಕರಣವಾಗಬೇಕು ಈ ಬಡ್ಡಿ ಮನ್ನಾದ ಬಗ್ಗೆ, ಮತ್ತು ಬೆಳೆ ವಿಮೆಯ ಬಗ್ಗೆ ಸ್ಪಷ್ಟೀಕರಣವಾಗಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಮುಖ್ಯಮಂತ್ರಿಯವರೆ, ಈಗ ಒಂದೊಂದಾಗಿ ಕೊಡುತ್ತಾರೆಯೇ? ಆಮೇಲೆ ಕೊಡುತ್ತೀರಾ? ಮಾನ್ಯ ವಿರೋಧಪಕ್ಷದ ನಾಯಕರಿಗೆ ತಾವು ಉತ್ತರವನ್ನು ಕೊಟ್ಟುಬಿಡುತ್ತೀರಾ?

ಶ್ರೀ ಎಸ್.ಎಂ.ಕೃಷ್ಣ:- ಬಡ್ಡಿ ಮನ್ನಾ ಮಾಡುವಂತಹ ವಿಚಾರದಲ್ಲಿ ಹೇಳಬೇಕಾದೆಲ್ಲವನ್ನೂ ಗೌರ್ನಮೆಂಟ್ ಆರ್ಡರ್‌ನಲ್ಲಿ ಬರುತ್ತದೆ, ಅದರ ಬಗ್ಗೆ ಈಗಾಗಲೇ ಹೇಳಿದ್ದೇವೆ. ಅದಕ್ಕೆ ಸರ್ಕಾರ ಬದ್ಧವಾಗಿದೆ, ತಾವು ಕೇಂದ್ರಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ಅದೇನೆಂದರೆ, 20 ಪರ್ಸೆಂಟ್ ಏನು ಕೊಡುತ್ತೇವೆಂದು ಹೇಳುತ್ತಾರಲ್ಲಾ ಅದನ್ನು 50 ಪರ್ಸೆಂಟ್‌ಗೆ ಏರಿಸಬೇಕೆಂದು ಹೇಳಬೇಕು. ಈ ರೀತಿಯಾಗಿ ತಾವು ಮಾಡಿದರೆ ರಾಜ್ಯಸರ್ಕಾರಕ್ಕೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಸ್ಟಾಂಪ್ ಪೇಪರ್ ವಿಚಾರದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ, ಸ್ಟಾಂಪ್ ಪೇಪರ್ ವ್ಯಾಲ್ಯೂ ಏನು? ಯಾವಾಗ ನಾನು ಸ್ಟಾಂಪ್ ಪೇಪರ್‌ನ್ನು ರಿಜಿಸ್ಟ್ರೇಷನ್ ಮಾಡುತ್ತೇನೆ, ಆಗಲೇ ಅದಕ್ಕೆ ವ್ಯಾಲ್ಯೂ ಬರುವುದು. Yes. See there is correct interpretation by Sri C.Byregowda ಏನೆಂದರೆ, ಪೇಪರ್ ಪ್ಲಸ್ ಪ್ರಿಂಟಿಂಗ್ ಕಾಸ್ಟ್ ಮತ್ತು ಪೇಪರ್ ಕಾಸ್ಟ್ ಅಷ್ಟೇ ಅದರ ವ್ಯಾಲ್ಯೂ. ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕು, ನಾವು ಜನಗಳು ಕೊಂಡುಕೊಂಡು ಅದನ್ನು ಕನ್‌ವರ್ಟ್ ಮಾಡದೆ ಹೋದರೆ ಅದು ಓನ್ಲಿ ಪೇಪರ್ ಕಾಸ್ಟ್ ಪ್ಲಸ್ ಪ್ರಿಂಟಿಂಗ್ ಕಾಸ್ಟ್ ಆದುದರಿಂದ ನಾವು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ಹಾಗೆ ಈ ನಿರ್ಧಾರವನ್ನು ನಾವು ಜಾರಿಗೆ ತರುವ ಬಗ್ಗೆ ಸಂಬಂಧಪಟ್ಟ ವಿಶೇಷವಾದಂತಹ ಆಜ್ಞೆ ಮತ್ತು ನೋಟಿಫಿಕೇಷನ್ ಏನೇನು ಇದೆಯೋ ಅದೆಲ್ಲವನ್ನೂ ಕೂಡ ನಾವು ಮಾಡುತ್ತೇವೆ. ಮತ್ತು Interest Waiver of Crop Loans. Short term Co-operative Credit Crop Loans for Khariff, 2002. ಇನ್ನು ನೀವು ಎಲ್ಲಾ ಬೆಳೆಗಳಿಗೂ ಕೊಡಿ ಎಂದು ಹೇಳಿದರೆ ಅದಕ್ಕೆ ನಮ್ಮ ಸಂಪನ್ಮೂಲಗಳು ಇವತ್ತು ನನ್ನನ್ನು ಪರ್ಮಿಟ್ ಮಾಡುವುದಿಲ್ಲ. ಆದ್ದರಿಂದ ಕ್ಷಮಿಸಬೇಕು, ಆಮೇಲೆ ಬೋರ್ಡ್‌ಗಳ ವಿಚಾರಗಳನ್ನು ಹೇಳಲಿಲ್ಲ ಎಂದು ಹೇಳಿದಿರಿ.

ಶ್ರೀ ಜಗದೀಶ್ ಶೆಟ್ಟರ್:- ಈ ವರ್ಷ ಸಾಲ ವಸೂಲಾತಿಯೂ ಬಹಳ ಜೋರಾಗಿ ನಡೆಯುತ್ತಿದೆ. ರೈತರುಗಳು ಬಹಳ ತೊಂದರೆಯಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಂದ ನಾನು ನಿರೀಕ್ಷಣೆ ಮಾಡಿದ್ದಕ್ಕಿಂತ ಹೆಚ್ಚಿನ ಉತ್ತರ ಸಿಕ್ಕಿದೆ ಕಳೆದ ಮೂರೂವರೆ ವರ್ಷಗಳಲ್ಲಿ ಅವರು ಮುಖ್ಯಮಂತ್ರಿಗಳಾದ ಮೇಲೆ ಐದು ಬಾರಿ ರಾಜ್ಯಪಾಲರ ಭಾಷಣಕ್ಕೆ, ನಾಲ್ಕು ಬಾರಿ ಬಜೆಟ್ ಭಾಷಣಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರುಗಳು ಎತ್ತಿರತಕ್ಕಂತಹ ಅನೇಕ ಅಂಶಗಳಿಗೆ ನಮಗೆ ಇದರ ಬಗ್ಗೆ ಸಮಾಧಾನವಾಗಿಲ್ಲ. ಆದರೆ ಉತ್ತರಗಳನ್ನು ಕೊಟ್ಟಿದ್ದಾರೆ.

ಹಿಂದೆ ನಾನು ನೋಡುತ್ತೇನೆ ಎನ್ನತಕ್ಕಂತಹ ಉತ್ತರವನ್ನು ಕೊಟ್ಟು ಹೋಗುತ್ತಿದ್ದರು, ಈ ಸಾರಿ ಸ್ವಲ್ಪ ಸಮಾಧಾನದಿಂದ, ಕೇಳಿ ಸಭೆಯಲ್ಲಿ ಇಲ್ಲದಿದ್ದರೂ ನಾವುಗಳು ಮಾಡತಕ್ಕಂತಹ ಟೀಕೆಗಳನ್ನು ಅವರು ತಮ್ಮ ರೂಮಿನಲ್ಲಿ ಕುಳಿತುಕೊಂಡು ಕೇಳಿ ಅವುಗಳಿಗೆಲ್ಲಾ ಉತ್ತರಗಳನ್ನು ಕೊಟ್ಟಿದ್ದಾರೆ. ಶ್ರೀ ದೇವರಾಜ್ ಅರಸು ಮತ್ತು ಶ್ರೀ ಡಾ|| ಅಂಬೇಡ್ಕರ್ ಬಗ್ಗೆ ನಿಮ್ಮ ಪಾರ್ಟಿ ಒಂದು ರೀತಿಯಲ್ಲಿ ಇರತಕ್ಕಂತಹ ವಿಶ್ಲೇಷಣೆಯಾಗಿದ್ದು ಚರ್ಚೆಯಾಗಿರುವುದು ಒಂದು ರೀತಿಯಲ್ಲಿ ಸದನಕ್ಕೆ ಗೌರವ ಬರುತ್ತದೆ. ಆದರಿಂದಾಗಿ ನಾವೆಲ್ಲಿ ನಿಂತುಕೊಂಡಿದ್ದೇವೆ, ನೀವು ಎಲ್ಲಿ ನಿಂತುಕೊಂಡಿದ್ದೀರಿ ಅದರ ಬಗ್ಗೆ ನನಗೊಂದು ಸಮಾಧಾನವಾಗಿದೆ. ಈ ಸಂದರ್ಭದಲ್ಲಿ ನಾನು ಭಾಷಣ ಮಾಡಿರುವುದನ್ನು ಅರ್ಧ ಮಾತ್ರ ಅವರು ಕಹಿಯಾಗಿರುವುದನ್ನು ಕೇಳೀರಬೇಕು, ಅವರಿಗೆ ಸಿಹಿಯಾಗಿರುವುದನ್ನು ಕೇಳಿಸಿಕೊಂಡಂತೆ ಕಾಣಲಿಲ್ಲ. ನಾನು ಅನೇಕ ವಿಚಾರಗಳನ್ನು ಜವಾಬ್ದಾರಿ ಸ್ಥಾನದಲ್ಲಿದ್ದು ಇದುವರೆವಿಗೂ ಒಂದು ಪಕ್ಷದ ನಾಯಕನಾಗಿ ಕೆಲಸ ಮಾಡಿರುವಂತಹವನು ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಮಾಡತಕ್ಕಂತಹ ಅನೇಕ ವಿಚಾರಗಳನ್ನು ದಿಕ್ಕನ್ನು ಸರಿ ಎನ್ನತಕ್ಕದ್ದು, ನಾನು ಪ್ರಶಂಸೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಶಾಸಕಾಂಗ ಕಾರ್ಯಾಂಗದ ಜೊತೆಗೆ ನಮಗೆ ಪತ್ರಿಕಾ ರಂಗವೂ ಕೂಡ ಇದೆ. ನಾನು ವಿರೋಧಪಕ್ಷದಲ್ಲಿದ್ದುಕೊಂಡು ನಿಮಗೆ ಮಲ್ಲಿಗೆಹಾರವನ್ನು ತಂದು ಹಾಕುವುದಕ್ಕಾಗುವುದಿಲ್ಲ. ಆದ್ದರಿಂದ ನಮಗೆ ಅನಿಸಿರುವಂತಹ ವಿಚಾರವನ್ನು ನಾನು ಹೇಳಲೇಬೇಕಾಗುತ್ತದೆ. ನಾನು ಎರಡು-ಮೂರು ವಿಚಾರಗಳಿಗೆ ಸಂಬಂಧಪಟ್ಟಂತೆ ನಿಮ್ಮಿಂದ ಸ್ಪಷ್ಟನೆಯನ್ನು ಕೇಳುತ್ತೇನೆ. ತಾವು ಶ್ರೀ ದೇವರಾಜು ಅರಸುರವರ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದಿರೆಂದು ಹೇಳಿದ್ದೀರಲ್ಲಾ, ನಮ್ಮ ಕೈಯಲ್ಲಿ ಮಾಡುವುದಕ್ಕಾಗಲಿಲ್ಲ, ಅಟ್‌ಲಿಸ್ಟ್ ನೀವು ವಿಧಾನಸೌಧದ ಮುಂದೆ ಇರುವಂತಹ ದೇವರಾಜು ಅರಸುರವರ ಪ್ರತಿಮೆಯು ಮಾಜಿ ಶಾಸಕರಾದ ಶ್ರೀ ಕೆಂಚೇಗೌಡರದ್ದು ಇದ್ದಹಾಗೆ ಇದೆ. ಅದನ್ನು ಬದಲಾವಣೆ ಮಾಡುವುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಕಳೆದ ಮೂರುವರೆ ವರ್ಷದಿಂದ ನಾನು ಏನು ಅಂಕಿಅಂಶಗಳನ್ನು ಸೃಷ್ಟಿಮಾಡಿಕೊಂಡು ಹೇಳುತ್ತಿಲ್ಲ, ನಿಮ್ಮ ಕಮಿಟ್‌ಮೆಂಟ್ ನಿಮ್ಮ ಫೈನಾನ್ಸ್ ಸೆಕ್ರೆಟರಿಯವರನ್ನು ನೀವು ರಾತ್ರಿ ಕರೆದುಕೊಂಡು ಕೊಳ್ಳಿ ಕಳೆದ ಮೂರುವರೆ ವರ್ಷಗಳಿಂದ ಬ್ಯಾಕ್‌ವರ್ಡ್ ಕ್ಲಾಸ್ ಹುಡುಗರಿಗೆ ಸ್ಕಾಲರ್‌ಶಿಫ್ ಅಮೌಂಟ್ ಒಂದು ರೂಪಾಯಿಯೂ ಸಹ ಡಿಸ್‌ಪರ್ಸ್ ಆಗಿಲ್ಲ. ಈಗ ಆಗಲ್ಲ, ಹುಡುಗರೆಲ್ಲರೂ ಪರೀಕ್ಷೆಯನ್ನು ಮುಗಿಸಿಕೊಂಡು ಹೊರಟುಹೋಗಿರುತ್ತಾರೆ, ಜೂನ್ ತಿಂಗಳಲ್ಲಿ ಆದರೂ ಬಿಡುಗಡೆ ಮಾಡುವಂತಹ ಭರವಸೆಯನ್ನು ತಾವು ಕೊಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿದ್ದೇನೆ. ಇನ್ನು ಮೂರನೆಯದಾಗಿ ಹೇಳುವುದಾದರೆ, ಈ ಅಬ್ಕಾರಿ ಸಂಬಂಧಪಟ್ಟ ಹಾಗೆ ಅನೇಕ ವಿಚಾರಗಳನ್ನು ತಾವು ಮಾಡುತ್ತೀರಿ, ಇದರ ಬಗ್ಗೆ ನಾವು ಏನೂ ಮಾತನಾಡುವುದಕ್ಕಾಗುವುದಿಲ್ಲ, ಏಕೆಂದರೆ ನಮ್ಮ ಬಾಯಿಯು ಕಟ್ಟುತ್ತದೆ, ನಮಗೆ ಮಾತನಾಡುವುದಕ್ಕೆ ಸಮಯವೂ ಕೂಡ ಇಲ್ಲ. ಇನ್ನೂ ನಮಗೆ ಒಂದೂವರೆ ವರ್ಷಗಳಿವೆ ಅನಂತರ ಮಾತನಾಡೋಣ. ಈ 200 ಪರ್ಸೆಂಟ್ ಎಕ್ಸೈಸ್ ಟ್ಯಾಕ್ಸ್‌ನ್ನು ನಾನು ರಿಬೇಟ್ ಕೊಟ್ಟಿದ್ದೇನೆಂದು ಹೇಳಿದ್ದೀರಿ, ಅದು ಏನು ಎಂಬುದು ಸರಿಯಾಗಿ ನನಗೂ ಗೊತ್ತಾಗಲಿಲ್ಲ, ಪತ್ರಿಕಾಕರ್ತರಿಗೆ ನನಗೆ ಗೊತ್ತಾದಂತೆ ಕಾಣುತ್ತಿಲ್ಲ. ದಯವಿಟ್ಟು ಅದರ ಬಗ್ಗೆ ವಿವರಣೆಯನ್ನು ಕೊಡಿ. ಸಾಲ ಮನ್ನಾ ಮಾಡುವ ಬಗ್ಗೆ ವಿವರವಾಗಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಕೇಳಿದರು.

ತಾವು 30 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುತ್ತೇವೆಂದು ಹೇಳುತ್ತಲೇ ಇದ್ದೀರಿ. ಈಗ ನಿಮ್ಮ ಅಭಿಪ್ರಾಯದಲ್ಲಿ 185 ಕೋಟಿ ರೂಪಾಯಿಗಳು ಖರೀಫ್ 2002 ಏಪ್ರಿಲ್‌ನಿಂದ ಸೆಪ್ಟಂಬರ್‌ರವರೆವಿಗೆ ಆಗಿರತಕ್ಕಂತಹ 6 ತಿಂಗಳ ಖರೀಫ್ ಸೀಸನ್‌ನ ಬಡ್ಡಿ ಇದು. ಈ ಬಡ್ಡಿಗೆ ಸಂಬಂಧಪಟ್ಟಂತೆ 30 ಕೋಟಿ ರೂಪಾಯಿಗಳನ್ನು ಈ ಗಳಿಗೆಯವರೆವಿಗೂ ರಿಲೀಸ್ ಆಗಿಲ್ಲ. ದಯವಿಟ್ಟು ನಾಳೆ ಅದನ್ನು ತಾವು ರಿಲೀಸ್ ಮಾಡಿಸಬೇಕು. ಇಲ್ಲದೆಹೋದರೆ ನಬಾರ್ಡ್‌ನವರು ರೀ ಫೈನಾನ್ಸ್‌ನ್ನು ನಿಲ್ಲಿಸುತ್ತಾರೆ. ಈ ಮೂರು ವಿಚಾರಗಳ ಜೊತೆಗೆ ನಾನು ರಾಜ್ಯಕ್ಕೆ ಸಾರಿಗೆ ಸಚಿವನಾಗಿ, ನಾವು ಮಂತ್ರಿಗಳಾಗಿ ಅಲ್ಲಿ ಸುಖ ಅನುಭವಿಸುವಂತಹದ್ದು ಇದ್ದೇ ಇದೆ, ಈ ಸುಖ ಅನುಭವಿಸುವುದರ ಜೊತೆಗೆ ಅದರ ಹಿಂದೆಯೇ ನಾವು ಕೆಲಸವನ್ನೂ ಸಹ ಮಾಡಿರುತ್ತೇವೆ. ಮಂತ್ರಿಗಳಾಗಿದ್ದವರೆಲ್ಲರೂ ಕಬಳಿಸಿಕೊಂಡು ಹೋಗುತ್ತಾರೆಂಬ ದೃಷ್ಟಿಕೋನ ಯಾರಿಗೂ ಇರಬಾರದು. ನಾವೂ ಕೂಡ ಕೆಲಸವನ್ನು ಮಾಡಿದ್ದೇವೆ, ನಾನು ಸಾರಿಗೆ ಇಲಾಖೆಯಲ್ಲಿ ಕೆಲಸ ಮಾಡಿದ್ದು ಬಹಳ ಅಪ್ಯಾಯಮಾನವಾದಂತಹ ವಿಚಾರ, ನಾನು ನನ್ನ ಮಕ್ಕಳನ್ನು ಎಷ್ಟು ಪ್ರೀತಿಸುತ್ತೇನೋ ಅದಕ್ಕಿಂತಲೂ ಹೆಚ್ಚಾಗಿ ನಾನು ಸಾರಿಗೆ ಇಲಾಖೆಯನ್ನು ಪ್ರೀತಿಸುತ್ತೇನೆ. ಈ ಕಂಟ್ರಾಕ್ಟ್ ಕ್ಯಾರೇಜ್ ಆ್ಯಕ್ಟ್‌ನ ಬಗ್ಗೆ ದಯವಿಟ್ಟು ನಿಮಗೆ ಯಾರೋ ಮಿಸ್‌ಗೈಡ್ ಮಾಡಿದ್ದಾರೆ ಅದನ್ನು ತಾವು ರೀಕನ್ಸಿಡರ್ ಮಾಡಬೇಕು. ಇವತ್ತು ನಿಮ್ಮ ಜೊತೆಯಲ್ಲಿ ಯಾರು ಇವತ್ತು ಕೆಎಸ್‌ಆರ್‌ಟಿಸಿ ವರ್ಕರ್ಸ್ ಯೂನಿಯನ್ ಫೆಡರೇಷನ್ ಪ್ರೆಸಿಡೆಂಟ್ ಯಾರಿದ್ದಾರೆ ನೀವು ಕಾಂಗೆಸ್ ಪ್ರೆಸಿಡೆಂಟಾಗಿ ಓಟನ್ನು ಭಿಕ್ಷೆ ಕೇಳುವುದಕ್ಕೆ ಹೋದಾಗ ನಿಮಗೆ ಬಂದು ಅವರು ವೋಟನ್ನು ಕೊಡಬೇಕೆಂದು ಹೇಳಿದ್ದಾರೆ. ಆಟ್‌ಲಿಸ್ಟ್ ಅವರ ಅಭಿಪ್ರಾಯವನ್ನಾದರೂ ತಾವು ತೆಗೆದುಕೊಳ್ಳಬೇಕು ಮತ್ತು ಅದನ್ನು ತಾವು ಉಳಿಸಬೇಕು. ಈ ಕಂಟ್ರ್ಯಾಕ್ಟ್ ಕ್ಯಾರೇಜ್ ಆ್ಯಕ್ಟ್‌ನ ಬಗ್ಗೆ ಪುನರ್ ವಿಮರ್ಶೆ ಮಾಡುವ ಭರವಸೆಯನ್ನಾದರೂ ಕೊಡುವುದಕ್ಕೆ ಸಾಧ್ಯನಾ? ದಯವಿಟ್ಟು ತಾವು ಇದರ ಬಗ್ಗೆ ವಿಚಾರವನ್ನು ಮಾಡಬೇಕು. ಇದಕ್ಕಿಂತ ಜಾಸ್ತಿ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಸದಸ್ಯರಾದಂತಹ ಸಿಂಧ್ಯಾರವರು ರಾಜ್ಯ ಸರ್ಕಾರ ಈ ಮುಂಗಡಪತ್ರದಲ್ಲಿ ಘೋಷಣೆ ಮಾಡಿರತಕ್ಕಂತಹ ಕೆಲವು ವಿಚಾರಗಳನ್ನು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಅದನ್ನೂ ನಾನು ಕೇಳಿದ್ದೇನೆ, ಅವರು ಕೊಟ್ಟಂತಹ ಸ್ವಾಗತಕ್ಕೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ತಾವು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ, ಅದರಲ್ಲಿ ಮೊದಲನೆಯದು ತಮಗೆ ಪ್ರಿಯವಾದಂತಹದ್ದು ಈ ಸಾರಿಗೆ ಸುಧಾರಣೆಯನ್ನು ಮಾಡುವುದು. ಯಾರೋ ರಾಂಗ್ ಅಡ್ವೈಸ್‌ನ್ನು ಕೊಟ್ಟಿದ್ದಾರೆ ಇದಕ್ಕೆ ಸಾಕಾದಷ್ಟು ಇಂಟರ್‌ನಲ್ ಡಿಬೇಟ್ ಆಗಿದೆ. ಮತ್ತೆ 1975-76ನೇ ಇಸವಿಯಲ್ಲಿ ಈ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿದಾಗ ನಾನು ಮತ್ತು ಶ್ರೀ ಕೆ.ಹೆಚ್.ರಂಗನಾಥ್‌ರವರು ಶ್ರೀ ದೇವರಾಜ ಅರಸುರವರ ಜೊತೆಯಲ್ಲಿದ್ದೆವು. ಇದರ ಬಗ್ಗೆ ಉದಯರಂಗ ಬಸ್‌ನವರು ಎಷ್ಟು ವಿರೋಧವನ್ನು ಮಾಡಿದರು ಎಂಬುದು ನಮ್ಮಿಬ್ಬರಿಗೆ ಗೊತ್ತು. ಆದ್ದರಿಂದ ಇದರ ಬಗ್ಗೆ ಸಾಕಾದಷ್ಟು ಇಂಟರ್‌ನಲ್ ಎಕ್ಸರ್‌ಸೈಜ್ ಮಾಡಿ ನಾವು ಈ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಆ ನಿರ್ಧಾರವೂ ಸರಿಯೋ ತಪ್ಪೋ ಎನ್ನತಕ್ಕಂಥದ್ದು ಮುಂದೆ ಅದರ ಪರಿಣಾಮಗಳು ಹೇಗೇ ಫ್ಲೋ ಆಗುತ್ತವೆ, ಇವತ್ತೂ ಸಹ ನಾನು ಕೆಎಸ್‌ಆರ್‌ಟಿಸಿಯವರನ್ನು ಕೇಳಿದೆ, Healthy Competition between K.S.R.T.C

and others, Who will be the beneficiary? Not the Government. ಜನಗಳು ಶ್ರೀ ಸಾಮಾನ್ಯ; ಅವನಿಗೆ ಈ ಬೆನಿಫಿಟ್ಸ್ ಹರಿದುಹೋಗಬೇಕು, ಆ ದಿಸೆಯಲ್ಲಿ ನಾವು ಯೋಚನೆಯನ್ನು ಮಾಡುತ್ತಿದ್ದೇವೆ. ತಾವು ಸ್ಕಾಲರ್‌ಶಿಫ್‌ಗಳ ಬಗ್ಗೆ ಏನು ನಮೂದು ಮಾಡಿದ್ದೀರಿ, ಅದರಲ್ಲಿ ಕೆಲವು ಕೊರತೆಗಳು ನನ್ನ ಗಮನಕ್ಕೆ ಬಂದಿವೆ, ಅದರ ಬಗ್ಗೆ ಮಾನ್ಯ ಸಚಿವರು ನನ್ನ ಗಮನಕ್ಕೆ ತರುತ್ತಿದ್ದಾರೆ. ತಾವು ಹೇಳಿದಂತಹ ಮಾತು ಜೂನ್ ಒಳಗಡೆ ಈ ಹಣವನ್ನು ವಿಲೇವಾರಿ ಮಾಡುವುದಕ್ಕೆ ನಾವು ಪ್ರಯತ್ನಗಳನ್ನು ಮಾಡುತ್ತೇನೆಂಬ ಮಾತನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ತಾವು 33 ಕೋಟಿ ರೂಪಾಯಿ ಇಂಟರೆಸ್ಟ್ ಬಗ್ಗೆ ಹೇಳಿದ್ದೀರಿ, ನಾಳೆ ಆ ಹಣವನ್ನು ರಿಲೀಸ್ ಮಾಡುವ ಬಗ್ಗೆ ಸರ್ಕಾರಿ ಆದೇಶವಾಗುತ್ತದೆ. ಏಕೆಂದರೆ, ತಮಗೆ ಈ ರಾಜ್ಯವನ್ನು ನಿರ್ವಹಿಸಿ ಹೇಗೆ ಮಾರ್ಚ್ ತಿಂಗಳು ನಮ್ಮ ವರಮಾನಗಳು ಅದರ ದೃಷ್ಟಿಯಲ್ಲಿ ಹೇಗೆ ವಿಶೇಷವಾದಂತಹ ಗಮನವನ್ನು ಪಡೆಯುತ್ತದೆ. 31ನೇ ಮಧ್ಯರಾತ್ರಿಯವರೆವಿಗೂ ಕೂಡ ನಮ್ಮ ರಿಸೀಟ್ಸ್ ಬರುತ್ತಾ ಇರುತ್ತದೆ.

8.30 ಪಿಎಂ

ಎಷ್ಟೋ ಕ್ಷೇತ್ರಗಳಲ್ಲಿ ಅದು ಸ್ಟಾಂಪ್ಸ್ ಇರಬಹುದು, ಎಕ್ಸೈಸ್ ಇರಬಹುದು, ಕಮರ್ಶಿಯಲ್ ಟ್ಯಾಕ್ಸ್ ಇರಬಹುದು ಫೈನಲೈಸೇಶನ್ ಆಫ್ ರಿಸೀಪ್ಟ್ಸನ್ನು ಮಾಡುತ್ತಲೇ ಇರುತ್ತಾರೆ. ಆದ್ದರಿಂದ ಇದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ದೇವರಾಜ್ ಅರಸು ಅವರ ಪ್ರತಿಮೆಯನ್ನು ತಕ್ಷಣ ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಬದಲಾವಣೆ ಮಾಡಿ ಸೂಕ್ತವಾದಂಥ ಅವರ ಚಿತ್ರವನ್ನು ತೆಗೆದುಕೊಂಡು ಆ ಪ್ರತಿಮೆಯನ್ನು ತದ್ರೂಪವಾಗಿ ದೇವರಾಜ್ ಅರಸು ಅವರ ಮರುಸೃಷ್ಟಿಯನ್ನೇ ಮಾಡುವುದು ಬಹಳ ಕಷ್ಟವಾಗುತ್ತದೆ. ಆದರೆ ಅವರ ತದ್ರೂಪವನ್ನಾದರೂ ಹೋಲತಕ್ಕಂಥ ಒಂದು ಪ್ರತಿಮೆಯನ್ನು ಮಾಡಬೇಕು ಎನ್ನತಕ್ಕಂಥಾದ್ದರಲ್ಲಿ ನಮ್ಮ ಸಹಮತ ಇದೆ. ಅದನ್ನು ಆದಷ್ಟು ಬೇಗ ನಾವು ಮಾಡುತ್ತೇವೆ. ಈ ಎಲ್ಲಾ ಪ್ರತಿಮೆಗಳ ಬಗ್ಗೆ ಇದೇ ತರಹ ಟೀಕೆ ಇದೆ. ಕೀರ್ತಿಶೇಷರಾದಂಥ ನಿಜಲಿಂಗಪ್ಪನವರ ಪುತ್ಥಳಿಯನ್ನು ಮಾನ್ಯ ಉಪರಾಷ್ಟ್ರಪತಿಯವರು ಅನಾವರಣ ಮಾಡಿದ ದಿವಸ ಅವರ ಮನೆಯವರೇ ನನಗೆ ಹೇಳಿದರು ಏನೆಂದರೆ ಅದು ನಿಜಲಿಂಗಪ್ಪನವರ ತರಹ ಕಾಣುವುದಿಲ್ಲ ಎಂದು. ಹನುಮಂತಯ್ಯನವರ ಪುತ್ಥಳಿಯನ್ನು ಮಾಡಿದಾಗ ಹನುಮಂತಯ್ಯನವರ ಮನೆಯವರು ಇದು ಅವರ ತರಹ ಕಾಣಿಸುತ್ತಿಲ್ಲ ಎಂದು ಹೇಳಿದರು. ಈಗ ದೇವರಾಜ್ ಅರಸು ಅವರ ಪ್ರತಿಮೆ ಕೆಂಚೇಗೌಡರ ತರಹ ಕಾಣಿಸುತ್ತದೆ ಎಂದು ಹೇಳಿದರು. ಕೆಂಚೇಗೌಡರು ಅಂತ 1972ನೇ ಇಸವಿಯಲ್ಲಿ ನಮ್ಮ ಜತೆಯಲ್ಲಿ ಇಲ್ಲಿ ಸದಸ್ಯರಾಗಿದ್ದರು. ಅವರನ್ನು ಪಾಪ, ಇವತ್ತು ನೆನೆಸಿಕೊಳ್ಳಬೇಕು. ಚನ್ನಬಸಪ್ಪನವರ ಜತೆಗೆ ಸೇರಿಕೊಂಡು ಭೂಸುಧಾರಣೆ ನೀತಿಯನ್ನು ಹೇಗೆ ವಿರೋಧ ಮಾಡಿದರು ಎನ್ನತಕ್ಕಂಥಾದ್ದು ಮತ್ತೆ ನೆನಪು ನನಗೆ ಮರುಕಳಿಸುತ್ತದೆ. ಆದ್ದರಿಂದ 200 ಪರ್ಸೆಂಟ್ ರಿಬೇಟ್ ಬಗ್ಗೆ ಅದು ಸಿಕ್ವೇನ್ಸ್ ಹೇಗೆ ಬರುತ್ತದೆ ಎಂದರೆ, ಮಾನ್ಯ ಸದಸ್ಯರುಗಳು ಸರಿಯಾಗಿ ಕಿವಿಕೊಟ್ಟು ಕೇಳಲಿಲ್ಲ. ಆದ್ದರಿಂದ ಮತ್ತೊಮ್ಮೆ ಆ ಸೀಕ್ವೆನ್ಸ್‌ನ್ನು ಹೇಳುತ್ತೇನೆ. ಅಬಕಾರಿ ವಲಯದಲ್ಲಿ ತೆರಿಗೆ ತಪ್ಪಿಸುವುದನ್ನು ನಿವಾರಿಸಲು ತೆರಿಗೆ ದರಗಳನ್ನು ಇಳಿಸಲಾಗುವುದು. the Incidence of Taxation ಕಡಿಮೆ ಮಾಡಲಾಗುವುದು. ಏಕೆಂದರೆ- explanation is attempted. ಏಕೆಂದರೆ ಮದ್ಯದ ಮೇಲಿನ ಅತಿ ತೆರಿಗೆ ದರಗಳು ತೆರಿಗೆ ತಪ್ಪಿಸುವ ಪ್ರಕರಣಗಳನ್ನು ಹೆಚ್ಚಿಸಲು ಕಾರಣವಾಗಿವೆ. ಪ್ರಸ್ತುತ ಮದ್ಯದ ಮೇಲಿನ ಒಟ್ಟಾರೆ ತೆರಿಗೆ ಶೇಕಡಾ 200ರಷ್ಟು

ತಲುಪಿದೆ. ಅದು ತೆರಿಗೆಗಳ್ಳತನದಲ್ಲಿ ತೊಡಗಲು ಪ್ರೇರೇಪಕವಾಗುತ್ತದೆ. ಅದನ್ನು ನಾವು incentive for tax evasion, ಅಂತ ಹೇಳಿ ನಾನು ವಿಶ್ಲೇಷಣೆಯನ್ನು ಮಾಡಿದ್ದೆ. ಈ ಸಮಸ್ಯೆಯನ್ನು ಮೊದಲು ನಿವಾರಿಸಲು ನಾನು ಇಚ್ಛಿಪಡುತ್ತೇನೆ. ಆಮದು ಮದ್ಯ ಮತ್ತು ಭಾರತೀಯ ತಯಾರಿಕೆ ಮದ್ಯ (ಐ.ಎಂ.ಎಲ್)ದ ಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆಯೊಂದಿಗೆ 'ಪಾನೀಯ ನಿಗಮ' - ಬಿವರೇಜಸ್ ಕಾರ್ಪೊರೇಷನ್‌ನ್ನು ಸ್ಥಾಪಿಸಲು ನಿರ್ಧರಿಸಿದ್ದೇವೆ.

ಶ್ರೀ ಸಿ. ಭೈರೇಗೌಡ:- ನಾನು ಪ್ರಧಾನವಾಗಿ ಕೃಷಿಕರು ಉಪಯೋಗಿಸುವ....

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೆ, ಇದು ನಾಲ್ಕು ತಿಂಗಳಿಗೆ ಈ ಸಭೆಯು ನನಗೆ ಕೊಡುತ್ತಾ ಇರುವಂತಹ ಸೀಮಿತವಾದಂಥ ಒಂದು ಲೇಖಾನುದಾನ. ಆದ್ದರಿಂದ ನಾನು ಹೇಳಿದಂಥ ಪ್ರತಿಯೊಂದು ವಾಕ್ಯಕ್ಕೂ ನಾನು ಕ್ಲಾರಿಫಿಕೇಶನ್ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಭೈರೇಗೌಡ:- ಅಧ್ಯಕ್ಷರೇ....

ಅಧ್ಯಕ್ಷರು:- ನಿಮ್ಮ ಪಕ್ಷದ ನಾಯಕರು ಕೇಳಿದ್ದಾರೆ.

ಶ್ರೀ ಸಿ. ಭೈರೇಗೌಡ:- ರಸಗೊಬ್ಬರ, ಮೂಳೆಪುಡಿ, ರಾಸಾಯನಿಕಗಳು ಇವೆಲ್ಲದಕ್ಕೂ ಕೂಡ ಶೇಕಡಾ ನಾಲ್ಕರಷ್ಟು ತೆರಿಗೆ ಇದೆ. ಇದನ್ನು ವಾಪಸ್ಸು ತೆಗೆದುಕೊಳ್ಳಿ ಎನ್ನತಕ್ಕಂಥ ಒತ್ತಾಯವನ್ನು ನಾವು ಮಾಡಿದ್ದೇವೆ. ಅದರ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು:- ಆಯಿತು ಬಿಡಿ.

ಶ್ರೀ ಸಿ. ಭೈರೇಗೌಡ:- ಸ್ವಾಮಿ, ಇದು ರೈತರಿಗೆ ಸಂಬಂಧಪಟ್ಟಿರತಕ್ಕಂಥಾದ್ದು....

ಅಧ್ಯಕ್ಷರು:- ಪೂರ್ಣ ಬಜೆಟ್‌ನಲ್ಲಿ ಆವಾಗ ಹೇಳುತ್ತಾರೆ ಬಿಡಿ.

ಶ್ರೀ ಸಿ. ಭೈರೇಗೌಡ:- ಅಷ್ಟರೊಳಗೆ ಟ್ಯಾಕ್ಸ್ ಹಾಕುತ್ತಲೇ ಇರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ಹಿಂಗಾರು ಬೆಳೆ ಬಗ್ಗೆ ಹಣಬಿಡುಗಡೆ ಮಾಡಿಲ್ಲ. ಹಿಂಗಾರು ಬೆಳೆ ಸಾಲ ಮೇಲೆ ಬಡ್ಡಿ ಮನ್ನಾ ಮಾಡಬೇಕೆಂದು ಕೇಳಿದ್ದೆವು. ಹಾಗೆಯೇ ಆನ್‌ಲೈನ್ ಲಾಟರಿಯನ್ನು ತೆಗೆಯುತ್ತೇವೆ ಎಂದು ಹೇಳಲಿಲ್ಲ. ಆಮೇಲೆ ಸಣ್ಣ ಕೈಗಾರಿಕೆಗಳ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ. ಸಣ್ಣ ಕೈಗಾರಿಕೆಗಳ ಬಗ್ಗೆ ಇವರಿಗೆ ಸ್ವಲ್ಪವೂ ಪ್ರೀತಿ ಇಲ್ಲ. ಅದು ಮುಚ್ಚಿ ಹೋಗಿಬಿಡಲಿ ಎನ್ನುವಂಥಾದ್ದು ಭಾವನೆ ಇವರದ್ದು ಇದೆ. ಹಾಗಾಗಿ ಇವತ್ತು ಏನು ಸರ್ಕಾರ ಈ ನೀತಿಯನ್ನು ಅನುಕರಣ ಮಾಡುತ್ತಿದೆ, ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಇದು ಸಣ್ಣ ಕೈಗಾರಿಕೆಗಳ ಬಗ್ಗೆ ವಿರೋಧಿ ನೀತಿಯಾಗಿದೆ. ಆನ್‌ಲೈನ್ ಲಾಟರಿ ಇಡೀ ಸಮಾಜದ ನೈತಿಕತೆಯನ್ನು ತೆಗೆದುಹಾಕುವಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಅದನ್ನು ನಿಷೇಧ ಮಾಡುವುದಕ್ಕೆ ಇವರು ತಯಾರಿಲ್ಲ. ಮತ್ತು ವಿದ್ಯುತ್ ಬಿಲ್‌ಮೇಲೆ 5 ಪರ್ಸೆಂಟ್ ತೆರಿಗೆಯನ್ನು ತೆಗೆಯಬೇಕೆಂದು ಹೇಳಿದ್ದೆವು. ಅದಕ್ಕೂ ಕೂಡ ಏನೂ ಸ್ಪಂದನ ಮಾಡಿಲ್ಲ. ಹಾಗೆಯೇ ಪ್ರಾದೇಶಿಕ ಅಸಮಾನತೆ ಬಗ್ಗೆ ಸ್ಪೆಶಲ್ ಪ್ಯಾಕೇಜ್ ಕೊಡಲಿಕ್ಕೆ ತಯಾರಿಲ್ಲ. ಹೀಗಾಗಿ ಈ ಒಂದು ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಭಾರತೀಯ ಜನತಾಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಿ. ಭೈರೇಗೌಡ:- ಒಂದು ನಿಮಿಷ ದಯವಿಟ್ಟು ಕೇಳಿ ಸ್ವಾಮಿ. ಈಗ ಮತ್ತೂ ಒಂದು ಸಾರಿ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಕೃಷಿಯಲ್ಲಿ ಬಳಸತಕ್ಕಂಥ ಉಪಕರಣಗಳು, ಟ್ರಾಕ್ಟರ್, ಪವರ್ ಟಿಲ್ಲರ್ಸ್, ಕ್ರಿಮಿನಾಶಕಗಳು, ಗೊಬ್ಬರ, ಮೂಳೆಪುಡಿ ಇಂಥಾದ್ದರ ಮೇಲೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಮತ್ತೂ ಒಂದು ಸಾರಿ ನಾನು ಹೇಳುತ್ತೇನೆ. ಮುಖ್ಯಮಂತ್ರಿಗಳೇ....

ಶ್ರೀ ಎಸ್.ಎಂ. ಕೃಷ್ಣ:- ಎಂಪವರ್ಡ್ ಕಮಿಟಿ ಮುಂದೆ ಇದೆಲ್ಲವನ್ನೂ ಇಟ್ಟು ಚರ್ಚೆ ಮಾಡಿ ನಂತರ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಭೈರೇಗೌಡ:- ರೈತರಿಗೆ ಹೊರೆಯಾಗುತ್ತದೆ. ಆದ್ದರಿಂದ ಇದನ್ನು ಶೇಕಡಾ ನಾಲ್ಕರಷ್ಟು ತೆರಿಗೆಯನ್ನು ಏನು ಹಾಕಿದ್ದಾರೆ, ವಾಪಸ್ಸು ಪಡೆಯಬೇಕೆಂದು ಮತ್ತೊಂದು ಸಾರಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:- ಒಂದು ಕಡೆ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವಂತಹ ವ್ಯಾಟ್ ಪದ್ಧತಿಯನ್ನು ಅಳವಡಿಸಬೇಕೆಂದು ನಾವು ತೀರ್ಮಾನ ಮಾಡುತ್ತೇವೆ. ಜತೆಗೆ ಇನ್ನೂ ಎಕ್ಸಂಪ್‌ಶನ್ಸ್‌ನ್ನು ಯುನಿಲ್ಯಾಟರಲ್ ಆಗಿ ಸೇರಿಸಿ ಎಂದು ತಾವು ಹೇಳುತ್ತಿದ್ದೀರಿ. ನಾನು ಹೇಳುತ್ತಾ ಇರತಕ್ಕಂಥಾದ್ದು ಎಂಪವರ್ಡ್ ಕಮಿಟಿ ಮಾಡುತ್ತೇವೆ ಎಂದು ನೀವೇನು ಹೇಳಿದ್ದೀರಿ, ನಮ್ಮ ಫೀಲಿಂಗ್ಸ್ ಏನಿದೆ, ಅವೆಲ್ಲವನ್ನೂ ಸ್ಪಷ್ಟವಾಗಿ ನಮೂದು ಮಾಡುತ್ತೇವೆ. ಆದ್ದರಿಂದ ಅಲ್ಲಿಯವರೆಗೆ ತಾಳಿಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಭೈರೇಗೌಡ:- ನಾವು ಕೂಡ ಸಭಾತ್ಯಾಗ ಮಾಡುತ್ತೇವೆ.

(ಜನತಾದಳದ ಎರಡೂ ಬಣಗಳ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಎಂ. ಕೃಷ್ಣ(ಮುಖ್ಯಮಂತ್ರಿಗಳು):- "ದಿನಾಂಕ 31-3-2004ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ,

ದಿನಾಂಕ 31-3-2004ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಈ ಸಭೆಯಲ್ಲಿ ಮಂಜೂರು ಮಾಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

2002-2003ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು) ಮಂಡನೆ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

2002-2003ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಈಗ ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು):- ದಿನಾಂಕ: 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1,3,4,5,8,9.10,11,12,13,14,15,16,17,18,19,22,23,24,25,26,27,28,29,30,31,32, 33,35,36,37,38,39,40,41,42,43,44,45,46,47,48,49,50,51,52,53,54,55,59,60,61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

2002-2003ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಅಧ್ಯಕ್ಷರು:- ಈಗ 2002-2003ನೇ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು) ಬೇಡಿಕೆಗಳ ಮೇಲಿನ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ:

"ದಿನಾಂಕ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1,3,4,5,6,7,8,9,10,11,12,13,14,15,16,17,18,19,22, 23,24,25,26,27,28,29,30,31,32,33,35,36,37,38,39,40,41,42,43,44,45, 46,47,48,49,50,51,52,53,54,55,59,60,61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

6) ಶಾಸನ ರಚನೆ:

ಅ) ವಿಧೇಯಕಗಳನ್ನು ಮಂಡಿಸುವುದು

(i) ಕರ್ನಾಟಕ ಧನವಿನಿಯೋಗ ವಿಧೇಯಕ, 2003.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ "2003 ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ"2003ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ "2003ರ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ".